ರೈತ ಹೋರಾಟಗಾರ ಪ್ರೊ. ಎಂ. ಡಿ. ನಂಜುಂಡಸ್ವಾಮಿ :
ಚಿಂತನೆಗಳ ವಿಶ್ಲೇಷಣೆ

(ಕನ್ನಡ ವಿಶ್ವವಿದ್ಯಾಲಯ, ಹಂಪಿ, ಚರಿತ್ರೆ ವಿಭಾಗಕ್ಕೆ ಎಂ.ಫಿಲ್. ಪದವಿಗಾಗಿ ಸಲ್ಲಿಸಿದ ನಿಬಂಧ)

ಸಂಶೋಧನಾ ವಿದ್ಯಾರ್ಥಿ

ಸವಿತ.ಬಿ.ಸಿ

ಮಾರ್ಗದರ್ಶಕರು

ಡಾ. ಸಿ.ಆರ್. ಗೋವಿಂದರಾಜು

ಪ್ರಾಧ್ಯಾಪಕರು

ಚರಿತ್ರೆ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೦೮-೦೯

ರೈತ ಹೋರಾಟಗಾರ ಪ್ರೊ.ಎಂ.ಡಿ.ನಂಜುಂಡಸ್ವಾಮಿ :
ಚಿಂತನೆಗಳ ವಿಶ್ಲೇಷಣೆ

(ಕನ್ನಡ ವಿಶ್ವವಿದ್ಯಾಲಯ, ಹಂಪಿ, ಚರಿತ್ರೆ ವಿಭಾಗಕ್ಕೆ ಎಂ.ಫಿಲ್. ಪದವಿಗಾಗಿ ಸಲ್ಲಿಸಿದ ನಿಬಂಧ)

ಸಂಶೋಧನಾ ವಿದ್ಯಾರ್ಥಿ
ಸವಿತ.ಬಿ.ಸಿ

ಮಾರ್ಗದರ್ಶಕರು
ಡಾ.ಸಿ.ಆರ್.ಗೋವಿಂದರಾಜು
ಪ್ರಾಧ್ಯಾಪಕರು

ಚರಿತ್ರೆ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೦೮-೦೯

ಮಾರ್ಗದರ್ಶಕರ ಪ್ರಮಾಣ ಪತ್ರ

''ರೈತ ಹೋರಾಟಗಾರ ಪ್ರೊ.ಎಂ.ಡಿ.ನಂಜುಂಡಸ್ವಾಮಿ: ಚಿಂತನೆಗಳ ವಿಶ್ಲೇಷಣೆ'' ಎಂಬ ನಿಬಂಧವನ್ನು ಕನ್ನಡ ವಿಶ್ವವಿದ್ಯಾಲಯ, ಚರಿತ್ರೆ ವಿಭಾಗದ ಎಂ.ಫಿಲ್. ಪದವಿಗಾಗಿ ಸವಿತ.ಬಿ.ಸಿ., ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ
ದಿನಾಂಕ : 2.10.08

ಡಾ.ಸಿ.ಆರ್.ಗೋವಿಂದರಾಜು
ಮಾರ್ಗದರ್ಶಕರು ಹಾಗೂ ಪ್ರಾಧ್ಯಾಪಕರು
ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಪ್ರಮಾಣ ಪತ್ರ

"ರೈತ ಹೋರಾಟಗಾರ ಪ್ರೊ.ಎಂ.ಡಿ.ನಂಜುಂಡಸ್ವಾಮಿ: ಚಿಂತನೆಗಳ ವಿಶ್ಲೇಷಣೆ" ಎಂಬ ನಿಬಂಧವನ್ನು ಡಾ. ಸಿ.ಆರ್.ಗೋವಿಂದರಾಜು, ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಎಂ.ಫಿಲ್. ಪದವಿಗಾಗಿ ಸಮಾಜ ವಿಜ್ಞಾನಗಳ ನಿಕಾಯದ, ಚರಿತ್ರೆ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

Savith.B.C

ಸ್ಥಳ : ವಿದ್ಯಾರಣ್ಯ

ದಿನಾಂಕ : 07.10.09

(ಸವಿತ.ಬಿ.ಸಿ)
ಸಂಶೋಧನಾ ವಿದ್ಯಾರ್ಥಿ
ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಪರಿವಿಡಿ

* * *

ಅಧ್ಯಾಯ ಒಂದು

ಅಧ್ಯಯನದ ಹಿನ್ನೆಲೆ-ಪ್ರವೇಶ-ಮಹತ್ತ್ವ-ವ್ಯಾಪ್ತಿ ಹಾಗೂ ಮಿತಿಗಳು, ವಿಧಿ-ವಿಧಾನ ಹಾಗೂ ಅಧ್ಯಯನದ ಸ್ವರೂಪ

'ಹಸಿರು ಸೇನಾನಿ' ಎಂದೇ ಗುರುತಿಸಿಕೊಂಡಿರುವ ನಾಡಿನ ಕ್ರಿಯಾಶೀಲ ರೈತ ಹೋರಾಟಗಾರ ಪ್ರೊ.ಎಂ.ಡಿ. ನಂಜುಂಡಸ್ವಾಮಿ ಅವರು ಕನ್ನಡದ ಮಹತ್ವ್ತದ ಚಿಂತಕರಲ್ಲಿ ಒಬ್ಬರು. ಕಾರ್ಲ್‌ಮಾರ್ಕ್ಸ್, ಗಾಂಧಿ, ರಾಮಮನೋಹರ ಲೋಹಿಯಾ, ಜಯಪ್ರಕಾಶ ನಾರಾಯಣ, ಶಾಂತವೇರಿ ಗೋಪಾಲಗೌಡ ಮೊದಲಾದವರ ಚಿಂತನೆಗಳಿಂದ ಪ್ರಭಾವಿತರಾಗಿದ್ದ ಇವರು ಸಮಾಜದ ಆಂತರ್ಯ ಹಾಗೂ ಒಳಸುಳಿಗಳ ಬಗೆಗೆ ಆಪ್ತವಾದ ಅನುಭೂತಿ ಪಡೆದವರು. ಸಮಾಜವಾದಿ ಚಿಂತನೆಗಳಿಂದ ಈ ನಾಡಿನ ಯುವ ಜನತೆಯಲ್ಲಿ ಪ್ರಗತಿಪರವಾದ ಆಲೋಚನ ಕ್ರಮವೊಂದನ್ನೇ ಹುಟ್ಟು ಹಾಕಿದ್ದು ಇವರ ಹೆಗ್ಗಳಿಕೆ. ರೈತ ಹಾಗೂ ಕಾರ್ಮಿಕರ ಏಳಿಗೆಯಲ್ಲಿ ಇವರ ಚಿಂತನೆಗಳ ಮಹತ್ವ್ತವನ್ನು ಅರಿಯಬೇಕಾದ ಜರೂರು ಇದೆ. ಕೇವಲ ನಾಡಿನ ಕೃಷಿ ಹಾಗೂ ರೈತ ಸಮುದಾಯದ ಆತ್ಮಗೌರವದ ಸಂವೇದನೆಗಳಿಗೆ ಮಾತ್ರ ಮಿಡಿದಂಥ ಹೃದಯವಾಗಿರಲಿಲ್ಲ ಪ್ರೊಫೆಸರ್ ಅವರದು. ಬದಲಾಗಿ ರಾಷ್ಟ್ರ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ರೈತರ ಶಕ್ತಿ ಸಾಮರ್ಥ್ಯಗಳಿಗೆ ಒಂದು ಸೈದ್ಧಾಂತಿಕ ಸ್ಪಂತಿಕೆಯನ್ನೇ ತಂದುಕೊಟ್ಟದ್ದು ಮಹತ್ವ್ತದ ಸಂಗತಿ. 'ಸಮಾಜವಾದಿ ಯುವಜನ ಸಭಾ'ದ ಮುಖೇನ ತಮ್ಮ ಹೋರಾಟದ ಜೀವನವನ್ನು ಆರಂಭಿಸಿದ ಪ್ರೊ. ನಂಜುಂಡಸ್ವಾಮಿ ಅವರು ಅನೇಕ ರೈತ ಚಳವಳಿಗಳಿಗೆ ಬುನಾದಿ ಹಾಕಿದವರು. ಈ ದಿಸೆಯಲ್ಲಿ ಮಹೇಂದ್ರಸಿಂಗ್ ಟಿಕಾಯತ್, ಶರದ್ ಜೋಷಿ ಮೊದಲಾದವರೊಂದಿಗಿನ ಎಂಭತ್ತರ ದಶಕದ ರಾಷ್ಟ್ರೀಯ ಮಟ್ಟದ ರೈತ ಚಳವಳಿಗಳು ಗಮನಾರ್ಹವಾದುವು. ಅನೇಕ ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮಟ್ಟದ ಪ್ರಶ್ನೆಗಳಿಗೆ, ತೊಡಕುಗಳಿಗೆ ಕನ್ನಡ-ಕರ್ನಾಟಕ ಸತ್ವ್ತದಿಂದಲೇ ಪ್ರಕ್ರಿಯಿಸಿದಂತಹ ವ್ಯಕ್ತಿತ್ವ ನಂಜುಂಡಸ್ವಾಮಿ ಅವರದು. ಇಂಥ ಬಹುಮುಖಿ ನೆಲೆಗಳ ರೈತ ಹೋರಾಟಗಾರನೊಬ್ಬನ ಚಿಂತನೆಗಳನ್ನು ಕುರಿತು ವಿಶ್ಲೇಷಿಸಿ, ಅಧ್ಯಯನಕ್ಕೆ ಒಳಪಡಿಸುವ ಒಂದು ಕಿರು ಪ್ರಯತ್ನವೇ ಇಲ್ಲಿನದು.

ಸ್ವಾತಂತ್ರ್ಯೋತ್ತರ ಭಾರತದಲ್ಲಿ ರಾಷ್ಟ್ರ ಹಾಗೂ ರಾಜ್ಯ ರಾಜಕಾರಣದ ಅಧಿಕಾರದ ಹುನ್ನಾರಗಳು ರೈತರ ಬವಣೆಗಳನ್ನು ನಿರೀಕ್ಷಿಸಿದಷ್ಟು ಪರಿಹರಿಸದ ಸನ್ನಿವೇಶವನ್ನು ಅರಿತಿದ್ದ ನಂಜುಂಡಸ್ವಾಮಿ ಅವರು ಈ ಕುರಿತು ಭಿನ್ನವಾದ ನೆಲೆಗಳಲ್ಲಿ ಆಲೋಚಿಸಿದವರು. ನಾಡಿನ ರಾಜಕಾರಣದ ಚುಕ್ಕಾಣಿ ಹಿಡಿದಿದ್ದ ಅಧಿಕಾರಶಾಹಿಗಳನ್ನು

ಮಣಿಸಲು ರೈತರದೇ ಆದಂಥ ಸಂಘಟನೆ ಹಾಗೂ ರಾಜಕಾರಣದ ವೇದಿಕೆಗಳನ್ನು ನಿರ್ಮಿಸಲು ಚಿಂತಿಸಿ ಪ್ರಯತ್ನ ಪಟ್ಟವರು. ಈ ದಿಸೆಯಲ್ಲಿ ಹುಟ್ಟಿಕೊಂಡದ್ದೇ 'ಕರ್ನಾಟಕ ರಾಜ್ಯ ರೈತ ಸಂಘ'. ತಮ್ಮದೇ ಆದ ರಾಜಕಾರಣದ ಬಲವೊಂದಿದ್ದರೆ ರೈತರ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬಹುದು ಎಂದು ಆಲೋಚಿಸಿದ್ದ 'ಎಂ.ಡಿ.ಎನ್' ಅವರಿಗೆ ದೊರೆತ ಅಂತಿಮ ಫಲಿತಾಂಶ ಎಂಥದ್ದು ಎಂಬುದನ್ನು ಪರಿಶೀಲಿಸುವ ಅಗತ್ಯತೆ ಇದೆ. ಅಲ್ಲದೆ ಅವರೊಂದಿಗೆ ಹುಟ್ಟಿಕೊಂಡ ರೈತ ಸಂಘ ಅವರ ಅವಸಾನದೊಂದಿಗೆ ಪಡೆದ ಸ್ಥಿತ್ಯಂತರಗಳನ್ನು ಕುರಿತು ವರ್ತಮಾನದ ಸ್ಥಿತಿ-ಗತಿಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸುವ ಪ್ರಯತ್ನವನ್ನು ಮಾಡಲಾಗಿದೆ.

ಎಂ.ಡಿ.ಎನ್ ಅವರು ಕೇವಲ ಕಾನೂನು ಕಲಿಸುವ ಮೇಷ್ಟರು ಮಾತ್ರ ಆಗಿರಲಿಲ್ಲ. ಬದಲಾಗಿ ಅವರು ತಮ್ಮ ಅಪಾರ ಓದು, ಅನುಭವ, ಸಮುದಾಯಗಳ ನಾಡಿ ಮಿಡಿತದ ಗ್ರಹಿಕೆಯ ಹಿನ್ನೆಲೆಯಲ್ಲಿ ಎಂಥ ಮುಗ್ಧರಿಗೂ ಗಹನವಾದ ವಿಚಾರಗಳನ್ನು ಸರಳವಾಗಿ, ನಿಖರವಾಗಿ, ಅಂತೆಯೇ ಖಡಾ ಖಂಡಿತವಾಗಿ ಮನವರಿಕೆ ಮಾಡಿಕೊಡುತ್ತಿದ್ದವರು. ಈ ದಿಸೆಯಲ್ಲಿ ಬಹುಪಾಲು ಅನಕ್ಷರಸ್ಥ ರೈತ ಬಾಂಧವರಿಗೆ ಸರ್ಕಾರದ ದಬ್ಬಾಳಿಕೆ, ಪ್ರಜಾಪ್ರಭುತ್ವ ಹಾಗೂ ಸಂವಿಧಾನದ ತಿರುಚುವಿಕೆ, ಕೃಷಿ ಹಾಗೂ ರೈತರ ಸಂಬಂಧಗಳು, ರೈತ ಹಾಗೂ ಸರ್ಕಾರಿ ಯಂತ್ರದ ಸ್ವರೂಪ, ಕೃಷಿ ಹಾಗೂ ತಂತ್ರಜ್ಞಾನ, ರೈತರ ಬಿತ್ತನೆ ಬೀಜದ ಸಮಸ್ಯೆ, ನುಸಿರೋಗ ನಿಯಂತ್ರಣ, ರೈತ ಬೆಳೆಗಾರರ ಆರ್ಥಿಕ ಸ್ವರೂಪ, ಉದಾರೀಕರಣ ಹಾಗೂ ಜಾಗತೀಕರಣದ ಭರಾಟೆ, ಬಹುರಾಷ್ಟ್ರೀಯ ಕಂಪೆನಿಗಳ ಗೋಸುಂಬೆತನಗಳು ಮೊದಲಾದವುಗಳನ್ನು ಕುರಿತಂತೆ ಸ್ಪಷ್ಟ ಅರಿವನ್ನು ಮೂಡಿಸಿದ ಚಿಂತಕರೂ ಆಗಿದ್ದರು. ಪ್ರೊ.ಎಂ.ಡಿ.ಎನ್ ಜಾತಿಬದ್ಧ ಹಾಗೂ ಶ್ರೇಣೀಕೃತ ಸಮಾಜ ವ್ಯವಸ್ಥೆಯಲ್ಲಿ 'ಅವಿವೇಕಿ' ರಾಜಕಾರಣದ ಹುನ್ನಾರಗಳನ್ನು ಜನರ ನಡುವೆ ತೆರೆದಿಟ್ಟ ಎಂ.ಡಿ.ಎನ್ ಅವರು ಪ್ರಬಲ ಪ್ರತಿಕ್ರಿಯೆ-ಪ್ರತಿರೋಧಗಳನ್ನು ಹುಟ್ಟು ಹಾಕುವಲ್ಲಿ ತೋರಿದ ಚಾಕ-ಚಕ್ಯತೆ ಗಂಭೀರವಾದುದು. ಅಲ್ಲದೆ ಕೇಂದ್ರೀಕೃತವಾದ ಎಲ್ಲ ರಚನೆಗಳನ್ನು ತಮ್ಮ ಮಾತು ಹಾಗೂ ಸಂಘಟನಾ ಸಾಮರ್ಥ್ಯದ ಮುಖೇನ ಖಚಿತವಾಗಿ ಒಡೆದು ವಿಕೇಂದ್ರೀಕರಣದ ನೆಲೆಗಳನ್ನು ಅನಾವರಣಗೊಳಿಸಿದ ಅವರ ಆಲೋಚನಾ ಕ್ರಮಗಳು ಅಧ್ಯಯನಶೀಲವಾದವು. ಸ್ವಾತಂತ್ರ್ಯೋತ್ತರ ನಾಡಿನ ರಾಜಕಾರಣದಲ್ಲಿ ಒಬ್ಬ ಕ್ರಿಯಾಶೀಲ ಚಿಂತಕರಾಗಿ, ರೈತ ಹೋರಾಟಗಾರರಾಗಿ, ಅಸಹಕಾರ ಚಳವಳಿಯ ಮಂತ್ರವನ್ನು ಪ್ರಧಾನ ಪ್ರತಿಭಟನಾ ಅಸ್ತ್ರವನ್ನಾಗಿ ಬಳಸಿದ ಗೌರವ ಪ್ರೊ.ಎಂ.ಡಿ.ಎನ್ ಅವರಿಗೆ ಸಲ್ಲುತ್ತದೆ. ಇಂಥ ವಿಭಿನ್ನ ವೈಚಾರಿಕತೆಯ ವ್ಯಕ್ತಿತ್ವವನ್ನು ಪಡೆದಿದ್ದ ನಂಜುಂಡಸ್ವಾಮಿ ಅವರ ಆಲೋಚನಾ ಕ್ರಮಗಳಿಗೆ ಒಂದು ಸೈದ್ಧಾಂತಿಕ ಚೌಕಟ್ಟು, ವಿಶ್ಲೇಷಣೆಗಳನ್ನು ಕುರಿತು ಅನುಸಂಧಾನ ನಡಸುವುದೇ ಪ್ರಸ್ತುತ ಅಧ್ಯಯನದ ಆಶಯ.

ಅಧ್ಯಯನದ ವ್ಯಾಪ್ತಿ ಹಾಗೂ ಮಿತಿಗಳು

ಪ್ರೊ. ಎಂ.ಡಿ.ಎನ್ ಅವರ ಚಿಂತನೆಗಳನ್ನು ಕುರಿತ ಪ್ರಧಾನ ಭಿತ್ತಿಯನ್ನು ಹೊಂದಿರುವ ಪ್ರಸ್ತುತ ಅಧ್ಯಯನವು ತನ್ನದೇ ಆದ ವ್ಯಾಪ್ತಿ ಹಾಗೂ ಮಿತಿಗಳಿಗೂ ಒಳಪಟ್ಟಿದೆ. ಎಂ.ಡಿ.ಎನ್ ಅವರ ಹಲವು

ಚಿಂತನೆಗಳು, ಚಟುವಟಿಕೆಗಳಲ್ಲಿ ಕೃಷಿ ಹಾಗೂ ರೈತರ ಬವಣೆಗಳಿಗೆ ಹೊರ ಹೊಮ್ಮಿದ ಆಲೋಚನೆಗಳನ್ನು ಮಾತ್ರ ಇಲ್ಲಿ ಕೇಂದ್ರಬಿಂದುವನ್ನಾಗಿಸಿಕೊಳ್ಳಲಾಗಿದೆ. ಬಹುಮುಖಿ ನೆಲೆಗಳಲ್ಲಿ ಅವರ ಪ್ರಗತಿಪರವಾದ ಚಿಂತನಾ ಕ್ರಮಗಳು ಹೊರ ಹೊಮ್ಮಿದ್ದರೂ ಪ್ರಸ್ತುತ ಅಧ್ಯಯನದಲ್ಲಿ ನಂಜುಂಡಸ್ವಾಮಿ ಅವರನ್ನು ರೈತ ಹೋರಾಟಗಾರರನ್ನಾಗಿಯೇ ಪರಿಭಾವಿಸಿರುವ, ಪರಿಶೀಲಿಸಿರುವ ಮಿತಿಗಳಿಗೆ ಒಳಪಡಿಸಲಾಗಿದೆ. ಅಂದ ಮಾತ್ರಕ್ಕೆ ನಂಜುಂಡಸ್ವಾಮಿ ಅವರು ಗ್ರಹಿಸಿದ್ದ ಸಮಾಜ, ಆರ್ಥಿಕತೆ, ರಾಜಕಾರಣ, ಸಾಹಿತ್ಯ ಹಾಗೂ ಸಾಂಸ್ಕೃತಿಕ ಪರಿಧಿಗಳನ್ನು ಹೊರತುಪಡಿಸಿ ನೋಡುವುದು ಎಂಬುದು ಈ ಮಾತಿನ ಅರ್ಥವಲ್ಲ.

ಅಧ್ಯಯನದ ವಿಧಿ-ವಿಧಾನ

ನಂಜುಂಡಸ್ವಾಮಿ ಅವರ ಚಿಂತನೆ, ಚಟುವಟಿಕೆಗಳನ್ನು ಚಾರಿತ್ರಿಕವಾಗಿ ದಾಖಲಿಸಿ, ವಿಮರ್ಶಾತ್ಮಕವಾಗಿ ವಿಶ್ಲೇಷಿಸಿರುವ ಕ್ರಮವೊಂದನ್ನು ಪ್ರಸ್ತುತ ಅಧ್ಯಯನದಲ್ಲಿ ಅಳವಡಿಸಿಕೊಳ್ಳಲಾಗಿದೆ. ಈ ಅಧ್ಯಯನದಲ್ಲಿ ಎಂ.ಡಿ.ಎನ್ ಅವರ ಆಲೋಚನೆಗಳು, ದಾಖಲಾದ ಮಾತುಗಳು, ಅವರು ಬರೆದ ಕೃತಿಗಳು, ಲೇಖನಗಳು, ಅವರೊಡನೆ ನಡೆಸಿದ ಸಂದರ್ಶನಗಳು, ಅವರು ಕೈಗೊಂಡ ಚಳವಳಿ, ಹೋರಾಟಗಳನ್ನು ಪ್ರಮುಖ ಆಕರ ಸಾಮಗ್ರಿಗಳಾಗಿ ಬಳಸಿಕೊಳ್ಳಲಾಗಿದೆ. ಈ ಹಿನ್ನೆಲೆಯಲ್ಲಿ ನಂಜುಂಡಸ್ವಾಮಿ ಅವರನ್ನು ಕುರಿತ ಎಲ್ಲ ಬಗೆಯ ನೇರವಾದ ಹಾಗೂ ಪೂರಕವಾದ ಮಾಹಿತಿ, ಕಾಗದ-ಪತ್ರ, ಅಪರೂಪದ ದಾಖಲೆ, ದೃಶ್ಯ ಹಾಗೂ ಶ್ರವ್ಯ ಮಾಧ್ಯಮದ ಕ್ಯಾಸೆಟ್ ಹಾಗೂ ಸಿ.ಡಿಗಳು, ಸಂದರ್ಶನದ ವರದಿಗಳು ಮೊದಲಾದವುಗಳನ್ನು ಸಹ ಬಳಸಿಕೊಳ್ಳಲಾಗಿದೆ.

'ರೈತ ಸಂಘ'ವನ್ನು ಒಳಗೊಂಡಂತೆ ಇತರೆ ಸಂಘ-ಸಂಸ್ಥೆಗಳು, ಸರ್ಕಾರಿ ಹಾಗೂ ಖಾಸಗಿ ಮೂಲದ ಗ್ರಂಥಾಲಯಗಳು. ಅವರೊಡನೆ ತಮ್ಮ ಅನುಭವ, ಹೋರಾಟದ ಬದುಕನ್ನು ಹಂಚಿಕೊಂಡ ಒಡನಾಡಿಗಳು, ಗೆಳೆಯರು, ವಿದ್ಯಾರ್ಥಿಗಳು ರೈತ ಮಿತ್ರರು, ಆಪ್ತರು ಮೊದಲಾದವರ ಸಂದರ್ಶನ ಇತ್ಯಾದಿಗಳನ್ನು ಸಂಗ್ರಹಿಸಿಕೊಳ್ಳಲಾಗಿದೆ. ಹೀಗೆ ಸಂಗ್ರಹಿಸಿಕೊಂಡ ವಿವರಗಳನ್ನು ಸಮಾಜಶಾಸ್ತ್ರೀಯ ಅಧ್ಯಯನದ ನೆಲೆಗಳಿಂದ ಹಾಗೂ ಚರಿತ್ರೆ ಶಿಸ್ತಿನ ಸಂಶೋಧನಾ ವಿಧಿ-ವಿಧಾನಗಳ ಮೂಲಕ ಪರಿಶೀಲಿಸಿ, ವಿಶ್ಲೇಷಿಸುವ ವೈಧಾನಿಕತೆಯ ಕ್ರಮವೊಂದನ್ನು ಈ ಅಧ್ಯಯನದಲ್ಲಿ ಅಳವಡಿಸಿಕೊಳ್ಳಲಾಗಿದೆ.

ಅಧ್ಯಯನದ ಸ್ವರೂಪ

ಪ್ರಸ್ತುತ ಅಧ್ಯಯನವು ಪ್ರೊ.ಎಂ.ಡಿ.ಎನ್ ಅವರ ಚಿಂತನೆ ಹಾಗೂ ಹೋರಾಟದ ನೆಲೆಗಳನ್ನು ಕುರಿತು ವಿಶ್ಲೇಷಿಸುವುದೇ ಈ ಅಧ್ಯಯನದ ಸ್ವರೂಪವಾಗಿದೆ.

ಮೊದಲನೆ ಅಧ್ಯಾಯವು ಹಿನ್ನೆಲೆ-ಪ್ರವೇಶ-ಮಹತ್ತ್ವ,ವ್ಯಾಪ್ತಿ ಹಾಗೂ ಮಿತಿಗಳು, ವಿಧಿ-ವಿಧಾನ, ಸ್ವರೂಪಗಳನ್ನು ಕುರಿತ ವಿವರಗಳನ್ನು ಒಳಗೊಂಡಿದೆ.

ಎರಡನೆಯ ಅಧ್ಯಾಯದಲ್ಲಿ ನಂಜುಂಡಸ್ವಾಮಿ ಅವರ ಜೀವನ-ಪರಿಚಯ-ಪರಿಸರ-ಪ್ರಭಾವವನ್ನು ಹಾಗೂ ಕೌಟುಂಬಿಕ ಜೀವನ, ಅವರ ಶಿಕ್ಷಣವನ್ನು ಕುರಿತ ಮಾಹಿತಿಯನ್ನು ನಮೂದಿಸಲಾಗಿದೆ. ಅಲ್ಲದೆ ನಂಜುಂಡಸ್ವಾಮಿ ಅವರ ವೃತ್ತಿ ಜೀವನ, ಅವರ ಹೋರಾಟದ ಬದುಕು ರಾಜಕಾರಣ ಪ್ರವೇಶದ ನಂತರ ಶಾಸಕರ ಪದವಿ ಪಡೆದು ಆಡಳಿತ ನಡೆಸಿದ್ದು, ಮತ್ತೆ ಹೋರಾಟದ ಬದುಕಿಗೆ ಹಿಂತಿರುಗಿದ್ದನ್ನೂ ಸಹ ಇಲ್ಲಿ ಉಲ್ಲೇಖಿಸಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ನಂಜುಂಡಸ್ವಾಮಿ ಅವರ ಕೃಷಿ ಚಿಂತನೆಗಳನ್ನು ವಿಶ್ಲೇಷಿಸಲಾಗಿದೆ. ಭೂಕಂದಾಯ ರದ್ಧತಿ, ಬರಗಾಲ, ಸಣ್ಣ ನೀರಾವರಿ, ಸುಸ್ಥಿರ ಕೃಷಿ ಪದ್ಧತಿ, ನೈಸರ್ಗಿಕ ಸಂಪತ್ತನ್ನು ಆಯಾ ಗ್ರಾಮಗಳ ಅಭಿವೃದ್ಧಿಗಾಗಿ ಬಳಸುವಂಥ ವಿಚಾರಗಳನ್ನು ಕುರಿತು ಈ ಅಧ್ಯಾಯದಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ನಂಜುಂಡಸ್ವಾಮಿ ಅವರು 'ಕರ್ನಾಟಕ ರಾಜ್ಯ ರೈತ ಸಂಘ'ವನ್ನು ಹುಟ್ಟುಹಾಕಿದುದರ ಹಿನ್ನೆಲೆ, ಕಾರಣವಾದ ಅಂಶಗಳು ಹಾಗೂ ಉದ್ದೇಶಗಳನ್ನು ಕುರಿತು ಚರ್ಚಿಸಲಾಗಿದೆ. ಹಾಗೆಯೇ 'ಕರ್ನಾಟಕ ರಾಜ್ಯ ರೈತ ಸಂಘ'ಕ್ಕೆ ಇವರು ರೂಪಿಸಿದ ತತ್ತ್ವ-ಸಿದ್ಧಾಂತಗಳು ಏನೆಂಬುದನ್ನು ಕುರಿತು ಉಲ್ಲೇಖಿಸಲಾಗಿದೆ. ರೈತಸಂಘ ರಾಜಕೀಯ ಪ್ರವೇಶ ಮಾಡುವುದರ ಹಿಂದೆ ಇದ್ದ ಉದ್ದೇಶಗಳು ಹಾಗೂ ಒಡಕಿಗೆ ಕಾರಣವಾದ ಅಂಶಗಳನ್ನು ಕುರಿತು ವಿಶ್ಲೇಷಿಸಲಾಗಿದೆ. ಸಂಘಟನಾಕಾರರಾಗಿ ನಂಜುಂಡಸ್ವಾಮಿ ಅವರ ನೇತೃತ್ವದಲ್ಲಿ 'ಕರ್ನಾಟಕ ರಾಜ್ಯ ರೈತ ಸಂಘ' ನಡೆಸಿದ ಹೋರಾಟಗಳನ್ನು ಕುರಿತು ಪರಿಶೀಲಿಸಲಾಗಿದೆ.

ಐದನೆಯ ಅಧ್ಯಾಯದಲ್ಲಿ ಸರ್ಕಾರದ ಕೃಷಿ ನೀತಿಗಳು ಹಾಗೂ ರೈತರ ಪ್ರತಿರೋಧದ ಚಿಂತನೆಗಳನ್ನು ಚರ್ಚಿಸಲಾಗಿದೆ. ಗ್ಯಾಟ್ ಒಪ್ಪಂದ, ಡಂಕಲ್ ಪ್ರಸ್ತಾವನೆ, ವಿಶ್ವವ್ಯಾಪಾರ ಸಂಘಟನೆಗಳ ಹುನ್ನಾರಗಳು, ಕೃಷಿ ಕ್ಷೇತ್ರದ ಮೇಲೆ ಬೀರಿದ ಪರಿಣಾಮಗಳು, ಪೇಟೆಂಟ್, ರೈತರ ಹಕ್ಕುಗಳಿಗೆ ಸಂಬಂಧಿಸಿದ ವಿಚಾರಗಳನ್ನು ಪರಿಶೀಲಿಸಲಾಗಿದೆ. ಜೈವಿಕ ತಂತ್ರಜ್ಞಾನದ ಪ್ರಭಾವದಿಂದಾಗಿ ದೇಶೀಯ ಬೀಜಗಳ ನಾಶ, ಮಾನವನ ಆರೋಗ್ಯದ ಮೇಲೆ ಹಾಗೂ ಪರಿಸರದ ಮೇಲೆ ಬೀರಬಹುದಾದ ಪರಿಣಾಮಗಳನ್ನು ಕುರಿತು ಗಮನ ಹರಿಸಲಾಗಿದೆ. ಅಲ್ಲದೆ ಈ ಮೇಲಿನ ಎಲ್ಲ ಒಪ್ಪಂದಗಳು ಹಾಗೂ ಹುನ್ನಾರಗಳಿಂದಾಗಿ ರೈತರು ಹೇಗೆ ಶೋಷಣೆಗೆ ಒಳಗಾಗಿ ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ ಎಂಬುದನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಅಧ್ಯಾಯ ಆರರಲ್ಲಿ ನಂಜುಂಡಸ್ವಾಮಿ ಅವರು ರೈತರ ಅಭಿವೃದ್ಧಿಗಾಗಿ ಕಂಡಂಥ ಕನಸುಗಳು, ಆಶಯಗಳು ಹಾಗೂ ಅವುಗಳನ್ನು ಸಾಕಾರಗೊಳಿಸಲು ಅವರು ಪಟ್ಟ ಪರಿಶ್ರಮ ಈ ಕುರಿತಾದ ವಿವರಗಳು, ವಿಶ್ಲೇಷಣೆಗಳನ್ನು ಒಳಗೊಂಡಿದೆ. ರೈತರ ರಾಜ್ಯ ನಿರ್ಮಾಣಕ್ಕಾಗಿ ಕಂಡ ಕನಸುಗಳು ಹಾಗೂ ಅವುಗಳು ಸಾಕಾರಗೊಳ್ಳದೆ ಇರಲು ಕಾರಣಗಳು ಯಾವುವು? ರೈತನ ಹಕ್ಕುಗಳು ಹಾಗೂ ಆತನ ಆತ್ಮಗೌರವದ ರಕ್ಷಣೆಗಾಗಿ ಶ್ರಮಿಸಿದ ಅವರ ವಿಚಾರಗಳನ್ನು ಚರ್ಚೆಗೆ ಒಳಪಡಿಸಲಾಗಿದೆ. ಹೊಸ ಕರ್ನಾಟಕ ಕಟ್ಟುವ ಕನಸು ಕಂಡಿದ್ದ ಅವರು ಯಶಸ್ಸು

ಕಾಣದೇ ಹೋದದಕ್ಕೆ ಕಾರಣವಾದ ಅಂಶಗಳನ್ನೂ ಸಹ ಈ ಅಧ್ಯಾಯದಲ್ಲಿ ವಿಶ್ಲೇಷಿಸಲಾಗಿದೆ. ಅಂತೆಯೇ ಕೊನೆಯ ಅಧ್ಯಾಯ (ಏಳನೆಯ)ದಲ್ಲಿ ಪ್ರಸ್ತುತ ಅಧ್ಯಯನದಿಂದ ಕಂಡುಕೊಂಡ ಫಲಿತಗಳನ್ನು ತಳೆದ ನಿಲುವುಗಳನ್ನಾಗಿ ಅಭಿವ್ಯಕ್ತಿಸಲಾಗಿದೆ.

* * *

ಅಧ್ಯಾಯ ಎರಡು

ನಂಜುಂಡಸ್ವಾಮಿ: ಪರಿಚಯ-ಪರಿಸರ-ಪ್ರಭಾವ

ಪ್ರೊ.ನಂಜುಂಡಸ್ವಾಮಿ ಅವರು ಸತತ ಮೂರು ದಶಕಗಳ ಕಾಲ ರೈತ ವರ್ಗದವರ ಗಟ್ಟಿ ಧ್ವನಿಯಾಗಿದ್ದವರು. ಅನ್ಯಾಯ, ಅಸಮಾನತೆ ಹಾಗೂ ಶೋಷಣೆಗಳಿಂದ ಜರ್ಜರಿತರಾಗಿದ್ದ ರೈತರ ಬಾಳಿನಲ್ಲಿ ಹೋರಾಟದ ಭಾವನೆ ಮೂಡಿಸಿದವರು. ಎಂಭತ್ತರ ದಶಕದಲ್ಲಿ 'ಕರ್ನಾಟಕ ರಾಜ್ಯ ರೈತ ಸಂಘ'ವನ್ನು ಹುಟ್ಟು ಹಾಕಿದರು. ಅಧಿಕಾರಶಾಹಿ ವರ್ಗದವರ ದೌರ್ಜನ್ಯ, ಸರ್ಕಾರದ ನೀತಿಗಳು ಹಾಗೂ ಜಾಗತೀಕರಣದ ಹುನ್ನಾರಗಳನ್ನು ಅರಿತು, ಅವುಗಳಿಂದ ರೈತರನ್ನು ರಕ್ಷಿಸಲು ಅವಿರತವಾಗಿ ಶ್ರಮಿಸಿದವರು. ಇದಕ್ಕಾಗಿ ಅವರು ಬಹುಮುಖಿ ನೆಲೆಗಳಲ್ಲಿ ಹೋರಾಟಗಳನ್ನು ಹಮ್ಮಿಕೊಂಡು ರೈತ, ರೈತ ಕಾರ್ಮಿಕ ಹಾಗೂ ದಲಿತ ವರ್ಗದವರನ್ನು ಸಂಘಟಿಸುವಲ್ಲಿ ಯಶಸ್ವಿಯಾಗಿ 'ಹಸಿರು ಸೇನಾನಿ' ಎಂದೇ ಹೆಸರನ್ನು ಪಡೆದಿದ್ದಾರೆ.

ನಂಜುಂಡಸ್ವಾಮಿ ಅವರ ವ್ಯಕ್ತಿತ್ವ ಹಾಗೂ ಬರಹಗಳನ್ನು ಕುರಿತು ಚಿಂತನೆ ಮಾಡುವುದೆಂದರೆ ಕರ್ನಾಟಕದ ರೈತ ಚಳವಳಿಯ ಚಿಂತನೆ ಮಾಡಿದಂತೆಯೇ ಸರಿ. ಅಷ್ಟರ ಮಟ್ಟಿಗೆ ನಂಜುಂಡಸ್ವಾಮಿ ಅವರ ಬದುಕು-ಬರಹ ರೈತ ಚಳವಳಿಯೊಂದಿಗೆ ಬೆಸೆದುಕೊಂಡಿದೆ. ರೈತ ಚಳವಳಿಯ ಕ್ರಿಯಾಶೀಲತೆಗೆ ಕಾರಣರಾದ ನಂಜುಂಡಸ್ವಾಮಿ ಅವರು ಬಹಳಷ್ಟು ಕಡೆ ಪ್ರವಾಸ ಮಾಡುತ್ತಾ ಅನ್ಯಾಯಕ್ಕೆ ಒಳಗಾದ ರೈತರಿಗಾಗಿ ರೈತರನ್ನು ಸಂಘಟಿಸುವಲ್ಲಿ ಜನರ ಶಕ್ತಿಯಾಗಿದ್ದವರು. ಶೋಷಣೆಗೆ ಒಳಗಾದವರಿಗಾಗಿ ಅವರು ತಮ್ಮ ಇಡೀ ಜೀವನವನ್ನೇ ಅರ್ಪಿಸಿಕೊಂಡರು. ಹೀಗಾಗಿ ಅವರು ರೈತರಿಗಾಗಿ ನೀಡಿದ ಕೊಡುಗೆಗಳು ಅಸಮಾನ್ಯವಾಗಿವೆ.

ಭಾರತ ದೇಶದಲ್ಲಿ ಪ್ರಗತಿಪರ ಚಳವಳಿಗಳ ಮುಂಚೂಣಿಯಲ್ಲಿದ್ದವರು ಅನುಭವಿಸಬೇಕಾದ ಸಂಕಷ್ಟಗಳದ್ದೇ ಒಂದು ಚರಿತ್ರೆ ಇದೆ. ಏಕೆಂದರೆ ಚರಿತ್ರೆಯ ತಪ್ಪು ತಿಳುವಳಿಕೆಗಳನ್ನು ಪ್ರಶ್ನಿಸುತ್ತ ಹೊಸ ಇತಿಹಾಸಕ್ಕೆ ಒತ್ತಾಸೆಯಾಗುವ ವ್ಯಕ್ತಿಗಳು ಎದುರಿಸಬೇಕಾದ ಸವಾಲುಗಳು ಒಂದಲ್ಲ ಎರಡಲ್ಲ ಹತ್ತಾರು. ಇವೆಲ್ಲವನ್ನು ಎದುರಿಸುತ್ತ 'ಹಸಿರು ಶಾಲಿನ ಹರಿಕಾರ'ರಾದ ನಂಜುಂಡಸ್ವಾಮಿ ಅವರು ಬದುಕಿದ ರೀತಿಯೇ ರೈತ ಚಳವಳಿಯ ಏರಿಳಿತದ ಒಂದು ಇತಿಹಾಸವಾಗಿದೆ. ಏಕೆಂದರೆ ಅವರನ್ನು ಹೊರತುಪಡಿಸಿದ ರೈತ ಚಳವಳಿಯ ಚರಿತ್ರೆಯನ್ನು ಸೃಷ್ಟಿಸಲು ಸಾಧ್ಯವಿಲ್ಲ.

ಈ ನಾಡಿನ ರೈತರ ನೋವಿನೊಂದಿಗೆ ಸ್ಪಂದಿಸಿದ ಪ್ರಮುಖ ಸಮಾಜವಾದಿ ವ್ಯಕ್ತಿಗಳಲ್ಲಿ ನಂಜುಂಡಸ್ವಾಮಿ ಅವರು ಸಹ ಒಬ್ಬರು. ಗಾಂಧೀವಾದವಾಗಿದ್ದ ಗ್ರಾಮ ಸ್ವರಾಜ್ಯವೇ ರೈತರ ಏಳಿಗೆಗೆ ದಾರಿ ಎನ್ನುವ ಸತ್ಯಸಂಗತಿಯನ್ನು ಅವರು ಸಾರಿ ಹೇಳಿರುವುದುಂಟು. ಸುಮಾರು ಮೂವತ್ತೈದು ವರ್ಷಗಳ ಕಾಲ ತಮ್ಮ ಅಮೂಲ್ಯ ಬದುಕನ್ನು ರೈತರ ಹಿತರಕ್ಷಣೆಗಾಗಿ ತೊಡಗಿಸಿಕೊಂಡಿದ್ದರು. ಅವರ ಕ್ರಿಯಾಶೀಲತೆ, ಚರ್ಚೆ, ಒಲವು-ನಿಲುವುಗಳು, ಭವಿಷ್ಯದ ಬಗೆಗಿನ ಚಿಂತನೆಗಳು ರೈತ ಚಳವಳಿಯ ದಿಕ್ಕನ್ನು ನಿರ್ದೇಶಿಸುತ್ತಿದ್ದವು ಹಾಗೂ ಹಲವಾರು ಏರಿಳಿತಗಳಿಗೂ ಕಾರಣವಾಗಿದ್ದವು.

ನಂಜುಂಡಸ್ವಾಮಿ ಅವರು ೧೯೩೬ರ ಫೆಬ್ರವರಿ ೧೩ರಂದು ಮೈಸೂರಿನ ಸರಸ್ವತಿಪುರಂನಲ್ಲಿ ಎಂ.ಎನ್.ಮಹಂತದೇವರು ಹಾಗೂ ರಾಜಮ್ಮಣ್ಣಿ ದಂಪತಿಗಳಿಗೆ ಐದನೇ ಮಗನಾಗಿ ಜನಿಸಿದರು. ಇವರು ಜನಿಸುವುದಕ್ಕಿಂತ ಮೊದಲೇ ತಂದೆ ಮೈಸೂರು ಜಿಲ್ಲೆಯ ಟಿ.ನರಸೀಪುರ ತಾಲ್ಲೂಕು ಮಾಡ್ರಹಳ್ಳಿ ಮೂಲದಿಂದ ಬಂದು ಮೈಸೂರಿನಲ್ಲಿ ನೆಲೆಸಿದ್ದರು. ತಂದೆ ಇಡೀ ಮೈಸೂರಿನಲ್ಲೇ ಮೊದಲು ಎಂ.ಎ. ಪದವಿ ಪಡೆದು ಖ್ಯಾತ ವಕೀಲರು ಸಹ ಆಗಿದ್ದರು. ಆಗಿನ ಮೈಸೂರು ವಿಧಾನಸಭೆ ಹಾಗೂ ವಿಧಾನ ಪರಿಷತ್ತಿನ ಸದಸ್ಯರಾಗಿ ಸುಮಾರು ೨೬ ವರ್ಷ ಸೇವೆ ಸಲ್ಲಿಸಿದ್ದರು. ನಂಜುಂಡಸ್ವಾಮಿ ಅವರು ಮೈಸೂರಿನ ಹಾರ್ಡ್‌ವಿಕ್ ಹೈಸ್ಕೂಲಿನಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಮುಗಿಸಿದರು. ಅಲ್ಲಿಯ ಯುವರಾಜ ಕಾಲೇಜಿನಲ್ಲಿ ಇಂಟರ್ ಮೀಡಿಯೆಟ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿ, ನಂತರ ಮೈಸೂರು ಮೆಡಿಕಲ್ ಕಾಲೇಜಿಗೆ ಅರ್ಜಿ ಹಾಕಿದ್ದರು. ಪ್ರವೇಶಕ್ಕೆ ಎಲ್ಲಾ ಅರ್ಹತೆಗಳಿದ್ದರೂ ಅಲ್ಲಿನ ಒಳರಾಜಕೀಯದಿಂದ ಅರ್ಜಿ ತಿರಸ್ಕೃತವಾಯಿತು. ನಂತರ ಮೈಸೂರು ವಿಶ್ವವಿದ್ಯಾಲಯದಿಂದ ೧೯೫೪ರಲ್ಲಿ ಬಿ.ಎಸ್ಸಿ. ಪದವಿ ಪಡೆದರು. ಬಿ.ಎಸ್ಸಿ ಪದವಿ ಪಡೆದ ನಂತರವೂ ವೈದ್ಯನಾಗಬೇಕೆಂಬ ಹಂಬಲದಿಂದ ಮತ್ತೆ ಮೈಸೂರು ಮೆಡಿಕಲ್ ಕಾಲೇಜಿಗೆ ಎರಡನೇ ಬಾರಿ ಅರ್ಜಿ ಸಲ್ಲಿಸಿದರು. ಉತ್ತಮ ಅಂಕಗಳನ್ನು ಗಳಿಸಿ ಉನ್ನತ ಶ್ರೇಣಿಯಲ್ಲಿದ್ದರೂ ಮತ್ತೆ ಅದೇ ಒಳರಾಜಕೀಯದಿಂದ ಅರ್ಜಿ ಎರಡನೇ ಬಾರಿಯೂ ತಿರಸ್ಕೃತಗೊಂಡಿತು. ಧೃತಿಗೆಡದ ನಂಜುಂಡಸ್ವಾಮಿ ಅವರು ತಂದೆಯ ಒತ್ತಾಯ ಹಾಗೂ ಆಸೆಗೆ ಬೆಲೆಕೊಟ್ಟು ಮೈಸೂರು ವಿಶ್ವವಿದ್ಯಾಲಯದ ಕಾನೂನು ಪದವಿಗಾಗಿ ಪ್ರವೇಶ ಪಡೆದು, ೧೯೫೬ರಲ್ಲಿ ಬಿ.ಎಲ್. ಪದವಿ ಪಡೆದರು. ನಂತರ ಕರ್ನಾಟಕ ವಿಶ್ವವಿದ್ಯಾಲಯದಿಂದ ೧೯೬೧ರಲ್ಲಿ ಪ್ರಥಮ ದರ್ಜೆಯಲ್ಲಿ ಎಲ್.ಎಲ್.ಎಂ. ಪದವಿ ಪಡೆದರು.

ಉನ್ನತ ವ್ಯಾಸಂಗಕ್ಕಾಗಿ ನೆದರ್‌ಲ್ಯಾಂಡಿನ ''ಹೇಗ್ ಅಕಾಡೆಮಿ ಆಫ್ ಇಂಟರ್‌ನ್ಯಾಷನಲ್ ಲಾ''ಸಂಸ್ಥೆಗೆ ೧೯೬೧ರಲ್ಲಿ ತೆರಳಿದರು. ಅಲ್ಲಿ ಫೋರ್ಡ್ ಫೌಂಡೇಶನ್‌ನ ಶಿಷ್ಯವೇತನದ ಸಹಾಯದಿಂದ ೧೯೬೧-೬೨ನೇ ವರ್ಷದಲ್ಲಿ ಸ್ನಾತಕೋತ್ತರ ಸಂಶೋಧನೆಯನ್ನು ಪೂರ್ಣಗೊಳಿಸಿದರು. ೧೯೬೧-೬೨ರ ವರೆಗೆ ಜರ್ಮನಿಯ ಸಾರ್ ವಿಶ್ವವಿದ್ಯಾಲಯದಲ್ಲಿ ''ಡಾಕ್ಟೋರಲ್ ವರ್ಕ್ ಇನ್ ಇಂಟರ್ ನ್ಯಾಷನಲ್ ಲಾ'' ಪೂರ್ಣಗೊಳಿಸಿದರೂ ತಾವು ತಯಾರಿಸಿದ್ದ ಪ್ರಬಂಧದಲ್ಲಿ ತಮ್ಮ ತಾಯ್ನಾಡಿನ ಘನತೆ, ಆತ್ಮಗೌರವಗಳಿಗೆ ಧಕ್ಕೆ ತರುವ

ಸಾಮ್ರಾಜ್ಯಶಾಹಿ ಕಾನೂನುಗಳನ್ನು ವಿರೋಧಿಸಿ ಬರೆದಿದ್ದರು. ಅಂದಿನ ಜಗದ್ವಿಖ್ಯಾತ ನ್ಯಾಯಶಾಸ್ತ್ರ ಪ್ರವೀಣ ಹಾಗೂ ವಿಶ್ವವಿದ್ಯಾಲಯದ ಡೀನ್ ಆಗಿದ್ದ ಸೈಡಲ್ ಹೊಯೆನ ವೆಲ್ಡರ್ನ್ ಹಾಗೂ ಅಲ್ಲಿನ ಇನ್ನೊಬ್ಬ ಲಾ ವಿದ್ವಾಂಸ ಮೇರ್ ಹಾಫರ್ ಅವರು ನಂಜುಂಡಸ್ವಾಮಿ ಅವರ ವಾದವನ್ನು ಒಪ್ಪದ ಕಾರಣ ಪಿಎಚ್.ಡಿ ಪದವಿಯನ್ನು ತಿರಸ್ಕರಿಸಿದರು. ಅದೇ ಸಮಯದಲ್ಲಿ ತಮ್ಮ ಬಿಡುವಿನ ವೇಳೆಯಲ್ಲಿ ಜರ್ಮನಿಯಲ್ಲಿದ್ದ ಏರ್‌ಫೋರ್ಸ್ ಬೇಸ್‌ನಲ್ಲಿ ರಿಸೆಪ್ಷನಿಸ್ಟ್ ಆಗಿ ಕೆಲಸ ಮಾಡುತ್ತಿದ್ದರು. ಅದೇ ಸಂದರ್ಭದಲ್ಲಿ ಭಾರತದಲ್ಲಿ ಪ್ರಧಾನಮಂತಿಯಾಗಿದ್ದ ಜವಾಹರ್‌ಲಾಲ್ ನೆಹರೂ ಅವರು ನಿಧನರಾಗಿದ್ದ ಸುದ್ದಿ ಕೇಳಿ ತಮಗೆ ತಾವೇ ರಜೆ ಘೋಷಿಸಿಕೊಂಡು ಶೋಕಾಚರಣೆ ಮಾಡಿದರು. ಅದಕ್ಕೆ ಅಲ್ಲಿನ ಅಧಿಕಾರಿಗಳು ಇವರನ್ನು ಹಗುರವಾಗಿ ಮಾತನಾಡಿದ್ದರಿಂದ ತಮ್ಮ ಹುದ್ದೆಗೆ ರಾಜೀನಾಮೆ ನೀಡಿ ೧೯೬೫ರಲ್ಲಿ ಭಾರತಕ್ಕೆ ಹಿಂದಿರುಗಿದರು.

ಭಾರತಕ್ಕೆ ವಾಪಸ್ಸಾಗುತ್ತಿದ್ದಂತೆಯೇ ನೇರವಾಗಿ ತಮ್ಮ ತಾತ ಪಟೇಲ್ ನಂಜಪ್ಪನವರು ಕೊಟ್ಟಿದ್ದಂಥ ಜಮೀನಿನಲ್ಲಿ ವ್ಯವಸಾಯ ಮಾಡಲು ಆರಂಭಿಸಿದರು. ಅಷ್ಟೊತ್ತಿಗಾಗಲೇ ತಮ್ಮ ಆತ್ಮೀಯ ಗೆಳೆಯ ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಹಾಗೂ ಅವರ ಹತ್ತಿರದ ಸಂಬಂಧಿ ಎನ್.ಡಿ. ಸುಂದರೇಶ್ ಅವರೂ ಸಹ ವ್ಯವಸಾಯ ಶುರು ಮಾಡಿದ್ದರು. ಅದೇ ಸಂದರ್ಭದಲ್ಲಿ ಕರ್ನಾಟಕದಲ್ಲಿ ಮೊಟ್ಟ ಮೊದಲ ಬಾರಿಗೆ ಲೆವಿ ಪದ್ಧತಿಯ ವಿರುದ್ಧ ಮೈಸೂರಿನಲ್ಲಿ ಹೋರಾಡುವ ಮೂಲಕ ನಂಜುಂಡಸ್ವಾಮಿ ಅವರೊಬ್ಬರಿಂದಲೇ ರೈತ ಚಳವಳಿ ಶುರುವಾಯಿತು. ಈ ಸಮಸ್ಯೆಗೆ ಚಿಕ್ಕಮಗಳೂರಿನಲ್ಲಿ ತೇಜಸ್ವಿ ಹಾಗೂ ಶಿವಮೊಗ್ಗದಲ್ಲಿ ಸುಂದರೇಶ್ ಅವರು ದನಿಗೂಡಿಸಿದ್ದರು. ಹೀಗೆ ಒಬ್ಬ ವ್ಯಕ್ತಿಯಿಂದ ಆರಂಭಗೊಂಡ ಹಲವರನ್ನೊಳಗೊಂಡ ಸಂಘಟಿತ ರೈತ ಚಳವಳಿ ಪ್ರಮುಖ ರೈತ ಚಳವಳಿಯಾಗಿ ಮಾರ್ಪಾಡುಗೊಂಡಿತು. ಇದು ರೈತ ಚಳವಳಿಯ ಹುಟ್ಟು.

೧೯೬೫ ರಿಂದ ೧೯೭೮ರವರೆಗೆ ಕಾನೂನು ಪ್ರಾಧ್ಯಾಪಕರಾಗಿ ವೃತ್ತಿ ಜೀವನ ಪ್ರಾರಂಭಿಸಿದರು. ಮೈಸೂರಿನ ಶಾರದಾ ವಿಲಾಸ ಲಾ ಕಾಲೇಜು, ಬೆಂಗಳೂರಿನ ಬಿ.ಎಂ.ಎಸ್. ಹಾಗೂ ರೇಣುಕಾಚಾರ್ಯ ಕಾನೂನು ಕಾಲೇಜುಗಳಲ್ಲಿ ಸೇವೆ ಸಲ್ಲಿಸಿದರು. ಸೇವೆ ಸಲ್ಲಿಸುತ್ತಲೇ ಸಮಾಜವಾದಿ ಚಳವಳಿಯ ಹರಿಕಾರ ರಾಮಮನೋಹರ ಲೋಹಿಯಾ ಅವರು ಬರೆದಿದ್ದ ''ಮಾರ್ಕ್ಸ್, ಗಾಂಧಿ ಅಂಡ್ ಸೋಶಿಯಲಿಸಂ'' ಎಂಬ ಪುಸ್ತಕದಿಂದ ಪ್ರಭಾವಗೊಂಡು ''ಸಮಾಜವಾದಿ ಪಕ್ಷ''ವನ್ನು ಸೇರಿದರು. ಸಮಾಜವಾದಿ ಪಕ್ಷದಲ್ಲಿ ಆಗ ಶಾಂತವೇರಿ ಗೋಪಾಲಗೌಡ, ಜೆ.ಎಚ್.ಪಟೇಲ, ಕೆ.ಜಿ.ಮಹೇಶ್ವರಪ್ಪ ಮುಂತಾದವರಿದ್ದರು. ಅವರ ಮೇಲುಸ್ತುವಾರಿಯಲ್ಲಿ ಕೆಲಸ ಮಾಡಲು ಒಪ್ಪದೆ ೧೯೬೮ರಲ್ಲಿ 'ಸಮಾಜವಾದಿ ಯುವಜನ ಸಭಾ' ಎಂಬ ಒಂದು ತರುಣರ ಉಪ ಸಂಘಟನೆಯನ್ನು ಕಟ್ಟಿಕೊಂಡರು. ೧೯೬೮ ರಿಂದ ೧೯೭೨ರ ವರೆಗೆ ಸಮಾಜವಾದಿ ಯುವಜನ ಸಭಾದ ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿ ನಂಜುಂಡಸ್ವಾಮಿ ಅವರು ದುಡಿದರು. ನಂಜುಂಡಸ್ವಾಮಿ ಅವರ ಜೊತೆ ಪೂರ್ಣಚಂದ್ರ ತೇಜಸ್ವಿ, ಬಿ.ಎನ್.ಶ್ರೀರಾಮ್, ಪಿ.ಲಂಕೇಶ್, ಕೆ.ರಾಮದಾಸ್, ಎನ್.ಡಿ. ಸುಂದರೇಶ್, ಕಡಿದಾಳು ಶಾಮಣ್ಣ, ಪ್ರಭುಶಂಕರ್, ಜಿ.ಎಸ್. ಶಿವರುದ್ರಪ್ಪ ಹಾಗೂ ನಂಜುಂಡಸ್ವಾಮಿ ಅವರಿಂದ

ಪ್ರೇರೇಪಿತರಾಗಿದ್ದ ಸಿದ್ಧರಾಮಯ್ಯ, ಎಂ.ಪಿ. ಪ್ರಕಾಶ್, ರವಿವರ್ಮಕುಮಾರ್, ಟಿ.ಎನ್.ಸೀತಾರಾಮ್, ಶೂದ್ರ ಶ್ರೀನಿವಾಸ್, ಕಿ.ರಂ.ನಾಗರಾಜ್, ಸಿದ್ಧಲಿಂಗಯ್ಯ, ಅಗ್ರಹಾರ ಕೃಷ್ಣಮೂರ್ತಿ, ಚಂದ್ರಶೇಖರ ಪಾಟೀಲ ಹಾಗೂ ಇನ್ನೂ ಅನೇಕ ಪ್ರತಿಭಾವಂತರ ಪಡೆ ಸೇರಿಕೊಂಡಿತ್ತು. ನಂಜುಂಡಸ್ವಾಮಿ ಹಾಗೂ ಪೂರ್ಣಚಂದ್ರ ತೇಜಸ್ವಿ ಇವರಿಬ್ಬರೂ ಸೇರಿ ಪ್ರಕಟಿಸಿದ ''ಲೋಹಿಯಾ ಕೆಂಪು ಪುಸ್ತಕ'' ಹಲವಾರು ನಾಯಕರುಗಳನ್ನು ಪ್ರೇರೇಪಿಸಿ ರಾಜಕೀಯ ಮುಂಚೂಣಿಗೆ ತರುವಲ್ಲಿ ಯಶಸ್ವಿಯಾಗಿದೆ.

೧೯೬೨ರಲ್ಲಿ ರಾಮಮನೋಹರ ಲೋಹಿಯಾ ಅವರು ಮುನ್ನಡೆಸುತ್ತಿದ್ದ ''ಸಮಾಜವಾದಿ ಪಕ್ಷ''ದ ರಾಷ್ಟ್ರೀಯ ಕಾರ್ಯಕಾರಿಣಿಯ ಸದಸ್ಯರಾಗಿ ನಂಜುಂಡಸ್ವಾಮಿ ಅವರು ಕೆಲಸ ನಿರ್ವಹಿಸಿದರು. ೧೯೬೮ ರಿಂದ ೧೯೭೨ರ ವರೆಗೆ ಲೋಹಿಯಾ ಅವರ ''ಮ್ಯಾನ್ ಕೈಂಡ್'' ಪತ್ರಿಕೆಯ ಕನ್ನಡದ ಅವತರಣಿಕೆಯನ್ನು ಕರ್ನಾಟಕದಲ್ಲಿ 'ಮಾನವ' ಎಂದು ಹೆಸರಿಟ್ಟು, ಅದರ ಮುಖ್ಯ ಸಂಪಾದಕರಾಗಿ ಸೇವೆ ಸಲ್ಲಿಸಿದರು. ಕರ್ನಾಟಕದಲ್ಲಿ ವೈಜ್ಞಾನಿಕ ಚಿಂತನೆಗಳನ್ನು ಜಾರಿಗೆ ತರಲು, ಕರ್ನಾಟಕ ವಿಚಾರವಾದಿ ಒಕ್ಕೂಟವನ್ನು ಹುಟ್ಟು ಹಾಕಿ ಅದರ ಸಂಸ್ಥಾಪಕ ಅಧ್ಯಕ್ಷರಾಗಿ ೧೯೭೨-೭೪ರ ವರೆಗೆ ಸೇವೆ ಸಲ್ಲಿಸಿದರು. ಶ್ರೀಲಂಕಾ ಮೂಲದ ಅಂತರಾಷ್ಟ್ರೀಯ ಖ್ಯಾತಿಯ ವಿಚಾರವಾದಿ ಡಾ.ಎ.ಟಿ.ಕೊವೂರ್ ಅವರ ಜೊತೆಗೂಡಿ ವಂಚಕ ದೈವ ಮಾನವರುಗಳ ಪವಾಡಗಳನ್ನು ಬಯಲಿಗೆಳೆಯಲು ಪವಾಡ ರಹಸ್ಯ, ಬಯಲು ಆಂದೋಲನಗಳನ್ನು ಹಮ್ಮಿಕೊಂಡರು. ಮೂಢನಂಬಿಕೆಗಳಾದ ಜಾತಿ ಪದ್ಧತಿ, ಧರ್ಮ ಮತ್ತು ದೇವರ ವಿರುದ್ಧ ತಮಿಳುನಾಡಿನ ವಿಚಾರವಾದಿ ಪೆರಿಯಾರ್ ಇ.ವಿ. ರಾಮಸ್ವಾಮಿ ಅವರ ಸ್ವಾಭಿಮಾನಿ ಚಳವಳಿಯನ್ನು ಪ್ರಾರಂಭಿಸಿ, ಮೊಟ್ಟ ಮೊದಲ ಬಾರಿಗೆ ಪೆರಿಯಾರ್ ಅವರ ಸಭೆಗಳನ್ನು ಕರ್ನಾಟಕದಲ್ಲಿ ಆಯೋಜಿಸುವುದರ ಮೂಲಕ ೧೯೭೪ ರಿಂದ ೧೯೭೮ರ ವರೆಗೆ ಹೋರಾಟಗಳನ್ನು ಹಮ್ಮಿಕೊಂಡರು. ಜಯಪ್ರಕಾಶ್ ನಾರಾಯಣರು ರೂಪಿಸಿದ್ದ ಪ್ರಜಾಪ್ರಭುತ್ವ ಚಳವಳಿಯಲ್ಲಿ ಭಾಗವಹಿಸಿ ೧೯೭೪ ರಿಂದ ೧೯೭೮ರ ವರೆಗೆ ಕರ್ನಾಟಕದಲ್ಲಿ 'ನವ ನಿರ್ಮಾಣ ಕ್ರಾಂತಿ'ಯನ್ನು ಕಟ್ಟಿದರು. ಇದೇ ಸಮಯದಲ್ಲಿ ವೀರಶೈವ ಸಮ್ಮೇಳನ ಹಾಗೂ ಬ್ರಾಹ್ಮಣ ಸಮ್ಮೇಳನಗಳ ವಿರುದ್ಧ ಪ್ರತಿಭಟನೆ ಹಮ್ಮಿಕೊಂಡರು. ೧೯೭೬ರಲ್ಲಿ 'ದಕ್ಷಿಣ ಭಾರತ ಸಣ್ಣ ಬೆಳೆಗಾರರ ಒಕ್ಕೂಟ'ದ ಕಾನೂನು ಸಲಹೆಗಾರರಾಗಿ ಕಾರ್ಯ ನಿರ್ವಹಿಸಿದರು. ಕನ್ನಡ ಸಾಹಿತ್ಯದಲ್ಲಿನ ಸಾಮಾಜಿಕ ವಿಕೃತ ರೂಪವನ್ನು ಜನತೆಗೆ ತಿಳಿಸಲು ೧೯೭೪-೭೬ರ ವರೆಗೆ 'ಕರ್ನಾಟಕ ಕಲಾವಿದರ ಹಾಗೂ ಬರಹಗಾರರ ಒಕ್ಕೂಟ'ವನ್ನು ಮೈಸೂರಿನಲ್ಲಿ ರಾಷ್ಟ್ರಕವಿ ಕುವೆಂಪು ಅವರಿಂದ ಉದ್ಘಾಟಿಸುವುದರ ಮೂಲಕ ಪ್ರಾರಂಭಿಸಿ, ಅದರ ಸಂಚಾಲಕರಾಗಿ ಕಾರ್ಯ ನಿರ್ವಹಿಸಿದರು. ೭೦ರ ದಶಕದಲ್ಲಿ ಕರ್ನಾಟಕದ ಪ್ರಪ್ರಥಮ ಹಿಂದುಳಿದ ಆಯೋಗಗಳ ಅಧ್ಯಕ್ಷರಾಗಿದ್ದ ಎಲ್.ಜಿ. ಹಾವನೂರ ಅವರ ವರದಿಗೆ ಎಲೆ ಮರೆಯ ಕಾಯಿಯಂತೆ ಶ್ರಮವಹಿಸಿ ದುಡಿದರು.

೧೯೭೬-೮೫ರ ವರೆಗೆ ಸ್ವತಂತ್ರವಾಗಿ 'ಸೋಶಿಯೋ ಲೀಗಲ್ ಸರ್ವೀಸ್ ಅಂಡ್ ರಿಸರ್ಚ್ ಸೆಂಟರ್' (ಎಸ್.ಎಲ್.ಎಸ್.ಆರ್.ಸಿ) ಎಂಬ ಕಾನೂನು ಕಾಲೇಜನ್ನು ಸ್ಥಾಪಿಸಿ ಅದರ ಪ್ರಾಂಶುಪಾಲರಾದರು. ಆ ನಂತರದಲ್ಲಿ ನರಗುಂದ ಹಾಗೂ ನವಲಗುಂದದಲ್ಲಿ ನಡೆದ ರೈತರ ಹೋರಾಟದಲ್ಲಿ ಇಬ್ಬರು ರೈತರನ್ನು ಗುಂಡಿಕ್ಕಿ ಕೊಂದಿದ್ದ ಗುಂಡೂರಾವ್ ಸರ್ಕಾರವನ್ನು ಉಗ್ರವಾಗಿ ಖಂಡಿಸಲು ಈ ಎರಡೂ ಸಂಘಟನೆಗಳು ಒಂದೇ ವೇದಿಕೆಯಡಿ ಸೇರಿ ''ಕರ್ನಾಟಕ ರಾಜ್ಯ ರೈತ ಸಂಘ'' ಎಂಬ ಸಂಘಟನೆಯನ್ನು ಸ್ಥಾಪಿಸಿದರು. ರಾಜ್ಯಾದ್ಯಂತ ಸಂಘಟನೆ ಮಾಡಿ ಹೋರಾಟವನ್ನು ಹಮ್ಮಿಕೊಂಡರು.

ಜಾತ್ಯತೀತ ತತ್ವವನ್ನು ಜಾರಿಗೆ ತರಲು ಮತ್ತು ಜಾತಿ ಪದ್ಧತಿಯನ್ನು ತಮ್ಮ ಬದುಕಿನಲ್ಲಿ ಸಂಪೂರ್ಣ ನಿಷೇಧಿಸಲು ಕ್ಷತ್ರಿಯ ಮರಾಠಾ ಜನಾಂಗಕ್ಕೆ ಸೇರಿದ ಪ್ರತಿಮಾ ಅವರನ್ನು ಏಪ್ರಿಲ್ ೨೬, ೧೯೮೦ರಂದು ಮದುವೆಯಾಗುವುದರ ಮುಖೇನ ಅಂತರ್‌ಜಾತಿ ವಿವಾಹಕ್ಕೆ ಪ್ರೋತ್ಸಾಹ ನೀಡಿದರು. ೧೯೮೧ ಏಪ್ರಿಲ್ ೨೬ ರಂದು 'ಚುಕ್ಕಿ' ಎಂಬ ಹೆಣ್ಣು ಮಗುವಿಗೆ ಹಾಗೂ ಸಪ್ಟೆಂಬರ್ ೧೨, ೧೯೮೩ರಂದು 'ಪಚ್ಚೆ' ಎಂಬ ಗಂಡು ಮಗುವಿಗೆ ಜನ್ಮಕೊಟ್ಟರು. ಯಾವ ಜಾತಿ ಹಾಗೂ ಧರ್ಮಗಳ ನೆರಳು ಬೀಳದಂಥ ಹೆಸರುಗಳನ್ನು ತಮ್ಮ ಮಕ್ಕಳಿಗೆ ಇಟ್ಟು ಜಾತ್ಯತೀತ ತತ್ವವನ್ನು ಬದುಕಿನ ಉದ್ದಕ್ಕೂ ಪ್ರತಿಪಾದಿಸಿದರು. ವೃತ್ತಿ ಜೀವನದ ಜೊತೆ ಜೊತೆಗೆ ಅಪಾರ ಸಮಾಜ ಸೇವೆಯನ್ನು ಮಾಡಿದರು. ಅವರು ತಮ್ಮ ಜೀವನದಲ್ಲಿ ಶಿಸ್ತಿಗೆ ಹೆಚ್ಚಿನ ಮಹತ್ವಕೊಟ್ಟ ವ್ಯಕ್ತಿಯಾಗಿದ್ದರು. ಅವರ ನಿರರ್ಗಳ ಮಾತಿನ ಶೈಲಿ, ಸೌಮ್ಯ ಸ್ವಭಾವ, ವೈಚಾರಿಕ ಚಿಂತನೆ, ಅಪಾರ ಪಾಂಡಿತ್ಯಗಳಿಂದಾಗಿ ಸ್ವಾತಂತ್ರ್ಯೋತ್ತರ ಕರ್ನಾಟಕದಲ್ಲಿ ಕಾಂಗ್ರೆಸ್ಸೇತರ ಜನತಾ ಸರ್ಕಾರದ ರಚನೆಗೆ ಮುಖ್ಯ ಪ್ರೇರಕರಲ್ಲೊಬ್ಬರಾದರು. ರೈತರನ್ನು ಸಂಘಟಿಸುವ ದೃಷ್ಟಿಯಿಂದ 'ನಮ್ಮನಾಡು' ಪತ್ರಿಕೆಯನ್ನು ಆರಂಭಿಸಿದರು.

ಮೈಸೂರಿನ ಹುಣಸೂರಿನ ಗ್ರಾಮದ ರೈತರನ್ನು ಒಕ್ಕಲೆಬ್ಬಿಸುತ್ತಿದ್ದ ರಾಮಕೃಷ್ಣ ಹೆಗಡೆಯವರ ಸರ್ಕಾರದ ವಿರುದ್ಧ ೧೯೮೪ ರಲ್ಲಿ ಪ್ರತಿಭಟನೆ ನಡೆಸಿ ಪೊಲೀಸರಿಂದ ಬಂಧಿಸಲ್ಪಟ್ಟು ಜೈಲುವಾಸ ಅನುಭವಿಸಿ ಬಿಡುಗಡೆಯಾದರು. ಜನತಾ ಸರ್ಕಾರ ಜಾರಿಗೊಳಿಸಿದ್ದ ರೈತರ ಆಸ್ತಿಯನ್ನು ಜಪ್ತಿ ಮಾಡುವಂಥ ಕಾನೂನಾದ ೧೧೧ (ಸಿ) ಕಾನೂನನ್ನು ವಿರೋಧಿಸಿ ರಾಜ್ಯದೆಲ್ಲೆಡೆಯಿಂದ ರೈತರನ್ನು ಸೇರಿಸಿ ಪಾದಯಾತ್ರೆಯನ್ನು ಹಮ್ಮಿಕೊಳ್ಳಲಾಯಿತು. ೧೯೮೫-೮೯ರ ವರೆಗೆ 'ರಾಮಮನೋಹರ ಲೋಹಿಯಾ ಕಾನೂನು ಕಾಲೇಜ'ನ್ನು ಸ್ಥಾಪಿಸಿ ಅದರ ಪ್ರಾಂಶುಪಾಲರಾದರು. ಅಕ್ರಮ ಗ್ರಾನೈಟ್ ಗಣಿಗಾರಿಕೆಯ ವಿರುದ್ಧ ಆಂದೋಲನ ಹಮ್ಮಿಕೊಂಡು ಹೋರಾಟ ನಡೆಸಿದರು. ಪೊಲೀಸ್ ಅಧಿಕಾರಿಗಳ ಶೋಷಣೆಯ ವಿರುದ್ಧ ಹೋರಾಟಗಳನ್ನು ನಡೆಸಿದರು. ಅಲ್ಲದೆ ಮಹಿಳಾ ಸಮಾವೇಶಗಳನ್ನು ಹಮ್ಮಿಕೊಳ್ಳುವುದರ ಮೂಲಕ ರೈತ ಮಹಿಳೆಯರಿಗಾಗುತ್ತಿದ್ದ ಶೋಷಣೆಯ ವಿರುದ್ಧ ಒಗ್ಗಟ್ಟಿನ ಧ್ವನಿ ಎತ್ತುವಂತೆ ಮಾಡಿದರು. ೧೯೮೭ರಲ್ಲಿ ಕನ್ನಡ, ದಲಿತ ಹಾಗೂ ಕಾರ್ಮಿಕ ಸಂಘಟನೆಗಳ ಬೆಂಬಲದೊಂದಿಗೆ ರೈತ ಸಂಘವು ''ಕನ್ನಡ ದೇಶ ಪಕ್ಷ'' ಎಂಬ ಪ್ರಾದೇಶಿಕ ಪಕ್ಷವನ್ನು ಹುಟ್ಟು ಹಾಕಿತು. ಇದರ ಅಧ್ಯಕ್ಷರಾಗಿ ನಂಜುಂಡಸ್ವಾಮಿ ಹಾಗೂ ಪ್ರಧಾನ ಕಾರ್ಯದರ್ಶಿಯಾಗಿ ಸುಂದರೇಶ್ ಅವರು ಸರ್ವಾನುಮತದಿಂದ ಆಯ್ಕೆಯಾದರು.

ನಂಜುಂಡಸ್ವಾಮಿ ಅವರು ನಾಡಿನ ರಾಜಕಾರಣದ ಚುಕ್ಕಾಣಿ ಹಿಡಿದಿದ್ದ ಅಧಿಕಾರಶಾಹಿ ವರ್ಗದವರನ್ನು ಮಣಿಸಲು ರೈತರದೇ ಆದಂಥ ರಾಜಕಾರಣದ ವೇದಿಕೆಯನ್ನು ನಿರ್ಮಿಸಲು ಚಿಂತಿಸಿ ಪ್ರಯತ್ನಪಟ್ಟರು. ತಮ್ಮದೆ ಆದ ರಾಜಕಾರಣದ ಬಲವೊಂದಿದ್ದರೆ ರೈತರ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬಹುದು ಎಂದು ೧೯೮೯ರಲ್ಲಿ 'ರೈತ ಸಂಘ' ಪಕ್ಷವನ್ನು ವಿಧಾನಸಭಾ ಚುನಾವಣೆಗೆ ಸ್ಪರ್ಧಿಸುವಂತೆ ಮಾಡಿದರು. ಧಾರವಾಡದ ಗ್ರಾಮೀಣ ಪ್ರದೇಶದ ಉಪ ಚುನಾವಣೆಗೆ ನಂಜುಂಡಸ್ವಾಮಿ ಅವರೇ ಸೂಕ್ತ ಅಭ್ಯರ್ಥಿಯೆಂದು ಜನರೇ ತೀರ್ಮಾನಿಸಿದರು. ಜನರ ಸರ್ವಾನುಮತದ ಒತ್ತಾಯಕ್ಕೆ ಮಣಿದು ಎಂ.ಡಿ.ಎನ್ ಈ ಚುನಾವಣೆಯಲ್ಲಿ ಸ್ಪರ್ಧಿಸಿ ಆಯ್ಕೆಯಾದರು. ಅದೇ ವರ್ಷ ಕಾಂಗ್ರೆಸ್ ಸರ್ಕಾರದ ವಿರುದ್ಧ ವಿಧಾನಸೌಧದ ಮುಂದೆ ಐತಿಹಾಸಿಕ 'ನಗುವ ಚಳವಳಿ'ಯನ್ನು ನಡೆಸಿದರು. ಕಾವೇರಿ ಜಲ ವಿವಾದ ಹಾಗೂ ಬರಗಾಲಕ್ಕೆ ಸಂಬಂಧಿಸಿದಂತೆ ಮಹತ್ತರವಾದ ಸಲಹೆಗಳನ್ನು ವಿಧಾನಸಭೆಯಲ್ಲಿ ಮಂಡಿಸಿದರು. 'ವಿಧಾನಸಭೆಯಲ್ಲಿ ರೈತ ಸಂಘ', 'ಪರ್ಯಾಯ ಸರ್ಕಾರದೆಡೆಗೆ' ಗ್ರಂಥಗಳನ್ನು ರಚಿಸಿದರು.

, ೧೯೯೭ರಲ್ಲಿ ವಿಶ್ವ ಆಹಾರ ಸಂಸ್ಥೆಯ ಸಮ್ಮೇಳನದ ಸಂದರ್ಭದಲ್ಲಿ ಖಾಸಗಿ ಟಿ.ವಿ.ಚಾನೆಲ್‌ಗೆ ಕೊಟ್ಟ ಸಂದರ್ಶನದಿಂದ ಪ್ರಭಾವಿತರಾಗಿ STATI UNITI DEL MONDO (SUM) ಎಂಬ ಸಂಘಟನೆಯವರು ನಂಜುಂಡಸ್ವಾಮಿ ಅವರ ನೇತೃತ್ವದಲ್ಲಿ ಅಂತರಾಷ್ಟ್ರೀಯ ಮಟ್ಟದಲ್ಲಿ ದೊಡ್ಡದಾದ 'ಬೀಜ ಬ್ಯಾಂಕ್' ಸ್ಥಾಪಿಸುವ ಬೇಡಿಕೆ ಇಟ್ಟರು ಈ ಬೇಡಿಕೆಯನ್ನು ಒಪ್ಪಿಕೊಂಡು ಚಾಮರಾಜನಗರದಲ್ಲಿ ಸುಮಾರು ೨೦೦ ಎಕರೆಗಳ ಸಾರ್ವಜನಿಕ ಸೇವಾದತ್ತಿಯನ್ನು 'ಅಮೃತಭೂಮಿ' ಹೆಸರಿನಲ್ಲಿ ಸ್ಥಾಪಿಸಿದರು. ''೧೯೯೭ರಲ್ಲಿ ನಿಡುಮಾಮಿಡಿ ಮಠದ ತೀವ್ರವಾದ ಒತ್ತಾಯದ ಮೇರೆಗೆ ತಮಗೆ ಸಂದ 'ಡಾ.ಜಚನಿ ಮಾನವತಾ ಪ್ರಶಸ್ತಿ'ಯನ್ನು ರೈತ ಚಳವಳಿಯ ಪರವಾಗಿ ಸ್ವೀಕರಿಸಿದರು.''[೧] ೧೯೯೫, ೧೯೯೮, ೨೦೦೨ರಲ್ಲಿ ಬಹುರಾಷ್ಟ್ರೀಯ ಕಂಪೆನಿಗಳ ಮೇಲೆ ದಾಳಿ ನಡೆಸಿದರು. ೧೯೯೯ರಲ್ಲಿ ಐತಿಹಾಸಿಕ ೪೦೦ ಜನ ಭಾರತದ ರೈತರು ಯೂರೋಪಿನ ಪ್ರವಾಸ ಹಮ್ಮಿಕೊಂಡರು. ಆ ವೇಳೆಯಲ್ಲಿ ಬಹುರಾಷ್ಟ್ರೀಯ ಕಂಪೆನಿಗಳಾದ ಬೇಯರ್, ಕಾರ್ಗಿಲ್, ನೋವಾರ್ಟಿಸ್, ನೆಸ್ಲೆ ಕಂಪೆನಿಗಳ ಮುಂದೆ ಪ್ರತಿಭಟನೆ, ಜಿ-೮ ಶೃಂಗ ಸಭೆಗೆ ಮುತ್ತಿಗೆ, ಸ್ವಿಸ್ ಬ್ಯಾಂಕ್ ಮುಂದೆ ಪ್ರತಿಭಟನೆ, ಫ್ರಾನ್ಸ್‌ನಲ್ಲಿ ಮಾನ್ಸಾಂಟೋ ಕಂಪೆನಿಯ ಬೆಳೆನಾಶ, ವಿಶ್ವ ಆಹಾರ ಸಂಸ್ಥೆ ಮುಂದೆ ಪ್ರತಿಭಟನೆ ಹೀಗೆ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ವಿಶ್ವದ ಹಲವಾರು ಪ್ರಥಮಗಳಿಗೆ ಸಾಕ್ಷಿಯಾದರು.

೨.೧. ನಂಜುಂಡಸ್ವಾಮಿ: ಕೌಟುಂಬಿಕ ಪರಿಸರ

ನಂಜುಂಡಸ್ವಾಮಿ ಅವರ ತಂದೆಯಾದ ಮಹಂತದೇವರು ಪ್ರಾಮಾಣಿಕ ನ್ಯಾಯವಾದಿ ಹಾಗೂ ರಾಜಕಾರಣಿ. ಆಗಿನ ಮೈಸೂರು ವಿಧಾನಸಭೆಯಲ್ಲಿ ಇಪ್ಪತ್ತಾರು ವರ್ಷ ಶಾಸಕರಾಗಿದ್ದರು. ತಂದೆಯ ವರ್ಚಸ್ಸು, ಧ್ವನಿ, ದಿಟ್ಟ ನಿಲುವು, ಘನತೆ, ಗಾಂಭೀರ್ಯ ಇತ್ಯಾದಿ ಗುಣಗಳು ಮಗನ ಮೇಲೆ ಪ್ರಭಾವ ಬೀರಿದವು. ದೇವರಾಜ ಅರಸು, ಗುರುಪಾದಸ್ವಾಮಿ ಹಾಗೂ ಇನ್ನೂ ಅನೇಕರು ಮಹಂತದೇವರ ಗರಡಿಯಲ್ಲೇ ಬೆಳೆದು ಬಂದದು

ಗಮನಾರ್ಹವಾದುದು. ನಂಜುಂಡಸ್ವಾಮಿ ಅವರ ತಾತ ಸಾವಿರಾರು ಎಕರೆ ಜಮೀನಿನ ಒಡೆಯರಾಗಿದ್ದರು. ಆ ಕಾರಣದಿಂದಲೇ ಒಬ್ಬ ಶಾಸಕನ ಮಗನಾಗಿ ಹಾಗೂ ಜಮೀನ್ದಾರನ ಮೊಮ್ಮಗನಾಗಿ ಬೆಳೆದಿದ್ದರಿಂದ ಅವರಿಬ್ಬರ ನಡೆ, ನುಡಿ, ವಿಚಾರಗಳು ಸಹಜವಾಗಿ ನಂಜುಂಡಸ್ವಾಮಿ ಅವರ ಮೇಲೆ ಬೀರದೆ ಇರಲಿಲ್ಲ. ಮೇಲ್ವರ್ಗದ ಶ್ರೀಮಂತ ಕುಟುಂಬದಲ್ಲಿ ಜನಿಸಿದ್ದರಿಂದ ಅವರು ಕಷ್ಟಕರವಾದ ಬಡತನದ ಜೀವನವನ್ನೇನು ನಡೆಸಲಿಲ್ಲ. ಉನ್ನತ ಶಿಕ್ಷಣ ಹಾಗೂ ಸಂಶೋಧನೆಗೆ ಯಾವುದೇ ರೀತಿಯ ಆರ್ಥಿಕ ತೊಡುಕುಗಳು ಉಂಟಾಗಿರಲಿಲ್ಲ. ಆದ್ದರಿಂದ ಹೆಚ್ಚಿನ ಶಿಕ್ಷಣಕ್ಕಾಗಿ ವಿದೇಶಕ್ಕೆ ಹೋಗಿ ಅಧ್ಯಯನ ಮಾಡುವ ಅವಕಾಶ ಸಿಕ್ಕಿತು. ಚಿಕ್ಕ ವಯಸ್ಸಿನಲ್ಲಿ ಅಜ್ಜಿಯ ಜೊತೆ ಸೇರಿ ಹಪ್ಪಳ ಮಾಡುವುದು, ಉಪ್ಪಿನಕಾಯಿ ತಯಾರಿ ಮಾಡುವುದು ಹಾಗೂ ಬಟ್ಟೆ ಹೊಲಿಯುವ ಕೆಲಸಗಳನ್ನು ಕಲಿತಿದ್ದರು. ಅವರ ಅಕ್ಕ ಲೀಲಾ ಚನ್ನಯ್ಯ ಅವರ ಪತಿ ಚನ್ನಯ್ಯ ಅವರು ನಂಜುಂಡಸ್ವಾಮಿ ಅವರ ಬದುಕಿನ ಮೇಲೆ ಪ್ರಭಾವ ಬೀರಿದ ಮುಖ್ಯ ವ್ಯಕ್ತಿಗಳಲ್ಲಿ ಒಬ್ಬರಾಗಿದ್ದರು.

೨.೨. ನಂಜುಂಡಸ್ವಾಮಿ: ಸೈದ್ಧಾಂತಿಕ ಪ್ರಭಾವಗಳು

ನಂಜುಂಡಸ್ವಾಮಿ ಅವರು ಬಾಲ್ಯದಲ್ಲಿ ಅಜ್ಜ, ಅಜ್ಜಿ, ತಂದೆ, ತಾಯಿ ಹಾಗೂ ಭಾವ ಇವರೆಲ್ಲರ ಪ್ರಭಾವಕ್ಕೆ ಒಳಗಾಗಿದ್ದರು. ತಂದೆ ನ್ಯಾಯವಾದಿಯಾಗಿ ತನ್ನ ಕಕ್ಷಿದಾರನನ್ನು ನಡೆಸಿಕೊಳ್ಳುತ್ತಿದ್ದ ರೀತಿಯೂ ಇವರ ಮೇಲೆ ಪ್ರಭಾವ ಬೀರಿತ್ತು. ತಮ್ಮ ವಿದ್ಯಾಭ್ಯಾಸದ ಅವಧಿಯಿಂದಲೂ ಬಿಳಿಯ ವಸಾಹತುಶಾಹಿ ದೇಶಗಳು ಬಡ ರಾಷ್ಟ್ರಗಳನ್ನು ಶೋಷಣೆಗೆ ಒಳಪಡಿಸುತ್ತಿದ್ದ ತಂತ್ರಗಳನ್ನು ನೋಡಿ ಅರಿತಿದ್ದರು. ಶಾಲಾ-ಕಾಲೇಜು ದಿನಗಳಲ್ಲಿ ಗಾಂಧಿ, ಲೋಹಿಯಾ ಹಾಗೂ ಶಾಂತವೇರಿ ಗೋಪಾಲಗೌಡರಂಥ ಸಮಾಜ ಸುಧಾರಕರ ಮತ್ತು ಮಾನವತಾವಾದಿಗಳ ಚಿಂತನೆಗಳಿಂದ, ಸಮಾನತೆಯ ಸಿದ್ಧಾಂತಗಳಿಂದ ಪ್ರಭಾವಿತರಾಗಿದ್ದರು. ರಾಮಮನೋಹರ ಲೋಹಿಯಾ ಅವರು ಬರೆದಿದ್ದ 'ಮಾರ್ಕ್ಸ್, ಗಾಂಧಿ ಅಂಡ್ ಸೋಶಿಯಲಿಸಂ' ಎಂಬ ಗ್ರಂಥದಿಂದ ಹೆಚ್ಚು ಪ್ರಭಾವಿತರಾದ್ದುದೂ ಉಂಟು. ಸಮಾನತೆಯಲ್ಲಿ ನಂಬಿಕೆ ಇಟ್ಟಿದ್ದ ಇವರು ರೈತ, ಕೂಲಿಕಾರ್ಮಿಕ ಹಾಗೂ ದಲಿತರ ಏಳಿಗೆಗೆ ಹಲವಾರು ಚಳವಳಿ, ಹೋರಾಟ ಹಾಗೂ ಸಂಘರ್ಷಗಳನ್ನು ರೂಪಿಸಿ ಅಸಮಾನತೆಯನ್ನು ಹೋಗಲಾಡಿಸಲು ಶ್ರಮಿಸಿದರು. ಸ್ವಾತಂತ್ರ್ಯ ಚಳವಳಿಯಲ್ಲಿ ಗಾಂಧಿಯವರು ಬ್ರಿಟಿಷರ ವಿರುದ್ಧ ನಡೆಸಿದ ಹೋರಾಟಗಳು ಹಾಗೂ ಆಗ ನಡೆಸಿದ ಪ್ರಯೋಗಗಳು, ರೂಪಿಸುತ್ತಿದ್ದ ತಂತ್ರಗಳಿಂದ ಪ್ರಭಾವಿತರಾಗಿ, ಅವುಗಳನ್ನು ಪ್ರೊಫೆಸರ್ ಅವರು ರೈತ ಚಳವಳಿಯಲ್ಲಿ ಅಳವಡಿಸಿಕೊಳ್ಳುವಂತೆ ಆಗಿತ್ತು. ಗ್ರಾಮ ಸ್ವರಾಜ್ಯದ ಬಗ್ಗೆ ಗಾಂಧಿಯವರಂತೆ ಆಲೋಚಿಸಿದವರು ತೀರಾ ವಿರಳ. ಅಂಥ ವಿರಳರಲ್ಲಿ ನಂಜುಂಡಸ್ವಾಮಿ ಒಬ್ಬರು. ಅಹಿಂಸಾ ಚಳವಳಿಗಳ ಮೂಲಕ ಹೋರಾಟ ನಡೆಸಿ ನ್ಯಾಯ ಪಡೆದುಕೊಳ್ಳಬೇಕೆಂಬುದು ನಂಜುಂಡಸ್ವಾಮಿ ಅವರ ಗುರಿಯೂ ಆಗಿತ್ತು. ಗಾಂಧಿ ತತ್ವವನ್ನು ಪ್ರಮುಖವಾಗಿ

ಅಹಿಂಸೆ ಹಾಗೂ ಉಪವಾಸವನ್ನೇ ತನ್ನ ಅಸ್ತ್ರವಾಗಿ ಮಾಡಿಕೊಂಡ ರೈತ ಸಂಘ, ಅದನ್ನೇ ನಂಬಿಕೊಂಡು ಹೋರಾಟ ಮಾಡಿದ್ದು ಒಂದು ಮರೆಯಲಾಗದ ಅಧ್ಯಾಯ.

> ''ನಂಜುಂಡಸ್ವಾಮಿ ಅವರು ಲೋಹಿಯಾ ಪ್ರತಿಪಾದಿಸುತ್ತಿದ್ದ ಸಮಾಜವಾದಿ ಸಿದ್ಧಾಂತಗಳಿಂದ ಪ್ರಭಾವಿತರಾಗಿದ್ದರು. ರಾಜಕೀಯದಲ್ಲಿ ಸಾಮಾನ್ಯ ವರ್ಗ ಮುಂದಾಳುಗಳಾಗಬೇಕು. ಸಾರ್ವಜನಿಕ ವ್ಯವಹಾರದಲ್ಲಿ ಇಂಗ್ಲಿಷ್ ಕೈಬಿಡಬೇಕು, ಮಹಿಳೆಯರು ಸ್ವತಂತ್ರರಾಗಬೇಕು, ಆರ್ಥಿಕ ವ್ಯವಸ್ಥೆ ವಿಕೇಂದ್ರೀಕೃತವಾಗಬೇಕು, ರಾಜ್ಯ ವ್ಯವಸ್ಥೆ ಚತುಸ್ತಂಭ ವ್ಯವಸ್ಥೆ ಆಗಬೇಕು''[೨]

ಇತ್ಯಾದಿ ವಿಚಾರಗಳು ನಂಜುಂಡಸ್ವಾಮಿ ಅವರ ಮೇಲೆ ಪ್ರಭಾವ ಬೀರಿದ್ದವು ಎನ್ನಲಾಗಿದೆ. ಹಾಗೆಯೇ ಅವುಗಳ ಪ್ರತಿಪಾದನೆಗಾಗಿ ತಮ್ಮ ಸಂಪೂರ್ಣ ಜೀವನವನ್ನೇ ಸವೆಸಿದರು. ಲೋಹಿಯಾ ಅವರ ಚಿಂತನೆಯಲ್ಲಿ ಅನ್ಯಾಯದ ವಿರುದ್ಧ ಬೀದಿಗಿಳಿದು ಹೋರಾಟ ಮಾಡಬೇಕೆಂದು ಬಯಸಿದ್ದರು. ಅದೇ ಬಗೆಯ ತಂತ್ರಗಳನ್ನು ಎಂ.ಡಿ.ಎನ್ ಅವರು ಕೂಡ ತಮ್ಮ ಹೋರಾಟದ ಉದ್ದಗಲಕ್ಕೂ ಅಳವಡಿಸಿಕೊಂಡಿದ್ದರು. ಪ್ರಸ್ತುತ ಸಂದರ್ಭದಲ್ಲಿ ಸಮಾಜವಾದಿ ಹೋರಾಟಗಾರರು ಹಾಕಿಕೊಟ್ಟ ಹಾದಿಯಲ್ಲಿ ನಡೆದರೆ ಗಾಂಧಿ ಕಂಡ ''ಗ್ರಾಮ ಸ್ವರಾಜ್ಯ''ದ ಕನಸು ನನಸಾಗುವುದರಲ್ಲಿ ಯಾವುದೇ ಸಂಶಯವಿಲ್ಲ ಎಂಬ ಆಲೋಚನೆ ಅವರದಾಗಿತ್ತು.

ಅಪಾರ ಅನುಭವ, ಗ್ರಹಿಕೆಗಳನ್ನು ಸಮುದಾಯದ ಕ್ರಿಯಾಶೀಲತೆಯನ್ನಾಗಿ ಅವಸ್ಥಾಂತರಿಸುವುದು ಹೇಗೆ ಎಂಬುದನ್ನು ಗಾಂಧಿ, ಲೋಹಿಯಾ, ಶಾಂತವೇರಿ ಹಾಗೂ ಇನ್ನಿತರರ ವಿಚಾರಧಾರೆಗಳಿಂದ ತಿಳಿದು, ವರ್ತಮಾನದ ಆತಂಕ ಪಲ್ಲಟಗಳಿಗೆ ಮುಖಾಮುಖಿಯಾಗಿಸಿದ ಪ್ರಯೋಗಶೀಲತೆಯನ್ನು ಎಂ.ಡಿ.ಎನ್ ರೂಪಿಸಿದ್ದು ದಾಖಲಾರ್ಹ. ಎಂ.ಡಿ.ಎನ್ ಚಳವಳಿ ಸ್ವರೂಪವನ್ನು ಚಿಂತಕ ಕಿ.ರಂ. ನಾಗರಾಜ ಅವರು ''ಯಾವುದೇ ಚಳವಳಿ ಅಂದಂದೇ ಹುಟ್ಟಿ ಕೊನೆಗೊಳ್ಳುವುದಿಲ್ಲ. ಅದು ನಿರಂತರವಾದದ್ದು, ಜಾಗೃತವಾದದ್ದು. ಅದರಿಂದ ಉಂಟಾಗುವ ಕಾವನ್ನು ಹೇಗೆ ಜೀವಂತವಾಗಿಸಿಕೊಳ್ಳಬೇಕೆಂದು ತಿಳಿಸಿದ್ದು ಮಾತ್ರವಲ್ಲ, ಆಚರಿಸಿ ತೋರಿಸಿಕೊಟ್ಟರು''[೩] ಎಂದು ಅಭಿಪ್ರಾಯಪಟ್ಟಿದ್ದಾರೆ.

೨.೩ ನಂಜುಂಡಸ್ವಾಮಿ ಅವರ ಕೊನೆಯ ದಿನಗಳಲ್ಲಿನ ಸ್ಥಿತಿಗತಿಗಳು

ತಮ್ಮದೆ ಆದ ರಾಜಕಾರಣದ ಬಲವೊಂದು ಇದ್ದರೆ ರೈತರ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬಹುದೆಂಬ ಉದ್ದೇಶದಿಂದ ನಂಜುಂಡಸ್ವಾಮಿ ಅವರು 'ಕರ್ನಾಟಕ ರಾಜ್ಯ ರೈತ ಸಂಘ' ರಾಜಕೀಯ ಪ್ರವೇಶ ಮಾಡಬೇಕೆಂಬ ಆಶಯವನ್ನು ಹೊಂದಿದ್ದರು. ಚುನಾವಣೆಯಲ್ಲಿ ಸ್ಪರ್ಧಿಸಿ ಸೋತ ಸದಸ್ಯರಲ್ಲಿ ಕೆಲವರು ಬೇರೆ ರಾಜಕೀಯ ಪಕ್ಷಗಳೊಂದಿಗೆ ಹೊಂದಾಣಿಕೆ ಮಾಡಿಕೊಳ್ಳಲು ಆರಂಭಿಸಿದರು. ಆದರೆ ನಂಜುಂಡಸ್ವಾಮಿ ಅವರು ಅಧ್ಯಕ್ಷರಾಗಿರುವವರೆಗೂ ತಮಗಿಚ್ಛೆ ಬಂದ ರಾಜಕೀಯ ಪಕ್ಷದೊಂದಿಗೆ ಹೊಂದಾಣಿಕೆ ಸಾಧ್ಯವಿಲ್ಲ ಎನ್ನುವ ಕಾರಣದಿಂದಲೇ ಅಧ್ಯಕ್ಷರ ಮೇಲೆ ಇಲ್ಲಸಲ್ಲದ ಆರೋಪಗಳನ್ನು ಹೊರಿಸಲು ಶುರು ಮಾಡಿದರು.

ಇದರಿಂದಾಗಿ ರೈತರು ಕರ್ನಾಟಕ ರಾಜ್ಯ ರೈತ ಸಂಘದ ಮೇಲೆ ಇಟ್ಟಿದ್ದ ನಂಬಿಕೆ ಹುಸಿಯಾಗತೊಡಗಿತು. ಸಂಘದಲ್ಲಿ ಸದಸ್ಯರ ಅಸಮಾಧಾನ ಹಾಗೂ ನಾಯಕರಲ್ಲಿ ಇದ್ದಂಥ ಗೊಂದಲಗಳಿಂದಾಗಿ ಆರಂಭದಲ್ಲಿಯೇ ರೈತ ಸಂಘ ಎರಡು ಗುಂಪುಗಳಾಗಿ ಒಡೆಯಲು ಕಾರಣವಾಯಿತು.''[೪]

ನಂಜುಂಡಸ್ವಾಮಿ ಅವರ ಕ್ರಿಯಾಶೀಲತೆ, ಭವಿಷ್ಯತ್ತಿನ ರೈತರ ಬಗೆಗಿನ ಕಾಳಜಿ, ಕರ್ನಾಟಕದಲ್ಲಿ ನಡೆಸಿದ ಹೋರಾಟಗಳಿಂದ ರೈತ ಚಳವಳಿ ಅಂತರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡಿತು. ನಂಜುಂಡಸ್ವಾಮಿ ಅವರಿಗೆ ಅಂತರಾಷ್ಟ್ರೀಯ ಮಟ್ಟದಿಂದ ಅನೇಕ ಆಹ್ವಾನಗಳು ಬಂದವು. ಅವು ರೈತ ಸಮಸ್ಯೆಗಳಿಗೆ ಸಂಬಂಧಿಸಿದ ವಿಷಯಗಳಾಗಿದ್ದರಿಂದ ಅಂತರಾಷ್ಟ್ರೀಯ ವಿಚಾರ ಸಂಕಿರಣಗಳಿಗೆ ತಕ್ಕಂತ ವೈಚಾರಿಕ ಜ್ಞಾನ ಇದ್ದುದರಿಂದ ನಂಜುಂಡಸ್ವಾಮಿ ಅವರೇ ಭಾಗವಹಿಸುತ್ತಿದ್ದರು. ಇದು ರೈತ ಸಂಘದ ಹಲವಾರು ಸದಸ್ಯರಲ್ಲಿ ಹುಟ್ಟುಹಾಕಿತು. ಹಾಗೆಯೇ ರೈತ ಸಂಘದ ಹೆಸರಿನಲ್ಲಿ ನೂರಾರು ಎಕರೆ ಭೂಮಿಯನ್ನು ಖರೀದಿಸಿದ್ದಾರೆ ಎಂಬ ಆರೋಪಗಳನ್ನು ಅವರ ಮೇಲೆ ಮಾಡಿದರು. ಇಂಥ ಆರೋಪಗಳು ಮುಂದೆ ಕರ್ನಾಟಕ ರಾಜ್ಯ ರೈತ ಸಂಘದ ಪ್ರಭಾವ ಕಡಿಮೆ ಆಗುವುದಕ್ಕೂ, ಜನರು ಹಗುರವಾಗಿ ಮಾತನಾಡಿಕೊಳ್ಳುವುದಕ್ಕೂ ಕಾರಣವಾದವು. ಇದರಿಂದಾಗಿ ನಂಜುಂಡಸ್ವಾಮಿ ಅವರು ೧೯೯೯ ರಿಂದೀಚಿಗೆ ರೈತ ಸಂಘವನ್ನು ಮರುಸ್ಥಾಪಿಸಲು ಶ್ರಮಿಸಿದರು. ಹೀಗೆ ನಂಜುಂಡಸ್ವಾಮಿ ಅವರು ಕಟ್ಟಿದ ಒಂದು ಸಂಘ ತಮ್ಮ ಕಣ್ಣೆದುರೇ ಒಡೆದು ಹೋಗಿದ್ದು ಅವರಿಗೆ ಅಪಾರ ನೋವು ಉಂಟುಮಾಡಿತ್ತು. ಇದರ ಜೊತೆಗೆ ನಂಜುಂಡಸ್ವಾಮಿ ಅವರು ತಮ್ಮ ತತ್ತ್ವ ಸಿದ್ಧಾಂತಗಳಿಗೆ ಎಂದಿಗೂ ರಾಜಿಮಾಡಿಕೊಳ್ಳದೆ ರೈತ ಸಂಘದ ಸದಸ್ಯರನ್ನು ಆ ಸಿದ್ಧಾಂತಗಳನ್ನು ಪಾಲಿಸುವಂತಹ ಒತ್ತಡವನ್ನು ಒಂದೆಡೆ ಹೇರುತ್ತಿದ್ದರು ಎನ್ನುವ ಅಭಿಪ್ರಾಯವೂ ಇದೆ. ಪುಟ್ಟಣ್ಣಯ್ಯ ಮತ್ತೆ ಕೆಲವರು ಸಂಘಟನೆಯಿಂದ ದೂರ ಸರಿದು ತಾವೇ ಒಂದು ಬಣ ಮಾಡಿಕೊಂಡಾಗಲಂತೂ ಅವರು ಬಹಳ ನೊಂದಿದ್ದರು. ಪತ್ನಿ ಪ್ರತಿಮಾ ಅವರೂ ಕ್ಯಾನ್ಸರ್‌ನಿಂದ ಬಳಲುತ್ತಿದ್ದದು ನಂಜುಂಡಸ್ವಾಮಿ ಅವರ ಮನಸ್ಸನ್ನು ಮತ್ತಷ್ಟು ಘಾಸಿಗೊಳಿಸಿತ್ತು. ದಿನಗಳ ಅಂತರದಲ್ಲಿ ಅವರೂ ಸಹ ಇದೇ ರೋಗಕ್ಕೆ ತುತ್ತಾದರು.

ನಂಜುಂಡಸ್ವಾಮಿ ಅವರು ಶ್ವಾಸಕೋಶ ಕ್ಯಾನ್ಸರ್‌ನಿಂದ ದೈಹಿಕವಾಗಿ ಬಳಲಿ ಹೋದರು. ಅನಾರೋಗ್ಯದಿಂದ ನರಳುತ್ತಿದ್ದಾಗಲೂ ಅಲೋಪಥಿಕ್ ಚಿಕಿತ್ಸೆ ತೆಗೆದುಕೊಳ್ಳಲು ನಿರಾಕರಿಸಿದ್ದು ಅವರ ಹಠಕ್ಕೆ ಸಾಕ್ಷಿ. ಕೊನೆಯ ದಿನಗಳಲ್ಲಿ ನಂಜುಂಡಸ್ವಾಮಿ ಅವರನ್ನು ಕಿದ್ವಾಯಿ ಆಸ್ಪತ್ರೆಗೆ ಸೇರಿಸಲಾಯಿತು. ಅವರು ಆಸ್ಪತ್ರೆಯಲ್ಲಿ ಮಲಗಿದ್ದ ವೇಳೆಯಲ್ಲಿಯೂ ರೈತ ಹೋರಾಟದ ಮುಂದಿನ ರೂಪು-ರೇಶೆಗಳ ಬಗೆಗೇ ಮಾತನಾಡುತ್ತಿದ್ದರು. ಕ್ಯಾನ್ಸರ್‌ನಿಂದ ಬಳಲುತ್ತಿದ್ದರೂ ಸಹ ಆಸ್ಪತ್ರೆಯಲ್ಲಿದ್ದುಕೊಂಡೇ ಮುಂಬೈಯಲ್ಲಿ ಜರುಗಿದ ವಿಶ್ವ ಸಾಮಾಜಿಕ ವೇದಿಕೆ (world social Forum)ಯ ಸಮ್ಮೇಳನಕ್ಕೆ ಪರ್ಯಾಯವಾಗಿ ''ಮುಂಬೈ ರೆಸಿಸ್ಟನ್ಸ್'' ಎಂಬ ವೇದಿಕೆಯನ್ನು ಹುಟ್ಟು ಹಾಕಿ ಮುಂಬೈ ನಗರದಲ್ಲಿ ಬೃಹತ್ ಸಮಾವೇಶವನ್ನು ನಡೆಸಿ, ದೆಹಲಿಯಲ್ಲೂ

ಸಹ ಬೃಹತ್ ಪ್ರದರ್ಶನವನ್ನು ನಡೆಸಿದರು. 'ರಾಜಕಾರಣಿಗಳ ಸಖ್ಯ ಹೊಂದಿರದ ನೈಜ ಕಾರ್ಯಕರ್ತರಿಗೆ ಸಂಘಟನೆಯಲ್ಲಿ ಹೆಚ್ಚು ಬೆಳೆಯಲು ಅವಕಾಶ ನೀಡಿ. ಒಂದು ಕಡೆ ರಾಜಕಾರಣ ಮತ್ತೊಂದು ಕಡೆ ಸಂಘಟನೆ ಎನ್ನುವವರನ್ನು ಆದಷ್ಟು ದೂರವಿರಿಸಿ. ಅವರನ್ನು ಸೇರಿಸಿಕೊಳ್ಳದಿದ್ದರೇ ಒಳಿತು' ಎಂದು ಸಲಹೆ ನೀಡುತ್ತಿದ್ದರು. ನಂಜುಂಡಸ್ವಾಮಿ ಅವರ ದೇಹ ಸ್ಥಿತಿ ಸುಧಾರಿಸದೆ ಅವರು ಮಾತಾಡುವ ಸ್ಥಿತಿಯಲ್ಲಿಯೂ ಇರಲಿಲ್ಲ. ಹತಾಶೆಗೆ ಸಿಕ್ಕ ಮನೆ ಮಂದಿ ಎಲ್ಲ ತೆರನಾದ ವೈದ್ಯಕೀಯ ಚಿಕಿತ್ಸೆಗೆ ಮೊರೆಹೋಗಿದ್ದರು. ಕೊನೆಯ ದಿನಗಳಲ್ಲಿ ಆಕ್ಸಿಜನ್ ಮೇಲೆ ಬದುಕಿದ್ದ ಅವರು ಹದಿನೆಂಟು ದಿನ ಸಾವು ಬದುಕಿನ ಹೋರಾಟದಲ್ಲಿ ಕಳೆದರು. ಹೀಗೆ ರೈತ ಹೋರಾಟಕ್ಕೊಂದು ಹೊಸ ಪರಿಭಾಷೆ ಬರೆದ ನಂಜುಂಡಸ್ವಾಮಿ ಅವರು ರೈತರ ರಾಜ್ಯ ನಿರ್ಮಾಣದ ದೊಡ್ಡ ಕನಸು ಕಂಡದ್ದು ಹಾಗೇ ಉಳಿಯಿತು.

ತಮ್ಮ ಇಡೀ ಜೀವನದುದ್ದಕ್ಕೂ ನಾಡಿನ ಹಾಗೂ ರೈತರ ದಿಕ್ಕುದೆಸೆಗಳ ಕುರಿತು ಅಧ್ಯಯನ ಮಾಡಿ, ಆ ಬಗೆಗೆ ಚಿಂತಿಸಿ ಅವರ ಏಳಿಗೆಗಾಗಿ ಶ್ರಮಿಸಿದ ನಂಜುಂಡಸ್ವಾಮಿ ಅವರು ಫೆಬ್ರವರಿ ೩, ೨೦೦೪ರಂದು ತಮ್ಮ ೬೮ನೇ ವಯಸ್ಸಿನಲ್ಲಿ ಮರಣ ಹೊಂದಿದರು. ಅವರ ಅಗಲಿಕೆಯನ್ನು ಕುರಿತು ''ಮಣ್ಣಿನಲ್ಲಿ ಮೊಳಕೆಯೊಡೆದು ಪಲ್ಲವಿಸಿ ಗಿಡವಾಗಿ, ಮರವಾಗಿ, ಹೂವಾಗಿ ಅರಳಿದ ಜೀವ ಮತ್ತೆ ಮಣ್ಣಿಗೆ ಮರಳಿತ್ತು. ಆ ಹೂವಿನ ಮೊಗದ ತುಂಬ ಕನಸುಗಳು ತುಂಬಿದ್ದವು.''[೬] ಎಂದು ಅಭಿಪ್ರಾಯ ಪಡಲಾಗಿದೆ. ರೈತರೆಲ್ಲರೂ ಒಂದೇ ಕುಟುಂಬದ ಸದಸ್ಯರು ಎಂಬ ಭಾವನೆಯಿಂದ ಕೆಲಸ ಮಾಡಿದ್ದ ಕರ್ನಾಟಕ ರಾಜ್ಯ ರೈತ ಸಂಘದ ಸದಸ್ಯರಲ್ಲಿ ಎಂ.ಡಿ.ಎನ್ ಅವರ ಮರಣ ಅಪಾರ ನೋವನ್ನುಂಟು ಮಾಡಿತು.

ನಂಜುಂಡಸ್ವಾಮಿ ಅವರ ಅಂತ್ಯಕ್ರಿಯೆ ಸಕಲ ಸರ್ಕಾರಿ ಗೌರವಗಳೊಂದಿಗೆ ಲಕ್ಷಾಂತರ ರೈತರ ಸಮ್ಮುಖದಲ್ಲಿ ಹಾಗೂ ವಿದೇಶದಿಂದ ಆಗಮಿಸಿದ್ದ ಹೋರಾಟಗಾರರ ಸಮ್ಮುಖದಲ್ಲಿ ಅವರ ಕನಸಿನ ಅಮೃತ ಭೂಮಿಯಲ್ಲಿ ಜರುಗಿತು. ದೇಶದ ಹಾಗೂ ರಾಜ್ಯದ ಹಲವೆಡೆ ಭಾವಪೂರ್ವಕ ಶ್ರದ್ಧಾಂಜಲಿ ಸಭೆಗಳನ್ನು ರೈತರು ಹಮ್ಮಿಕೊಂಡರು. ೨೦೦೪ರಲ್ಲಿ ಎಂ.ಡಿ. ನಂಜುಂಡಸ್ವಾಮಿ ಅವರು ಮಣ್ಣಿಗೆ ಮರಳಿದ ದಿನವನ್ನು ಅಮೇರಿಕಾದಲ್ಲಿ ಕೆಸಿಂಗ್‌ಟನ್, ವೆಲ್‌ಫೇರ್ ರೈಟ್ಸ್ ಯೂನಿಯನ್ ಎಂಬ ಬಡಜನರ ಚಳವಳಿಯ ಸದಸ್ಯರುಗಳು ಹಸಿರು ಶಾಲು ಹೊದ್ದು ತಮ್ಮ ನೆಚ್ಚಿನ ನಾಯಕನಿಗೆ ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸಿದರು. ಜೂನ್ ೨೦೦೪ರಂದು ಬ್ರೆಜಿಲ್‌ನಲ್ಲಿ ಜರುಗಿದ ವಿಶ್ವ ರೈತ ಸಂಘಟನೆ ಲಾವಿಯಾ ಕ್ಯಾಂಪೆಸಿನಾದ ನಾಲ್ಕನೆಯ ಅಂತರಾಷ್ಟ್ರೀಯ ಸಮಾವೇಶವನ್ನು ನಂಜುಂಡಸ್ವಾಮಿ ಅವರ ನೆನಪಿಗೆ ಅರ್ಪಿಸಲಾಯಿತು. ಅವರ ಅರವತ್ತೊಂಭತ್ತನೆಯ ಜನ್ಮದಿನವನ್ನು ''ಗ್ರಾಮ ಸ್ವರಾಜ್ಯ ಪ್ರತಿಜ್ಞಾ ದಿನ'' ಎಂದು ಮೈಸೂರಿನಲ್ಲಿ ರಾಜ್ಯದ ರೈತರು ಬೃಹತ್ ಸಮಾವೇಶ ನಡೆಸುವ ಮೂಲಕ ಎಂ.ಡಿ.ನಂಜುಂಡಸ್ವಾಮಿ ಅವರಿಗೆ ಶ್ರದ್ಧಾಂಜಲಿ ಅರ್ಪಿಸಿದರು.

ಟಿಪ್ಪಣಿಗಳು

೦೧. ಅಲ್ಲಮಪ್ರಭು ಬೆಟ್ಟದೂರು., 'ನೇರವಾಗಿ ನಡೆದರು ನಿಷ್ಠುರವಾಗಿ ನುಡಿದರು ಎದುರಾಡಿದವರಿಗೆ ಎರಡು ಬಡಿದರು', (ವೀರಭದ್ರಪ್ಪ ಬಿಸ್ಲಳ್ಳಿ., (ಸಂ), ಪ್ರೊಫೆಸರ್ ಎಂಡಿಎನ್), ಪು:೨೨೭

೦೨. ಅನಂತಮೂರ್ತಿ ಯು.ಆರ್. 'ಕರ್ನಾಟಕ ರಾಜಕೀಯದ ಒಬ್ಬ ಮಹಾ ತಾತ್ವಿಕ', ಮೇಲಿನದೆ, ಪು:೭೧

೦೩. ನಾಗರಾಜ್.ಕಿ.ರಂ. ಅವರು ಫೆಬ್ರವರಿ ೧೨, ೨೦೦೪ ರಂದು 'ಅಗ್ನಿ' ವಾರಪತ್ರಿಕೆಗೆ ಬರೆದ ಲೇಖನ, ಮೇಲಿನದೆ, ಪು:೧೨

೦೪. ನಂಜುಂಡಸ್ವಾಮಿ ಅವರ ಕೊನೆಯ ಪತ್ರ, (ಲಿಂಗದಹಳ್ಳಿ ಚೇತನ ಕುಮಾರ್., (ಸಂ), ಗೋಲಿಬಾರ್ ಗೌರ್ಮೆಂಟಲ್ಲಿ ರೈತರ ಕಗ್ಗೊಲೆ), ಪುಟ:೬೨

೦೫. ಚಂದ್ರಶೇಖರ ಪಾಟೀಲ., 'ಮಣ್ಣಿಗೆ ಮರಳಿದ ಮಣ್ಣಿನ ಹೂವು', (ವೀರಭದ್ರಪ್ಪ ಬಿಸ್ಲಳ್ಳಿ., (ಸಂ), ಪ್ರೊಫೆಸರ್ ಎಂ.ಡಿ.ಎನ್), ಪುಟ: ೨೯೪

* * *

ಅಧ್ಯಾಯ ಮೂರು

ಕೃಷಿ ಚಿಂತನೆಗಳು ಹಾಗೂ ನಂಜುಂಡಸ್ವಾಮಿ

'ರೈತ ದೇಹಿ ಅಲ್ಲ, ಆತ ದಾತ' ಎನ್ನುವಂತೆ ಇಡೀ ಜಗತ್ತಿನ ಜನತೆಯ ಹೊಟ್ಟೆಗೆ ಅನ್ನವನ್ನು ಕೊಡುವ ಅನ್ನದಾತನಾಗಿದ್ದಾನೆ. ಸಾವಿರಾರು ವರ್ಷಗಳ ಪ್ರಾಚೀನತೆಯನ್ನು ಹೊಂದಿರುವ ಕೃಷಿ ಇಂದು ತನ್ನ ಪ್ರಾಮುಖ್ಯತೆಯನ್ನು ಕಳೆದುಕೊಂಡು, ರೈತ ನಿರಾಶಾದಾಯಕ ಸ್ಥಿತಿಯಲ್ಲಿ ಬಂದು ನಿಂತಿದ್ದಾನೆ. ಇಂದು ರೈತರಿಗೆ ಹಾಗೂ ಇನ್ನಿತರ ಸಮುದಾಯಗಳಿಗೆ ಒಂದು ವ್ಯವಸ್ಥೆ ಹಾಗೂ ಆ ವ್ಯವಸ್ಥೆಯನ್ನು ಪೋಷಿಸುವ ಪ್ರಭುತ್ವ ಹಾಗೂ ಯಜಮಾನೀ ಶಕ್ತಿಗಳು ರೈತನಿಗೆ ಅಪಾಯಗಳನ್ನು ತಂದೊಡ್ಡುತ್ತಿವೆ. ಜಗತ್ತಿನ ಹಲವು ಬಗೆಯ ಅಪಾಯಕಾರಿ ಶಕ್ತಿಗಳ ಬಗ್ಗೆ ಜನಸಾಮಾನ್ಯರ ಶೋಷಣೆಯ ಮೂಲಗಳ ಬಗ್ಗೆ ಅಧ್ಯಯನ ಮಾಡುತ್ತಾ, ಅದಕ್ಕೆ ಪರಿಹಾರಗಳನ್ನು ಹುಡುಕುತ್ತಾ ಬೆಳೆದ ಚಿಂತನಾ ಕ್ರಮ ನಂಜುಂಡಸ್ವಾಮಿ ಅವರದು. ದಿನನಿತ್ಯದ ಶೋಷಣೆ, ಅನ್ಯಾಯಗಳ ಹಿಂದಿರುವ ಮಾರುಕಟ್ಟೆಯ ಕೈವಾಡಗಳು, ಸರ್ಕಾರದ ಧೋರಣೆಗಳನ್ನು ರೈತರಿಗೆ ಸರಳವಾಗಿ ಹೇಳಲೆತ್ನಿಸಿದವರು. ನಂಜುಂಡಸ್ವಾಮಿ ಅವರ ಅನೇಕ ಸಾಮಾಜಿಕ ಕ್ರಿಯೆಗಳು, ಅವರ ಕಟು ವ್ಯಕ್ತಿತ್ವದ ಒಳಸೆಲೆಗಳಿಂದ ಒಸರುತ್ತಿದ್ದ ಆಳವಾದ ಕಾಳಜಿಗಳಿಂದ ಮೂಡಿ ಬರುತ್ತಿದ್ದವು. ಸರ್ಕಾರ ರೈತರಿಗೆ ಸರಿಯಾಗಿ ವಿದ್ಯುತ್ ಕೊಡುತ್ತಿಲ್ಲ, ರೈತರನ್ನು ಸಾಲಗಾರರನ್ನಾಗಿ ಮಾಡಿದೆ, ಬೆಳೆದ ಬೆಳೆಗಳಿಗೆ ನ್ಯಾಯಯುತ ಬೆಲೆ ಕೊಡುತ್ತಿಲ್ಲ ಎಂದು ಸರ್ಕಾರವನ್ನು ಎಚ್ಚರಿಸುತ್ತಿದ್ದುದು ಗಮನಾರ್ಹವಾಗಿದೆ. ಹಳ್ಳಿಗಳೆಲ್ಲ ಸಾಮ್ರಾಜ್ಯಶಾಹಿ ಕಾಲೋನಿಗಳಾಗಿ, ಬೇರೆ ದೇಶಗಳು ಕಾಲೋನಿಗಳನ್ನು ಇಟ್ಟುಕೊಂಡಂತೆ ಮುಂಬೈ, ಬೆಂಗಳೂರು, ದೆಹಲಿ ಮುಂತಾದ ಮಹಾನಗರಗಳು ಹಳ್ಳಿಗಳನ್ನು ಕಾಲೋನಿಗಳನ್ನಾಗಿ ಇಟ್ಟುಕೊಂಡಿವೆ. ಆರ್ಥಿಕ ಸವಲತ್ತುಗಳನ್ನು ಈ ನಗರಗಳು ನುಂಗಿ ಹಾಕುತ್ತಿರುವುದರ ವಿರುದ್ಧ ನಂಜುಂಡಸ್ವಾಮಿ ಅವರ ಚಿಂತನೆಗಳು ಕ್ರಿಯೆಯಾಗಿ ಮಾರ್ಪಾಟು ಹೊಂದುತ್ತಿದ್ದವು.

ಜಾಗತೀಕರಣದ ಭರಾಟೆಯಿಂದ ವಿದೇಶಿ ಶಕ್ತಿಗಳು ಭಾರತೀಯ ಕೃಷಿ ಕ್ಷೇತ್ರದ ಮೇಲೆ ಭವಿಷ್ಯತ್ತಿನಲ್ಲಿ ಬೀರಬಹುದಾದ ಪರಿಣಾಮಗಳನ್ನು ವರ್ತಮಾನದಲ್ಲಿಯೇ ಅರಿಯುವಂತೆ ಮಾಡುವಲ್ಲಿ ನಂಜುಂಡಸ್ವಾಮಿ ಅವರ ಬುದ್ಧಿವಂತಿಕೆ ಹಾಗೂ ಸಂಘಟನಾ ಸಾಮರ್ಥ್ಯಗಳು ಅವರನ್ನು ರೈತನಾಯಕರನ್ನಾಗಿ ಒಪ್ಪಿಕೊಳ್ಳುವಂತೆ

ಮಾಡಿದವು. ರೈತ ಎಂದರೆ ಯಾರು? ಅವರನ್ನು ಗುರುತಿಸುವುದು ಹೇಗೆ? ಎಂಬುದೇ ಅರ್ಥವಾಗದಂಥ ಸ್ಥಿತಿ ನಿರ್ಮಾಣವಾಗಿದ್ದ ಸಂದರ್ಭದಲ್ಲಿ ಹಸಿರು ಟವೆಲ್ ಎಂಬ ಲಾಂಛನ ನೀಡಿ 'ಹಸಿರು ಟವೆಲ್ಲಿನ ಕ್ರಾಂತಿಕಾರಿ'[೧] ಆದರು. ಬಹುರಾಷ್ಟ್ರೀಯ ಕಂಪೆನಿಗಳು ಆಹಾರ ಸರಪಳಿಯ ಮೊದಲನೇ ಕೊಂಡಿ ಆಗಿರುವ ಬೀಜಗಳ ಮೇಲೆ ಸಾರ್ವಭೌಮತ್ವವನ್ನು ಪಡೆಯಲು ಪ್ರಯತ್ನಿಸುತ್ತಿವೆ. ಈ ಕಂಪೆನಿಗಳು ಬೀಜಸ್ವಾಮ್ಯವನ್ನು ಪಡೆದು ಆಹಾರ ಸಾರ್ವಭೌಮತ್ವ ಪಡೆಯುವ ಉದ್ದೇಶ ಹೊಂದಿವೆ. ಹೀಗೆ ಆಹಾರದ ಸಾರ್ವಭೌಮತ್ವ ನಾಶವಾದರೆ ದೇಶದ ಸಾರ್ವಭೌಮತ್ವವೂ ಹೋಗುವುದರ ಅಪಾಯವನ್ನು ಕುರಿತು ಜಾಗೃತಿಯನ್ನು ಮೂಡಿಸುವುದು ನಂಜುಂಡಸ್ವಾಮಿ ಅವರ ಆಶಯವಾಗಿತ್ತು.

೩.೧. ಭೂಕಂದಾಯದ ಬಗೆಗಿನ ಚಿಂತನೆ

ಭೂಕಂದಾಯಕ್ಕೆ ಸಂಬಂಧಿಸಿದಂತೆ ಭಾರತದಲ್ಲಿ ಬ್ರಿಟಿಷರ ಪಳೆಯುಳಿಕೆಯಾಗಿ ಭೂಮಿಯ ಮೇಲಿನ ತೆರಿಗೆಯನ್ನು ಅಧಿಕಾರಿಗಳು ಹಾಗೆಯೇ ಉಳಿಸಿಕೊಂಡು ಬಂದಿದ್ದಾರೆ. ಭೂಕಂದಾಯವನ್ನು ಸಂಸ್ಥೀಕರಣ ಮಾಡಿದವರು ಬ್ರಿಟಿಷರು. ಅದನ್ನು ಮಾಡುವುದರ ಹಿಂದೆ ಇದ್ದ ಉದ್ದೇಶ, ಅವರ ಪ್ರಭುತ್ವವನ್ನು ಭಾರತೀಯರ ತಲೆಯ ಮೇಲೆ ಹೇರುವುದಾಗಿತ್ತು. ಈ ಭೂಕಂದಾಯ ಪದ್ಧತಿ ಹಾಗೂ ಅಧಿಕಾರಿ ಹುದ್ದೆಗಳು ರದ್ದಾಗಬೇಕು. ಬ್ರಿಟಿಷರ ಸಾಮ್ರಾಜ್ಯಶಾಹಿ ಪಳೆಯುಳಿಕೆಯನ್ನು ಭಾರತೀಯರು ಇಂದು ಉಳಿಸಿಕೊಂಡು ಹೋಗುತ್ತಿದ್ದಾರೆ. ಆದರೆ ವಿದೇಶಗಳಲ್ಲಿ ಈ ಬಗೆಯ ಕಂದಾಯ ಪದ್ಧತಿ ಇದೆಯೇ ಎಂದು ಪರೀಕ್ಷಿಸಿದಾಗ ಭಾರತದಲ್ಲಿ ಮಾತ್ರ ಇದರ ಮುಂದುವರಿಕೆಯನ್ನು ಕಾಣಬಹುದು. ಈ ಭೂಕಂದಾಯ ಪದ್ಧತಿ ಹಾಗೂ ಅಧಿಕಾರಿ ಹುದ್ದೆಗಳು ರದ್ದಾಗಬೇಕು ಎಂಬ ಈ ಕೆಳಗಿನ ಮಾತುಗಳು ಗಂಭೀರವಾದುವು.

> ''Who exercising both executive and judicial powers,
> this peculiar tribe of officers should be obolished.''[೨]

ಈ ಅಭಿಪ್ರಾಯಕ್ಕೆ ಕಾರಣವೆಂದರೆ ಭೂ ಕಂದಾಯ ವಸೂಲಿಗೆ ನೇಮಕ ಮಾಡಿಕೊಂಡಿರುವ ಅಧಿಕಾರಿಗಳಾದ ಜಿಲ್ಲಾಧಿಕಾರಿ, ಉಪವಿಭಾಗಾಧಿಕಾರಿ, ತಹಸೀಲ್ದಾರ್ ಹಾಗೂ ಇವರ ಸಹಾಯಕರುಗಳ ಈ ಎಲ್ಲ ಹುದ್ದೆಗಳು ಭೂಕಂದಾಯದ ಜೊತೆಗೆ ರದ್ದಾಗಬೇಕು. ಅದಕ್ಕಾಗಿ ಇಂಗ್ಲೆಂಡನ್ನು ಉದಾಹರಣೆಯಾಗಿ ನೀಡಬಹುದು. ಭೂಮಿ ಒಂದು ಉತ್ಪಾದನಾ ಸಾಧನವಾದ್ದರಿಂದ ಅಲ್ಲಿ ಪ್ರತಿವರ್ಷ ಯಾರಿಗೂ ತೆರಿಗೆ ಹಾಕುವುದಿಲ್ಲ. ಆದರೆ ಭಾರತದಲ್ಲಿ ಸ್ವಾತಂತ್ರ್ಯ ಬಂದಾಗಿನಿಂದ ಭೂಕಂದಾಯ ರದ್ದಾಗಬೇಕೆಂದು ಚರ್ಚೆಗಳು ನಡೆಯುತ್ತಿವೆಯಾದರೂ ಇಂದಿಗೂ ಭೂ ಕಂದಾಯ ರದ್ದು ಮಾಡಿಲ್ಲ. ೧೯೮೦ ರಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಚಳವಳಿ ಪ್ರಾರಂಭ ಮಾಡಿದ ಮೇಲೆ ಸರ್ಕಾರ ಹತ್ತು ಎಕರೆಗಿಂತ ಕಡಿಮೆ ಇರುವ ಖುಷ್ಕಿ ಭೂಮಿಗೆ ಭೂ ಕಂದಾಯ ರದ್ದು ಎಂದು ಹೇಳಿತ್ತು.

ಹತ್ತು ಎಕರೆಗಿಂತ ಹೆಚ್ಚು ಇರುವ ಭೂಮಿಗೆ ಭೂಕಂದಾಯ ರದ್ದು ಏಕೆ ಇಲ್ಲ? ಯಾವುದೇ ವೈಜ್ಞಾನಿಕ ತಳಹದಿ ಇಲ್ಲದೆ ಈ ನಿರ್ಧಾರ ತೆಗೆದುಕೊಂಡಿರುವ ಸರ್ಕಾರದ ವಿರುದ್ಧ ನಂಜುಂಡಸ್ವಾಮಿ ಅವರ ಟೀಕೆ ಮಾಡಿದರು. ಭೂಕಂದಾಯ ರದ್ದು ಮಾಡಬೇಕೆಂಬುದರ ಹಿಂದೆ ಇರುವ ಮತ್ತೊಂದು ಕಾರಣವನ್ನು ನಂಜುಂಡಸ್ವಾಮಿ ಅವರು ನೀಡಿದ್ದಾರೆ. ಅದೇನೆಂದರೆ ಭೂಕಂದಾಯದಿಂದ ಸರ್ಕಾರಕ್ಕೆ ದೊರೆಯುವ ಮೊತ್ತಕ್ಕಿಂತ ಹೆಚ್ಚಿಗೆ ಏಳು ಕೋಟಿ ರೂಪಾಯಿ ಸಂಗ್ರಹಣೆಗಾಗಿ ಖರ್ಚಾಗುತ್ತಿತ್ತು. ಆದಾಯಕ್ಕಿಂತ ಖರ್ಚು ಹೆಚ್ಚಾಗಿರುವ ವ್ಯಾವಹಾರಿಕ ಕಾರಣಗಳಿಗಾಗಿ ಭೂ ಕಂದಾಯ ರದ್ದು ಮಾಡಿ ಹಾಗೂ ಹೆಚ್ಚಿನ ಏಳು ಕೋಟಿ ರೂಪಾಯಿ ಉಳಿಸಬೇಕೆಂಬುದು ನಂಜುಂಡಸ್ವಾಮಿ ಅವರ ಆಲೋಚನಾ ಕ್ರಮದಿಂದ ಅರಿಯಬಹುದು.

ಸ್ಟ್ಯಾಂಪ್ ಶುಲ್ಕ ಹಾಗೂ ನೋಂದಣಿಗೆ ಸಂಬಂಧಿಸಿದಂತೆ ರೈತ ಹಾಗೂ ನಗರದ ಜನರಿಗೆ ಇರುವ ತಾರತಮ್ಯವನ್ನು ಹೋಗಲಾಡಿಸಬೇಕೆಂಬುದು ನಂಜುಂಡಸ್ವಾಮಿ ಅವರ ಆಶಯ ಆಗಿದೆ. ಕಾರಣವೆಂದರೆ ನಗರದಲ್ಲಿ ಬಸ್ಸನ್ನು ಹಸ್ತಾಂತರ ಮಾಡುವ ವೇಳೆ ಕೊಡುವ ತೆರಿಗೆಯನ್ನು ನೋಡಿದರೆ, ಅದೇ ರೈತ ಒಂದು ಎಕರೆ ಹತ್ತು ಸಾವಿರ ರೂಪಾಯಿಯ ಹೊಲವನ್ನು ಹಸ್ತಾಂತರ ಮಾಡುವಾಗ ಕೊಡುವ ಶುಲ್ಕದ ನಡುವೆ ಹೆಚ್ಚಿನ ತಾರತಮ್ಯ ಇರುವುದನ್ನು ಗುರುತಿಸಿದರು. ಹಾಗೆಯೇ ಜಮೀನು ನೋಂದಣಿ ಮಾಡಿಸುವ ವೇಳೆಯಲ್ಲಿಯೂ ಸಬ್‌ರಿಜಿಸ್ಟ್ರಾರ್ ಅವರ ಕಛೇರಿಯಲ್ಲಿ ರೈತನಿಗೆ ಆಗುವ ಲಂಚದ ಕಿರುಕುಳವನ್ನು ತಪ್ಪಿಸಬೇಕು. ಆದ್ದರಿಂದ ಕಛೇರಿಗಳಲ್ಲಿ ಲಂಚ ತೆಗೆದುಕೊಳ್ಳುವುದನ್ನು ತಪ್ಪಿಸಲು ತರಿ ಭೂಮಿಗೆ, ಖುಷ್ಕಿ ಭೂಮಿಗೆ ಹಾಗೂ ಬಾಗಾಯಿತ್ ಭೂಮಿಗೆ ಪ್ರತ್ಯೇಕವಾಗಿ ಸ್ಟ್ಯಾಂಪ್ ಶುಲ್ಕ ವಿಧಿಸುವ ನೀತಿಯನ್ನು ಮಾಡಿದಾಗ ಮಾತ್ರ ಈ ಕಛೇರಿಗಳಲ್ಲಿ ಆಗುವ ಭ್ರಷ್ಟಚಾರ, ಲಂಚವನ್ನು ತಡೆಯಲು ಸಾಧ್ಯ. ಈ ಹಿನ್ನೆಲೆಯಲ್ಲಿಯೇ ಅವರು ''ರೈತರು ಭೂಮಿಯನ್ನು ಹಸ್ತಾಂತರ ಮಾಡುವ ವೇಳೆಯಲ್ಲಿ ಕಛೇರಿಯ ಅಧಿಕಾರಿಗಳಿಂದ ಶೋಷಣೆಗೆ ಒಳಗಾಗುತ್ತಾರೆ''[೩] ಎಂದಿರುವುದು.

೩.೨. ನೀರಾವರಿ ಬಗೆಗಿನ ಚಿಂತನೆ

ನೀರಾವರಿಗೆ ಸಂಬಂಧಿಸಿದಂತೆ

> ''ಸ್ವಾತಂತ್ರ್ಯ ಬಂದು ಅರವತ್ತು ವರ್ಷಗಳು ಕಳೆದರೂ ಕೂಡ ಬರಗಾಲ ಇಲ್ಲದೆ ಇರುವಂಥ ಕರ್ನಾಟಕ ನಿರ್ಮಾಣ ಮಾಡಲು ಸಾಧ್ಯವಾಗಿಲ್ಲ. ರಾಜ್ಯ ಸರ್ಕಾರ ಒಂದು ಸಮಗ್ರವಾದ ಜಲನೀತಿಯನ್ನು ರೂಪಿಸಿಲ್ಲ. ನೀರಾವರಿ ಎಂದರೆ ಕೇವಲ ಜಲಾನಯನ ಪ್ರದೇಶಗಳು ಮಾತ್ರ ಸರ್ಕಾರಕ್ಕೆ ನೆನಪಿಗೆ ಬರುತ್ತವೆ. ಕೇವಲ ದೊಡ್ಡ ನೀರಾವರಿಗೆ ಮಾತ್ರ ಹೆಚ್ಚಿನ ಪ್ರಾಧಾನ್ಯತೆಯನ್ನು ನೀಡುತ್ತಿದೆ.''[೪]

ಎಂಬುದು ನಂಜುಂಡಸ್ವಾಮಿ ಅವರ ವಾದ. ದೊಡ್ಡ ನೀರಾವರಿಯಿಂದ ಶೇಕಡಾ ೨೦ ಭಾಗಕ್ಕೆ ನೀರಾವರಿ ಒದಗಿಸಲು ಸಾಧ್ಯ. ಉಳಿದ ಶೇಕಡಾ ೮೦ ಭಾಗದ ನೀರಾವರಿ ಸಮಸ್ಯೆ ಹಾಗೆಯೇ ಉಳಿಯುತ್ತದೆ. ಶೇಕಡಾ

೮೦ ಭಾಗ ವ್ಯವಸಾಯಕ್ಕೆ ಯೋಗ್ಯ ಭೂ ಪ್ರದೇಶ ಆಗಿದ್ದರೂ, ಅದು ಖಾಯಂ ಬರಗಾಲದ ಸ್ಥಿತಿಯನ್ನು ಎದುರಿಸುತ್ತಿದೆ. ಇದಕ್ಕೆ ಪರ್ಯಾಯವಾಗಿ ಸಹಕಾರ ಮಂತ್ರಿ, ನೀರಾವರಿ ಮಂತ್ರಿ, ವಿದ್ಯುಚ್ಛಕ್ತಿ ಮಂತ್ರಿ, ಕೈಗಾರಿಕಾ ಮಂತ್ರಿ, ಕಂದಾಯ ಮಂತ್ರಿಗಳೆಲ್ಲರೂ ಒಟ್ಟಾಗಿ ಸೇರಿ ಒಂದು ಸಮಗ್ರವಾದ ಕಾರ್ಯಕ್ರಮವನ್ನು ರೂಪಿಸಬೇಕು. ಪೂರ್ವಜರ ಕಾಲದಲ್ಲಿ ಇದ್ದ ವ್ಯವಸ್ಥೆಯನ್ನೆಲ್ಲ ಇಂದು ಹಾಳು ಮಾಡಿದ್ದಾರೆ. ಹೀಗೆ ಹಾಳು ಮಾಡಿರುವ ವ್ಯವಸ್ಥೆಯನ್ನು ದುರಸ್ತಿ ಮಾಡುವ ಕಾರ್ಯಕ್ರಮ ಹಾಕಿಕೊಂಡರೆ ಬರಗಾಲ ನಿವಾರಣೆ ಮಾಡಲು ಸಾಧ್ಯ ಎಂಬುದು ನಂಜುಂಡಸ್ವಾಮಿ ಅವರ ಆಶಯ.

> ''ಎತ್ತರದ ಬಯಲು ಪ್ರದೇಶಗಳನ್ನು ವಶಕ್ಕೆ ತೆಗೆದುಕೊಂಡ ನಾಗರೀಕ ನಿವಾಸಿಗಳು ಉಪನದಿಗಳ ಬದಿಯಲ್ಲಿ ಸಣ್ಣ ಕೆರೆಗಳನ್ನು ಅಥವಾ ಕುಂಟೆಗಳನ್ನು ಕಟ್ಟಿದರು. ಹಂತ ಹಂತವಾಗಿ ದೊಡ್ಡ ಹಳ್ಳಿಗಳವರೆಗೆ ಇದನ್ನು ಮುಂದುವರಿಸುತ್ತಾ ಕೊಳ್ಳದ ಗುಂಟೆ ಪ್ರತಿ ಅನುಕೂಲ ಸ್ಥಳಗಳಲ್ಲಿ ಮಣ್ಣಿನ ದಿಣ್ಣೆಗಳನ್ನು ಕಟ್ಟುತ್ತ ನೀರನ್ನು ತಡೆಯುವ ಹಾಗೂ ಸಂಗ್ರಹಿಸುವ ಕ್ರಮ ಕೈಗೊಂಡರು. ಈ ಯೋಜನೆಯಿಂದಾಗಿ ನಿಧಾನವಾಗಿ ಕೆಳಗಡೆ ಮುಂದುವರಿಯುತ್ತ ಸಾಗಲು ಸಾಧ್ಯವಾಯಿತು. ಇದರಿಂದ ನೂರಾರು, ಸಾವಿರಾರು ಜಲಾಶಯಗಳನ್ನು ಒಂದೆ ಸರಪಳಿಗೆ ಜೋಡಿಸುವುದರ ಮೂಲಕ ಬರಗಾಲದ ಸಂದರ್ಭದಲ್ಲಿ ಹನಿ ನೀರು ಪೋಲಾಗದಂತೆ ನೋಡಿಕೊಂಡಿದ್ದರು.''[೫]

ಆದರೆ ಇಂದಿನ ಜನ ಸಮುದಾಯದ ಪೂರ್ವಜರು ರೂಪಿಸಿರುವ ಯೋಜನೆಗಳನ್ನು ನಿರ್ಮಿಸುವುದಿರಲಿ, ಅವುಗಳನ್ನು ಉಳಿಸಿಕೊಳ್ಳುವ ಕೆಲಸವನ್ನು ಮಾಡುತ್ತಿಲ್ಲ. ನಗರಗಳ ಅತಿಯಾದ ಬೆಳವಣಿಗೆಯಿಂದ ಕೆರೆ - ಕಟ್ಟೆಗಳನ್ನೆಲ್ಲ ಮುಚ್ಚಿ ಸಮತಟ್ಟಾಗಿ ಮಾಡಿ ಬಹು ಅಂತಸ್ತಿನ ಕಟ್ಟಡಗಳನ್ನು ನಿರ್ಮಿಸುತ್ತಿದ್ದಾರೆ. ಆದ್ದರಿಂದ ಕೃಷಿ ಭೂಮಿಯನ್ನು ಕಾಂಕ್ರೀಟ್ ಕಟ್ಟಡ ಕಟ್ಟಲು ಬಳಸುತ್ತಿರುವುದರಿಂದ ಬಿದ್ದ ಮಳೆ ನೀರು ಭೂಮಿಯಲ್ಲಿ ಇಂಗದೆ ಹರಿದು ಸಮುದ್ರ ಸೇರುತ್ತಿದೆ.

ರಾಜ್ಯದ ಪ್ರಥಮ ಇಂಜಿನೀಯರ್‌ಗಳಲ್ಲಿ ಒಬ್ಬರಾದ ಮೇಜರ್ ಸ್ಯಾಂಕೀಯವರು ಕೆರೆಗಳ ವ್ಯವಸ್ಥಿತ ದುರಸ್ಥಿಗೆ ಪೂರ್ಣ ಗಮನಹರಿಸಿದ್ದನ್ನು ನಂಜುಂಡಸ್ವಾಮಿ ಅವರು ಹೀಗೆ ಉದಾಹರಣೆ ನೀಡಿದ್ದಾರೆ.

> ''ಜಲ ಸಂಗ್ರಹಣೆಯ ನಿಯಮವನ್ನು ಎಷ್ಟೊಂದು ಉತ್ತಮ ಮಟ್ಟದಲ್ಲಿ ಅನುಸರಿಸಲಾಗಿದೆಯೆಂದರೆ ಒಂದು ಹೊಸ ಕೆರೆ ಕಟ್ಟಲು ಅದಕ್ಕಿಂತಲೂ ಉತ್ತಮ ಸ್ಥಳ ಹುಡುಕಲು ಸಾಧ್ಯವಿಲ್ಲವೆನ್ನುವಷ್ಟು ಆಯಕಟ್ಟಿನ ಸ್ಥಳಗಳಲ್ಲಿ ಜಲಸಂಗ್ರಹಣೆ ಕೆರೆಗಳನ್ನು ಕಟ್ಟಿದ್ದಾರೆ.''[೬]

ಈ ಬಗೆಯಲ್ಲಿ ಒಂದು ಹೊಸ ಕೆರೆ ಮಾಡಲು ಸ್ಥಳ ಹುಡುಕುವುದಕ್ಕೆ ಕಷ್ಟವಾಗುವ ರೀತಿಯಲ್ಲಿ ನಮ್ಮ ಪೂರ್ವಜರು ಸಂಗ್ರಹಣೆ ವ್ಯವಸ್ಥೆಯನ್ನು ಮಾಡಿ ಇಟ್ಟಿದ್ದರು. ಆ ಕೆಲಸವನ್ನು ಮೊದಲು ಮಾಡಬೇಕೆಂಬುದು ನಂಜುಂಡಸ್ವಾಮಿ ಅವರ ಆಶಯ.

ನೀರಾವರಿ ಎಂದರೆ ಒಟ್ಟು ನೀರಿನ ಆಲೋಚನೆ ಮಾಡಬೇಕು ಎಂಬುದು ನಂಜುಂಡಸ್ವಾಮಿ ಅವರ ವಾದವಾಗಿದೆ. ದೇಶದಲ್ಲಿ ಲಭ್ಯವಿರುವ ನದಿ ನೀರಿನಲ್ಲಿ ಶೇ.೨೦ ಭಾಗವನ್ನೂ ಸರಿಯಾಗಿ ಉಪಯೋಗ ಮಾಡಿಕೊಳ್ಳುತ್ತಿಲ್ಲ. ತಜ್ಞರ ಅಂಕಿ ಅಂಶಗಳನ್ನು ಗಮಿಸಿದರೆ ''ಭಾರತದಲ್ಲಿ ಬೀಳುವ ಮಳೆಯ ಪ್ರಮಾಣ ಬೇರೆ ಯಾವ ದೇಶದಲ್ಲಿಯೂ ಆಗುವುದಿಲ್ಲ. ಭಾರತದ ಭೂಪಟದ ಮೇಲೆ ಒಂದು ಮೀಟರ್ ದಪ್ಪ ನೀರು ಪ್ರತಿವರ್ಷ ಬೀಳುತ್ತದೆ.''[೭]

ಈ ಪ್ರಮಾಣದಲ್ಲಿ ಬೀಳುವ ಮಳೆಯ ನೀರಿನಲ್ಲಿ ಶೇಕಡಾ ೧೦ ಭಾಗ ಕೂಡ ಸರಿಯಾಗಿ ಬಳಕೆ ಮಾಡುತ್ತಿಲ್ಲ. ಹೀಗೆ ಮಳೆ ನೀರು ಪೋಲಾಗಿ ಸಮುದ್ರ ಸೇರುತ್ತಿರುವುದನ್ನು ನಿಲ್ಲಿಸುವಂಥ ಕೆಲಸವನ್ನು ಮಾಡಬೇಕಾಗಿರುವುದು ನೀರಾವರಿ ಇಲಾಖೆಯ ಮೊದಲನೇ ಕೆಲಸ. ಈ ಕೆಲಸಮಾಡುವುದನ್ನು ಬಿಟ್ಟು ಅವೈಜ್ಞಾನಿಕವಾಗಿ ಖುಷ್ಕಿ ಬೇಸಾಯ ಪ್ರದೇಶದಲ್ಲಿ ನೀರಾವರಿ ಒದಗಿಸುವ ಪ್ರಯತ್ನವನ್ನು ಸರ್ಕಾರ ಮಾಡುತ್ತಿರುವುದನ್ನು ಮೊದಲು ನಿಲ್ಲಿಸಬೇಕಾಗಿರುವುದು ಗಮನಾರ್ಹವಾದ ಸಂಗತಿ.

ನಂಜುಂಡಸ್ವಾಮಿ ಅವರ ಆಲೋಚನಾ ಕ್ರಮದಂತೆ, ''ಪ್ರಸ್ತುತ ಸರ್ಕಾರ ಕನಿಷ್ಠ ಒಂದು ವರ್ಷ ದೊಡ್ಡ ನೀರಾವರಿ ಕಾರ್ಯಕ್ರಮವನ್ನು ಮುಂದೂಡಿ, ಸಣ್ಣ ಹಾಗೂ ಅತಿ ಸಣ್ಣ ನೀರಾವರಿಗೆ ಆದ್ಯತೆ ಕೊಡಬೇಕು.''[೮] ಅದರಲ್ಲಿ ಕೆರೆ ಕಟ್ಟೆಗಳನ್ನು ದುರಸ್ತಿ ಮಾಡುವುದು, ಕೆರೆಯ ಹೂಳೆತ್ತುವ ಕೆಲಸ ಮಾಡಿದರೆ ಸುಮಾರು ಕಾಲು ಭಾಗ ಬರಗಾಲ ಪರಿಹಾರ ಮಾಡಿದಂತಾಗುತ್ತದೆ. ಕರ್ನಾಟಕದಲ್ಲಿ ಇರುವ ನೈಸರ್ಗಿಕ ಸಂಪತ್ತಿನಲ್ಲಿ ಶೇಕಡಾ ೭೫ ಭಾಗ ಗ್ರಾಮಾಂತರ ಪ್ರದೇಶಕ್ಕೆ ವಿನಿಯೋಗಿಸಬೇಕು. ಆದರೆ ಈ ಕಾರ್ಯಗಳ ಕಡೆಗೆ ಸರ್ಕಾರಗಳು ಗಮನಹರಿಸುತ್ತಿಲ್ಲ. ಬದಲಿಗೆ ಅಧಿಕಾರಿಗಳು ತಮ್ಮ ಸ್ಥಾನವನ್ನು ಭದ್ರಪಡಿಸಿಕೊಂಡು ಹಾಗೆಯೇ ಅಧಿಕಾರದಲ್ಲಿ ಮುಂದುರಿಯಲು ಪ್ರಯತ್ನಿಸುತ್ತಾರೆ.

ಸಣ್ಣ ನೀರಾವರಿ ಯೋಜನೆ ಮಾಡಿರುವವನಿಗೆ ಸರ್ಕಾರ ಸರಿಯಾಗಿ ವಿದ್ಯುಚ್ಛಕ್ತಿ ಪೂರೈಕೆ ಮಾಡುವುದಿಲ್ಲ. ಆದರೆ ನಗರದ ಯಾವುದೋ ಒಂದು ಐಷಾರಾಮಿ ವಸ್ತುವನ್ನು ತಯಾರಿಸುವ ಕಂಪೆನಿಗೆ ಮಾತ್ರ ವಿದ್ಯುಚ್ಛಕ್ತಿ ಇಲ್ಲ ಎಂದು ಹೇಳುವುದಿಲ್ಲ. ಇಲ್ಲಿಯ ಈ ತಾರತಮ್ಯ ಹಾಗೂ ಸರ್ಕಾರದ ಮಲತಾಯಿ ಧೋರಣೆಯಿಂದ ಗ್ರಾಮಗಳ ಅಭಿವೃದ್ಧಿ ಕುಂಠಿತವಾಗಿದೆ. ಶೇಕಡಾ ೭೫ ಜನರು ಇರುವ ಹಳ್ಳಿಗಳಿಗೆ ಅಷ್ಟೇ ಪ್ರಮಾಣದ ವಿದ್ಯುಚ್ಛಕ್ತಿ ಪೂರೈಕೆ ಮಾಡಬೇಕು. ಇದಕ್ಕೆ ತದ್ವಿರುದ್ಧವಾಗಿ ನಗರಗಳಿಗೆ ಹೆಚ್ಚಿನ ಪ್ರಮಾಣದ ವಿದ್ಯುಚ್ಛಕ್ತಿ ಪೂರೈಕೆ ಮಾಡಿ ಹಳ್ಳಿಗಳಿಗೆ ಕಡಿಮೆ ಪೂರೈಕೆ ಮಾಡುತ್ತಿದೆ. ಎಲ್ಲಿಯವರೆಗೆ ಹೀಗೆ ಶೇಕಡಾ ೭೫ ವಿದ್ಯುಚ್ಛಕ್ತಿ ಪೂರೈಸಲು ಸಾಧ್ಯವಾಗುವುದಿಲ್ಲವೋ ಅಲ್ಲಿಯವರೆಗೂ ಹಳ್ಳಿಗಳ ಅಭಿವೃದ್ಧಿ ಸಾಧ್ಯವಿಲ್ಲ. ಬರಗಾಲ ನಿರ್ಮೂಲನವೂ ಸಾಧ್ಯವಿಲ್ಲ.

ಕೆರೆ ದುರಸ್ತಿ ಹಾಗೂ ಬಾವಿ ನೀರಾವರಿಯನ್ನು ಒಂದೇ ಮಟ್ಟದಲ್ಲಿ ತೆಗೆದುಕೊಂಡು ಹೋಗಬೇಕು. ಅಂತರ್ಜಲವನ್ನು ಬಹಳ ಎಚ್ಚರಿಕೆಯಿಂದ ಉಪಯೋಗಿಸುವ ವ್ಯವಸ್ಥೆ ಮಾಡಬೇಕು. ಎಲ್ಲ ಬೆಳೆಗಳಿಗೂ

ನೀರಾವರಿ ಬಾವಿಗಳಿಂದ ''ಫ್ಲಡ್ ಇರಿಗೇಷನ್'' ಮಾಡುತ್ತಿರುವುದರಿಂದ ನೀರು ಪೋಲಾಗುವುದಲ್ಲದೆ ಬೆಳೆಯೂ ಹಾಳಾಗುತ್ತದೆ. ಆದ್ದರಿಂದ ಬೆಳೆ ಯಾವುದೇ ಇದ್ದರೂ ಒಂದೇ ಪ್ರಮಾಣದಲ್ಲಿ ನೀರು ಕೊಡುವುದನ್ನು ನಿಲ್ಲಿಸಬೇಕು. ಆಯಾ ಬೆಳೆಗಳಿಗೆ ಅನ್ವಯಿಸುವಂತೆ ನೀರನ್ನು ಕೊಡುವುದರಿಂದ ಇಳುವರಿ ಕೂಡ ಚೆನ್ನಾಗಿ ಬರುತ್ತದೆ. ಫ್ಲಡ್ ಇರಿಗೇಷನ್ ನೀರಾವರಿಗೆ ಬದಲಾಗಿ ಹನಿ ನೀರಾವರಿ ಹಾಗೂ ತುಂತುರು ನೀರಾವರಿಗೆ ಹೆಚ್ಚಿನ ಪ್ರಾಧಾನ್ಯತೆ ನೀಡಬೇಕು ಎಂಬುದು ಎಂ.ಡಿ.ಎನ್ ಅಭಿಮತ.[೯] ಸರ್ಕಾರಿ ಸ್ವಾಮ್ಯದಲ್ಲಿ ಅಥವಾ ಸಹಕಾರಿ ಕ್ಷೇತ್ರದಲ್ಲಿ ಹನಿ ನೀರಾವರಿ ಹಾಗೂ ತುಂತುರು ನೀರಾವರಿಗೆ ಬೇಕಾದ ಎಲ್ಲ ಸವಲತ್ತುಗಳನ್ನು ಕೊಡುವಂಥ ವ್ಯವಸ್ಥೆ ಮಾಡಿದಾಗ ಉತ್ಪಾದನೆಯನ್ನು ಹೆಚ್ಚಿಸಲಿಕ್ಕೆ ಸಾಧ್ಯ ಹಾಗೂ ಅಂತರ್ಜಲವನ್ನು ಪೂರ್ತಿಯಾಗಿ ಉಪಯೋಗಿಸಿಕೊಂಡಂತಾಗುತ್ತದೆ. ಜೊತೆಗೆ ಕೆರೆಗಳನ್ನು ದುರಸ್ತಿ ಮಾಡುವುದರಿಂದ ಬಾವಿಗಳಲ್ಲಿ ನೀರು ಕಡಿಮೆಯಾಗುವುದಿಲ್ಲ. ಕೆರೆ ದುರಸ್ತಿ ಹಾಗೂ ಬಾವಿ ನೀರಿನ ಬಳಕೆ ಎರಡು ಕೆಲಸಗಳನ್ನು ಸರ್ಕಾರ ಒಟ್ಟಿಗೆ ಮಾಡಬೇಕು ಎಂಬುದು ನಂಜುಂಡಸ್ವಾಮಿ ಅವರ ಚಿಂತನೆ.

೩.೩. ಬರಗಾಲ ನಿವಾರಣೆಗೆ ಸಂಬಂಧಿಸಿದ ಚಿಂತನೆಗಳು

''ಮಳೆಯನ್ನೇ ಎದುರು ನೋಡುತ್ತಾ ಕೂರುವ ಬೇಸಾಯವನ್ನು ಎಲ್ಲಿಯವರೆಗೆ ನಾವು ಮುಂದುವರಿಸುತ್ತೇವೆಯೋ ಅಲ್ಲಿಯವರೆಗೆ ಬರಗಾಲ ಶಾಶ್ವತವಾಗಿ ಉಳಿಯುತ್ತದೆ'' ಎಂಬುದುದಾಗಿತ್ತು. ಆದ್ದರಿಂದ ಬೇರೆ ರೀತಿಯ ನೀರಾವರಿಯನ್ನು ಕೂಡಲೇ ಜಾರಿಗೆ ತರಬೇಕು. ಭೂ ತಳದಲ್ಲಿರುವ ನೀರನ್ನು ಸಾಮೂಹಿಕ ಕೊಳವೆ ಬಾವಿಗಳ ಮೂಲಕ ಒದಗಿಸಿ, ಮಿತವಾಗಿ ಉಪಯೋಗಿಸಿ ವಿಶಾಲ ಪ್ರದೇಶಗಳನ್ನು ನೀರಾವರಿಗೊಳಪಡಿಸುವಂತೆ ಸ್ಪ್ರಿಂಕ್ಲರ್ ಮತ್ತು ಡ್ರಿಪ್ ನೀರಾವರಿಗೆ ಆದ್ಯತೆ ಕೊಡುವ ಮೂಲಕ ವರ್ಷಕ್ಕೆ ಎರಡು ಬೆಳೆಯನ್ನು ಖಾತ್ರಿಗೊಳಿಸುವುದು ಸಾಧ್ಯ.

ಜೊತೆಗೆ ಮಳೆ ಆಧಾರಿತ ಪ್ರದೇಶಗಳಲ್ಲಿ ಬೇಸಾಯ ಮೊದಲನೇ ಉದ್ಯೋಗ ಆಗಬಾರದು. ಕೃಷಿಯೇತರ ಚಟುವಟಿಕೆಗಳು ರೈತರಿಗೆ ಮೊದಲನೇ ಉದ್ಯೋಗವಾಗಬೇಕು. ಬೇಸಾಯ ರೈತರಿಗೆ ಎರಡನೇ ಉದ್ಯೋಗವಾಗಬೇಕು. ಗ್ರಾಮ ಕೈಗಾರಿಕೆಗಳು ಮತ್ತು ಸಣ್ಣ ಕೈಗಾರಿಕೆಗಳು ಮಳೆ ಆಧಾರಿತ ಪ್ರದೇಶಗಳಲ್ಲಿ ಆದಷ್ಟು ಬೇಗ ಸ್ಥಾಪನೆಗೊಳ್ಳುವುದರ ಮೂಲಕ ಮಾತ್ರ ಇದು ಸಾಧ್ಯ[೧೦] ಎಂದು ಆಲೋಚಿಸಿದ್ದರು. ದೊಡ್ಡ ನೀರಾವರಿ ಯೋಜನೆಗಳನ್ನು ತಾತ್ಕಾಲಿಕವಾಗಿ ನಿಲ್ಲಿಸಿ ಸಣ್ಣ ನೀರಾವರಿಗೆ ಸಂಬಂಧಿಸಿದಂತೆ ನೀರಾವರಿ ಮಂತ್ರಿಗಳು ಹಾಗೂ ಗ್ರಾಮೀಣಾಭಿವೃದ್ಧಿ ಮಂತ್ರಿಗಳು ಇಬ್ಬರೂ ಸೇರಿ ಸಮಗ್ರ ನೀರಾವರಿ ನೀತಿಯನ್ನು ರೂಪಿಸಬೇಕೆಂಬ ಸಲಹೆಯನ್ನು ನಂಜುಂಡಸ್ವಾಮಿ ನೀಡಿದ್ದಾರೆ. ಆದರೆ ಪ್ರಸ್ತುತ ಯಾವ ಮಂತ್ರಿಗಳು ಕೂಡ ಈ ದಾರಿಯಲ್ಲಿ ಸಾಗುವ ಪ್ರಯತ್ನ ಮಾಡುತ್ತಿಲ್ಲ ಎಂಬುದು ಗಮನಾರ್ಹ.

ಸರ್ಕಾರ ಕುಡಿಯುವ ನೀರಿಗೆ ಕೊಳವೆ ಬಾವಿಗಳನ್ನು ತೋಡಿಸುತ್ತಿದೆ. ಆದರೆ ಅಂತರ್ಜಲದ ಸಂರಕ್ಷಣೆಗೆ ಮಾತ್ರ ಪ್ರಯತ್ನಿಸುತ್ತಿಲ್ಲ. ಈ ಕಡೆಗೆ ಸರ್ಕಾರ ಗಮನಹರಿಸಬೇಕಾಗಿರುವುದು ಪ್ರಮುಖ ಅಂಶವಾಗಿದೆ. ಇದರ

ಜೊತೆಗೆ ''ಸರ್‌ಫೇಸ್ ವಾಟರ್ ಮ್ಯಾನೇಜ್‌ಮೆಂಟ್ (ಮಳೆನೀರು)ಗೂ ಹೆಚ್ಚಿನ ಪ್ರಾಧಾನ್ಯತೆ ನೀಡಬೇಕು.''[೧೧] ಮಳೆನೀರು ಹಾಗೂ ಅಂತರ್ಜಲದ ಮರುಪೂರಣಕ್ಕೆ ಸರ್ಕಾರ ಕಾರ್ಯಕ್ರಮ ಹಾಕಿಕೊಳ್ಳದೇ ಇದ್ದರೆ ತೋಡಿದ ಕೊಳವೆ ಬಾವಿಗಳೆಲ್ಲ ಖಾಲಿಯಾಗುತ್ತಾ ಹೋಗುತ್ತವೆ. ನೀರಿನ ನೀತಿಯ ಬಗೆಗೆ ಜವಾಬ್ದಾರಿಯಿಂದ ಕಾರ್ಯನಿರ್ವಹಿಸದೆ ಹೋದರೆ ಈ ನಾಗರೀಕತೆ ಅಂದರೆ ಕರ್ನಾಟಕ ಮಾತ್ರವಲ್ಲ ಇಡೀ ಭಾರತ ದೇಶದ ನಾಗರೀಕತೆ ನೀರು ಇಲ್ಲದೆ ನಾಶವಾಗುವಂಥ ಸಾಧ್ಯತೆ ಇದೆ ಎಂದು ಭವಿಷ್ಯದ ಬಗೆಗೆ ಎಚ್ಚರಿಕೆಯನ್ನು ನೀಡಿದ್ದಾರೆ. ಆದ್ದರಿಂದ ಮಳೆನೀರು ಹಾಗೂ ಅಂತರ್ಜಲದ ಹೆಚ್ಚಳಕ್ಕೆ ಸಂಬಂಧಪಟ್ಟ ಎಲ್ಲಾ ತಜ್ಞರನ್ನು ಸೇರಿಸಿ ವಿಶೇಷ ತಜ್ಞರ ಸಮಿತಿಯನ್ನು ರಚಿಸಿ, ರಾಜ್ಯ ನೀರಾವರಿ ನೀತಿಯನ್ನು ರೂಪಿಸುವ ಪ್ರಯತ್ನವನ್ನು ಸರ್ಕಾರ ಮಾಡಬೇಕು. ತತ್‌ಕ್ಷಣಕ್ಕೆ ಕಾರ್ಯಕ್ರಮ ರೂಪಿಸಿ ಏನನ್ನಾದರು ಮಾಡಿದರೂ ಅದರಲ್ಲಿ ಜರೂರು ಫಲಿತಾಂಶ ಕೊಡುವ ಅಂಶ ಇರಬೇಕು ಎಂಬುದು ನಂಜುಡಸ್ವಾಮಿ ಅವರ ನಿರೀಕ್ಷೆಯಾಗಿತ್ತು.

ಬರಗಾಲ ಇಲ್ಲದೆ ಇರುವಂಥ ಕರ್ನಾಟಕ ನಿರ್ಮಾಣ ಮಾಡುವುದಕ್ಕೆ ಸರ್ಕಾರ ಪ್ರಯತ್ನಿಸಬೇಕು. ರಾಜ್ಯದಲ್ಲಿ ನೀರಾವರಿ ಭೂಮಿಯನ್ನು ಪಡೆದ ''ರೈತರು ಎಷ್ಟು ಜನರಿದ್ದಾರೆ, ಮಳೆಯನ್ನು ಅವಲಂಭಿಸಿದ ರೈತರು ಎಷ್ಟು ಇದ್ದಾರೆ ಎನ್ನುವುದು ಸರ್ಕಾರಕ್ಕೆ ತಿಳಿದಿಲ್ಲ. ಮಳೆ ಬೀಳದಿದ್ದರೂ ಸರ್ಕಾರಿ ನೀರಾವರಿಯಿಂದಾಗಿ ಬೆಳೆ ಮಾಡುವ ರಾಜ್ಯದ ಒಟ್ಟು ಬಿತ್ತನೆ ಭೂಮಿ ೧,೦೩,೩೧,೦೦೦ ಹೆಕ್ಟೇರುಗಳಲ್ಲಿ ಕೇವಲ ೫,೫೧,೦೦೦ ಹೆಕ್ಟೇರುಗಳು ಮಾತ್ರ; ಅಥವಾ ಒಟ್ಟು ಬೆಳೆ ಬೆಳೆಯುವ ಭೂಮಿಯಲ್ಲಿ ಶೇಕಡಾ.೫.೩ ಮಾತ್ರ. ಉಳಿದ ಕೆರೆ ನೀರಾವರಿ ಶೇಕಡಾ.೩.೩., ಬಾವಿ ನೀರಾವರಿ ಶೇಕಡಾ.೩.೪, ಮಳೆ ಕೂಡ ಬರದಿದ್ದರೆ ಕ್ಷಾಮಕ್ಕೆ ಈಡಾಗುವುದು ಎಲ್ಲರಿಗೂ ಗೊತ್ತಿರುವ ವಿಷಯ. ಈ ಶೇಕಡಾ.೫.೩., ಸರ್ಕಾರಿ ನೀರಾವರಿ ರೈತರಲ್ಲಿಯೂ ಬಹುಮಂದಿ ಕಬ್ಬು ಬೆಳೆಯುವವರು ಹಾಗೂ ಭತ್ತ ಬೆಳೆಯುವವರು. ಭತ್ತಕ್ಕೆ ಕಂದು ಜಿಗಿ ಹುಳದ ಕಾಟವಾದರೆ, ಕಬ್ಬಿಗೆ ಸಕ್ಕರೆ ಕಾರ್ಖಾನೆಯವರೇ ಬಾಕಿದಾರರು. ಉಳಿದ ಶೇಕಡಾ.೮೫ ಭಾಗ ರೈತರು ಮಳೆಗಾಲದ ಮರ್ಜಿಗೊಳಗಾದವರಷ್ಟೇ ಅಲ್ಲದೆ ದರೋಡೆ ಬೆಲೆಗಳಿಗೆ ದಾಸ್ತಾನು ಮಾಡಿ ಈಗಾಗಲೇ ಪಾಪರಾಳಿಗಿರುವ ರೈತರು''[೧೨]. ರೈತರು ಬರಗಾಲ ಒಂದರಿಂದ ನಷ್ಟವನ್ನು ಅನುಭವಿಸುವುದಿಲ್ಲ. ಬದಲಿಗೆ ಸಮಾಜದಲ್ಲಿ ಹಂತ ಹಂತವಾಗಿ ಜನರೂ ರೈತರನ್ನು ಶೋಷಣೆಗೆ ಒಳಪಡಿಸಿರುವುದರಿಂದ ಬಡತನದ ಬೇಗೆಯಿಂದ ಬಳಲುವ ಸ್ಥಿತಿ ಉಂಟಾಗಿದೆ. ಈ ಸ್ಥಿತಿ ಕೇವಲ ಒಂದೇ ಬೆಳೆ ಬೆಳೆಯುವ ರೈತರಿಗೆ ಮಾತ್ರವಲ್ಲದೆ ವಿವಿಧ ಬೆಳೆಗಳನ್ನು ಬೆಳೆಯುವ ರೈತರೂ ವಿಭಿನ್ನ ಬಗೆಗಳಲ್ಲಿ ಶೋಷಣೆಗೆ ಒಳಗಾಗುತ್ತಾರೆ. ಈ ಎಲ್ಲ ರೀತಿಯ ಶೋಷಣೆ ನಿಂತಾಗ ಮಾತ್ರ ರೈತರು ಆರ್ಥಿಕವಾಗಿ ಸಬಲರಾಗಿ ಅಭಿವೃದ್ಧಿ ಹೊಂದಲು ಸಾಧ್ಯವಾಗುವುದು.

ಕೃಷಿ ಕಾರ್ಮಿಕರ ಕನಿಷ್ಟ ಕೂಲಿ ನಿಗದಿ ಮಾಡುವಾಗಲೂ ಸರ್ಕಾರ ಮೋಸ ಮಾಡುತ್ತಿದೆ. ಕೃಷಿ ವಸ್ತುಗಳ ಬೆಲೆಗಳನ್ನು ನಿಗದಿ ಮಾಡುವಾಗಲಂತೂ ಇದು ಮತ್ತಷ್ಟು ವ್ಯವಸ್ಥಿತವಾಗಿ ನಡೆಯುತ್ತದೆ. ರೈತರಿಗೆ

> ''While calculating the cost of cultivation, the farm managemeant cell of the agricultural department of the states and the agricultural prices commission, which now has a different name, should take that minimum wage into consideration''[೧೩]

ಎಂದು ಅಭಿಪ್ರಾಯಪಟ್ಟರು.

ಕೃಷಿ ಕಾರ್ಮಿಕರ ಕನಿಷ್ಠ ಕೂಲಿ ನಿಗದಿ ಮಾಡಿದ ಮೇಲೆ ಕೃಷಿ ಉತ್ಪಾದನೆ ಬೆಲೆ ನಿಗದಿ ಮಾಡುವಾಗ ಅದನ್ನು ಗಣನೆಗೆ ತೆಗೆದುಕೊಂಡು ಗುಣಿಸಬೇಕು. ಆದರೆ ಈ ಕಾರ್ಯವನ್ನು ಸರ್ಕಾರ ಮಾಡುತ್ತಿಲ್ಲ. ಅನಕ್ಷರಸ್ಥ ಮುಗ್ಧ ಜನರನ್ನು ಮೋಸ ಮಾಡುತ್ತಿದ್ದಾರೆ. ಹಾಗೆಯೇ ಕೂಲಿ ನಿಗದಿ ವೇಳೆಯಲ್ಲಿ ಕುಟುಂಬ ಶ್ರಮವನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಜೊತೆಗೆ ಜೀತದಾಳುಗಳ ಕೂಲಿಯ ಆಧಾರದ ಮೇಲೆ-

> ''Since not all the farmers have attached servents, the average per day rate has been estimated for the cluster as a whole by relating total wages of the attached servants to their employment than use for evaluation of family lobour''.[೧೪]

ಎಂದು ಪರಿಗಣಿಸಬೇಕೆಂದು ಚಿಂತಿಸಿದರು.

ಒಂದು ವರ್ಷಕ್ಕೆ ಜೀತದಾಳುಗಳು ಜೀತ ಪದ್ಧತಿ ಇದ್ದಾಗ; ಈಗಲೂ ಇದೆ; ಒಂದು ವರ್ಷಕ್ಕೆ ಜೀತದಾಳುಗಳಿಗೆ ಕೊಡುತ್ತಿದ್ದ ಕೂಲಿಯನ್ನು ಲೆಕ್ಕ ಹಾಕಿ ೩೬೫ ದಿನಗಳಿಂದ ಭಾಗ ಮಾಡಿ ಕೊಡುತ್ತಿದ್ದಾರೆ. ಇಂಥ ಕೂಲಿ ಆಧಾರದ ಮೇಲೆ ಕೃಷಿ ಬೆಲೆ ನಿಗದಿಯಾಗುತ್ತದೆ. ಇಲ್ಲಿಯೂ ಸರ್ಕಾರ ಮೋಸವನ್ನು ಮಾಡುತ್ತಿದೆ ಎಂದು ನಂಜುಂಡಸ್ವಾಮಿ ಅವರು ಟೀಕಿಸಿದ್ದಾರೆ.

> ''ಕೃಷಿ ಸರಕುಗಳ ಮೇಲೆ ಬಡ್ಡಿ ವಿಧಿಸುವಾಗ ಸರ್ಕಾರ ರೈತರಿಗೆ ಮೋಸ ಮಾಡುತ್ತಿದೆ. ಕೃಷಿ ಸಲಕರಣೆಗಳ (ಭೂಮಿ ಬಿಟ್ಟು) ಮೇಲಿನ ಅಂದರೆ ಕಟ್ಟಡಗಳು, ಕೃಷಿ ಸಾಧನಗಳು, ಯಂತ್ರಗಳು, ನೀರಾವರಿ ಸಲಕರಣೆಗಳು, ಕಾಮಗಾರಿಗಳು ಹಾಗೂ ದನಕರುಗಳ ಮೇಲಿನ ಬಡ್ಡಿಯನ್ನು ವರ್ಷಕ್ಕೆ ಶೇಕಡಾ ೬ ರಂತೆ ಲೆಕ್ಕ ಹಾಕುತ್ತಾರೆ. ಹಾಗೆಯೇ ಕೃಷಿಗೆ ತೊಡಗಿಸಿದ ಬಂಡವಾಳದ ಮೇಲೆ ಶೇಕಡಾ ೧೦ರಷ್ಟು ಬಡ್ಡಿಯನ್ನು, ಕೇವಲ ಮೂರು ತಿಂಗಳಿಗೆ ಮಾತ್ರ ಲೆಕ್ಕ ಹಾಕಿ ಕೊಡುತ್ತಾರೆ. ಕೃಷಿ ವಸ್ತುಗಳ ಬೆಲೆ ನಿಗದಿ ಮಾಡುವಾಗ ಮೂರು ತಿಂಗಳಿಗೆ ಶೇಕಡಾ ೧೦ ರಂತೆ ನಿಗದಿಗೊಳಿಸುತ್ತಾರೆ. ಈ ಕಾರಣದಿಂದಲೇ ಸಾಲ ಬರುವುದಕ್ಕೆ ರೈತ ಕಾರಣ ಅಲ್ಲ. ಅದಕ್ಕೆಲ್ಲ ಸರ್ಕಾರವೇ ಕಾರಣ. ಆದ್ದರಿಂದ ರೈತರ ಅನ್ನದ ಋಣವನ್ನು ತೀರಿಸಬೇಕಾದದ್ದು ಸರ್ಕಾರದ ಕೆಲಸ''[೧೫]

ಎಂಬುದು ನಂಜುಂಡಸ್ವಾಮಿ ಅವರ ಆಶಯವಾಗಿದೆ.

ಸರ್ಕಾರ ಕೃಷಿ ಸರಕುಗಳಿಗೆ ವಿಧಿಸುವ ಬೆಲೆ ವಿಧಾನ ವೈಜ್ಞಾನಿಕವಾಗಿಲ್ಲ ಎಂದಿದ್ದಾರೆ ನಂಜುಂಡಸ್ವಾಮಿ ಅವರು. ರೈತನಿಂದ ಅತ್ಯಂತ ಕಡಿಮೆ ಬೆಲೆಗೆ ಧಾನ್ಯಗಳನ್ನು ಕೊಂಡು, ಅದನ್ನೇ ಅತಿ ಹೆಚ್ಚಿನ ಬೆಲೆಯಲ್ಲಿ

ದಲ್ಲಾಳಿಗಳು ಸರ್ಕಾರಕ್ಕೆ ಮಾರುತ್ತಾರೆ. ಇಲ್ಲಿ ರೈತನಿಗೆ ಯಾವುದೇ ಲಾಭವಾಗುವುದಿಲ್ಲ. ಬದಲಿಗೆ ಸರ್ಕಾರದ ನೀತಿಗಳಿಂದಾಗಿ ದಲ್ಲಾಳಿ ಹೆಚ್ಚಿನ ಆದಾಯವನ್ನು ಪಡೆಯುತ್ತಾನೆ. ಈ ನೀತಿಗಳು ರೈತ ವಿರೋಧಿ ನೀತಿಗಳಾಗಿರುವುದರಿಂದ ನಂಜುಂಡಸ್ವಾಮಿ ಅವರು ತೀವ್ರ ವಿರೋಧವನ್ನು ವ್ಯಕ್ತಪಡಿಸಿದರು. ಅದಕ್ಕಾಗಿ ''ಬೇರೆ ಬೇರೆ ಕೃಷಿ ಉತ್ಪಾದನೆಗಳಿಗೆ ಸಮನಾಂತರ ಬೆಲೆಗಳ ಲೆಕ್ಕಾಚಾರ ಮಾಡಲು ಒಂದು ಶಾಶ್ವತ 'ಸ್ಥಾಯೀ ಸಮಿತಿ' ರಚಿಸಬೇಕೆಂದು ಶಿಫಾರಸ್ಸು ಮಾಡಿದ್ದಾರೆ.''[೧೬] ಬಿತ್ತುವ ಕಾಲಕ್ಕೆ ಒಂದು ತಿಂಗಳು ಮುಂಚಿತವಾಗಿಯೇ ಶಾಶ್ವತ ಸ್ಥಾಯೀ ಸಮಿತಿಯು ಎಲ್ಲ ಕೃಷಿ ಉತ್ಪಾದನೆಗಳಿಗೆ ಸಮನಾಂತರ ಬೆಲೆಗಳನ್ನು ನಿಗದಿ ಪಡಿಸಬೇಕೆಂದು ಸಲಹೆ ನೀಡಿದ್ದಾರೆ. ಇಂಥ ಒಂದು ಸ್ಥಾಯೀ ಸಮಿತಿಯ ಅವಶ್ಯಕತೆಯನ್ನು ಸರ್ಕಾರಕ್ಕೆ ಮನವರಿಕೆ ಮಾಡಿಕೊಡುವಲ್ಲಿ ನಂಜುಂಡಸ್ವಾಮಿ ಅವರ ಪಾತ್ರ ಗಮನಾರ್ಹವಾದುದು.

೩.೪. ಗ್ರಾಮೀಣಾಭಿವೃದ್ಧಿಯ ಬಗೆಗಿನ ಚಿಂತನೆ

''ಭಾರತದ ಗ್ರಾಮಗಳ ಏಳಿಗೆಗಾಗಿ ದೇಶದ ಹಲವು ಭಾಗಗಳಲ್ಲಿ ಹೋರಾಟ ನಡೆಸುತ್ತಿರುವ ಭಾರತದ ರೈತರು ನೆನಪಿಸಿಕೊಳ್ಳಬೇಕಾದ ಇಬ್ಬರು ಮಹಾನ್ ಚಿಂತಕರೆಂದರೆ ಒಂದು ಗಾಂಧಿ; ಎರಡನೆಯದು ಲೋಹಿಯಾ''[೧೭] ಎಂದು ರೈತರಿಗೆ ಎಂ.ಡಿ.ಎನ್ ಸೂಚಿಸುತ್ತಾರೆ. ಹೇರಳವಾಗಿರುವ ನಿಸರ್ಗ ಸಂಪತ್ತನ್ನು ಗ್ರಾಮಗಳ ಅಭಿವೃದ್ಧಿಗೆ ಬಳಸಿ ಎಂದು ಹೇಳಿದ ಗಾಂಧಿಯ ಹೇಳಿಕೆಯನ್ನು ಸ್ಮರಿಸಿಕೊಳ್ಳಬೇಕು. ಕುತಂತ್ರದ ಕಾನೂನುಗಳ ಮೂಲಕ ಕೃಷಿ ಕ್ಷೇತ್ರವನ್ನು ಕೈಗಾರಿಕೆ ಹಾಗೂ ವರ್ತಕರು ವಂಚಿಸಲು ಸರ್ಕಾರ ನೆರವು ನೀಡುತ್ತಿದೆ. ''ನೈಸರ್ಗಿಕ ಸಂಪತ್ತಿನ ಬಗೆಗೆ ಇರುವ ಸರ್ಕಾರದ ಈ ಧೋರಣೆಯಿಂದಾಗಿ ಇಂದು ಗ್ರಾಮಗಳೂ ಹಿಂದುಳಿಯುತ್ತಿವೆ. ಉದಾಹರಣೆಗೆ ಇಳಕಲ್ ಮತ್ತು ಬಿಜಾಪುರ ಜಿಲ್ಲೆ. ಈ ಜಿಲ್ಲೆ ಖಾಯಂ ಬರಗಾಲಕ್ಕೆ ಸಿಕ್ಕಿರುವಂಥ ಜಿಲ್ಲೆ.''[೧೮] ಈ ಜಿಲ್ಲೆ ಅಪಾರ ನೈಸರ್ಗಿಕ ಸಂಪತ್ತನ್ನು ಹೊಂದಿದೆ. ಇಳಕಲ್ಲಿನ ಕಲ್ಲು ಬಿಜಾಪುರ ಜನರ ಸ್ವತ್ತು ಎನ್ನುವುದನ್ನು ಮನವರಿಕೆ ಮಾಡಿಕೊಂಡು ಸರ್ಕಾರ ಅಲ್ಲಿನ ಸಂಪತ್ತನ್ನು ಜಿಲ್ಲೆಯ ಅಭಿವೃದ್ಧಿಗೆ ಬಳಸಿಕೊಂಡಲ್ಲಿ ಬಿಜಾಪುರ ಅಭಿವೃದ್ಧಿ ಹೊಂದುವುದರಲ್ಲಿ ಸಂಶಯವಿಲ್ಲ. ಆದರೆ ಸರ್ಕಾರದ ಭ್ರಷ್ಟ ನೀತಿಗಳಿಂದಾಗಿ ಹೊರ ರಾಜ್ಯಗಳ ಬಂಡವಾಳದಾರರು, ಕೈಗಾರಿಕೋದ್ಯಮಿಗಳು ಆ ಸ್ಥಳವನ್ನು ಇಂತಿಷ್ಟು ಹಣಕ್ಕೆ ಖರೀದಿಸುತ್ತಿರುವುದರಿಂದ ನೈಸರ್ಗಿಕ ಸಂಪತ್ತು ಬೇರೆಯವರ ಖಾಸಗಿ ಸ್ವತ್ತಾಗಿ ಹೋಗುತ್ತಿದೆ. ಸಂಪತ್ತಿನ ಕೇಂದ್ರೀಕರಣವೂ ಆಗುತ್ತಿದೆ. ಗುಲ್ಬರ್ಗಾ ಜಿಲ್ಲೆಯ ಶಹಬಾದ್ ಕಲ್ಲು, ಕನಕಪುರದ ಗ್ರಾನೈಟ್ ಕಲ್ಲು ಆಯಾ ಜಿಲ್ಲೆಗಳ ಸ್ವತ್ತು. ಸಂಪತ್ತಿನ ವಿಕೇಂದ್ರೀಕರಣವಾಗಬೇಕಾಗಿದೆ. ಕೆಲವು ಮೂಲಭೂತವಾದ ಬದಲಾವಣೆಗಳನ್ನು ಮಾಡಿಕೊಳ್ಳುವ ಕೃಷಿ ಸಂಪತ್ತು ಹಾಗೂ ನೈಸರ್ಗಿಕ ಸಂಪತ್ತು ಕನಿಷ್ಟ ಆಯಾಯ ಜಿಲ್ಲೆಗಳ ಸ್ವತ್ತು ಎನ್ನುವ ಕಾನೂನು ತರಬೇಕು. ಕೆಲವು ಜನರ ಮನೆಯ ಸ್ವತ್ತಾಗುವ ನೈಸರ್ಗಿಕ ಸಂಪತ್ತನ್ನು ತಡೆಯಬೇಕು. ಇಂಥ ಕಾನೂನು ಮಾಡುವ ಮೂಲಕ ಕನಿಷ್ಟ ಬದಲಾವಣೆ ಮಾಡಿದರೆ ಶಾಶ್ವತವಾಗಿ ಬರಗಾಲ ಪರಿಹಾರ ಮಾಡಬಹುದು.

ಬರಗಾಲ ರಾಜ್ಯದ ಆರ್ಥಿಕ ವ್ಯವಸ್ಥೆಗೆ ಸಂಬಂಧಪಟ್ಟ ಸಮಸ್ಯೆಯಾಗಿದೆ. ಇದನ್ನು ಗಮನಿಸಿ ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಇಲ್ಲದೆ ಇದ್ದಲ್ಲಿ ನೈಸರ್ಗಿಕ ಸಂಪತ್ತಿನ ರಾಷ್ಟ್ರೀಕರಣವನ್ನು ರೈತ ಸಂಘ. ಹಾಗೂ ಕರ್ನಾಟಕದ ಜನ ಮಾಡುತ್ತಾರೆ. ''ಹಳ್ಳಿಗಾಡಿನ ಜನರ ಜೀವನ ಉತ್ತಮಗೊಳ್ಳಬೇಕಾದರೆ ಕೃಷಿ ಆಧಾರಿತ ಕೈಗಾರಿಕೆಗಳನ್ನು ಸ್ಥಾಪಿಸಬೇಕು. ಸಹಕಾರ ಇಲಾಖೆ ವರದಿಯಲ್ಲಿ ಪರಿಷ್ಕರಣ ವಿಭಾಗ (ಪ್ರೋಸೆಸಿಂಗ್ ಆಕ್ಟಿವಿಟೀಸ್) ಹಾಗೂ ಸಹಕಾರ ವಿಭಾಗ (ಕೋ-ಆಪರೇಟೀವ್ ಆ್ಯಕ್ಟಿವಿಟೀಸ್)ಗಳು ಒಂದಕ್ಕೊಂದು ಸಂಬಂಧ ಇಲ್ಲದೆ ಇರತಕ್ಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ.''[೧೯] ಆದರೆ ಇವೆರಡೂ ಒಂದಕ್ಕೊಂದು ಸಂಬಂಧ ಇರುವಂಥ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಸಹಕಾರಿ ಕ್ಷೇತ್ರದಲ್ಲಿ ಕೃಷಿ ಆಧಾರಿತ ಕೈಗಾರಿಕೆಗಳನ್ನು ಸ್ಥಾಪಿಸಬೇಕು. ಸರ್ಕಾರದ ಸಂಪೂರ್ಣ ಕೈಗಾರಿಕಾ ನೀತಿಯನ್ನೇ ಬದಲಾಯಿಸಬೇಕು. ಇನ್ನು ಮುಂದೆ ಯಾವುದೇ ಕೈಗಾರಿಕೆ ಕರ್ನಾಟಕದಲ್ಲಿ ಸ್ಥಾಪನೆಯಾಗಬೇಕಾದರೆ ಅದು ಸಹಕಾರಿ ಕ್ಷೇತ್ರದಲ್ಲಿಯೇ ಆಗಬೇಕು ಎನ್ನುವ ನೀತಿಯನ್ನು ಸರ್ಕಾರ ರೂಪಿಸಬೇಕು. ಇದರಿಂದಾಗಿ ಹಳ್ಳಿಗಾಡಿನ ಜನರ ಜೀವನವನ್ನು ಉತ್ತಮಪಡಿಸಬಹುದು ಎಂಬುದು ನಂಜುಂಡಸ್ವಾಮಿ ಆಲೋಚನಾ ಕ್ರಮವಾಗಿದೆ.

ಗ್ರಾಮೀಣಾಭಿವೃದ್ಧಿ ಸಚಿವರು ಪರಿಣಾಮಕಾರಿಯಾಗಿ ಕೆಲಸ ಮಾಡಬೇಕಾದರೆ ಅವರಿಗೆ ಇನ್ನೂ ಎರಡು ಖಾತೆಗಳನ್ನು ಕೊಡಬೇಕು. ಒಂದನೆಯದು ಸಣ್ಣ ಕೈಗಾರಿಕೆ ಮತ್ತೊಂದು ಅತಿ ಸಣ್ಣ ನೀರಾವರಿ. ಇವೆರಡನ್ನು ಸೇರಿಸಿ ಒಂದೇ ಖಾತೆ ಮಾಡಬೇಕೆಂಬುದು ನಂಜುಂಡಸ್ವಾಮಿ ಅವರ ವಾದ.

> ''ಅತಿ ಸಣ್ಣ ನೀರಾವರಿಗೆ ಪ್ರತ್ಯೇಕ ಖಾತೆ ಕೊಟ್ಟು ಅದನ್ನು ಗ್ರಾಮೀಣಾಭಿವೃದ್ಧಿ ಮಂತ್ರಿಯೇ ನಡೆಸುವಂತಾಗಬೇಕು. ಕೈಗಾರಿಕೆ ಅಥವಾ ಕೃಷಿ ಕ್ಷೇತ್ರದಲ್ಲಿ ಸಂಪತ್ತು ಸೃಷ್ಟಿ ಮಾಡಬೇಕು. ಅದಕ್ಕಾಗಿ ಖುಷ್ಕಿ ಭೂಮಿ ಅಭಿವೃದ್ಧಿಯನ್ನು ಗ್ರಾಮೀಣಾಭಿವೃದ್ಧಿ ಸಚಿವರಿಗೆ ವರ್ಗಾಯಿಸಬೇಕು''[೨೦]

ಎಂಬುದು ನಂಜುಂಡಸ್ವಾಮಿ ಅವರ ಚಿಂತನೆಯಾಗಿದೆ. ಯೋಜನಾ ವೆಚ್ಚದಲ್ಲಿ ಖುಷ್ಕಿ ಬೇಸಾಯದ ಅಭಿವೃದ್ಧಿಗಾಗಿ ತುಂಬಾ ಕಡಿಮೆ ಹಣವನ್ನು ಬಿಡುಗಡೆ ಮಾಡುತ್ತಿದ್ದಾರೆ. ಶೇಕಡಾ ೮೦ ಭಾಗ ಇರುವ ಖುಷ್ಕಿ ಜಮೀನಿಗೆ ಇನ್ನೂ ಹೆಚ್ಚಿನ ಹಣ ವರ್ಗಾವಣೆ ಮಾಡಬೇಕು. ಆಗ ಮಾತ್ರ ಖುಷ್ಕಿ ಭೂಮಿ ಅಭಿವೃದ್ಧಿ ಮಾಡಬಹುದು. ಜೊತೆಗೆ ಅತಿಸಣ್ಣ ನೀರಾವರಿ (ಮೈಕ್ರೋ ಇರಿಗೇಷನ್) ಎಂದು ಖಾತೆ ತೆಗೆಯಬೇಕು. ಹಾಗೆಯೇ ಸಣ್ಣ ಕೈಗಾರಿಕೆಗಳನ್ನು ಗ್ರಾಮಗಳಲ್ಲಿ ಸ್ಥಾಪಿಸಬೇಕು. ಈ ಮೇಲ್ಕಂಡ ಖಾತೆಗಳನ್ನು ವರ್ಗಾಯಿಸಿ ಸೇರಿಸುವ ಕೆಲಸವನ್ನು ಸರ್ಕಾರ ಇಂದಿಗೂ ಮಾಡಿಲ್ಲ. ಖುಷ್ಕಿ ಜಮೀನಿನ ಅಭಿವೃದ್ಧಿಗಾಗಿ ಹಣ ಬಿಡುಗಡೆ ಮಾಡುವುದರಲ್ಲಿ ತಾರತಮ್ಯವನ್ನು ಮಾಡುತ್ತಿದೆ. ಸಣ್ಣ ಕೈಗಾರಿಕೆಗಳನ್ನು ಗ್ರಾಮಗಳಲ್ಲಿ ಸ್ಥಾಪಿಸುವುದರಿಂದ ರೇಷ್ಮೆ ಗೂಡು ಮಾರುವುದನ್ನು ತಪ್ಪಿಸಿ ರೈತರೇ ರೇಷ್ಮೆ ನೂಲನ್ನು ಮಾರುವ ವ್ಯವಸ್ಥೆ ಮಾಡಿದರೆ ರೇಷ್ಮೆ ಬೆಳೆಗಾರರು ಆರ್ಥಿಕವಾಗಿ ಸಬಲರಾಗುತ್ತಾರೆ. ಇದೇ ರೀತಿಯಲ್ಲಿ ಇನ್ನುಳಿದ ಬೆಳೆಗಳಿಗೂ ಸಂಬಂಧಿಸಿದಂತೆ

ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸುವುದರಿಂದ ಗ್ರಾಮೀಣಾಭಿವೃದ್ಧಿ ಸಾಧ್ಯ ಎಂಬುದು ನಂಜುಂಡಸ್ವಾಮಿ ಅವರ ಆಶಯ.

''ನಗರಗಳ ಬೆಳವಣಿಗೆಯನ್ನು ನಿಲ್ಲಿಸುವವರೆಗೂ ಕರ್ನಾಟಕದಲ್ಲಿ ಬರಗಾಲ ನಿಲ್ಲುವುದಿಲ್ಲ. ನಗರಗಳಲ್ಲಿ ವಾಸಿಸುತ್ತಿರುವ ಜನರ ಕನಿಷ್ಠ ಸೌಲಭ್ಯಗಳಿಗಾಗಿ ಇಡೀ ರಾಜ್ಯದ ಸಂಪತ್ತನ್ನು ಖರ್ಚು ಮಾಡುವ ದುಸ್ಥಿತಿಗೆ ಬಂದಿದೆ.''[೨೧] ಗ್ರಾಮ ಹಾಗೂ ನಗರಗಳ ನಡುವೆ ಅಸಮತೋಲನ ಹೆಚ್ಚಾಗಿ ಬಡತನದ ಹೆಚ್ಚಳಕ್ಕೂ ಕಾರಣವಾಗಿದೆ. ನಗರಗಳ ಬೆಳವಣಿಗೆಯನ್ನು ನಿಲ್ಲಿಸುವುದರಿಂದ ಗ್ರಾಮೀಣ ಯುವಕರು ವಲಸೆ ಹೋಗುವುದನ್ನು ತಪ್ಪಿಸಬಹುದು. ಅಲ್ಲದೇ ಗ್ರಾಮಗಳಲ್ಲಿ ತಯಾರಾಗುವ ವಸ್ತುಗಳಿಗೆ ಸ್ವಲ್ಪವಾದರೂ ಬೇಡಿಕೆ ಸೃಷ್ಟಿಯಾಗುತ್ತದೆ. ನಗರಗಳಿಗೆ ಸರಬರಾಜು ಮಾಡುತ್ತಿರುವ ನೀರನ್ನು ಕೃಷಿಗೆ ಬಳಸಿದಲ್ಲಿ ಇನ್ನು ಹೆಚ್ಚಿನ ಅಭಿವೃದ್ಧಿ ಸಾಧಿಸಬಹುದು. ನಗರಗಳ ನೀರಿನ ಸಮಸ್ಯೆಯನ್ನು ನಿವಾರಿಸಲು ಕುಡಿಯುವ ನೀರನ್ನು ಹೊರತುಪಡಿಸಿ ಉಳಿದೆಲ್ಲದಕ್ಕೂ ರೀಸೈಕ್ಲಿಂಗ್ ಮಾಡಿದ ನೀರನ್ನು ಬಳಸುವ ವ್ಯವಸ್ಥೆ ಮಾಡಬೇಕು. ಮೆಟ್ರೋ ಯೋಜನೆಯಂಥ ಸಾವಿರಾರು ಕೋಟಿ ನುಂಗುವ ಯೋಜನೆಗಳಿಗೆ ಕಡಿವಾಣ ಹಾಕಬೇಕು. ಇಲ್ಲದಿದ್ದಲ್ಲಿ ನಗರಗಳ ಸಮಸ್ಯೆ ಹೆಚ್ಚಾಗಿ, ಇದರ ಒತ್ತಡ ಗ್ರಾಮಗಳ ಮೇಲೆ ಬೀರುತ್ತದೆ. ಇವೆಲ್ಲ ಸಮಸ್ಯೆಗಳ ಪರಿಣಾಮಗಳನ್ನು ಎದುರಿಸಬೇಕಾಗಿರುವುದು ಗ್ರಾಮೀಣ ಜನತೆ.

ವಿಕೇಂದ್ರೀಕರಣ ಕುರಿತಂತೆ ರಾಜಕೀಯ ವಿಕೇಂದ್ರೀಕರಣ, ಆರ್ಥಿಕ ವಿಕೇಂದ್ರೀಕರಣ ಜೊತೆಗೇ ತಾಂತ್ರಿಕ ವಿಕೇಂದ್ರೀಕರಣ ಮಾಡಬೇಕೆಂದು ಗಾಂಧಿ ಅವರ ಆಶಯವಾಗಿತ್ತು. ಪ್ರಸ್ತುತ ಗ್ರಾಮಗಳ ಅವಶ್ಯಕತೆಗಳೇನೆಂದು ಗಮನಿಸಿದಾಗ ಸಣ್ಣ ಕೈಗಾರಿಕೆಗಳ ಮೂಲಕ ಗ್ರಾಮಾಂತರ ಪ್ರದೇಶದಲ್ಲಿ ಉದ್ಯೋಗ ಸೃಷ್ಟಿ ಮಾಡಬೇಕು. ''ದೊಡ್ಡ ಕೈಗಾರಿಕೆಗಳು ರೈತರನ್ನು ಯಾವ ಪ್ರದೇಶಗಳಲ್ಲಿ ಮೋಸ ಮಾಡುತ್ತಿವೆಯೋ, ಆ ಮೋಸವನ್ನು ನಿಲ್ಲಿಸಬೇಕಾದರೆ ಗ್ರಾಮಾಂತರ ಪ್ರದೇಶಗಳಿಂದ ಹೊರಗಡೆಗೆ ಸಿದ್ಧ ವಸ್ತುಗಳು ಹೋಗುವ ವ್ಯವಸ್ಥೆ ಆಗಬೇಕು. ಕಚ್ಚಾವಸ್ತುವಿನ ಲೂಟಿ ನಿಲ್ಲಬೇಕು.''[೨೨] ಸಿದ್ಧವಸ್ತುಗಳು ತಯಾರಾಗಿ ಗ್ರಾಮಾಂತರ ಪ್ರದೇಶದಿಂದ ಹೊರಗೆ ಹೋಗುವ ವ್ಯವಸ್ಥೆ ಮಾಡಿದಾಗ ಗ್ರಾಮಗಳಲ್ಲಿನ ಬಡತನ ನಿವಾರಣೆ ಮಾಡಲು ಸಾಧ್ಯ. ಈ ಕಾರ್ಯವನ್ನು ಯಾವುದಾದರೂ ಒಂದು ತಾಲ್ಲೂಕಿನಲ್ಲಿ ಪ್ರಾರಂಭ ಮಾಡಿ ಅನಂತರ ಬೇರೆ ಜಿಲ್ಲೆ, ತಾಲ್ಲೂಕು, ಹಾಗೂ ರಾಜ್ಯಾದ್ಯಂತ ಅಳವಡಿಸಿಕೊಳ್ಳುವಂತೆ ಸರ್ಕಾರದ ನೀತಿ ಬದಲಾಗಬೇಕು ಎಂಬುದು ನಂಜುಂಡಸ್ವಾಮಿ ಅವರ ಆಶಯವಾಗಿತ್ತು. ಕೆರೆಗಳ ದುರಸ್ತಿ, ಏತ ನೀರಾವರಿ, ಐ.ಪಿ. ಸೆಟ್ಟುಗಳಿಗೆ ವಿದ್ಯುಚ್ಛಕ್ತಿ, ಇವುಗಳ ಜೊತೆಗೆ ಸಣ್ಣ ಕೈಗಾರಿಕೆಗಳ ಸ್ಥಾಪನೆ ಇವು ಒಂದಕ್ಕೊಂದು ಅಂಟಿಕೊಂಡಿರತಕ್ಕಂತ ಈ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವವರೆಗೂ ಹಳ್ಳಿಗಳಿಂದ ಬಡತನವಾಗಲಿ, ಬರಗಾಲವಾಗಲಿ ಹೋಗುವುದಿಲ್ಲ. ಇದರ ನಿವಾರಣೆಗೆ ಸೂಕ್ತ ಕಾರ್ಯಕ್ರಮ ಹಾಕಿಕೊಳ್ಳಬೇಕೆಂಬುದು ಎಂ.ಡಿ.ಎನ್ ಅವರ ಅಭಿಪ್ರಾಯವಾಗಿತ್ತು.

೩.೫. ಬಿತ್ತನೆ ಬೀಜದ ಬಗೆಗಿನ ಚಿಂತನೆ

ಕೃಷಿ ಕ್ಷೇತ್ರದಲ್ಲಿ ಬಿತ್ತನೆ ಬೀಜಕ್ಕೆ ಸಂಬಂಧಿಸಿದಂತೆ ಗಮನಿಸಿದಾಗ ಬೀಜವೆಂಬುದು ಬೆಳೆಯ ಮೂಲ ಮಾತ್ರವಲ್ಲ. ಅದು ಭವಿಷ್ಯದ ಬೆಳಕು. ಇಂಥ ಬೀಜಗಳ ಮೇಲಿನ ಸ್ವಾಮ್ಯವನ್ನು ಪಡೆದುಕೊಳ್ಳುವಲ್ಲಿ ಬಹುರಾಷ್ಟ್ರೀಯ ಕಂಪೆನಿಗಳು ಭಾರತದಂಥ ದೇಶಗಳ ಮೇಲೆ ಅತ್ಯಂತ ಕರಾಳವಾದ ಬೀಜ ಕಾಯಿದೆಗಳನ್ನು ಕೇಂದ್ರ ಸರ್ಕಾರದ ನೆರವಿನೊಂದಿಗೆ ತರುತ್ತಿವೆ. ಇದರಿಂದ ಬೀಜ ದುಬಾರಿಯಾಗುತ್ತದೆ. ಅಲ್ಲದೆ ದೇಶಿ ಸಂಶೋಧನೆ ಕೆಳಮಟ್ಟವನ್ನು ತಲುಪಿ, ಜೀವ ವೈವಿಧ್ಯಗಳ ಕಳವಿಗೆ ಅನುಕೂಲ ಮಾಡಿಕೊಡುತ್ತಿವೆ. ವಂದನಾಶಿವ ನೇತೃತ್ವದ ದೇಶಿ ಬೀಜ ಸಂರಕ್ಷಿಸಲು 'ನವಧಾನ್ಯ' ಸಂಘಟನೆಗೆ ನಂಜುಂಡಸ್ವಾಮಿ ಅವರು ಬೆಂಬಲ ಸೂಚಿಸಿದ್ದರು. ''ಮಾನ್ಸಾಂಟೋ ಹಾಗೂ ಕಾರ್ಗಿಲ್ ವಿದೇಶಿ ಬೀಜ ಕಂಪೆನಿಗಳು ವಿಶ್ವದಾದ್ಯಂತ ಚರ್ಚೆಗೆ ಒಳಪಟ್ಟಿದ್ದ ಬಿ.ಟಿ. ಹತ್ತಿ ಬೀಜಗಳಿಗೆ ಸಂಬಂಧಪಟ್ಟಿದ್ದು.''[೨೩] ಬಿ.ಟಿ ತಂತ್ರಜ್ಞಾನದಿಂದ ತಯಾರಿಸಲಾಗಿದ್ದ ಹತ್ತಿ ಬೀಜಗಳ ವಿರುದ್ಧ ನೇರ ಕ್ರಮವನ್ನು ಕೈಗೊಂಡಿದ್ದರು.

ಬ್ಯಾಸಿಲಸ್ ತುರಂಗಿಯೆನ್ಸಿಸ್ (ಬಿ.ಟಿ.) ಬ್ಯಾಕ್ಟೀರಿಯಾದಿಂದ ತಯಾರಿಸಲಾಗುವ ಬಿ.ಟಿ.ಹತ್ತಿ, ಬಿ.ಟಿ.ಧಾನ್ಯಗಳ ತಳಿ ಸಂಶೋಧನೆ ವಾಮಾಚಾರ. ''ಬೇರೆ ಬೇರೆ ತಳಿಗಳ ನಡುವೆ ಅಡ್ಡ ಅಡ್ಡವಾಗಿ ಪ್ರಾಣಿಗಳ ಜೀನ್ಸ್ ಅನ್ನು ವರ್ಗಾವಣೆ ಮಾಡುವುದು. ಇದರಿಂದ ನಿಸರ್ಗ ಹಾಗೂ ಮನುಷ್ಯನ ಮೇಲೆ ಬೀರುವ ಪರಿಣಾಮಗಳನ್ನು 'ಫ್ರಾಂಕೆನ್ ಸ್ಟೈನ್' ಗ್ರಂಥದಲ್ಲಿ ವಿವರಣೆಯನ್ನು ನೋಡಬಹುದು. ಹೀಗೆ ಅಡ್ಡ ಅಡ್ಡವಾಗಿ ನಡೆಯುವ ಪ್ರಯೋಗಗಳಿಂದ ಮನುಷ್ಯ ಹೇಗೆ ರಾಕ್ಷಸನಾಗುತ್ತಾನೆ ಎನ್ನುವುದನ್ನು ತಿಳಿಯಬಹುದು. ಬಹುರಾಷ್ಟ್ರೀಯ ಕಂಪೆನಿಗಳ ಬಿ.ಟಿ. ಸಂಶೋಧನೆಯಿಂದ ಬೆಳೆಯುವ ಆಹಾರವನ್ನು 'ಫ್ರಾಂಕೆನ್ ಫುಡ್' ಎನ್ನುತ್ತಾರೆ.''[೨೪] ಅಂದರೆ ದೈತ್ಯ ಆಹಾರ ಎಂದು. ಈ ವಂಶವಾಹಿ ವಿಕೃತ ಬೆಳೆಗಳಿಂದ ಕೃಷಿ ಕ್ಷೇತ್ರದಲ್ಲಿ ಹಾಗೂ ಜೈವಿಕ ಸಂಪತ್ತಿನ ಮೇಲೆ ಉಂಟು ಮಾಡುವ ಅಪಾಯಗಳ ವಿರುದ್ಧ ರೈತರನ್ನು ಜಾಗೃತಗೊಳಿಸಲು ನಂಜುಂಡಸ್ವಾಮಿ ಅವರು ಪ್ರಯತ್ನಿಸಿದರು. ಬಿ.ಟಿ. ಹತ್ತಿ ಗಿಡ ತನ್ನಲ್ಲೇ ಕೀಟನಾಶಕ ವಿಷವನ್ನು ಉತ್ಪಾದಿಸುವುದರಿಂದ ಕೀಟಗಳನ್ನು ನಾಶಮಾಡುವ ಖರ್ಚು ಇರುವುದಿಲ್ಲ ಎಂದು ಕಂಪೆನಿಗಳಿಂದ ಪ್ರಚಾರ ಮಾಡಲಾಗಿತ್ತು. ಆದರೆ ಈ ಗಿಡಗಳಿಗೆ ಬೇರೆ ಬೇರೆ ರೋಗಗಳು ಕಾಣಿಸಿಕೊಂಡು ಸಂಪೂರ್ಣ ಬೆಳೆಯೇ ನಾಶವಾಗುವ ಹಂತ ತಲುಪಿತು. ಅಲ್ಲದೆ ಈ ಗಿಡಗಳಲ್ಲಿ ಉತ್ಪಾದನೆಯಾಗುವ ವಿಷದಿಂದಾಗಿ ಭೂಮಿಗೆ ಉದುರುವ ಎಲೆ, ಕಾಂಡ ಹಾಗೂ ಬೇರಿನಿಂದ ಭೂಮಿಯ ಫಲವತ್ತತೆಗೆ ಅವಶ್ಯಕವಾದ ಸೂಕ್ಷ್ಮಾಣುಗಳನ್ನು ಕೊಲ್ಲುವ ಗುಣ ಹೊಂದಿವೆ.

ಬಿ.ಟಿ. ತಳಿಗಳಿಂದಾಗಿ ಉತ್ಪತ್ತಿಯಾಗುವ ಪರಾಗರೇಣೆ ಸುಮಾರು ಎರಡು ಕಿಲೋ ಮೀಟರ್‌ವರೆಗೂ ಗಾಳಿಯಲ್ಲಿ ಪ್ರಯಾಣ ಮಾಡುವುದರಿಂದ ದೇಶೀಯ ತಳಿಗಳಿಗೂ ಪರಾಗ ಮಾಲಿನ್ಯ ಉಂಟಾಗಿ ಅವುಗಳಿಗೂ ತಳಿಯ ಎಲ್ಲ ಗುಣಗಳೂ ವರ್ಗಾವಣೆಯಾಗಿ ಕ್ರಮೇಣ ಎಲ್ಲ ದೇಶೀಯ ತಳಿಗಳೂ ನಾಶವಾಗುತ್ತವೆ. ಜೈವಿಕ

ವೈವಿಧ್ಯತೆಯಂಥ ಅಮೂಲ್ಯ ಸಂಪತ್ತು ಶಾಶ್ವತವಾಗಿ ನಾಶವಾಗುವುದರ ಬಗೆಗೆ ನಂಜುಂಡಸ್ವಾಮಿ ಅವರು ಎಚ್ಚರಿಸಿದ್ದಾರೆ. ಬಿ.ಟಿ. ಹತ್ತಿಯಿಂದ ಅಧಿಕ ಲಾಭ. ಖರ್ಚು ಕಡಿಮೆ, ಔಷಧಿ ಸಿಂಪಡಣೆ ಕಡಿಮೆ ಎನ್ನುವ ಭ್ರಮೆಯಿಂದಾಗಿ ಪರಿಸರವನ್ನು ಹಾಳು ಮಾಡುತ್ತಿದೆ. ಜೊತೆಗೆ ಮಾನವನ ಆರೋಗ್ಯವೂ ಹಾಳಾಗಿ ಹಲವಾರು ಕಾಯಿಲೆಗಳಿಗೆ ಆಹ್ವಾನ ನೀಡುವ ತಳಿಗಳ ವಿರುದ್ಧ ಹೋರಾಟ ಮಾಡಿರುವುದು ಗಮನಾರ್ಹವಾಗಿದೆ. ಆದರೂ ಕೆಲವು ಕೃಷಿಕರು ಬಿ.ಟಿ.ಹತ್ತಿ ಬೆಳೆಗಳನ್ನು ಬೆಳೆದು ಅದನ್ನ ಉಳಿಸಿಕೊಳ್ಳಲು ಹೋರಾಡಿರುವುದೂ ಕೂಡ ಕಂಡುಬರುತ್ತದೆ. ಕೆಲವೊಂದು ಕಂಪೆನಿಗಳು ನೀಡುವ ಹಣದ ಆಸೆಗೆ ಬಲಿಯಾಗಿ ಕಂಪೆನಿಗಳ ಪರವಾಗಿಯೂ ಮಾತನಾಡಿದ್ದಾರೆ. ಎಷ್ಟೇ ಹೋರಾಟವನ್ನು ಮಾಡಿದ್ದರೂ ಬಿ.ಟಿ.ತಂತ್ರಜ್ಞಾನದ ಅಭಿವೃದ್ಧಿಗೆ ವಿಜ್ಞಾನಿಗಳು, ಸರ್ಕಾರ ಎಲ್ಲೂ ಪ್ರಯತ್ನಿಸುತ್ತಿದ್ದಾರೆ.

''ಏಕರೂಪದ ಬೆಳೆ ಪದ್ಧತಿಯಿಂದಾಗಿ ಬೆಳೆಗಳು ರೋಗ ಹಾಗೂ ಕೀಟಗಳ ಹಾವಳಿಗೆ ತುತ್ತಾಗುತ್ತವೆ. ಆದ್ದರಿಂದ ಪ್ರಾಚೀನ ಕಾಲದಿಂದ ಅಸ್ತಿತ್ವದಲ್ಲಿರುವ ವೈಜ್ಞಾನಿಕ ಪದ್ಧತಿಯನ್ನು ಅಳವಡಿಸಿಕೊಳ್ಳಬೇಕೆಂಬುದು ನಂಜುಂಡಸ್ವಾಮಿ ಅವರ ಆಶಯ. ಇಂದಿಗೂ ಸಹ ರಾಗಿಯ ಮಧ್ಯೆ ಹಕ್ಕಡಿಯ ಸಾಲುಗಳನ್ನು ಹಾಕುವ ಪದ್ಧತಿಯನ್ನು ಕೆಲವರೂ ರೂಢಿಸಿಕೊಂಡು ಬಂದಿದ್ದಾರೆ. ರಾಗಿ ಮಧ್ಯೆ ಮಿಶ್ರ ಬೆಳೆಯಾಗಿ ಅವರೆ, ಜೋಳ, ಅಲಸಂದಿ, ಸಾಸಿವೆ, ಉದ್ದು, ಹೆಸರು, ಹರಳು, ಹುಚ್ಚೆಳ್ಳುಗಳನ್ನು ಸಾಲುಗಳಲ್ಲಿ ಹಾಕುತ್ತಿದ್ದರು. ಇದರಿಂದಾಗಿ ಒಂದು ಕುಟುಂಬಕ್ಕೆ ಬೇಕಾಗುವ ಎಲ್ಲ ಬಗೆಯ ಧಾನ್ಯಗಳೂ ದೊರೆಯುತ್ತವೆ ಹಾಗೂ ಕೀಟಗಳ ನಿಯಂತ್ರಣವೂ ತನಗೆ ತಾನೇ ಆಗುತ್ತದೆ. ಹಾಗೆಯೇ ಎಲೆಕೋಸು, ಟೊಮೇಟೋದಂಥ ತರಕಾರಿ ಬೆಳೆಗಳನ್ನು ಮುಖ್ಯ ಬೆಳೆಯಾಗಿ ಬೆಳೆಯುವಾಗ ಅದರ ಸುತ್ತಲೂ ಸಾಸಿವೆ, ಚೆಂಡು ಹೂವಿನಂಥ ಸಸಿಗಳನ್ನು ಒಂದೊಂದು ಸಾಲು ನೆಡುತ್ತಾರೆ. ಇದರಿಂದ ಮುಖ್ಯ ಬೆಳೆಗೆ ಬರುವ ಹುಳುಗಳು ಈ ಗಿಡಗಳಿಗೆ ಹೆಚ್ಚು ಆಕರ್ಷಿತವಾಗುತ್ತವೆ. ಆಗ ಈ ಗಿಡಗಳಲ್ಲಿನ ಹುಳುಗಳನ್ನು ಕೈಯಿಂದ ಹಿಡಿದು ಇಲ್ಲವೆ ಇತರ ವಿಧಾನಗಳಿಂದ ಕೊಲ್ಲುತ್ತಾರೆ. ಇದೊಂದು 'ಸುಸ್ಥಿರ ಕೃಷಿ ಪದ್ಧತಿ.''[೨೫] ಈ ಪದ್ಧತಿಯನ್ನು ರೈತರು ಅಳವಡಿಸಿಕೊಳ್ಳುವುದರಿಂದ ಕೀಟನಾಶಕಗಳನ್ನು ಬಳಸುವುದನ್ನು ತಡೆಯುವಲ್ಲಿ ಇದೊಂದು ಮಹತ್ವದ ಹೆಜ್ಜೆ ಎಂಬುದು ನಂಜುಂಡಸ್ವಾಮಿ ಅವರ ಚಿಂತನಾ ಕ್ರಮವಾಗಿದೆ.

''ಸಾಲ ಬೇಕಿಲ್ಲದ ಕೃಷಿಯ ಬಗೆಗೆ ಗಮನಹರಿಸುವಂತಾಗಬೇಕು. ರೈತರೇ ತಯಾರುಮಾಡಿಕೊಳ್ಳಬಲ್ಲ ಬೀಜ, ಗೊಬ್ಬರದಿಂದ ಜೈವಿಕ ಸಾವಯವ ಕೃಷಿಯನ್ನು ಅವಲಂಬಿಸಬೇಕು. ದೇಶೀಯ ಬೀಜಗಳ ಸಂಗ್ರಹಣೆಗಾಗಿ ಗ್ರಾಮಮಟ್ಟದಿಂದ ರಾಜ್ಯಮಟ್ಟದವರೆಗೂ ಬೀಜದ ಬ್ಯಾಂಕುಗಳನ್ನು ಸ್ಥಾಪಿಸಬೇಕು.''[೨೬] ಈ ಬೀಜಗಳ ವೃದ್ಧಿ ಹಾಗೂ ವ್ಯಾಪಾಕ ಹಂಚಿಕೆಯ ಬಗೆಗೆ ರೈತರಿಗೆ ಮನವರಿಕೆ ಮಾಡಿಸುವ ಕಾರ್ಯಕ್ರಮಗಳನ್ನು ರೂಪಿಸುವ ಆಶಯವನ್ನು ನಂಜುಂಡಸ್ವಾಮಿ ಅವರು ಹೊಂದಿದ್ದರು. ಅಲ್ಲದೇ 'ಕುಟುಂಬ ಆಹಾರ ಭದ್ರತೆ' ಕಾಪಾಡಿಕೊಳ್ಳುವ ಒಕ್ಕಲುತನದಿಂದಾಗಿ ಇಡೀ ಭೂಮಿಯಲ್ಲಿ ಆಹಾರದ ಬೆಳೆಯಲ್ಲದ ವಾಣಿಜ್ಯ ಬೆಳೆ

(ರೊಕ್ಕದ ಬೆಳೆ) ಬೆಳೆಯುವುದರಿಂದ ಕುಟುಂಬಕ್ಕೆ ಹಾಗೂ ದೇಶಕ್ಕೆ ಆಗುವ ಅಪಾಯಗಳ ಬಗ್ಗೆ ಮನವರಿಕೆ ಮಾಡಿಕೊಟ್ಟಿದ್ದಾರೆ. ಇದರ ಜೊತೆಗೆ ಕುಟುಂಬಕ್ಕೆ ಬೇಕಾಗುವಷ್ಟು ಆಹಾರವನ್ನು ಕಡ್ಡಾಯವಾಗಿ ಬೆಳೆಯುವ ಕಾರ್ಯಕ್ರಮಕ್ಕೆ ಒತ್ತು ಕೊಟ್ಟು ಪ್ರಚಾರವನ್ನು ಮಾಡಬೇಕಾಗಿರುವುದು ಸರ್ಕಾರದ ಕೆಲಸ ಎಂಬ ಅಂಶಗಳು ನಂಜುಂಡಸ್ವಾಮಿ ಅವರ ಚಿಂತನೆಗಳಲ್ಲಿ ಗಮನಿಸಬಹುದು.

ಅಭಿವೃದ್ಧಿ ಹೊಂದಿದ ದೇಶಗಳಿಗೆ ಅನುಕೂಲವಾಗುವಂತೆ ಸರ್ಕಾರ ಕೃಷಿ ನೀತಿಯಲ್ಲಿ ಹಲವಾರು ಬದಲಾವಣೆಗಳನ್ನು ಮಾಡುತ್ತಿದೆ. ''ವಿದೇಶೀಯರಿಗೆ ಬೇಕಾದ ಆಹಾರ ಹಾಗೂ ಅವರು ಸಾಕಿರುವ ದನ, ಹಂದಿಗಳಿಗೆ ಬೇಕಾಗುವ ಆಹಾರದ ಬೆಳೆ ಬೆಳೆಯಲು ಸರ್ಕಾರ ಬೆಂಬಲ ಕೊಡುತ್ತಿದೆ. ಕೋಳಿ ಸಾಕಣೆ, ಹೈನುಗಾರಿಕೆ, ಮೀನು ಹಾಗೂ ಸೀಗಡಿ ಬೇಸಾಯಕ್ಕೆ ಕೃಷಿಯ ಸ್ಥಾನ ನೀಡಲಾಗಿದೆ.''[೨೭] ಹೂವುಗಳನ್ನು ಬೆಳೆಯುವ ಪುಷ್ಪ ಕೃಷಿಗೂ ಬೆಂಬಲ ಕೊಡುತ್ತಿದೆ. ಈ ಎಲ್ಲ ನೀತಿಗಳಿಂದಾಗಿ ಆಹಾರ ಬೆಳೆಯುವ ಪ್ರದೇಶ ಕಡಿಮೆಯಾಗಿ ಆಹಾರವನ್ನು ಬೇರೆ ದೇಶಗಳಿಂದ ಖರೀದಿಸಿ ತಿನ್ನುವ ಪರಿಸ್ಥಿತಿ ಒದಗಬಹುದು ಎಂದು ಭವಿಷ್ಯತ್ತಿನ ಬಗೆಗೆ ನಂಜುಂಡಸ್ವಾಮಿ ಅವರು ಚಿಂತಿಸಿರುವುದನ್ನು ನೋಡಬಹುದು.

ಅಮೇರಿಕ ಹಾಗೂ ಯುರೋಪು ಒಕ್ಕೂಟದ ದೇಶಗಳ ಹುನ್ನಾರಗಳಿಂದ ವಿಚಲಿತವಾಗುತ್ತಿರುವ ವಿಶ್ವ ಮಾರುಕಟ್ಟೆ ಬೆಲೆಗಳಿಂದಾಗಿ, ಎಲ್ಲ ಬೆಳೆಗಳ ಬೆಲೆಗಳು ದೇಶೀಯ ಮಾರುಕಟ್ಟೆಯಲ್ಲೂ ಕುಸಿಯುತ್ತಿವೆ. ಆದ್ದರಿಂದ ನಂಜುಂಡಸ್ವಾಮಿ ಅವರು ರೊಕ್ಕವಿಲ್ಲದ ಕೃಷಿ ಮಾರುಕಟ್ಟೆ ಸೃಷ್ಟಿ ಮಾಡಬೇಕೆಂಬುದು ಇವರ ಆಶಯ. ರೈತರು ಬೆಳೆಯುವ ಎಲ್ಲ ಬೇಳೆಗಳಿಗೂ ನ್ಯಾಯವಾದ ಬೆಲೆ ಇದ್ದೇ ಇದೆ. ಆದರೆ ಬೇರೆಲ್ಲ ಮಧ್ಯವರ್ತಿಗಳು ಸೇರಿ ವಂಚಿಸುತ್ತಿದ್ದಾರೆ. ಇದನ್ನು ಗಮನಿಸಿದ ನಂಜುಂಡಸ್ವಾಮಿ ಅವರು ಕೃಷಿ ಉತ್ಪನ್ನಗಳಿಗೆ ನಮ್ದು ಎಂಬ ಬ್ರಾಂಡಿನಡಿ ಮಾರಾಟ ಮಾಡಲು ಸಲಹೆ ನೀಡಿದರು. ಆದರೆ ಈ ಕಾರ್ಯಕ್ರಮ ಯಶಸ್ವಿಗೊಳ್ಳಲಿಲ್ಲ. ಕಾರಣವೆಂದರೆ ರೈತರು ತಯಾರಿಸಿದ ಕೃಷಿ ಉತ್ಪನ್ನಗಳನ್ನು ಅನುಭೋಗಿಗಳು ಕೊಂಡುಕೊಳ್ಳುವಲ್ಲಿ ಅಸಮಧಾನ ತೋರಿದರು. ದಲ್ಲಾಳಿಗಳಿಲ್ಲದೆ ಸರಕುಗಳನ್ನು ರೈತರು ಅನುಭೋಗಿಗಳಿಗೆ ತಲುಪಿಸುವ ಕ್ರಮವನ್ನು ಕೈಗೊಂಡರೂ ಜನರು ಇವುಗಳನ್ನು ಕೊಳ್ಳುವಲ್ಲಿ ಹಿಂದೆ ಸರಿದರು. ಭಾರತದಲ್ಲಿ ಸಣ್ಣ ರೈತರೇ ಬಹುಸಂಖ್ಯಾತ ಮುಕ್ಕಾಲು ಭಾಗ ಇರುವುದರಿಂದ ಇವರೇ ಅತ್ಯಂತ ಹೆಚ್ಚಿನ ಪ್ರಮಾಣದ ಆಹಾರ ಉತ್ಪಾದಕರು. ಇದರಿಂದ ಸರ್ಕಾರಕ್ಕೆ ಅಧಿಕ ಆದಾಯ ಇರುವುದು. ಈ ಕಾರಣ ಸರ್ಕಾರವನ್ನು ಮಣಿಸುವುದು ಹಾಗೂ ಸಣ್ಣ ರೈತರ ಬೆಳೆಗಳಿಗೆ ನ್ಯಾಯವಾದ 'ಬೆಲೆ' ದೊರಕಿಸುವುದು ಎರಡೂ ಕೆಲಸವನ್ನು ''ರೊಕ್ಕವಿಲ್ಲದ ಕೃಷಿ ಮಾರುಕಟ್ಟೆ'' ಸೃಷ್ಟಿಸುವ ಮೂಲಕ ಮಾಡಬೇಕು. ರೈತರು ಬೆಳೆಯುವ ಎಲ್ಲ ಬೆಳೆಗಳಿಗೆ ರೈತ ಚಳುವಳಿಯೇ ಪ್ರಾಮಾಣಿಕವಾಗಿ ವೈಜ್ಞಾನಿಕ ಬೆಲೆಗಳನ್ನು ನಿಗದಿಪಡಿಸಿ, ಈ ಬೆಲೆಗಳ ಪ್ರಮಾಣಕ್ಕನುಗುಣವಾಗಿ ರೈತರು ಪರಸ್ಪರ ದಾಸ್ತಾನುಗಳನ್ನು ವಿನಿಮಯ ಮಾಡಿಕೊಳ್ಳುವ ಸಂತೆ ನಿರ್ಮಾಣದ ಮೂಲಕ ರೊಕ್ಕದ ಬೆಲೆಯಿಂದ ತಪ್ಪಿಸಬಹುದು.

ನಂಜುಂಡಸ್ವಾಮಿ ಅವರ ಚಿಂತನೆಗಳಲ್ಲಿ ಗರಿಷ್ಟ ಮಟ್ಟದಲ್ಲಿ ದೇಶೀಯ ಕೃಷಿ, ಮಾರುಕಟ್ಟೆ, ಬೀಜಗಳಿಗೆ ಸಂಬಂಧಿಸಿದ್ದಾಗಿವೆ. ಕೃಷಿಗೆ ಸಂಬಂಧಿಸಿದ ಚಿಂತನೆಗಳನ್ನು ಅನುಷ್ಠಾನಕ್ಕೆ ತರುವಲ್ಲಿ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳದೇ ಇದ್ದರೆ, ಅದಕ್ಕೆ ಪ್ರತಿಯಾಗಿ ರೈತರು ಸಂಘಟಿತರಾಗಿ ಕೇವಲ ಒಂದು ವರ್ಷ ಈ ಕಾಯಕ್ರಮಗಳನ್ನು ಹಾಕಿಕೊಳ್ಳಬೇಕು. ಈ ಕಾರ್ಯಕ್ರಮಗಳನ್ನು ಚಳವಳಿ ರೂಪದಲ್ಲಿ ನಡೆಸಿದರೆ ಇಡೀ ದೇಶವನ್ನೇ ಹತೋಟಿಗೆ ತೆಗೆದುಕೊಳ್ಳಬಹುದು ಎನ್ನುವುದರಲ್ಲಿ ಸಂಶಯವಿಲ್ಲ ಎಂದಿದ್ದಾರೆ. ಈ ಚಳವಳಿಯನ್ನು ಹಂತಹಂತವಾಗಿ ಆದರೂ ಪ್ರಯೋಗ ಮಾಡಬೆಕಾದ ಅವಶ್ಯಕತೆ ಇದೆ. ಸರ್ಕಾರ ಮಾಡಬೇಕಾದ ಕೆಲಸ ಮಾಡದಿದ್ದಾಗ ಅದನ್ನು ರೈತರೇ ನೆರವೇರಿಸಬೇಕು ಎಂಬುದು ನಂಜುಂಡಸ್ವಾಮಿ ಅವರ ಆಶಯಗಳಲ್ಲಿ ಮಹತ್ವವಾದುದ್ದಾಗಿದೆ.

ಟಿಪ್ಪಣಿಗಳು

೧. ರಾಮದಾಸ್.ಕೆ., 'ಹಸಿರು ಟವೆಲ್ಲಿನ ಹರಿಕಾರ ಹಾದು ಹೋದ ಹಾದಿಯಲ್ಲಿ', (ವೀರಭದ್ರಪ್ಪ ಬಿಸ್ಲಳ್ಳಿ, (ಸಂ), **ಪ್ರೊಫೆಸರ್ ಎಂಡಿಎನ್**), ಪುಟ:೧೫

೨. ನಂಜುಂಡಸ್ವಾಮಿ ಅವರು ಜೂನ್ ೨೧, ೧೯೯೦ ರಂದು ವಿಧಾನಸಭೆಯಲ್ಲಿ ಮಾಡಿದ ಭಾಷಣ, (ನಂಜುಂಡಸ್ವಾಮಿ ಹಾಗೂ ಬಾಬಾಗೌಡ ಪಾಟೀಲ., **ವಿಧಾನಸಭೆಯಲ್ಲಿ ರೈತ ಸಂಘ**), ಪುಟ:೭೪

೩. **ಮೇಲಿನದೆ**, ಪುಟ:೭೭

೪. ನಂಜುಂಡಸ್ವಾಮಿ ಅವರು ಜುಲೈ ೭, ೧೯೯೦ ರಂದು ವಿಧಾನಸಭೆಯಲ್ಲಿ ಮಾಡಿದ ಭಾಷಣ, (ನಂಜುಂಡಸ್ವಾಮಿ ಹಾಗೂ ಬಾಬಾಗೌಡ ಪಾಟೀಲ., **ವಿಧಾನಸಭೆಯಲ್ಲಿ ರೈತ ಸಂಘ**), ಪುಟ-೨೭

೫. ನಂಜುಂಡಸ್ವಾಮಿ ಅವರು ಸೆಪ್ಟಂಬರ್ ೨೧, ೧೯೯೦ ರಂದು ಬರಗಾಲ ನಿರ್ಮೂಲನದ ಬಗೆಗೆ ವಿಧಾನಸಭೆಯಲ್ಲಿ ಮಾಡಿದ ಭಾಷಣ, (ನಂಜುಂಡಸ್ವಾಮಿ, **ವಿಧಾನಸಭೆಯಲ್ಲಿ ರೈತ ಸಂಘ**), ಪುಟ-೮೮

೬. **ಮೇಲಿನದೇ**, ಪುಟ:೮೯

೭. ನಂಜುಂಡಸ್ವಾಮಿ ಅವರು ಜುಲೈ ೭, ೧೯೯೦ ರಂದು ವಿಧಾನಸಭೆಯಲ್ಲಿ ಮಾಡಿದ ಭಾಷಣ, **ಮೇಲಿನದೆ**, ಪುಟ:೨೮

೮. ನಂಜುಂಡಸ್ವಾಮಿ ಅವರು ಸೆಪ್ಟಂಬರ್ ೨೧, ೧೯೯೦ ರಂದು ವಿಧಾನಸಭೆಯಲ್ಲಿ ಬರಗಾಲ ನಿರ್ಮೂಲನದ ಬಗ್ಗೆ ಮಾಡಿದ ಭಾಷಣ, **ಮೇಲಿನದೆ**, ಪುಟ:೮೩

೯. **ಮೇಲಿನದೆ**, ಪುಟ:೯೩

೧೦. ನಟರಾಜ್ ಹುಳಿಯಾರ್, (ಸಂ), **ಹಸಿರು ಸೇನಾನಿ**, ಪುಟ:೧೧೧

೧೧. ನಂಜುಂಸ್ವಾಮಿ ಅವರು ಜುಲೈ ೭, ೧೯೯೧ ರಂದು ವಿಧಾನ ಸಭೆಯಲ್ಲಿ ಮಾಡಿದ ಭಾಷಣ,

(ನಂಜುಂಡಸ್ವಾಮಿ ಹಾಗೂ ಬಾಬಾಗೌಡ ಪಾಟೀಲ., ವಿಧಾನಸಭೆಯಲ್ಲಿ ರೈತ ಸಂಘ), ಪುಟ:೨೮

೧೨. ಸದಾಶಿವ ಎ.ಜೆ., 'ಪ್ರೊಫೆಸರ್ ರೂಪಿಸಿದ ಮತದಾರ ಅಭ್ಯರ್ಥಿಯ ಕಲ್ಪನೆ', (ನಟರಾಜ್ ಹುಳಿಯಾರ್, (ಸಂ), **ಹಸಿರುಸೇನಾನಿ**), ಪುಟ:೧೨೩

೧೩. ನಂಜುಂಡಸ್ವಾಮಿ ಅವರು ಜುಲೈ ೧೪, ೧೯೯೦ ರಂದು ಮಾಡಿದ ಭಾಷಣ, (ನಂಜುಂಡಸ್ವಾಮಿ ಹಾಗೂ ಬಾಬಾಗೌಡ ಪಾಟೀಲ., **ವಿಧಾನಸಭೆಯಲ್ಲಿ ರೈತ ಸಂಘ**), ಪುಟ:೪೯

೧೪ ಮೇಲಿನದೆ, ಪುಟ:೫೦

೧೫. ಮೇಲಿನದೆ, ಪುಟ:೫೦

೧೬. ಮೇಲಿನದೆ, ಪುಟ:೫೦

೧೭. ನಟರಾಜ್ ಹುಳಿಯಾರ್, (ಸಂ), **ಹಸಿರುಸೇನಾನಿ**, ಪುಟ:೧೪೨

೧೮. ನಂಜುಂಡಸ್ವಾಮಿ ಅವರು ಸೆಪ್ಟಂಬರ್ ೨೧, ೧೯೯೦ ರಂದು ವಿಧಾನಸಭೆಯಲ್ಲಿ ಮಾಡಿದ ಭಾಷಣ, (ನಂಜುಂಡಸ್ವಾಮಿ ಹಾಗೂ ಬಾಬಾಗೌಡ ಪಾಟೀಲ., **ವಿಧಾನಸಭೆಯಲ್ಲಿ ರೈತ ಸಂಘ**), ಪುಟ:೯೪

೧೯. ನಂಜುಂಡಸ್ವಾಮಿ ಅವರು ಜುಲೈ ೧೪, ೧೯೯೦ ರಂದು ವಿಧಾನಸಭೆಯಲ್ಲಿ ಮಾಡಿದ ಭಾಷಣ

೨೦. ನಂಜುಂಡಸ್ವಾಮಿ ಅವರು ಜುಲೈ ೧೪, ೧೯೯೦ ರಂದು ವಿಧಾನಸಭೆಯಲ್ಲಿ ಮಾಡಿದ ಭಾಷಣ, **ಮೇಲಿನದೆ**, ಪುಟ:೬೧

೨೧. ನಂಜುಂಡಸ್ವಾಮಿ ಅವರು ಮಾರ್ಚ್ ೪, ೧೯೯೦ ರಂದು ವಿಧಾನಸಭೆಯಲ್ಲಿ ಮಾಡಿದ ಭಾಷಣ, **ಮೇಲಿನದೆ**, ಪುಟ:೩

೨೨. ನಂಜುಂಡಸ್ವಾಮಿ ಅವರು ಜುಲೈ ೧೪, ೧೯೯೦ ರಂದು ವಿಧಾನಸಭೆಯಲ್ಲಿ ಮಾಡಿದ ಭಾಷಣ, **ಮೇಲಿನದೆ**, ಪುಟ:೬೪

೨೩. ಮಾಧವ ಐತಾಳ್, 'ರೈತರ ಉಸಿರು ಕಟ್ಟಿಸುವ ಬೀಜ ಕಾಯಿದೆ', (ನಟರಾಜ್ ಹುಳಿಯಾರ್, (ಸಂ), **ಹಸಿರುಸೇನಾನಿ**), ಪುಟ:೨೦೯

೨೪. ನಟರಾಜ್ ನಾಗಸಂದ್ರ., 'ಬಿಟ್ಟಿ ಕೊಟ್ಟರೂ ಬೇಡ ಬಿ.ಟಿ. ಹತ್ತಿ', (ನಟರಾಜ್ ಹುಳಿಯಾರ್, (ಸಂ), **ಹಸಿರು ಸೇನಾನಿ**), ಪುಟ:೨೩೩

೨೫. ಮೇಲಿನದೆ, ಪುಟ:೨೩೨

೨೬. ನಂಜುಂಡಸ್ವಾಮಿ, **ಮತ್ತೆ ಪರ್ಯಾಯ ಸರ್ಕಾರದೆಡೆಗೆ**, ಪುಟ:೩೦

೨೭. ನಂಜುಂಡಸ್ವಾಮಿ ಎಂ.ಡಿ., 'ರೈತ ಚಳವಳಿಯ ಎರಡನೇ ಅಧ್ಯಾಯ: ಎದುರಿಸಬೇಕಾಗಿರುವ ಸಂಸ್ಥೆಗಳು', (ನಟರಾಜ್ ಹುಳಿಯಾರ್, (ಸಂ), **ಹಸಿರು ಸೇನಾನಿ**), ಪುಟ:೨೦೭

* * *

ಅಧ್ಯಾಯ ನಾಲ್ಕು

ಸಂಘಟನೆ ಹಾಗೂ ನಂಜುಂಡಸ್ವಾಮಿ

೪.೧. 'ಕರ್ನಾಟಕ ರಾಜ್ಯ ರೈತ ಸಂಘ'ದ ಹುಟ್ಟಿನ ಹಿನ್ನೆಲೆ

೪.೨. 'ಕರ್ನಾಟಕ ರಾಜ್ಯ ರೈತ ಸಂಘ'ದ ತತ್ವ-ಸಿದ್ಧಾಂತ : ನಂಜುಂಡಸ್ವಾಮಿ

೪.೩. ರಾಜಕಾರಣ ಪ್ರವೇಶ ಮತ್ತು ಒಡಕು

೪.೪. ಹೋರಾಟಗಳು ಹಾಗೂ ನಂಜುಂಡಸ್ವಾಮಿ

ಸ್ವಾತಂತ್ರ್ಯೋತ್ತರ ಕಾಲಾವಧಿಯಲ್ಲಿ ಅದರಲ್ಲೂ ೧೯೬೦ರ ನಂತರ ತುಲನಾತ್ಮಕ ಬೆಲೆಗಳ ಬಗ್ಗೆ ರೈತರ ಕಾಳಜಿ ಆಗಾಗ ವ್ಯಕ್ತವಾದದ್ದು ಕಂಡುಬರುತ್ತದೆ. ಇವು ೧೯೬೦ರ ದಶಕದ ಅಂತ್ಯದಲ್ಲಿ ತಮಿಳುನಾಡಿನ ರೈತರು 'ತಮಿಳ್ ವ್ಯವಸಾಯಗಳ್ ಸಂಘಂ' ಹಾಗೂ ಪಂಜಾಬಿನ ರೈತರು 'ಖೇತ್ ಬಾರಿ ಜಮೀನ್ದಾರಿ ಯೂನಿಯನ್'ನ ಹೆಸರಿನಲ್ಲಿ ಮಾಡಿದ ರೈತ ಹೋರಾಟಗಳಲ್ಲಿ ವ್ಯಕ್ತವಾದವು. ಇವುಗಳಿಂದ ಹಾಗೂ ಸಮಾಜವಾದಿ ಚಳವಳಿ, ಜೆ.ಪಿ. ಚಳವಳಿಗಳಿಂದ ಪ್ರೇರಣೆಗೊಂಡ ನಂಜುಂಡಸ್ವಾಮಿ ಅವರು ಮೊದಲಿಗೆ 'ದಕ್ಷಿಣ ಭಾರತದ ಸಣ್ಣ ಬೆಳೆಗಾರರ ಒಕ್ಕೂಟ'ವನ್ನು ರಚಿಸಿದರು. ಇದರ ಅಡಿಯಲ್ಲಿ ಅನೇಕರು ಕಬ್ಬು ಬೆಳೆಗಾರರ ಸಂಘಗಳು, ಸಣ್ಣ ಬೆಳೆಗಾರರ ಒಕ್ಕೂಟಗಳು ಒಂದೇ ವೇದಿಕೆಯಡಿ ಸೇರಿ 'ಕರ್ನಾಟಕ ರಾಜ್ಯ ರೈತ ಸಂಘ'ವನ್ನು ಹುಟ್ಟು ಹಾಕಿದರು. ಈ ಸಂಘವನ್ನು ೧೯೮೦ರಲ್ಲಿ ಶಿವಮೊಗ್ಗದಲ್ಲಿ ಸ್ಥಾಪಿಸಲಾಯಿತು. ಎಂಭತ್ತು ಹಾಗೂ ತೊಂಭತ್ತರ ದಶಕದಲ್ಲಿ ಕರ್ನಾಟಕ ರಾಜ್ಯ ರೈತ ಸಂಘವು ಮಹತ್ವದ ಪಾತ್ರ ಪಡೆದದ್ದು ನಂಜುಂಡಸ್ವಾಮಿ ಅವರು ನಿರ್ವಹಿಸಿದ ಕಾರ್ಯಗಳ ಹಿನ್ನೆಲೆಯಲ್ಲಿ. ಕರ್ನಾಟಕ ರಾಜ್ಯ ರೈತ ಸಂಘದ ಬಹುಪಾಲು ಹೋರಾಟಗಳು ನಂಜುಂಡಸ್ವಾಮಿ ಅವರ ನೇತೃತ್ವದ್ದೇ ಎಂದು ಹೇಳಬಹುದಾಗಿದೆ.

ಯಾವುದೇ ಹೋರಾಟಕ್ಕೆ ಒಂದು ಸೈದ್ಧಾಂತಿಕ ನೆಲೆಯ ಅವಶ್ಯಕತೆ ಮುಖ್ಯವಾಗಿದೆ. ಇಂಥ ನೆಲೆಯನ್ನು ನಂಜುಂಡಸ್ವಾಮಿ ಅವರು ಒದಗಿಸಿಕೊಟ್ಟರು. ನಂಜುಂಡಸ್ವಾಮಿ ಅವರು ಕರ್ನಾಟಕ ರಾಜ್ಯ ರೈತ ಸಂಘಕ್ಕೆ ಬೌದ್ಧಿಕ ಆಯಾಮವನ್ನು ನೀಡುವುದರ ಮುಖೇನ ಕರ್ನಾಟಕದ ಉದ್ದಗಲಕ್ಕೂ ಹಾಗೂ ಹಳ್ಳಿ-ಹಳ್ಳಿಗಳಲ್ಲೂ ಶಾಖೆಗಳನ್ನು ತೆರೆದು ರೈತರಲ್ಲಿ ಹೋರಾಟದ ಕೆಚ್ಚನ್ನು ಮೂಡಿಸಿದರು. ಎಂಭತ್ತರ ದಶಕದವರೆಗೂ ರೈತರ ಹೋರಾಟಗಳು ಭೂಮಿಗೆ ಸಂಬಂಧಿಸಿದ ಪ್ರಶ್ನೆಗಳಾಗಿದ್ದರೆ, ಆನಂತರದ ದಶಕಗಳಲ್ಲಿ ಭೂಮಿಯಲ್ಲಿ ಬೆಳೆದ ಬೆಳೆಗಳ ವೈಜ್ಞಾನಿಕ ಬೆಲೆಗೆ ಸಂಬಂಧಿಸಿದ್ದವು. ಇವುಗಳೇ ಅಲ್ಲದೆ ಕೃಷಿ ಹಾಗೂ ಕೈಗಾರಿಕಾ ನಡುವಿನ ಅಂತರವನ್ನು ಕಡಿಮೆ ಮಾಡುವುದು, ರೈತರಿಗೆ ರಾಜಕೀಯದಲ್ಲಿ ಸಾಕಷ್ಟು ಪ್ರತಿನಿಧಿತ್ವ ನೀಡುವುದು, ಕೃಷಿ ಉತ್ಪನ್ನಗಳಿಗೆ ಸಬ್ಸಿಡಿ, ಬೆಂಬಲ ಬೆಲೆಗಳು, ಆದಾಯದಲ್ಲಿ ತಾರತಮ್ಯದ ನಿವಾರಣೆ, ಗ್ರಾಮೀಣ ಪ್ರದೇಶಗಳಿಗೆ

ಹೆಚ್ಚಿನ ಪ್ರಾಶಸ್ತ್ಯ, ನೀರಿನ ಕರದಲ್ಲಿ ಕಡಿತ, ವಿದ್ಯುಚ್ಛಕ್ತಿ ಬೆಲೆಯಲ್ಲಿ ಕಡಿತ, ಭೂ ಕಂದಾಯದಲ್ಲಿ ಕಡಿತ, ಸಾಲ ಮನ್ನಾ ಇತ್ಯಾದಿ ರೈತರ ಬೇಡಿಕೆಗಳಿಗೆ ಹೊಸ ಆಯಾಮ ದೊರೆತದ್ದು ೧೯೮೦ರ ದಶಕದಲ್ಲಿ. ರೈತರಿಂದ ಆರಂಭವಾದ ರಾಜಕಾರಣ ರಹಿತ ಕರ್ನಾಟಕ ರಾಜ್ಯ ರೈತ ಸಂಘವು ರೈತರ ಹಕ್ಕುಗಳ ಹಾಗೂ ಸಮಸ್ಯೆಗಳಿಗೆ ಸ್ಪಂದಿಸಿ ರೈತರಲ್ಲಿ ಸ್ವಾಭಿಮಾನ, ಆತ್ಮಗೌರವ ಮೂಡುವಂಥ ಧೋರಣೆಗಳಿಗೆ ಚಾಲನೆ ನೀಡುವಂತೆ ನಂಜುಂಡಸ್ವಾಮಿ ಅವರು ಶ್ರಮಿಸಿದ್ದು ಗಮನಾರ್ಹ.

೪.೧. "ಕರ್ನಾಟಕ ರಾಜ್ಯ ರೈತ ಸಂಘ"ದ ಹುಟ್ಟಿನ ಹಿನ್ನೆಲೆ

ಭಾರತ ಕೃಷಿ ಪ್ರಧಾನವಾದ ದೇಶ. ಈ ದೇಶದ ಬೆನ್ನೆಲುಬು ರೈತ. ಆದರೆ ನಮ್ಮಲ್ಲಿ ಮೊದಲಿನಿಂದಲೂ ವಂಶ ಪಾರಂಪರ್ಯವಾದ ಆಡಳಿತವಾಗಿದ್ದರಿಂದ ಅದಕ್ಕೆ ತಕ್ಕಂತೆ ಜಮೀನ್ದಾರಿ ಪದ್ಧತಿ ಬೇರೂರಿಕೊಂಡು ಬಂದಿತ್ತು. ಹೊಲದಲ್ಲಿ ನಿಜವಾಗಿ ದುಡಿಯುವ ರೈತನಿಗೆ ಎಷ್ಟು ಮಹತ್ವ ಸಿಗಬೇಕೋ ಅಷ್ಟು ಸಿಗಲಿಲ್ಲ. ಸಣ್ಣ ಹಿಡುವಳಿದಾರರು, ಕೃಷಿ ಕಾರ್ಮಿಕರು, ಕೂಲಿಕಾರರು ಈ ರೈತರ ವ್ಯಾಪ್ತಿಯಲ್ಲಿ ಬರುತ್ತಾರೆ. ಭಾರತೀಯ ಸಮಾಜದಲ್ಲಿ ಅಸಂಘಟಿತರಾಗಿದ್ದ ರೈತರಲ್ಲಿ ಆತ್ಮಾಭಿಮಾನ ಹುಟ್ಟಿಸಿ ಅನ್ಯಾಯದ ವಿರುದ್ಧ ಹೋರಾಡುವಂತೆ ಪ್ರೇರೇಪಿಸಿ ಎಚ್ಚರಗಳನ್ನು ನೀಡಲೆಂದೇ ಹುಟ್ಟಿದ ಸಂಘಟನೆ 'ಕರ್ನಾಟಕ ರಾಜ್ಯ ರೈತ ಸಂಘ'ವಾಗಿದೆ.

ಕರ್ನಾಟಕದಲ್ಲಿ ರೈತ ಆಂದೋಲನದ ಮೂಲ ನೆಲೆ ಶಿವಮೊಗ್ಗ ಜಿಲ್ಲೆ ಎಂದರೆ ಅತಿಶಯೋಕ್ತಿಯಾಗಲಾರದು. ಆದರೆ ಇಂದು ರೈತ ಚಳವಳಿಯು ಕೇವಲ ಶಿವಮೊಗ್ಗಕ್ಕೆ ಅಷ್ಟೇ ಸೀಮಿತವಾಗಿಲ್ಲ; ಇಡೀ ಕರ್ನಾಟಕದಲ್ಲೇ ಬಹಳ ಸಂಘಟಿತವಾದ ಬೃಹತ್ ಹೋರಾಟವಾಗಿದೆ.

೧೯೭೦ರ ದಶಕದಲ್ಲಿ ಶಿವಮೊಗ್ಗ ಜಿಲ್ಲೆಯ 'ಕಬ್ಬು ಬೆಳೆಗಾರರ ಸಂಘ'ವನ್ನು ಮಾಜಿ ವಿಧಾನಸಭಾ ಸಭಾಪತಿ, ಮಾಜಿ ಸಚಿವ ಹಾಗೂ ಹಿರಿಯ ಗಾಂಧೀವಾದಿ ಹೆಚ್.ಎಸ್. ರುದ್ರಪ್ಪ ಅವರು ಹಾಗೂ ಎನ್.ಡಿ. ಸುಂದರೇಶ್ ಜೊತೆಗೂಡಿ ಹುಟ್ಟು ಹಾಕಿದರು. ಇದು ಅಸಮರ್ಪಕ ಬೆಲೆ, ಸಾಲ ಬಾಕಿ, ಕಡಿಮೆ ಬೆಲೆ ಇತ್ಯಾದಿ ವಿಷಯಗಳನ್ನು ವಿರೋಧಿಸುವಷ್ಟು ಪ್ರಬಲವಾಗಿತ್ತು[೧] ಎಂದು ಅಸ್ಸಾದಿ ಅವರು ಉಲ್ಲೇಖಿಸಿದ್ದಾರೆ. ಆದರೆ ಈ ಸಂಘಟನೆಯ ದೌರ್ಬಲ್ಯವೆಂದರೆ ಹೋರಾಟದ ನೀತಿ ಹಾಗೂ ಕಾರ್ಯ ಮೂಲತಃ ತುಂಗಭದ್ರಾ ಯೋಜನೆ ಅಥವಾ ಸಕ್ಕರೆ ಕಾರ್ಖಾನೆಗಳಿಗೆ ಮಾತ್ರ ಸೀಮಿತವಾಗಿದ್ದರಿಂದ 'ಕಾರ್ಮಿಕ ಹೋರಾಟ'ದಂತೆ ಕಂಡುಬಂದದ್ದು ವಿಪರ್ಯಾಸದ ಸಂಗತಿ. ಈ ಸಂಘಟನೆ ಭವಿಷ್ಯತ್ತಿನ 'ಕರ್ನಾಟಕ ರಾಜ್ಯ ರೈತ ಸಂಘ'ದ ರೂವಾರಿಯಾದದ್ದೂ ಕೂಡ ಒಂದು ಸೋಜಿಗ.

ಇದೇ ಅವಧಿಯಲ್ಲಿ ಬಳ್ಳಾರಿ ಜಿಲ್ಲೆಯ ಕಬ್ಬು ಬೆಳೆಗಾರರು ಶಿವಮೊಗ್ಗ ರೈತರಿಗೆ ಸಮನಾದ ಬೇಡಿಕೆಗಳನ್ನು ಮುಂದಿಟ್ಟರು. ಈ ಸಂಘದ ಬೇಡಿಕೆಗಳು ಕೃಷಿ ಸಾಲ ರದ್ದು ಪಡಿಸುವುದು, ಕೃಷಿಯನ್ನು ಕೈಗಾರಿಕೆಯೆಂದು ಘೋಷಿಸುವುದು, ಗೃಹ ಕೈಗಾರಿಕೆಗಳ ಸ್ಥಾಪನೆ, ಕೃಷಿ ಉತ್ಪಾದನೆಗಳಿಗೆ ತುಲನಾತ್ಮಕ ಬೆಲೆ, ಬಡ್ಡಿಯ ದರವನ್ನು

ಕಡಿಮೆ ಮಾಡುವುದು, ಕೃಷಿ ಯಂತ್ರೋಪಕರಣಗಳಿಗೆ ಕರದಿಂದ ವಿನಾಯಿತಿ, ಭೂನ್ಯಾಯ ಮಂಡಳಿಗಳ ವಿಸರ್ಜನೆ, ಕೃಷಿ ಭೂ ಮಿತಿ ಹೆಚ್ಚಳ, ವಿದ್ಯುತ್ ದರದಲ್ಲಿ ಕಡಿತ, ಕಡಿಮೆ ಬಡ್ಡಿಯಲ್ಲಿ ಸಾಲ ಮಂಜೂರು ಇತ್ಯಾದಿ ಬೇಡಿಕೆಗಳಿದ್ದವು. ಬಳ್ಳಾರಿ ರೈತ ವರ್ಗವು ತಮ್ಮ ಬಹುಮುಖ ಕಾರ್ಯಸೂಚಿಯಲ್ಲಿ ಕೃಷಿ ಕಾರ್ಮಿಕರ ಸಮಗ್ರ ಬೇಡಿಕೆಯನ್ನು ಮುಂದಿಡಲು ಸಫಲವಾಗಲಿಲ್ಲ. ಇವರ ಬೇಡಿಕೆಗಳು ಬಲಾಢ್ಯ ಅಥವಾ ಶ್ರೀಮಂತ ರೈತ ಪ್ರಜ್ಞೆಯನ್ನು ವ್ಯಕ್ತಪಡಿಸಿದ್ದರಿಂದ, ಹೋರಾಟಗಳಿಗೆ ಪ್ರಾದೇಶಿಕ ಹಾಗೂ ವರ್ಗೀಯ ಸೀಮಿತತೆ ಇದ್ದ ಕಾರಣದಿಂದ ಇದು ಸಂಘಟನೆಯಾಗಿ ಬೆಳೆಯಲೇ ಇಲ್ಲ.

೧೯೭೨ರಲ್ಲಿ ನಂಜುಂಡಸ್ವಾಮಿ ಹಾಗೂ ಪೂರ್ಣಚಂದ್ರ ತೇಜಸ್ವಿ ಅವರು ಜೊತೆಗೂಡಿ 'ದಕ್ಷಿಣ ಭಾರತ ಸಣ್ಣ ಬೆಳೆಗಾರರ ಒಕ್ಕೂಟ'ವನ್ನು ಚಿಕ್ಕಮಗಳೂರಿನ ಮೂಡಿಗೆರೆಯಲ್ಲಿ ಹುಟ್ಟು ಹಾಕಿ ಅದರ ಸಂಘಟನೆಯಲ್ಲಿ ತೊಡಗಿದರು. ಈ ಸಂಘಟನೆಯಲ್ಲಿದ್ದ ಹೆಚ್ಚಿನವರೆಲ್ಲ 'ಸಮಾಜವಾದಿ ಯುವ ಜನ ಸಭಾ'ದ ಸದಸ್ಯರು. ನಂಜುಂಡಸ್ವಾಮಿ ಅವರು ಒಕ್ಕೂಟದ ಅಧ್ಯಕ್ಷರಾದರು. ತೇಜಸ್ವಿ ಅವರು ಸಂಘದ ಸಂಚಾಲಕತ್ವ ಹಾಗೂ ಚಿಕ್ಕಮಗಳೂರು ಜಿಲ್ಲೆಯ ಉಸ್ತುವಾರಿಯನ್ನು ಹೊತ್ತರು. ಈ ಸಂಘದ ಬೇಡಿಕೆಗಳು ಕಾಫಿ, ಏಲಕ್ಕಿ ಹಾಗೂ ಭತ್ತಕ್ಕೆ ಸೀಮಿತವಾಗಿದ್ದವು. ಅದರ ವ್ಯಾಪ್ತಿಯೂ ಕೂಡ ಸೀಮಿತವಾಗಿದ್ದರಿಂದ ಈ ಸಂಘಟನೆಯಲ್ಲಿಯೂ ಕೃಷಿ ಕಾರ್ಮಿಕರ ಬೇಡಿಕೆಗಳು ಪ್ರಮುಖವಾದ ಬೇಡಿಕೆಗಳಾಗಿ ಬರಲಿಲ್ಲ. ದಕ್ಷಿಣ ಭಾರತ ಸಣ್ಣ ಬೆಳೆಗಾರರ ಒಕ್ಕೂಟದಿಂದ ಲೆವಿ ಸಮಸ್ಯೆ ಹಾಗೂ ಬೆಟರ್‌ಮೆಂಟ್ ಚಾರ್ಜ್‌ಗೆ ಸಂಬಂಧಿಸಿದ ಹೋರಾಟಗಳು ನಡೆದವು. ''ಕರ್ನಾಟಕದ ಮಟ್ಟದಲ್ಲೂ ಕಬ್ಬು ಬೆಳೆಗಾರರ ಸಂಘಟನೆಯೊಂದಿತ್ತು.''[೨] ೧೯೭೭ರಲ್ಲಿ ಇದರ ಬೇಡಿಕೆಗಳು ಕಂದಾಯದಲ್ಲಿ ಏಕರೂಪತೆ, ಕೃಷಿ ಹಾಗೂ ಕೈಗಾರಿಕೆಗಳ ಬೆಲೆಗಳ ನಡುವೆ ತಾರತಮ್ಯ ಸಾಮ್ಯತೆ, ವಿದ್ಯುಚ್ಛಕ್ತಿಗೆ ನ್ಯಾಯವಾದ ದರ, ಖಾಸಗೀ ಕಬ್ಬು ಕಾರ್ಖಾನೆಗಳ ರಾಷ್ಟ್ರೀಕರಣ, ಸಾಲಕ್ಕೆ ಸಮರ್ಪಕ ವ್ಯವಸ್ಥೆ ಇತ್ಯಾದಿಗಳು. ಈ ಸಂಘಟನೆಯು ಬೃಹತ್ ಚಳವಳಿಗಳನ್ನು ನಡೆಸಿದ್ದು ಕಂಡುಬರುವುದಿಲ್ಲ. ಇದೂ ಕೂಡ ೧೯೮೦ರ ದಶಕದಲ್ಲಿ ಹುಟ್ಟಿಕೊಂಡ ರಾಜ್ಯ ರೈತ ಸಂಘದ ಮೂಲಾಧಾರವೆಂದು ಅಸ್ಸಾದಿಯವರು ಅಭಿಪ್ರಾಯಪಟ್ಟಿದ್ದಾರೆ.

೧೯೮೦ರ ದಶಕದಲ್ಲಿ ಬಹಳ ದೊಡ್ಡ ಶಕ್ತಿಯಾಗಿ ಬೆಳೆದು ನಿಂತ ಕರ್ನಾಟಕ ರಾಜ್ಯ ರೈತ ಸಂಘದ ಹುಟ್ಟಿಗೆ ಮುಖ್ಯವಾಗಿ ಒಂದು ರೀತಿಯಲ್ಲಿ ಮಲಪ್ರಭಾ ರೈತ ಚಳವಳಿ ಕಾರಣವಾಗಿದೆ.[೩] ಧಾರವಾಡ ಜಿಲ್ಲೆಯ ಗ್ರಾಮೀಣ ರೈತರ ಚಳವಳಿ, ಮಲಪ್ರಭಾ ರೈತರ ಹೋರಾಟವೆನಿಸಿ ಇಡೀ ಕರ್ನಾಟಕದ ರೈತ ಚಳವಳಿಗೆ ಏಕೀಕರಣೋತ್ತರದಲ್ಲಿ ವಿಶಿಷ್ಟ ಆಯಾಮ ತಂದುಕೊಟ್ಟಿತು.

ರೈತ ಚಳವಳಿಗೆ ಇಂಬು ಕೊಟ್ಟ ಇನ್ನೊಂದು ಅಂಶ ''ಕೃಷಿಯಲ್ಲಿ ತಲಾ ಆದಾಯ ಸಾಪೇಕ್ಷವಾಗಿ ಕಡಿಮೆಯಾದದ್ದು. ೧೯೭೦-೭೧ನ್ನು ಆಧಾರ ವರ್ಷವಾಗಿ ತೆಗೆದುಕೊಂಡರೆ ೧೯೭೦-೭೧ನನ್ನು ೧೯೮೦-೮೧ರ ನಡುವೆ ಕೃಷಿಯ ತಲಾದಾಯ ರೂ.೩೭೨ ರಿಂದ ೩೬೬ಕ್ಕೆ ಇಳಿಯಿತು. ಅದೇ ಅವಧಿಯನ್ನು ಕರ್ನಾಟಕದಲ್ಲೂ ತಲಾದಾಯ ರೂ.೫೦೪ ರಿಂದ ೪೬೭ಕ್ಕೆ ಇಳಿಯಿತು. ಅಂದರೆ ೦.೬೯ ಶೇಕಡಾ ಕಡಿಮೆ ಆಯಿತು.''[೪]

ಮಲಪ್ರಭಾ ಅಚ್ಚುಕಟ್ಟು ಪ್ರದೇಶವನ್ನು ''ಸುರಕ್ಷಿತ ನೀರಾವರಿ'' ಪ್ರದೇಶವೆಂದು ಘೋಷಿಸುವುದು ಕೂಡ ಒಂದು ಕಾರಣವೆಂದು ವಾದಿಸಬಹುದು. ಈ ಯೋಜನೆಯಡಿಯಲ್ಲಿ ಹತ್ತಿಯ ಹೊರತಾಗಿ ಬೇರೆ ಬೆಳೆಗಳಾದ ಕಬ್ಬು ಮೊದಲಾದ ಬೆಳೆಗಳನ್ನು ಬೆಳಸಲು ಅವಕಾಶ ನೀಡಲಿಲ್ಲ. ಈ ನಿಯಂತ್ರಣ ಹಲವಾರು ಸಮಸ್ಯೆಗಳಿಗೆ ದಾರಿ ಮಾಡಿಕೊಟ್ಟಿತು. ಸಾಲದಲ್ಲಿ ರೈತರು ಸಿಲುಕುವಂತೆ ಮಾಡಿತು. ಗ್ರಾಮೀಣ ಪ್ರದೇಶದಲ್ಲಿ ವರ್ಗಗಳ ನಡುವೆ ಸಂಘರ್ಷದ ತೀವ್ರತೆಯನ್ನು ಹೆಚ್ಚಿಸಿತು ಹಾಗೂ ರೈತರ ಬಡತನವನ್ನು ಇನ್ನಷ್ಟು ಹೆಚ್ಚಿಸಿತು. ಇವೆಲ್ಲ ಪರಿಸ್ಥಿತಿಗಳು ರೈತ ಹೋರಾಟಕ್ಕೆ ದಾರಿ ಮಾಡಿಕೊಟ್ಟವು. ೧೯೮೦ರಲ್ಲಿ ನರಗುಂದ ತಾಲೂಕ ರೈತ ಹಾಗೂ ರೈತ ಕೂಲಿಕಾರರ ಸಂಘ'' ರಾಜಶೇಖರಪ್ಪ ಹೊಸಕೇರಿ ಅವರ ನೇತೃತ್ವದಲ್ಲಿ ಅಸ್ತಿತ್ವಕ್ಕೆ ಬಂದಿತು.[೫]

ರೈತರ ಈ ಅನ್ಯಾಯವನ್ನು ಪ್ರತಿಭಟಿಸಲು ಎಸ್.ವಿ.ನೆಗಳೂರು, ವಿ.ಎಸ್.ಹುಯಿಲಗೋಳ, ಮುರುಗೋಡು, ಬಾಳೆಕಾಯಿ ಮೊದಲಾದ ರೈತರ ನೇತೃತ್ವದಲ್ಲಿ ಪ್ರತಿಭಟನೆ ಆರಂಭವಾಯಿತು. ತಾಲ್ಲೂಕು ಕಛೇರಿ ಎದುರು ರೈತರು ೨೦ ದಿನಗಳ ಸತ್ಯಾಗ್ರಹ ಮಾಡಿದರೂ ಏನೂ ಪ್ರಯೋಜನವಾಗಲಿಲ್ಲ. ಆಗ ರೈತರು ಅರೆಬೆತ್ತಲೆಯಾಗಿ ಬಾರ್‌ಕೋಲು ಹಿಡಿದು ಚಳವಳಿ ಮಾಡಿದರೂ ರೈತರಿಗೆ ಸೂಕ್ತ ಉತ್ತರ ನೀಡುವಲ್ಲಿ ಸರ್ಕಾರ ವಿಫಲವಾಯಿತು. ಈ ಮಧ್ಯೆ ''ರೈತರು ೧೯೮೦ರ ಏಪ್ರಿಲ್‌ನಲ್ಲಿ ಹೊಸದಾಗಿ ಆಯ್ಕೆಯಾಗಿದ್ದ ಮುಖ್ಯಮಂತ್ರಿ ಗುಂಡೂರಾವ್ ಅವರನ್ನು ಭೇಟಿಯಾಗಿ ಪರಿಹಾರಕ್ಕಾಗಿ ಒತ್ತಾಯಿಸಿದರು. ಆದರೆ ಸರ್ಕಾರ ರೈತರನ್ನು ಗಂಭಿರವಾಗಿ ಪರಿಗಣಿಸಲಿಲ್ಲ. ನಂತರ ಸರಕಾರಿ ಕಛೇರಿ ಎದುರು ಸರದಿ ಉಪವಾಸವನ್ನು ರೈತರು ಪ್ರಾರಂಭಿಸಿದರು. ೧೯೮೦ರ ಜೂನ್ ೩೦ ರಂದು ನರಗುಂದದ ೧೦,೦೦೦ಕ್ಕೂ ಹೆಚ್ಚಿನ ರೈತರು ಒಟ್ಟು ಸೇರಿ ಬೃಹತ್ ಸಮಾವೇಶ ಮಾಡಿದರು.''[೬] ಜುಲೈ ೮ ರಂದು ಮುಖ್ಯಮಂತ್ರಿಗೆ ನೀಡಿದ್ದ ಮನವಿ ನೆನೆಗುದಿಗೆ ಬಿದ್ದಿದ್ದರಿಂದ ರೈತರು ಸಹನೆ ಕಳೆದುಕೊಂಡರು. ಪರಿಣಾಮವಾಗಿಯೇ, ನರಗುಂದ, ನವಲಗುಂದ, ಸವದತ್ತಿಯಲ್ಲಿ ಬಂದ್‌ಗೆ ಕರೆ ಕೊಡಲಾಯಿತು.

ಸಾವಿರಾರು ಜನರು ತಹಶೀಲ್ದಾರರ ಕಛೇರಿಯನ್ನು ಜುಲೈ ೨೧ ರಂದು ಮುಚ್ಚಲು ಒತ್ತಾಯಿಸುತ್ತಿದ್ದರೂ ತಹಶೀಲ್ದಾರ ರೈತರಿಗೆ ಕಿವಿಗೊಡಲಿಲ್ಲ. ಅವರು ಕಛೇರಿಗೆ ಹೋಗುವ ರಸ್ತೆಯಲ್ಲೆಲ್ಲಾ ರೈತರು ಉದ್ದಕ್ಕೆ ಮಲಗಿ ಪ್ರತಿಭಟನೆ ವ್ಯಕ್ತಪಡಿಸುತ್ತಿದ್ದರೆ, ತಹಶೀಲ್ದಾರ ಅವರನ್ನೆಲ್ಲಾ ತನ್ನ ಬೂಟುಗಾಲಿನಿಂದ ತುಳಿದೇ ಕಛೇರಿಗೆ ಹೋಗಲು ಯತ್ನಿಸಿದರು. ಆಗ ಸಹನೆ ಕಳೆದುಕೊಂಡ ಸಾವಿರಾರು ಸಂಖ್ಯೆಯಲ್ಲಿ ನೆರೆದಿದ್ದ ರೈತರನ್ನು ಚದುರಿಸಲು ಪೊಲೀಸರು ನಡೆಸಿದ ದೌರ್ಜನ್ಯ ಮತ್ತು ಗೋಲಿಬಾರಿನೊಂದಿಗೆ ರೈತ ಹೋರಾಟ ಅಂಕುರಿಸಿತು. ಜನರಿಗೆ ''ಬೆಟರ್‌ಮೆಟ್ ಲೆವಿ ಆಫೀಸನ್ನು'' ಸುಡುವುದೇ ಗುರಿಯಾಗಿತ್ತು. ಸುಮಾರು ೨೦ ರೈತರು ಪೊಲೀಸರ ಗೋಲಿಬಾರ್‌ನಿಂದ ಪ್ರಾಣ ಕಳೆದುಕೊಂಡರು. ರೈತರ ಮೇಲೆ ನಡೆದ ದೌರ್ಜನ್ಯದ ಈ ಘಟನೆಯು ಬಹುಶಃ ಎಂದೂ ಕಾಣದ ರೀತಿಯಲ್ಲಿ ಕರ್ನಾಟಕದ ಉಳಿದ ಮೂಲೆಗಳಲ್ಲಿಯೂ ಪ್ರತಿಧ್ವನಿಸಿತು. ಇದು ವಿಭಿನ್ನ ಪ್ರಾದೇಶಿಕ ಬೇಡಿಕೆಗಳನ್ನು ಸದೃಶ ರೀತಿಯಲ್ಲಿ ಒಟ್ಟುಗೂಡಿಸಿ ನಿರಂತರ ಪ್ರತಿಕ್ರಿಯೆಯನ್ನುಂಟು ಮಾಡಿತು.

ಗದಗ, ಬೆಟಗೇರಿ, ಬಿಜಾಪುರ, ಕೊಪ್ಪಳ, ದಾವಣಗೆರೆ, ಚಿತ್ರದುರ್ಗ, ಅಂಕೋಲ, ಕುಮಟಾ, ಸಿರಸಿ ಮತ್ತು ರಾಯಚೂರುಗಳಿಗೆ ಚಳವಳಿ ಹರಡಿತು. ಏರುತ್ತಿರುವ ಬೆಲೆಗಳ ವಿರುದ್ಧ ಧ್ವನಿ ಎತ್ತುವುದರೊಂದಿಗೆ ಮಲಪ್ರಭಾ ರೈತರಿಗೆ ಉಳಿದ ರೈತರು ಬೆಂಬಲ ನೀಡಿರುವುದು ಕಂಡುಬರುತ್ತದೆ.

''ರೈತರ ತೀವ್ರ ಪ್ರತಿಭಟನೆಯ ಕೊನೆಗೆ ಗುಂಡೂರಾವ್ ನೇತೃತ್ವದ ಸರಕಾರ ೧೯೮೦ ಜುಲೈ ೩೦ ರಂದು ೮೫ ಕೋಟಿ ರೂಪಾಯಿಗಳನ್ನು ಮಧ್ಯಂತರ ಪರಿಹಾರವಾಗಿ ನೀಡಲು ಒಪ್ಪಿತು.''[೬] ಮುಂದಿನ ವರದಿ ಬರುವವರೆಗೂ ಅಭಿವೃದ್ಧಿ ಕಂದಾಯ (ಬೆಟರ್‌ಮೆಟ್ ಲೆವಿ) ಹಾಗೂ ನೀರು ಕಂದಾಯಗಳನ್ನು ತಾತ್ಕಾಲಿಕವಾಗಿ ಮನ್ನಾ ಮಾಡಬೇಕೆಂದು ಆದೇಶ ನೀಡಿತು. ಗೊಬ್ಬರಗಳ ಮೇಲಿನ ಮಾರಾಟ ತೆರಿಗೆಯನ್ನು ಶೇ.೩ ರಿಂದ ಶೇ.೨ಕ್ಕೆ ಇಳಿಸಲಾಯಿತು. ಇದರೊಂದಿಗೆ ರೈತರ ಸಮಸ್ಯೆಗಳನ್ನು ಶೀಘ್ರವೇ ಪರಿಹಾರ ಮಾಡಲು ವಿವಿಧ ಸಮಿತಿಗಳ ನೇಮಕವಾಗಿ ವರದಿಗಳೂ ತಯಾರಾದವು.

ಚಳವಳಿ ಆರಂಭಗೊಂಡ ಕೆಲವೇ ದಿನಗಳಲ್ಲಿ ಶಿವಮೊಗ್ಗದ ರೈತರು ''ಶಿವಮೊಗ್ಗ ರೈತ ಸಂಘ''ದ ಅಡಿಯಲ್ಲಿ ಚಳವಳಿಗೆ ಧುಮುಕಿದರು. ವಾಸ್ತವವಾಗಿ ಹೇಳುವುದಾದರೆ ಈ ರೈತ ಸಂಘವು ''ಕಬ್ಬು ಬೆಳೆಗಾರರ ಸಂಘ''ದ ಒಂದು ಅಂಗವಾಗಿತ್ತು.[೭] ಮೂಲತಃವಾಗಿ ರೈತ ಸಂಘದ ನಾಯಕತ್ವವು ಕಬ್ಬು ಬೆಳೆಗಾರರ ಸಂಘದಿಂದ ಬಂದಿತು. ಈ ಸಂಘಕ್ಕೆ ಇನ್ನಷ್ಟು ಇಂಬು ದೊರೆತದ್ದು ಸಮನ್ವಯ ಸಮಿತಿಯ ರಚನೆಯಿಂದ. ಅದರ ಬೇಡಿಕೆಗಳು ಹಾಗೂ ಸಮನ್ವಯ ಸಮಿತಿಯ ಬೇಡಿಕೆಗಳು ಹೆಚ್ಚು ಕಡಿಮೆ ಒಂದೇ ಅಥವಾ ಸಮನಾಗಿದ್ದವು. ಮುಂದೆ ಶಿವಮೊಗ್ಗ ರೈತ ಸಂಘ ವಿಭಿನ್ನ ರೈತ ಸಂಘಟನೆಗಳ ಹಿತಾಸಕ್ತಿಯನ್ನು ತನ್ನ ಕಕ್ಷೆಗೆ ತೆಗೆದುಕೊಳ್ಳವಲ್ಲಿ ಸಫಲ ಮತ್ತು ಸಮರ್ಥವಾಯಿತಲ್ಲದೆ ಚಳವಳಿಯಲ್ಲಿ ಭಾಗವಹಿಸಿದ ವಿಭಿನ್ನ ಸಂಘಟನೆಗಳನ್ನು ನಿಯಂತ್ರಿಸುವುದರಲ್ಲಿಯೂ ಯಶಸ್ವಿಯಾಯಿತು.

ಶಿವಮೊಗ್ಗದಲ್ಲಿ ರೈತ ಚಳವಳಿಯ, ಮೊದಲನೇ ಹಂತವು ೧೯ ಬೇಡಿಕೆಗಳನ್ನು ರೂಪಿಸುವುದರ ಮುಖಾಂತರ ಪ್ರಾರಂಭವಾಯಿತು. ಅದರೊಂದಿಗೆ ಸ್ಥಳೀಯ ಮತ್ತು ವಿಬಿನ್ನ ರೈತ ಸಂಘಟನೆಗಳ ಬೇಡಿಕೆಗಳನ್ನು ಒಟ್ಟುಗೂಡಿಸಲಾಯಿತು. ಹೋರಾಟದ ಆರಂಭದ ದಿನಗಳಲ್ಲಿ ಬೇಡಿಕೆಗಳು ಹೀಗಿದ್ದವು, ನೀರಿನ ತೆರಿಗೆ, ಅಭಿವೃದ್ಧಿ ತೆರಿಗೆ, ಕಂದಾಯದ ರದ್ಧತಿ ಮತ್ತು ಮಾಫಿ, ತುಲನಾತ್ಮಕ ಬೆಲೆ ಹಾಗೂ ಗೊಬ್ಬರ ಬೆಲೆಗಳಲ್ಲಿ ಕಡಿತ. ಕೆಲವೇ ದಿನಗಳಲ್ಲಿ ವೃದ್ಧಾಪ್ಯ ವೇತನ ಹಾಗೂ ಭತ್ತಕ್ಕೆ ತುಲನಾತ್ಮಕ ಬೆಲೆ ಇನ್ನೆರಡು ಬೇಡಿಕೆಗಳನ್ನು ಸೇರಿಸಲಾಯಿತು. ವಾಸ್ತವವಾಗಿ ನೋಡುವುದಾದರೆ ''ರೈತ ಸಂಘದ ಅಸ್ತಿತ್ತ್ವವು ಆಗಸ್ಟ್ ೧೧, ೧೯೮೦ರ ಉಪವಾಸ ಸತ್ಯಾಗ್ರಹ, ಜಿಲ್ಲಾಧಿಕಾರಿಯ ಕಛೇರಿ ಮುತ್ತಿಗೆ ಮುಖಾಂತರ ಅಸ್ತಿತ್ತ್ವಕ್ಕೆ ಬಂದಿತು.[೮] ಶಿವಮೊಗ್ಗ ರೈತ ಸಂಘಟನೆಗೆ ತಿರುವು ಬಂದದ್ದು ಸೆಪ್ಟೆಂಬರ್ ೧, ೧೯೮೦ರಂದು. ಮುಖ್ಯವಾಗಿ ತಮಿಳು ನಾಡಿನ ''ವ್ಯವಸಾಯಗಳ್ ಸಂಘಂ''ನ ನಾರಾಯಣಸ್ವಾಮಿ ನಾಯ್ಡು ಅವರ ಭಾಷಣದ ಮುಖಾಂತರ ಹಸಿರು ಶಾಲುಗಳ ಉಪಯೋಗದ ತಂತ್ರ ಇತ್ಯಾದಿ ರೈತರ ಮೇಲೆ ಅಗಾಧವಾದ ಪ್ರಭಾವವನ್ನು ಬೀರಿದವು.

ಶಿವಮೊಗ್ಗದ ಹೋರಾಟ ವಿಭಿನ್ನ ಪ್ರದೇಶದಲ್ಲಿ ಪರಿಣಾಮ ಬೀರಿತು. ಚಿತ್ರದುರ್ಗ ರೈತರು ನೈತಿಕ ಬೆಂಬಲ ಹಾಗೂ ಅಸಹಕಾರ ಚಳವಳಿಯನ್ನು ತಮ್ಮ ಜಿಲ್ಲೆಯಲ್ಲಿ ನಡೆಸಲು ಶಿವಮೊಗ್ಗ ರೈತರ ಬೆಂಬಲ ಕೇಳಿದರು. ಹಾಸನದ ರೈತರು ಅಸಹಕಾರ ಚಳವಳಿ, ಉಪವಾಸ ಸತ್ಯಾಗ್ರಹ, ರಸ್ತೆತಡೆ, ''ಜೈಲ್ ಭರೋ'' ಮುಖಾಂತರ ಶಿವಮೊಗ್ಗ ರೈತರಿಗೆ ನೈತಿಕ ಬೆಂಬಲ ನೀಡಿದರು. 'ಮಲಪ್ರಭಾ ಸಮನ್ವಯ' ಸಮಿತಿ ಒಂದೆಡೆ ತನ್ನ ಮಹತ್ವವನ್ನು ಕಳೆದುಕೊಂಡರೆ, ಇನ್ನೊಂದೆಡೆ ರೈತ ಸಂಘ ತನ್ನ ಮಹತ್ವವನ್ನು ಸಾರುವಲ್ಲಿ ಹಾಗೂ ಸಾಧಿಸುವಲ್ಲಿ ಸಫಲವಾಯಿತು. ಇದು ಅಕ್ಟೋಬರ್ ೧೭ ರಂದು ಬೇಡಿಕೆಯನ್ನು ಸಲ್ಲಿಸಿತ್ತು. 'ಅನಿಶ್ಚಿತ ದಿನ ರೈತರಿಗೆ ಸಂಬಂಧಿಸಿದ ವಿಭಿನ್ನ ವಿಷಯಗಳನ್ನು ಚರ್ಚಿಸುವುದಕ್ಕಾಗಿ ರಾಜ್ಯದ ವಿವಿಧೆಡೆಯಿಂದ ರೈತ ಪ್ರತಿನಿಧಿಗಳು ಬೆಂಗಳೂರಿನಲ್ಲಿ ಸಮಾವೇಶಗೊಂಡಿದ್ದರು.'[೧೧] ಅಂತಿಮವಾಗಿ ಶಿವಮೊಗ್ಗ ರೈತರ ೧೯ ಬೇಡಿಕೆಗಳನ್ನು ಚರ್ಚಿಸುವುದಕ್ಕಾಗಿಯೂ ತೀರ್ಮಾನಿಸಲಾಯಿತು. ಉಳಿದ ಜಿಲ್ಲೆಗಳ ರೈತರಿಗೆ ಈ ಬೇಡಿಕೆಗಳು ಅನ್ವಯವಾಗಬಹುದೆ ಎಂಬುದು ಮುಖ್ಯವಾಗಿ ಪರಿಗಣನೆಯಾಯಿತು.

೧೯ ಬೇಡಿಕೆಗಳ ಪಟ್ಟಿಯನ್ನು ಸಲ್ಲಿಸುವುದರ ಮುಖಾಂತರ 'ಕರ್ನಾಟಕ ರಾಜ್ಯ ರೈತ ಸಂಘ' ಅಕ್ಟೋಬರ್ ೧೭, ೧೯೮೦ ರಂದು ಅಸ್ತಿತ್ವಕ್ಕೆ ಬಂದಿತು. ಇದರ ಸಂಸ್ಥಾಪಕ ಅಧ್ಯಕ್ಷರಾಗಿದ್ದವರು ಹಿಂದಿನ ಕೃಷಿ ಮಂತ್ರಿ ಹಾಗೂ ಸ್ಪೀಕರ್ ಆಗಿದ್ದ ಹೆಚ್.ಎಸ್. ರುದ್ರಪ್ಪ ಅವರು, ಪ್ರೊ.ಎಂ.ಡಿ.ನಂಜುಂಡಸ್ವಾಮಿ ಹೋರಾಟ ಸಮಿತಿಯ ಸಂಚಾಲರಾಗಿ, ಸುಂದರೇಶ್ ಅವರು ಪ್ರಧಾನ ಕಾರ್ಯದಶಿಗಳಾಗಿ ನೇಮಕಗೊಂಡರು. ಕಡಿದಾಳು ಶಾಮಣ್ಣ, ರೇವಣ್ಣಸಿದ್ದಯ್ಯ ಮುಂತಾದ ಅನೇಕರು ಇದರ ನೇತೃತ್ವ ವಹಿಸಿದ್ದರು. ಅಸ್ಸಾದಿಯವರು ಅಭಿಪ್ರಾಯ ಪಡುವ ಹಾಗೆ ''ಸರ್ಕಾರವು ಬೇಡಿಕೆಗಳನ್ನು ಈಡೇರಿಸಲು ಒಪ್ಪಿಕೊಂಡಿದ್ದರಿಂದ ರೈತ ಸಂಘದ ಚಳವಳಿಯು ನ್ಯಾಯ ಸಮ್ಮತಗೊಂಡಂತಾಯಿತು. ಈ ೧೯ ಮುಖ್ಯ ಬೇಡಿಕೆಗಳೇ ರೈತ ಸಂಘದ ಬುನಾದಿಗೆ ಕಾರಣವಾದವು.''[೧೧]

ಗುಂಡೂರಾವ್ ಸರಕಾರ ೧೯ ಬೇಡಿಕೆಗಳಲ್ಲಿ ೧೨ ಬೇಡಿಕೆಗಳನ್ನು ಈಡೇರಿಸುವುದಾಗಿ ಘೋಷಿಸಿತು. ಈ ಬೇಡಿಕೆಯ ಪಟ್ಟಿ ಮುಂದೆ 'ಬೇಡಿಕೆಯ ಸನ್ನದು' ಆಗಿ ಪರಿವರ್ತಿತ ಆಯಿತಲ್ಲದೇ, ರೈತ ಹೋರಾಟ ಈ ಬೇಡಿಕೆಗಳ ಸುತ್ತ ಕೇಂದ್ರೀಕೃತವಾಯಿತು. ರೈತ ಹೋರಾಟ ಬೆಳೆದಂತೆಲ್ಲಾ ಈ ಬೇಡಿಕೆ ಪಟ್ಟಿಯಲ್ಲಿ ಬದಲಾವಣೆಗಳಾದವು. ಈ ಬೇಡಿಕೆಯೊಂದಿಗೆ ರೈತ ಹೋರಾಟಕ್ಕೆ ಹೊಸ ಆಯಾಮ ದೊರೆತದ್ದು ಸತ್ಯ ಸಂಗತಿ. ಸರ್ಕಾರದ ಈ ಘೋಷಣೆ ಕರ್ನಾಟಕ ರಾಜ್ಯ ರೈತ ಸಂಘದ ವಿಜಯ ಎಂದೇ ಭಾವಿಸಲಾಗಿದೆ.

೪.೨. ಕರ್ನಾಟಕ ರಾಜ್ಯ ''ರೈತ ಸಂಘದ'' ತತ್ತ್ವ-ಸಿದ್ಧಾಂತ: ನಂಜುಂಡಸ್ವಾಮಿ

ಬುದ್ಧ, ಬಸವ, ಕಾರ್ಲ್‌ಮಾರ್ಕ್ಸ್, ಗಾಂಧಿ, ಹಾಗೂ ಲೋಹಿಯಾ ಅಂಥವರು ರೈತರ ಉದ್ಧಾರಕ್ಕಾಗಿ ಹಾಕಿಕೊಟ್ಟ ತತ್ತ್ವಗಳನ್ನು ನಂಜುಂಡಸ್ವಾಮಿ ಅವರು ಮುಂದುವರಿಸಿಕೊಂಡು ಬಂದಿರುವುದು ಗಮನಾರ್ಹವಾಗಿದೆ.

''ಬುದ್ಧ ಅತ್ತಾಹಿ ಅತ್ತನೋ ನಾಥೋ, ಅತ್ತಾಹಿ ಅತ್ತನೋ ಗತಿ'-'ನಿನಗೆ ನೀನೇ ಒಡೆಯ ನಿನಗೇ ನೀನೇ ಗತಿ''[೧೫] ಎಂದು ಘನತೆ, ಆತ್ಮಗೌರವದಲ್ಲಿ ಎಚ್ಚರಿಸಿದನು. ನಂತರ ''ಬಸವಣ್ಣ 'ಕಾಯಕವೇ ಕೈಲಾಸ''[೧೬]ವೆಂದು ಈ ನಾಡನ್ನು ಮತ್ತೊಮ್ಮ ಘನತೆ, ಸ್ವಾಭಿಮಾನಗಳ ಕಾಯಕದಲ್ಲಿ ಎಚ್ಚರಿಸಿದರು. ೨೦ನೇ ಶತಮಾನದಲ್ಲಿ ಪೆರಿಯಾರರು ''ಸೂಯಮರಿಯಾದೈ' ಅಂದರೆ 'ಸ್ವ-ಮರ್ಯಾದೆ''[೧೭] ಸ್ವಾಭಿಮಾನವೆನ್ನುವ ಮಂತ್ರವನ್ನು ತಮಿಳರಿಗಿತ್ತ ಮಾದರಿಯಲ್ಲಿಯೇ, ಕನ್ನಡ ನಾಡಿನ ರೈತ ಕೋಟಿಗೆ ಹಸಿರು ರುಮಾಲಿನ ಸ್ವಾಭಿಮಾನದ ದೀಕ್ಷೆಯನ್ನು, ಬಾರುಕೋಲಿನ ಆತ್ಮರಕ್ಷೆಯನ್ನು ಕಾಯಕದ ನಿಲುವಿನಲ್ಲಿ ನಿಲ್ಲುವಂತೆ ಮಾಡಿದವರು ನಂಜುಂಡಸ್ವಾಮಿ ಅವರು. ಮಾರ್ಕ್ಸ್‌ವಾದದ 'ವರ್ಗ ಸಂಘರ್ಷ'ದ ಮಾದರಿಯಲ್ಲಿಯೇ ರೈತರ 'ವರ್ಗಕ್ಕಾಗಿ ವರ್ಗ' ಪ್ರಜ್ಞೆಯನ್ನು, ವೈಚಾರಿಕ ಚಿಂತನೆಯನ್ನು ಹಾಗೂ ಹೋರಾಟಗಳನ್ನು ನಂಜುಂಡಸ್ವಾಮಿ ರೂಪಿಸಿದರು.

ಗಾಂಧಿ ರೂಪಿಸಿದ 'ನಾಗರಿಕ ಅಸಹಕಾರ', 'ನಾಗರಿಕ ಅವಿಧೇಯತೆ', 'ಕರ ನಿರಾಕರಣೆ', ಅಹಿಂಸೆ, ಹಾಗೂ ಸತ್ಯಾಗ್ರಹದ ಅಸ್ತ್ರಗಳನ್ನು ನಂಜುಂಡಸ್ವಾಮಿ ಅವರು ಮರು ರೂಪಿಸಿ, ಅನುಸರಿಸಿ ಕರ್ನಾಟಕ ರಾಜ್ಯ ರೈತ ಸಂಘ ತನ್ನ ಹೋರಾಟದ ಹಾದಿಯನ್ನು ಹಿಡಿಯಲು ಪ್ರೇರಣೆಯನ್ನು ನೀಡಿದರು. ಇಂದಿಗೂ ಕೂಡ ರೈತ ಸಂಘಗಳು ಈ ತತ್ತ್ವಗಳ ಮಾರ್ಗದಲ್ಲಿ ಕ್ರಿಯಾಶೀಲವಾಗಿದೆ. ರೈತರಿಗೆ 'ಪಂಪ್‌ಸೆಟ್ ತೆರಿಗೆ ಕಟ್ಟಬೇಡಿ', 'ವಿದ್ಯುಚ್ಛಕ್ತಿ ಬಿಲ್ ಕಟ್ಟಬೇಡಿ' ಎಂದು ಎಂ.ಡಿ.ಎನ್ ಕೊಡುತ್ತಿದ್ದ ಕರೆ ಹಾಗೂ ರೂಪಿಸುತ್ತಿದ್ದ ಚಳವಳಿಗಳು ಸ್ವಾತಂತ್ರ್ಯ ಪೂರ್ವದಲ್ಲಿ ಗಾಂಧಿಯವರ ಕರ ನಿರಾಕರಣೆ ಚಳವಳಿಯನ್ನು ಸ್ವಾತಂತ್ರ್ಯೋತ್ತರದಲ್ಲಿ ಮತ್ತೊಮ್ಮೆ ರೂಪಿಸಿದಂತ್ತಿದ್ದವು. ''ಮಾರ್ಕ್ಸ್ ಅವರ ತತ್ತ್ವ ಸಿದ್ಧಾಂತಗಳಿಂದ ಸಮಾಜವಾದಿ ಹೆಜ್ಜೆಗಳನ್ನು ಸಮಾಜವಾದಿ ಹಾದಿಯಲ್ಲೇ ಮುಂದೆ ತೆಗೆದುಕೊಂಡು ಹೋಗಬೇಕು. ಅಂದರೆ ಮೊದಲನೆಯದು ಹೋರಾಟ, ಎರಡನೆಯದು ವೈಚಾರಿಕ ಸ್ಪಷ್ಟತೆ, ಮೂರನೆಯದು ಆ ಗುರಿಯನ್ನು ಸಾಧಿಸುವಂಥದು.''[೧೮] ಇದಕ್ಕೆ ಪೂರಕವಾದ ಕಾರ್ಯಗಳನ್ನು ನಂಜುಂಡಸ್ವಾಮಿ ಅವರು ಮಾಡುತ್ತಿದ್ದರು. ರೈತರಲ್ಲಿ ಸ್ವಾಭಿಮಾನ ಜಾಗೃತಗೊಂಡು ಶೋಷಣೆಯ ವಿರುದ್ಧ ಹೋರಾಟ ಮಾಡುವ ಮೂಲಕ ಸಮಾನತೆಯನ್ನು, ಪರಿವರ್ತನೆಯನ್ನು ತಂದುಕೊಳ್ಳುತ್ತಾರೆ ಎಂಬುದು ಅವರ ಚಿಂತನೆಗಳಿಂದ ತಿಳಿದುಬರುತ್ತದೆ.

ನಂಜುಂಡಸ್ವಾಮಿ ಅವರ ನೇತೃತ್ವದಲ್ಲಿ 'ಕರ್ನಾಟಕ ರಾಜ್ಯ ರೈತ ಸಂಘ'ದ ಪ್ರಮುಖ ಉದ್ದೇಶವೆಂದರೆ ರೈತ ವರ್ಗದವರ ಸಂಪೂರ್ಣ ಅಭಿವೃದ್ಧಿಗೆ ಶ್ರಮಿಸುವುದು. ರೈತ ಸಂಘವನ್ನು ಒಂದು ಬೇಡಿಕೆಯ ಸಂಘವನ್ನಾಗಿ ರೂಪಿಸದೇ, ಇಡೀ ಸಮಾಜದ ಸಮಗ್ರ ಬದಲಾವಣೆಗಾಗಿ ದುಡಿಯಲು ರೂಪಿಸಿದರು. ರೈತರು ಆರ್ಥಿಕವಾಗಿ, ರಾಜಕೀಯವಾಗಿ ಮತ್ತು ಸಾಮಾಜಿಕವಾಗಿ ಸಮಾನತೆಯನ್ನು ಗಳಿಸಬೇಕೆಂದು ನಂಜುಂಡಸ್ವಾಮಿ ಅವರು ಸಂಘಟನೆಯನ್ನು ಕಟ್ಟಿ ಬೆಳೆಸಿದರು. ರೈತರು ಯಾರಿಗೂ ಹೆದರದೆ, ಬಾಗದೆ ಯಾವತ್ತಿಗೂ ಸ್ವಾಭಿಮಾನದ ಉಸಿರಾಡುತ್ತಾ, ಅಧಿಕಾರಿ ವರ್ಗದವರ ಶೋಷಣೆಯ ವಿರುದ್ಧ ಸೆಟೆದು ನಿಲ್ಲುವಂತೆ ಪ್ರೇರಣೆ ನೀಡಿದರು ಎಂದರೆ ತಪ್ಪಾಗಲಾರದು. ರೈತ ಸಂಘದಲ್ಲಿ ಎಲ್ಲರೂ ಸಮಾನರು. ಶ್ರೀಮಂತ-ಬಡವ, ಮೇಲು-

ಕೀಳು ಎಂಬ ಭಾವನೆ ಬರಬಾರದು. ಸಂಘಟನೆಯಲ್ಲಿ ಬಲವಿದೆ ಎಂದು ನಂಜುಂಡಸ್ವಾಮಿ ನಂಬಿದವರು. ಸಂಘಟನೆಯಲ್ಲಿ ಯಾರೂ ದೊಡ್ಡವರಲ್ಲ, ಸಿದ್ಧಾಂತವೇ ದೊಡ್ಡದು. ಎಲ್ಲರೂ ಸಮಾನತೆಯ ಆಧಾರದ ಮೇಲೆ ದುಡಿಯಬೇಕು ಎಂಬ ತತ್ತ್ವ-ಸಿದ್ಧಾಂತಗಳನ್ನು ರೂಪಿಸಿಕೊಂಡಿದ್ದರು.

೪.೩. ಕರ್ನಾಟಕ ರಾಜ್ಯ ರೈತ ಸಂಘದ ರಾಜಕೀಯ ಪ್ರವೇಶ ಹಾಗೂ ಒಡಕು

ನಂಜುಂಡಸ್ವಾಮಿ ಅವರು ಹೋರಾಟವನ್ನೇ ಮೂಲ ಮಂತ್ರವನ್ನಾಗಿಸಿಕೊಂಡು ತಮ್ಮ ಅಸ್ತಿತ್ತ್ವವನ್ನು ಕರ್ನಾಟಕ ರಾಜ್ಯ ರೈತ ಸಂಘದ ಮೂಲಕ ಕಂಡುಕೊಂಡರು. ರೈತ ಸಂಘದ ಮೂರು ಮುಖ್ಯ ಸ್ಥಂಭಗಳಲ್ಲಿ ಮುಖ್ಯರಾದವರು ಹಾಗೂ ಸೈದ್ಧಾಂತಿಕ ವಿಚಾರಗಳಿಗೆ ನಂಜುಂಡಸ್ವಾಮಿ ಅವರದು ಇನ್ನೊಂದು ಹೆಸರಾಗಿತ್ತು. ೧೯೮೦ರಲ್ಲಿ ಹುಟ್ಟಿದ ಕರ್ನಾಟಕ ರಾಜ್ಯ ರೈತ ಸಂಘ ಹೋರನೋಟದಲ್ಲಿ ತನ್ನ ಸಂಘವನ್ನು 'ಪಕ್ಷಾತೀತ' ವೆಂದೂ ಕರೆದರೂ ಅದು ರಾಜಕೀಯ ರಹಿತವಾಗಿರಲಿಲ್ಲ. ಇದರ ಪಕ್ಷಾತೀತವನ್ನು ಬೇರೆ ರಾಷ್ಟ್ರೀಯ ಅಥವಾ ಪ್ರಾಂತೀಯ ಪಕ್ಷಗಳೊಂದಿಗೆ ಹಾಗೂ ಚುನಾವಣೆಯೊಂದಿಗೆ ಹೋಲಿಸಬಹುದೇ ಹೊರತು ಅದರ ಹೋರಾಟದ ನೀತಿಯಿಂದಲ್ಲ. ಯಾಕೆಂದರೆ ಒಂದು ಹೋರಾಟವನ್ನು ರಾಜಕೀಯ ಅಥವಾ ಆರ್ಥಿಕ ಬದ್ಧತೆ ಅಥವಾ ಪ್ರಭಾವಗಳಿಂದ ನಿರ್ಲಕ್ಷಿಸಲು ಸಾಧ್ಯವಿಲ್ಲ. ಇವೆರಡು ಒಂದಕ್ಕೊಂದು ಕೊಂಡಿಯಂತೆ ಬೆಸೆದುಕೊಂಡಿರುತ್ತವೆ.

ರೈತ ಸಂಘವು ತನ್ನನ್ನು ಪಕ್ಷಾತೀತವೆಂದು ಕರೆಯಲು ಮೂರು ಕಾರಣಗಳಿದ್ದವು. ಮೊದಲನೆದಾಗಿ ಪ್ರಸ್ತುತ ರಾಜಕೀಯ ಪಕ್ಷಗಳೊಂದಿಗಿದ್ದ ಭ್ರಮನಿರಸನ, ಎರಡನೆಯದಾಗಿ ರಾಜಕೀಯ ಗುಂಪು ಹಾಗೂ ರಾಜಕೀಯ ಪಕ್ಷಗಳ ಅರ್ಥವನ್ನು ವಿಸ್ತರಿಸುವಲ್ಲಿ ಅಥವಾ ಅರ್ಥೈಸುವಲ್ಲಿ ಸಂಘಕ್ಕಿದ್ದ ಗೊಂದಲ ಹಾಗೂ ದ್ವಂದ್ವತೆ, ಮೂರನೆಯದಾಗಿ ಚುನಾವಣೆಯಲ್ಲಿ ತನ್ನ ನಿರ್ಲಿಪ್ತತೆಯನ್ನು 'ಪಕ್ಷಾತೀತ' ಧೋರಣೆ ಎಂಬ ವಾದದ ಪುಷ್ಟೀಕರಣ ಹಾಗೂ ವಿರೋಧಾಭಾಸ. ಇಂಥ ವಿರೋಧಾಭಾಸಗಳು ರೈತ ಸಂಘದ ವಾದದಲ್ಲಿ ಸರ್ವೇ ಸಾಮಾನ್ಯ.

೧೯೮೪ರ ಲೋಕಸಭಾ ಚುನಾವಣೆಯ ಮೊದಲೇ ರೈತ ಸಂಘದೊಳಗೆ ರಾಜಕೀಯ ಧೋರಣೆಯು ಸ್ಪಷ್ಟವಾಗಿ ಬೆಳೆಯತೊಡಗಿತ್ತು. ೧೯೮೩ರಲ್ಲಿ ರೈತ ಸಂಘವು ಅಧಿಕಾರಕ್ಕಾಗಿ ಕಚ್ಚಾಡುತ್ತಿದ್ದ ಹಾಗೂ ಪಕ್ಷಾಂತರಕ್ಕಾಗಿ ಸಮಯ ಕಾಯುತ್ತಿದ್ದ ಕರ್ನಾಟಕದ ಶಾಸಕರನ್ನು ತರಾಟೆಗೆ ತೆಗೆದುಕೊಂಡಿತ್ತು. ಮಾತ್ರವಲ್ಲದೆ ಅಂಥ ಶಾಸಕರ ರಾಜೀನಾಮೆಗೂ ಒತ್ತಾಯಪಡಿಸಿತ್ತು. ನಂಜುಂಡಸ್ವಾಮಿಯವರು ಪ್ರತಿ ಸಭೆಯಲ್ಲಿ ಮಾತನಾಡುವಾಗಲೂ ''ನಮ್ಮ ಹಂಗಿನಲ್ಲೇ ಬದುಕುವ ರಾಜಕಾರಣಿ, ಅಧಿಕಾರಿಗಳು ನಮ್ಮ ಆಜ್ಞಾಪಾಲಕರೇ ಹೊರತು ನಾವು ಅವರ ಗುಲಾಮರಲ್ಲ ಎಂದು ಮೊದಲು ರೈತರಿಗೆ ಅರ್ಥವಾಗಬೇಕು''[೧೯] ಎಂದು ಹೇಳುತ್ತಿದ್ದರು. ಹೀಗಾಗಿ ಮೊದಲ ಬಾರಿಗೆ ಹಸಿರು ಟವೆಲ್ ಹಾಕಿಕೊಂಡ ಕಾರ್ಯಕರ್ತರು ನಡು ಬಗ್ಗಿಸದೇ ಅಧಿಕಾರಿಗಳ ಎದುರು ಮಾತನಾಡಲಾರಂಭಿಸಿದರು ಹಾಗೂ ಅವರನ್ನು ಪ್ರಶ್ನಿಸತೊಡಗಿದರು. 'ಸರ್ಕಾರದ

ವಾಹನಗಳ ಅಪಬಳಕೆ, ಭ್ರಷ್ಟ ಅಧಿಕಾರಿಗಳಿಗೆ, ರಾಜಕಾರಣಿಗಳಿಗೆ ಗ್ರಾಮಗಳ ಪ್ರವೇಶ ನಿಷೇಧ' ಎಂದು ಬೋರ್ಡ್ ಬರೆಸಿ ಹಾಕುವಂಥ ಧೈರ್ಯ ತಾಳಿದ್ದು ಸಾಮಾನ್ಯವಲ್ಲ. ಆದ್ದರಿಂದಲೇ ಅಸೆಂಬ್ಲಿ ಚುನಾವಣೆಯ ಸಮಯದಲ್ಲಿ ರೈತ ಸಂಘವು ಯಾವುದೇ ರಾಜಕೀಯ ಪಕ್ಷಕ್ಕೆ ಬೆಂಬಲ ನೀಡಬಾರದೆಂಬುದು ನಂಜುಂಡಸ್ವಾಮಿ ಅವರ ಆಶಯವಾಗಿತ್ತು. ಯಾಕೆಂದರೆ

> ''ರಾಜಕೀಯ ಗುಂಪುಗಳು ದೇಶದ ಯಾವುದೇ ಸಮಸ್ಯೆಗಳಿಗೆ ಸ್ಪಷ್ಟ ಪರಿಹಾರ ಸಿದ್ಧಪಡಿಸಿಕೊಂಡಿಲ್ಲ. ರೈತ ಸಮಸ್ಯೆಗಳ ಬಗ್ಗೆ ಯಾವುದೇ ಸ್ಪಷ್ಟ ನಿಲುವನ್ನು ಪ್ರಕಟಿಸಿಲ್ಲ. ಯಾವುದೇ ಸ್ಪಷ್ಟ ವಿಚಾರಗಳ ಮೇಲೆ ಸಂಘಟಿತವಾಗಿಲ್ಲ ಹಾಗೂ ಸ್ಪಷ್ಟ ಕಾರ್ಯಕ್ರಮಗಳನ್ನು ಹಾಕಿಕೊಂಡಿಲ್ಲ. ಆದ ಕಾರಣ ರೈತರಿಗೆ ಇರುವ ಮಾರ್ಗ ಒಂದೇ... ರೈತರು ತಮ್ಮ ಅಮೂಲ್ಯವಾದ ಓಟನ್ನು ಯಾರಿಗೂ ಕೊಡದೆ ಕಾಯ್ದಿರಿಸಿಕೊಳ್ಳುವುದು... ಎಲ್ಲಾ ರಾಜಕೀಯ ಗುಂಪುಗಳೂ ಖಾಲಿ ಡಬ್ಬದ ಪಾಠ ಕಲಿಯಬೇಕು.''[೧೭]

ಈ ರೀತಿ ಪ್ರೊಫೆಸರ್ ಅವರು ಓಟು ನಿರಾಕರಣವನ್ನು ಸತ್ಯಾಗ್ರಹದ ಅಸ್ತ್ರವನ್ನಾಗಿ ಬಳಸಲು ರೈತರಿಗೆ ನೂತನ ವಿಧಾನವನ್ನು ಕಲಿಸಿಕೊಟ್ಟರು. ಆದರೆ ರೈತ ಸಂಘದ ಸದಸ್ಯರು ಚುನಾವಣೆಗೆ ಸ್ಪರ್ಧಿಸಿದರೆ ಅವರನ್ನು ಸೋಲಿಸಲು ಮಾತ್ರವಲ್ಲದೆ ಸಂಘದಿಂದ ಹೊರ ಹಾಕುವ ಬೆದರಿಕೆಯ ಭಾವನೆಯನ್ನು ಬೆಳೆಸಿದರು.

''ರೈತ ಕಾರ್ಯಕರ್ತರನ್ನೇ ಅಭ್ಯರ್ಥಿಗಳನ್ನಾಗಿ ಕಣಕ್ಕಿಳಿಸುವ ಕೆಲಸ ಮೊದಲ ಬಾರಿಗೆ ನಡೆದದ್ದು ಬೆಳಗಾವಿಯ ಸಕ್ಕರೆ ಕಾರ್ಖಾನೆಯೊಂದರಲ್ಲಿ. ಭ್ರಷ್ಟಾಚಾರದ ವಿರುದ್ಧ ಸಿಡಿದೆದ್ದು ರೈತರು ತಮ್ಮದೇ ಅಭ್ಯರ್ಥಿಗಳನ್ನು ಕಣಕ್ಕಿಳಿಸಿ ಪೂರ್ಣ ವಿಜಯ ಸಾಧಿಸಿದರು.''[೧೮] ಎರಡನೇ ಘಟನೆ ದಕ್ಷಿಣ ಕರ್ನಾಟಕದ ಮಂಡ್ಯ ಜಿಲ್ಲೆಯಲ್ಲಿ ರೈತ ಸಂಘದ ಕಾರ್ಯಕರ್ತರೊಬ್ಬರು ಜನತಾದಳದಿಂದ ಜಿಲ್ಲಾ ಪರಿಷತ್ತಿಗೆ ಸ್ಪರ್ಧಿಸಿದ ಸಂದರ್ಭ. ರೈತ ಸಂಘ ಒಂದು ಜಿಲ್ಲಾ ಪರಿಷತ್ತು ಕ್ಷೇತ್ರದಲ್ಲಿ ಗೆಲುವು ಸಾಧಿಸಿದ್ದು ಈ ವಿಜಯವೇ ಮುಖ್ಯವಾಗಿ ಇಡೀ ರೈತ ಸಂಘವನ್ನೇ ಚುನಾವಣಾ ರಾಜಕೀಯಕ್ಕೆ ಕಾಲಿಡುವಂತೆ ಮಾಡಲು ಕಾರಣವಾಯಿತು ಎಂಬುದು ನಂಜುಂಡಸ್ವಾಮಿ ಅವರ ಅಭಿಪ್ರಾಯ. ರಾಜಕೀಯ ಅಧಿಕಾರ ಗ್ರಹಣದ ಮಾತುಕತೆ ಪ್ರಾರಂಭವಾಗಿದ್ದು ಇಲ್ಲಿಂದಲೇ. ಉತ್ತರ ಹಾಗೂ ದಕ್ಷಿಣ ಕರ್ನಾಟಕದ ರೈತ ಮುಖಂಡರಲ್ಲಿ ಮಾನಸಿಕ ಧ್ರುವೀಕರಣ ಪ್ರಾರಂಭವಾಗಿದ್ದು ಇಲ್ಲಿಂದಲೇ. ಅಧಿಕಾರ ಹಿಡಿಯಬೇಕೆಂಬ ವಿಚಾರಕ್ಕೆ ಆಗಿನ ಅಧ್ಯಕ್ಷರು ನೀಡಿದ ಬೆಂಬಲವೇ ಸಂಘವನ್ನು ರಾಜಕೀಯ ಪಕ್ಷವಾಗಿ ಪರಿವರ್ತಿಸುವ ತೀರ್ಮಾನಕ್ಕೆ ಎಡೆಮಾಡಿಕೊಟ್ಟಿತು. ಶಿವಮೊಗ್ಗ, ತುಮಕೂರು, ಧಾರವಾಡ ಹಾಗೂ ಬಳ್ಳಾರಿ ಮೊದಲಾದ ಕಡೆಗಳಲ್ಲಿ ರೈತರನ್ನು ರಾಜಕೀಯವಾಗಿ ಜಾಗೃತರನ್ನಾಗಿ ಮಾಡಲು ಎಲ್ಲಾ ಪಕ್ಷಗಳು ಮುಂದಾದವು.

ಕರ್ನಾಟಕ ರಾಜ್ಯ ರೈತ ಸಂಘ ಪಕ್ಷಾತೀತ ಮನೋಭಾವವನ್ನು ತಳೆದು ನಿಸ್ಪಕ್ಷಪಾತವಾಗಿ ವರ್ತಿಸುತ್ತಿತ್ತು. ಈ ಸಂಘಟನೆ ಇಡೀ ರಾಷ್ಟ್ರಕ್ಕೆ ಮಾದರಿಯಾಗುವಂತಿತ್ತು. ಆದರೆ ರಾಜ್ಯ ಮಟ್ಟದ ರೈತ ನಾಯಕರು ಒಂದು

ಪಕ್ಷವನ್ನು ವಿರೋಧಿಸುತ್ತಾ ಮತ್ತೊಂದು ಪಕ್ಷವನ್ನು ಬೆಂಬಲಿಸಿದರು. ಯಾವುದೇ ವ್ಯಕ್ತಿ, ಯಾವುದೇ ಪಕ್ಷದ ಪರವಾಗಿ (ಆಡಳಿತ ಪಕ್ಷವಾಗಲಿ-ವಿರೋಧ ಪಕ್ಷವಾಗಲಿ) ಚುನಾವಣೆಗೆ ಸ್ಪರ್ಧಿಸುವುದು, ಚುನಾವಣಾ ಪ್ರಚಾರ ಕೈಗೊಳ್ಳುವುದನ್ನು ನಿಷೇಧಿಸಿತಲ್ಲದೆ, ಈ ಚಟುವಟಿಕೆಗಾಗಿ ಅಂಥ ವ್ಯಕ್ತಿಗಳನ್ನು ರೈತ ಸಂಘಟನೆಯಿಂದ ಹೊರ ಹಾಕುವುದಾಗಿ ನಿರ್ಣಯ ತೆಗೆದುಕೊಂಡರು. ಈ ನಿರ್ಣಯವನ್ನು ವಿರೋಧಿಸಿ ಚುನಾವಣೆಯಲ್ಲಿ ಸ್ಪರ್ಧಿಸಿದ್ದಕ್ಕಾಗಿ ರಾಜ್ಯ ರೈತ ಸಂಘದ ಉಪಾಧ್ಯಕ್ಷ ರೇವಣ್ಣಸಿದ್ಧಯ್ಯ ಹಾಗೂ ಮತ್ತಿತರರನ್ನು ರೈತ ಸಂಘದಿಂದ ಹೊರಹಾಕುವ ತೀರ್ಮಾನವನ್ನು ೧೯೮೨ರ ಕಾಳ ಮುದ್ದನ ದೊಡ್ಡಿ ರೈತ ಸಭೆಯಲ್ಲಿ ತೀರ್ಮಾನಿಸಿದರು. ''ವಿಧಾನಸಭಾ ಚುನಾವಣೆಗಳಲ್ಲಿ ತಟಸ್ಥವಾಗಿ ಉಳಿಯಲು ಕರ್ನಾಟಕ ರಾಜ್ಯ ರೈತ ಸಂಘ ನಿರ್ಧರಿಸಿದನ್ನು ವಿರೋಧಿಸಿ ಹೊರಬಂದ ರೇವಣ್ಣಸಿದ್ಧಯ್ಯ 'ಕರ್ನಾಟಕ ರೈತರು ಹಾಗೂ ರೈತ ಕೂಲಿಕಾರರ ಸಂಘ'ವನ್ನು ಸ್ಥಾಪಿಸಿದರು.''[೨೯] ಅಲ್ಲದೆ ಚುನಾವಣೆಗಳಲ್ಲಿ ಕಾಂಗ್ರೆಸ್ (ಐ) ವಿರುದ್ಧ ವಿರೋಧ ಪಕ್ಷಗಳಿಗೆ ಸಹಕಾರ ನೀಡಲು ತೀರ್ಮಾನಿಸಿದರು. ೧೯೮೩ರ ಜನವರಿ ತಿಂಗಳಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಸಿರಗುಪ್ಪ ಕ್ಷೇತ್ರದಿಂದ ಸ್ಪರ್ಧಿಸಿ ಗೆದ್ದು ಬಂದರು. ಹೊರನೋಟಕ್ಕೆ ಈ ಇಬ್ಭಾಗಕ್ಕೆ ಚುನಾವಣೆ ಕಾರಣವಾಗಿದ್ದರೂ ತಾತ್ವಿಕವಾಗಿ ರೈತ ಸಂಘದೊಳಗಿದ್ದ ಸ್ಥಾಪಿತ ಹಿತಾಸಕ್ತಿಗಳ ವಿರುದ್ಧದ ಧ್ವನಿಯೂ ಆಗಿತ್ತು. ರೈತ ಸಂಘ ಚುನಾವಣೆಯಲ್ಲಿ ಸ್ಪರ್ಧಿಸುವ ವಿಚಾರವಾಗಿ ಸಂಘದೊಳಗೆ ಸಾಕಷ್ಟು ಘರ್ಷಣೆಗಳಿದ್ದವು. ಈ ಕೂಲಿಕಾರರ ಸಂಘ ಮೂಲತಃ ಜನತಾ ಸರ್ಕಾರಕ್ಕೆ ಬೆಂಬಲ ನೀಡುವ ಧೋರಣೆಯನ್ನು ತಾಳಿತು. ಈ ಧೋರಣೆ ಲೋಕಸಭಾ ಚುನಾವಣೆ ಸಮಯಕ್ಕೆ ಪೂರ್ಣ ಮಟ್ಟದಲ್ಲಿ ಪ್ರಕಟವಾಯಿತು.

೧೯೮೩ರಲ್ಲಿ ಕರ್ನಾಟಕದಲ್ಲಿ ಜನತಾಪಕ್ಷ ಸರ್ಕಾರ ರಚಿಸಲು ಆಗ ನಡೆದ ರೈತ ಹೋರಾಟವೇ ಕಾರಣ ಎಂಬುದನ್ನು ಅನೇಕ ರಾಜಕೀಯ ವಿಶ್ಲೇಷಣಕಾರರು ಈಗಾಗಲೇ ವಿವರಿಸಿದ್ದಾರೆ. ಜನತಾ ಸರ್ಕಾರದಿಂದ ರೈತರಿಗಾದ ತೊಂದರೆಗಳನ್ನು ಗಮನಿಸಿದ ನಂಜುಂಡಸ್ವಾಮಿ ಅವರು-

> ''ಮೊದಲು ನಾವು ಹೊಸ ಕರ್ನಾಟಕವನ್ನು ಕಟ್ಟಲೇ ಬೇಕು. ನೀಚರ ಕೈಯಲ್ಲಿ
> ಕರ್ನಾಟಕವನ್ನು ಕೊಟ್ಟು, ನಾವು ಸುಮ್ಮನೆ ಕೂರಲು ಆಗುವುದಿಲ್ಲ 'ಆ ಪಕ್ಷ
> ಈ ಪಕ್ಷ ಯಾವುದೇ ಪಕ್ಷಗಳಿರಬಹುದು, ಈ ಹಲ್ಕಮುಂಡೇಗಂಡರ ಕೈಯಲ್ಲಿ
> ನಾವು ಸರ್ಕಾರ ಕೊಟ್ಟು ಸುಮ್ಮನೆ ಕೂರೋದೆ?''[೩೦]

-ಎಂಬ ಹೇಳಿಕೆಗಳು ಸಂಘದ ಕಾರ್ಯಕರ್ತರನ್ನು ಹುರಿದುಂಬಿಸಿದವು. ಈ ಮಾತುಗಳು ರಾಜಕೀಯ ಅಧಿಕಾರದ ಆಸೆಯನ್ನೂ ಮೂಡಿಸಿದವು ಎಂದರೆ ತಪ್ಪಾಗಲಾರದು.

ಪ್ರೊಫೆಸರ್ ಅವರ ನಿಷ್ಠುರತೆ ಏನಿದೆಯೋ ಅದು ಶಕ್ತಿ ಆಗಿದ್ದಷ್ಟೇ ಅವರ ದೌರ್ಬಲ್ಯ ಕೂಡ ಆಗಿತ್ತೆಂದರೆ ತಪ್ಪಾಗಲಾರದು. ''೧೯೮೪ರಲ್ಲಿ "ಮತದಾರರ ಅಭ್ಯರ್ಥಿಗಳು" ಎನ್ನುವ ಹೆಸರಿನಲ್ಲಿ ರೈತ ಸಂಘವನ್ನು ಚುನಾವಣೆಗೆ ಎಳೆದುಕೊಂಡು ಬಂದರು.''[೩೧] ಬಹುಶಃ ಇದೇ ರೈತ ಚಳವಳಿಯಲ್ಲಿ ಆದಂಥ ಐತಿಹಾಸಿಕ

ಪ್ರಮಾದ ಎಂದರೆ ತಪ್ಪಾಗಲಾರದು. ಅಲ್ಲಿಯವರೆಗೆ ಯಾವ ಚಳವಳಿಯನ್ನು ಕಂಡರೆ ಸರ್ಕಾರ ಕುಳಿತಲ್ಲೇ ನಡುಗುತ್ತಿತ್ತೋ ಆ ಸರ್ಕಾರಕ್ಕೆ ಈಗ ಇವರೂ ನಮ್ಮ ಕೈಗೆ ಸಿಕ್ಕರು ಎಂಬ ಆಸೆ ಉಂಟಾಗಿ ಇವರನ್ನು ನಾವು ಇನ್ನೂ ಬಗ್ಗಿಸಬಹುದು ಎಂಬ ನಂಬಿಕೆ ಬಂದಿತು. ಇದಕ್ಕೂ ಒಂದು ಕಾರಣವಿರಬಹುದು. ಆಗಿನ ರಾಮಕೃಷ್ಣ ಹೆಗಡೆ ಸರ್ಕಾರ ಬಹುತೇಕ ರೈತ ಚಳವಳಿಯ ಬೆಂಬಲದಿಂದ ಅಧಿಕಾರಕ್ಕೆ ಬಂದಿದ್ದರೂ ಮೊದಲಿಗೆ ರೈತ ಚಳವಳಿಗಳ ಕಡೆ ಗಮನ ಹರಿಸಿದ್ದ ಸರ್ಕಾರ, ಅನಂತರದಲ್ಲಿ ಈ ಹೋರಾಟಗಳ ಕಡೆ ಅನಾದರವನ್ನು ಬೆಳೆಸಿಕೊಂಡಿತು. ''ಚಳವಳಿ ತಾನೇ ಕ್ಷೀಣವಾಗುತ್ತದೆ. ಅದಕ್ಕೆ ನಾವು ಗಮನ ಕೊಡದೆ ಹೋದರೆ ಸಾಕು' ಅನ್ನುವ ಉಪೇಕ್ಷೆ ಆರಂಭವಾಯಿತು. 'ಇವರ ಹತ್ತಿರ ಹೋದರೆ ತಾನೇ ಚಳವಳಿ ಬೆಳೆಯುವುದು, ಇವರ ಮಾತಿಗೆ ಉತ್ತರ ಕೊಟ್ಟರೆ ತಾನೇ ಸಮಸ್ಯೆ ದೊಡ್ಡದಾಗುವುದು, ಈ ಚಳವಳಿ ಎಷ್ಟು ದಿನ ನಡೆಯುತ್ತೆ, ಹಾಗೇ ಅದರ ಸಾವನ್ನು ಅದೇ ಕಾಣುತ್ತದೆ''[೨೨] ಅನ್ನುವ ಒಂದು ವಿಧವಾದ ತಾತ್ಸಾರ ಮನೋಭಾವನೆ ತೋರಿದರು. ಈ ಘಟ್ಟದಲ್ಲಿ ಬಹುಶಃ ರೈತ ಚಳವಳಿಯ ನಾಯಕರುಗಳಿಗೆ ತಾವೇ ಸರ್ಕಾರ ರಚಿಸದಿದ್ದರೆ ನಮ್ಮ ಸಮಸ್ಯೆಗಳಿಗೆ ಉತ್ತರ ಸಿಗಲಾರದು ಅನ್ನುವ ಅಭಿಪ್ರಾಯ ಮೂಡಿರಬೇಕು. ಈ ರೀತಿ ವಿಧಾನಸಭಾ ಚುನಾಣೆಗಳು ವಿರೋಧ ಪಕ್ಷಗಳಿಗೆ ಬೆಂಬಲ ನೀಡಿ ಕಾಂಗ್ರೇಸ್ (ಐ) ಸರ್ಕಾರ ಉರುಳಿಸುವಂತೆ ರೈತರಿಗೆ ಮಂಡ್ಯದ ಬೃಹತ್ ರೈತ ಸಮಾವೇಶದಲ್ಲಿ ಕರೆ ನೀಡಿ ನಿರ್ಣಯ ಅಂಗೀಕರಿಸಿದರು. ಈ ರೀತಿ ಕರ್ನಾಟಕ ರಾಜ್ಯ ರೈತ ಸಂಘ ಸಕ್ರಿಯ ರಾಜಕೀಯ ಪ್ರವೇಶ ಮಾಡಲು ನಂಜುಂಡಸ್ವಾಮಿ ಪ್ರೇರಣೆ ನೀಡಿದರು. ಆದರೆ ೧೯೮೩ರ ವಿಧಾನಸಭಾ ಚುನಾವಣೆಗಳಲ್ಲಿ ಅದು ನೇರವಾಗಿ ಸ್ಪರ್ಧಿಸಲಿಲ್ಲ. ಮುಂದೆ ೧೯೮೫ರ ನಂತರ ಕರ್ನಾಟಕ ರಾಜ್ಯ ರೈತ ಸಂಘ ಜನತಾ ಪಕ್ಷದ ಧೋರಣೆಗಳಿಗೆ ಬೇಸತ್ತು ೧೯೮೯ರ ಚುನಾವಣೆಯಲ್ಲಿ ಸ್ಪರ್ಧಿಸುವುದಾಗಿ ತಿಳಿಸಿತು. ಈಗ ರೈತ ಸಂಘದ ಸಂಘಟನೆಯಲ್ಲಿ ಬೆನ್ನೆಲುಬಾಗಿರುವ ''ನಂಜುಂಡಸ್ವಾಮಿ ಅವರ ನೇತೃತ್ವದಲ್ಲಿ 'ಕನ್ನಡ ದೇಶ' ಪಕ್ಷದ ಉದಯವಾಗಿದ್ದು, ಅದು ಮುಂಬರುವ ವಿಧಾನ ಸಭೆಯ ಚುನಾವಣೆಯಲ್ಲಿ ರಾಜ್ಯದ ಎಲ್ಲಾ ಕ್ಷೇತ್ರಗಳಲ್ಲೂ ತನ್ನ ಅಭ್ಯರ್ಥಿಗಳನ್ನು ನಿಲ್ಲಿಸುವುದಾಗಿ ಹೇಳಿತು''[೨೩]. ೧೯೮೯ರ ವಿಧಾನಾಸಭಾ ಚುನಾವಣೆಯಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ೧೧೧ ಸ್ಥಾನಗಳಿಗೆ ತನ್ನ ಅಭ್ಯರ್ಥಿಗಳನ್ನು ನಿಲ್ಲಿಸಿತ್ತು. ಅವರಲ್ಲಿ ೮೯ ಜನ ಅಭ್ಯರ್ಥಿಗಳು ಠೇವಣಿಯನ್ನು ಕಳೆದುಕೊಂಡರು. ಬೆಳಗಾವಿ ಹಾಗೂ ಧಾರವಾಡ ಜಿಲ್ಲೆಗಳು ಮಾತ್ರ ರೈತ ಸಂಘದ ಅಭ್ಯರ್ಥಿಗಳನ್ನು ಗೆಲ್ಲಿಸಿ ವಿಧಾನಸಭೆಗೆ ಕಳುಹಿಸಿದ ಕೀರ್ತಿಗೆ ಪಾತ್ರವಾದವು.

''ಧಾರವಾಡ ಹಾಗೂ ಬೆಳಗಾವಿ ಕ್ಷೇತ್ರಗಳಿಂದ ಪಾಟೀಲ್ ಬಾಬಾಗೌಡ ರುದ್ರಗೌಡರು ಸ್ಪರ್ಧಿಸಿ ಆಯ್ಕೆಯಾಗಿದ್ದರು. ಆನಂತರ ಅವರು ಧಾರವಾಡ ಗ್ರಾಮಾಂತರ ಕ್ಷೇತ್ರಕ್ಕೆ ರಾಜೀನಾಮೆ ನೀಡಿದ್ದರಿಂದ ಆ ಸ್ಥಾನಕ್ಕೆ ನಡೆದ ಉಪಚುನಾವಣೆಯಲ್ಲಿ ನಂಜುಂಡಸ್ವಾಮಿ ಅವರು ಆಯ್ಕೆಯಾದರು. ಈ ಚುನಾವಣೆಯಲ್ಲಿ ರೈತ ಸಂಘ ಎರಡು ಸ್ಥಾನಗಳನ್ನು ಗೆದ್ದು ಸುಮಾರು ೨೦ ಸ್ಥಾನಗಳಲ್ಲಿ ಎರಡನೆಯ ಶಕ್ತಿಯಾಗಿ

ಕಾಣಿಸಿಕೊಂಡದ್ದು''[೨೪] ರೈತರ ಸರ್ಕಾರವನ್ನು ರಚಿಸುತ್ತೇವೆಂಬ ನಂಜುಂಡಸ್ವಾಮಿ ಅವರ ಮಹತ್ವಾಕಾಂಕ್ಷೆಗೆ ಪೆಟ್ಟು ಬಿದ್ದಂತಾಯಿತು. ಯಾಕೆಂದರೆ ರಾಜಕೀಯ ಹಾಗೂ ಜಾತಿಗಳ ನಡುವೆ ಇರುವ ಅಂತರ್ ಸಂಬಂಧ, ಅದು ರಾಜಕೀಯ ಹಾಗೂ ರೈತ ಸಂಘದ ನಡುವೆ ಇರುವ ಅಂತರ್ ಸಂಬಂಧ, ಅದು ರಾಜಕೀಯ ಹಾಗೂ ರೈತ ಸಂಘದ ನಡುವೆ ಇಲ್ಲದೇ ಇದ್ದದು ಒಂದು ಪ್ರಮುಖ ಅಂಶವಾಗಿದೆ. ರೈತ ಸಂಘದಲ್ಲಿ ರಾಜಕೀಯ ಪ್ರಶ್ನೆ ಬಂದಾಗ ಜಾತಿ ಪ್ರಧಾನ ಪಾತ್ರ ವಹಿಸಿದ್ದರಿಂದ ಚುನಾವಣೆಯಲ್ಲಿ ಹೆಚ್ಚಿನ ಸ್ಥಾನಗಳನ್ನು ಗೆಲ್ಲಲು ಸಾಧ್ಯವಾಗಲಿಲ್ಲ. ಒಂದು ಕಡೆ, ಪ್ರಬಲ ರಾಜಕೀಯ ಶಕ್ತಿಯಾಗಿ ಉದ್ಭವಿಸುತ್ತಿರುವ ರೈತ ಸಂಘದ ಬಗ್ಗೆ ಕಾಂಗ್ರೆಸ್ ಮತ್ತು ಜನತಾದಳ ಪಕ್ಷಗಳಿಗೆ ಉಂಟಾದ ಕಳವಳ, ಇದರಿಂದಾಗಿ ವಿಧಾನಸಭೆಯಲ್ಲಿ ಇಬ್ಬರು ರೈತ ಸಂಘದ ಶಾಸಕರಿದ್ದರೂ ಅವರಿಗೆ ಸಿಗುತ್ತಿದ್ದ ಮಾನ್ಯತೆ, ರೈತರಿಗೆ ಕಿರುಕುಳ ಕೊಡುತ್ತಿದ್ದ ಹಲವಾರು ಕಾನೂನುಗಳ ತಿದ್ದುಪಡಿ ಮೊದಲು ಆಡಳಿತ ಕಾಂಗ್ರೆಸ್ ಪಕ್ಷ ತೋರಿಸಿದ ಅವಸರ, ಯಾವುದೇ ವೈಯಕ್ತಿಕ ಅಥವಾ ಸಾಮೂಹಿಕ ಸಮಸ್ಯೆಯನ್ನು ತುರ್ತಾಗಿ ಪರಿಹರಿಸುವ ಕಾಂಗ್ರೆಸ್ ಪಕ್ಷದ ಕಾತುರ. ಆದರೆ, ಅದಕ್ಕಿದ್ದ ಮೂಲ ಉದ್ದೇಶ ರೈತ ಚಳವಳಿಗೆ ಸಮಸ್ಯೆಗಳಿಲ್ಲದಂತೆ ಮಾಡುವುದು, ರೈತ ಚಳವಳಿಯನ್ನು ತಣ್ಣಗೆ ಮಾಡುವುದಾಗಿತ್ತು.

೧೯೮೯ ರಿಂದ ೧೯೯೪ರ ವರೆಗಿದ್ದ ಕಾಂಗ್ರೆಸ್ ಸರಕಾರ, ರೈತರ ಬಾಕಿಯ ಬಲವಂತ ವಸೂಲಿಯನ್ನು ಪೂರ್ಣವಾಗಿ ನಿಲ್ಲಿಸಿದ್ದು, ತುಂಡುಭೂಮಿ ಕಾಯಿದೆ ರದ್ದು ಮಾಡಿದ್ದು, ಬಗರ್ ಹುಕುಂ ಸಾಗುವಳಿ ಸಕ್ರಮ ಮಾಡುವ ಕಾನೂನು ರಚಿಸಿದ್ದು, ಆಶ್ರಯ ಯೋಜನೆ ಜಾರಿಗೆ ತಂದದ್ದು, ಉಚಿತ ವಿದ್ಯುಚ್ಛಕ್ತಿ ಸೌಲಭ್ಯ ಒದಗಿಸಿದ್ದು, ೧೦,೦೦೦ ರೂಪಾಯಿಗಳವರೆಗಿನ ಸಾಲ ರದ್ದು ಮಾಡಿದ್ದು, ಬಡ್ಡಿ, ಸುಸ್ತಿ ಬಡ್ಡಿ ರದ್ದು ಮಾಡಿದ್ದು, ಹಿಂದಿನ ಜನತಾದಳ ಸರ್ಕಾರ ಸಹಕಾರ ಕಾಯಿದೆಗೆ ತಂದಿದ್ದ ೧೦೧ (ಸಿ) ತಿದ್ದುಪಡಿ ರದ್ದು ಮಾಡಿದ್ದು, ಇದರ ಜೊತೆಗೆ, ಯಾವುದೇ ಜಿಲ್ಲೆಯ, ಯಾವುದೇ ರೈತ ಕಾರ್ಯಕರ್ತನ ವೈಯಕ್ತಿಕ ಸಮಸ್ಯೆಗಳನ್ನು, ಜರೂರಾಗಿ ಬಗೆಹರಿಸುವ ಕೆಲಸವನ್ನು ಕಾಂಗ್ರೆಸ್ ಸರ್ಕಾರ ಮಾಡಿತು.

ಇದಕ್ಕೆ ಪೂರಕವಾಗಿ ರೈತ ಸಂಘದ ಕೆಲವು ಮುಖ್ಯ ಕಾರ್ಯಕರ್ತರೂ ಸಹ ಸುಲಭ ಮಾರ್ಗದಲ್ಲಿ ಇಬ್ಬರು ಶಾಸಕರ ಮೂಲಕ ತಮ್ಮ ವೈಯುಕ್ತಿಕ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವ ದಾರಿಹಿಡಿದರು. ಸಾಮೂಹಿಕ ಸಮಸ್ಯೆಗಳಿಗಾಗಿ ಹೋರಾಡುವ ಬಗ್ಗೆ ಆಸಕ್ತಿ ಕಳೆದುಕೊಂಡು ಹಾಗೂ ರಾಜಕೀಯ ಶಕ್ತಿಗ್ರಹಣದಿಂದ ದೊರಕುವ ಸುಲಭ ಸೌಲಭ್ಯಗಳ ಬಗ್ಗೆ ಆಸಕ್ತಿ ಹೆಚ್ಚಿಸಿಕೊಂಡರು.

ಚುನಾವಣಾ ರಾಜಕಾರಣದ ಮೂಲಕ ಶಕ್ತಿಗ್ರಹಣ, ಆ ಮೂಲಕ ಸಮಸ್ಯೆಗಳೆನ್ನೆಲ್ಲ ಬಗೆಹರಿಸಿಕೊಳ್ಳಬಹುದೆಂಬ ಆಲೋಚನೆ ಗ್ರಾಮಮಟ್ಟಕ್ಕೂ ಇಳಿಯಿತು. ರೈತ ಸಂಘ ಪಂಚಾಯಿತಿ ಚುನಾವಣೆಗಳಲ್ಲಿ ಸ್ಪರ್ಧೆ ಮಾಡಲು ತೀರ್ಮಾನಿಸಿದಾಗ, ಗ್ರಾಮ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿ ಮಟ್ಟದಲ್ಲಿಯೂ ರಾಜಕೀಯ ಅಧಿಕಾರಕ್ಕಾಗಿ ತಮ್ಮ ತಮ್ಮೊಳಗೇ ಪೈಪೋಟಿ ಕಲಹಗಳು ಕಾಣಿಸಿಕೊಂಡದ್ದು

ಈ ಸಂದರ್ಭದಲ್ಲಿಯೇ. ಅಲ್ಲದೇ ಬೇರೆ ರಾಜಕೀಯ ಪಕ್ಷಗಳ ಜೊತೆಗೆ, ಪಂಚಾಯಿತಿ ಚುನಾವಣೆಗಳಿಗೆ ಮುನ್ನವೂ, ಚುನಾವಣೆಯಲ್ಲಿ ಗೆದ್ದ ನಂತರವೂ ಹೊಂದಾಣಿಕೆ ಚಟುವಟಿಕೆಗಳು ನಡೆದದ್ದು ಮೊದಲ ಬಾರಿಗೆ ಈ ಮಟ್ಟದಲ್ಲಿಯೇ ನಂಜುಂಡಸ್ವಾಮಿ ಹಾಗೂ ಬಾಬಾಗೌಡರ ನಡುವೆ ನಡೆದಂಥ ವೈಯಕ್ತಿಕ ಜಗಳಗಳೇ ರೈತ ಸಂಘ ಮೊದಲ ಬಾರಿಗೆ ಒಡೆದದ್ದಕ್ಕೆ ಕಾರಣ[೨೫]ವೆಂದು ಕಡಿದಾಳು ಶಾಮಣ್ಣ ಅವರು ಹೇಳಿದ್ದಾರೆ.

ಬಿಜೆಪಿ ಪಕ್ಷದ ಆಡಳಿತಾವಧಿಯಲ್ಲಿಯೇ ಬಾಬರಿ ಮಸೀದಿಯನ್ನು ಕೆಡವಿದ್ದು, ಆನಂತರ ಆ ಪಕ್ಷಕ್ಕೆ ಕಂಡುಬಂದ ಬೆಂಬಲ ರೈತ ಸಂಘದ ಕೆಲವು ಮುಖಂಡರುಗಳನ್ನು ಧೃತಿಗೆಡಿಸಲು ಪ್ರಾರಂಭಿಸಿತು. ರೈತ ಸಮಸ್ಯೆಗಳ ಬಗ್ಗೆ ತೀವ್ರವಾಗಿ ಪ್ರತಿಕ್ರಿಯಿಸುತ್ತಿರುವ ಕಾರ್ಯಕರ್ತರ ಮೂಲಕ ಪ್ರಶ್ನಿಸುವುದೂ ಪ್ರಾರಂಭವಾಯಿತು. ವರ್ಣಾಶ್ರಮ ಧರ್ಮ, ಜಾತಿ ಪದ್ಧತಿ, ಮೂಢನಂಬಿಕೆಗಳನ್ನು ಮುಂದುವರಿಸುವ, ಕೆಲವೇ ಜನರ ಸುಖಕ್ಕಾಗಿ ಯೋಜನೆಗಳನ್ನು ರೂಪಿಸುವ, ಕೇವಲ ಪುರೋಹಿತಶಾಹಿ ಮತ್ತು ವ್ಯಾಪಾರಿ ವರ್ಗದ ಹಿತೈಷಿಯಾದ ಬಿಜೆಪಿ ಪಕ್ಷ ರೈತ ವರ್ಗದ ಹಾಗೂ ರೈತಾಪಿ ಜನರ ವಿರೋಧಿ ಎನ್ನುವುದನ್ನು ಲೆಕ್ಕಿಸದೆ ರೈತ ಸಂಘದ ಕೆಲವು ಮುಖಂಡರು ಅದರೊಂದಿಗೆ ಹೊಂದಾಣಿಕೆಗೆ ಸಿದ್ಧರಾಗಿರುವುದು ಕಂಡು ಬಂದಿತು. ಕೇವಲ ಹಿಂದಿನ ಸಮಾಜವಾದಿ ಚಳವಳಿಯ ಸಂಬಂಧವಿರುವವರು ಮಾತ್ರ ಈ ಹೊಂದಾಣಿಕೆ ವಿರೋಧಿಗಳು, ಅಂದರೆ ನಂಜುಂಡಸ್ವಾಮಿ ಮಾತ್ರ ವಿರೋಧಿಸುತ್ತಿದ್ದಾರೆ. ಉಳಿದೆಲ್ಲಾ ಕಾರ್ಯಕರ್ತರೂ ಈ ಹೊಂದಾಣಿಕೆಗೆ ಒಪ್ಪಿಗೆಯಿದೆಯೆಂದೂ ಗುಮಾನಿ ಹುಟ್ಟಿಕೊಂಡವು.

ಬಾಬರಿ ಮಸೀದಿ ಪ್ರಕರಣದಿಂದಾಗಿ ಬಿಜೆಪಿ ಪಕ್ಷದ ಪರವಾಗಿ ಎದ್ದ ಅಲೆಯೇ ಶಾಸನಸಭಾ ಚುನಾವಣೆಯಲ್ಲಿ ರೈತ ಸಂಘಕ್ಕೆ ಪ್ರಬಲವಾದ ಪೆಟ್ಟುಕೊಟ್ಟಿದ್ದು. ಕಾರಣವೆಂದರೆ ಹಳ್ಳಿಗಾಡಿನ ಬಹುಪಾಲು ಹಿಂದುಳಿದ ವರ್ಗಗಳ, ಹರಿಜನ ವರ್ಗದ ಹಾಗೂ ಮಧ್ಯಮ ಜಾತಿಯ ಅವಕಾಶವಾದಿ ರಾಜಕಾರಣಿಗಳು ಕೇವಲ ಸ್ವಾರ್ಥ ಸಾಧನೆಗಾಗಿ ಬಿಜೆಪಿ ಪಕ್ಷಕ್ಕೆ ಒಲವು ತೋರಿಸಿದರು. ಕಾರಣ ರೈತರ ಮತಗಳಲ್ಲಿ ಸ್ವಲ್ಪಭಾಗ ಬಿಜೆಪಿ ಪಾಲಾದುದರಿಂದ ರೈತ ಸಂಘ ಎಲ್ಲೆಡೆ ಸೋಲನ್ನನುಭವಿಸಬೇಕಾಯಿತು. ರೈತ ಸಂಘದ ಮೂಲಕ ತಮ್ಮ ರಾಜಕೀಯ ಭವಿಷ್ಯ ರೂಪಿಸಿಕೊಳ್ಳಬೇಕೆಂದಿದ್ದವರಿಗೆ ಈ ಚುನಾವಣೆ ಒಂದು ದೊಡ್ಡ ಆಘಾತವಾಗಿ ಕಾಣಿಕೊಂಡಿತು.

ನಿಜವಾದ ಜನನಾಯಕರಾದ ನಂಜುಂಡಸ್ವಾಮಿ ಅವರನ್ನು ನಿರಂತರ ಭಿನ್ನಮತೀಯರೆಂದೇ ಪರಿಗಣಿಸಿದ ಕರ್ನಾಟಕದ ಆಳುವ ವಲಯ ಹಾಗೂ ಯೋಜನಾ ವಲಯಗಳು ಅವರ ಆರ್ಥಿಕ ಚಿಂತನೆಗಳನ್ನು ಗ್ರಹಿಸಲೇ ಇಲ್ಲ. ರೈತ ಸಂಘವನ್ನು ಒಡೆದು ಎಂ.ಡಿ.ಎನ್ ಅವರ ಪ್ರಭಾವವನ್ನು ಕಡಿಮೆ ಮಾಡದಿದ್ದರೆ ತಮ್ಮ ಕುಟಿಲ ಅಧಿಕಾರ ರಾಜಕಾರಣ ಸಲೀಸಾಗಿ ನಡೆಯಲಾರದು ಎಂದು ನಂಬಿದ ರಾಜಕೀಯ ಮುಖಂಡರು ರೈತ ಸಂಘವನ್ನು ಒಡೆದರು; ಕೇಸುಗಳು ಹಾಗೂ ಅಪಪ್ರಚಾರಗಳ ಮೂಲಕ ಎಂ.ಡಿ.ಎನ್ ಅವರಿಗೆ ಕಿರುಕುಳ

ಕೊಡತೊಡಗಿದರು. ಕನ್ನಡ ನಾಡಿನ ಬಹುತೇಕ ಬುದ್ಧಿಜೀವಿಗಳು ಕೂಡ ಅವರ ಚಿಂತನ ಕ್ರಮವನ್ನು ಸರಿಯಾಗಿ ಗ್ರಹಿಸದೇ ಹೋದದ್ದು ವಿಪರ್ಯಾಸದ ಸಂಗತಿ.

ಭಾರತದ ಕೃಷಿ ವ್ಯವಸ್ಥೆಯನ್ನು ಪ್ರಪಂಚದ ಶಿಸ್ತಿಗೆ ಒಳಪಡಿಸುವ ಹಾಗೂ ಭಾರತದ ಕೃಷಿ ಮಾರುಕಟ್ಟೆಯನ್ನು ಪ್ರಪಂಚದ ಮಾರುಕಟ್ಟೆಗೆ ಲೀನಗೊಳಿಸುವ 'ಜಾತೀಕರಣ' ಹಾಗೂ 'ಉದಾರೀಕರಣ' ನೀತಿಗಳ ವಿರುದ್ಧ ಕೇಂದ್ರದ ಕಾಂಗ್ರೆಸ್ ಸರ್ಕಾರದ ವಿರುದ್ಧ ೧೯೯೨ ರಿಂದಲೇ ರೈತ ಸಂಘ ಹೋರಾಡುತ್ತಾ ಬಂದಿತ್ತು. ''೧೯೯೪ರ ವಿಧಾನಸಭಾ ಚುನಾವಣೆಯಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ೧೧೨ ಸ್ಥಾನಗಳಿಗೆ ಸ್ಪರ್ಧಿಸಿತು. ಆದರೆ ೧೦೧ ಅಭ್ಯರ್ಥಿಗಳು ಠೇವಣಿಯನ್ನು ಕಳೆದುಕೊಂಡರು. ಪಾಂಡವಪುರದಿಂದ ಕೆ.ಎಸ್. ಪುಟ್ಟಣ್ಣಯ್ಯ ಅವರು ಗೆದ್ದು ವಿಧಾನಸಭೆಯನ್ನು ಪ್ರವೇಶಿಸಿದರು.''[೨೬] ಈ ಚುನಾವಣೆಯಿಂದ ರೈತ ಸಂಘ ನಾಲ್ಕನೇ ಸ್ಥಾನಕ್ಕೆ ಕುಸಿದಿದ್ದು ರೈತ ಸಂಘದ ಕೆಲವು ಮುಖಂಡರಿಗೆ ಮುಂದೆ ತಮಗೆ ಭವಿಷ್ಯವೇ ಇಲ್ಲವೆಂಬ ನಿರಾಶೆ ಮೂಡಲು ಕಾರಣವಾಯಿತು. ಸಂಘಟನೆಯ ಕೆಲಸ ಸ್ಥಗಿತಗೊಂಡಿದ್ದಕ್ಕೂ ಇದೇ ಕಾರಣವೆಂದು ಹೇಳಬಹುದು.

ಬಿಜೆಪಿ ಪರೋಕ್ಷವಾಗಿ ಕೃಷಿಗೆ ಮಾರಕವಾದ ನೀತಿಗಳಿಗೆ ಬೆಂಬಲ ಕೊಟ್ಟಿದ್ದರೂ ಕೂಡ ತೆರೆಮರೆಯಲ್ಲಿ ರೈತ ಸಂಘದ ಕೆಲವು ಮುಖಂಡರು ಬೇರೆ ಯಾವುದಾದರೂ ರಾಜಕೀಯ ಪಕ್ಷದೊಂದಿಗೆ, ಹೋರಾಟದ ಸಿದ್ಧಾಂತಕ್ಕೆ ತಿಲಾಂಜಲಿ ಕೊಟ್ಟು ಚುನಾವಣಾ ಹೊಂದಾಣಿಕೆ ಮಾಡಿಕೊಳ್ಳುವ ಚರ್ಚೆಗಳನ್ನು ಮತ್ತು ಗುಪ್ತ ಸಮಾಲೋಚನೆಗಳನ್ನು ೧೯೯೪ರ ಚುನಾವಣಾ ನಂತರವೇ ಪ್ರಾರಂಭಿಸಿದರು. ೧೯೯೪ರ ಶಾಸನಸಭಾ ಚುನಾವಣಾ ನಂತರವೇ, ಬರುವ ೧೯೯೬ರ ಲೋಕಸಭಾ ಚುನಾವಣೆಗಳಿಗೆ ಸಂಬಂಧಿಸಿದಂತೆ ಬೆಳಗಾವಿ ಜಿಲ್ಲೆಯ ಮುಖಂಡರು ಜನತಾದಳದೊಂದಿಗೆ ಮಾತುಕತೆ ಪ್ರಾರಂಭಿಸಿದರು. ಈ ಮುಖಂಡರ ಹೊಂದಾಣಿಕೆ ಆಸೆಗಳು ಸ್ಪಷ್ಟವಾಗಿ ಹೊರಬಂದದ್ದು ೧೯೯೬ರ ರಾಜ್ಯಸಭಾ ಚುನಾವಣಾ ಕಾಲಕ್ಕೆ. ಇದೇ ವೇಳೆಯಲ್ಲಿ ಕೆಂಟುಕಿ ಕೋಳಿ ಮಾರಾಟ ಮಳಿಗೆ ಮೇಲೆ ದಾಳಿ ಮಾಡಿದ ನಂತರ ರೈತ ಸಂಘದ ಹಲವಾರು ಪದಾಧಿಕಾರಿಗಳು ಬೆಂಗಳೂರು ಜೈಲಿನಲ್ಲಿದ್ದಾಗ ನಂಜುಂಡಸ್ವಾಮಿ ಅವರೂ ಕೂಡ ಜೈಲಿನಲ್ಲಿದ್ದರು. ಇದೇ ಸಂದರ್ಭದಲ್ಲಿ ಇದ್ದ ಒಂದೇ ಒಂದು ರೈತ ಸಂಘದ ಶಾಸಕರ ಮತವನ್ನು ಯಾವುದಾದರೂ ಪಕ್ಷಕ್ಕೆ ಕೊಟ್ಟು ತಮ್ಮ ಬಲವು ಪ್ರದರ್ಶಿಸಿ ಆ ಪಕ್ಷಗಳ ಬಲವನ್ನು ಗಳಿಸುವ ವಿಚಾರದಲ್ಲಿ ನಂಜುಂಡಸ್ವಾಮಿ ಬಳಿಗೆ ತಂದಿದ್ದರು. ಈ ಪ್ರಯತ್ನ ತಪ್ಪಿಹೋದ ನಂತರ ನಂಜುಂಡಸ್ವಾಮಿ ಒಬ್ಬರೇ ರಾಜಕೀಯ ಹೊಂದಾಣಿಕೆಗೆ ಅಡ್ಡಿಯಾಗಿದ್ದಾರೆ ಎಂದು ಬಿಂಬಿಸಿ, ರಾಜ್ಯದ ಎಲ್ಲಾ ಜಿಲ್ಲೆಗಳ ಕಾರ್ಯಕರ್ತರಲ್ಲೂ ಎಂ.ಡಿ.ಎನ್ ಅವರ ಮೇಲೆ ಆರೋಪ ಹೊರಿಸಲು ಆರಂಭಿಸಲಾಯಿತು. ಜೊತೆಗೆ ಹೊಂದಾಣಿಕೆ ಬಗೆಗೆ ಗ್ರಾಮಮಟ್ಟದಿಂದಲೂ ಅಭಿಪ್ರಾಯ ಕೇಳುವ ಪ್ರಯತ್ನ ಮತ್ತು ಪ್ರಕ್ರಿಯೆ ೧೯೯೬ ರಲ್ಲಿ ಸಂಘದ ರಾಜ್ಯ ಸಮಿತಿ ಮೂಲಕ ನಡೆಯಿತು. ಈ ವೇಳೆಗಾಗಲೇ ಬೆಳಗಾವಿಯ ಒಂದು ತಂಡ ತರಾತುರಿಯಲ್ಲಿ ಬಿಜೆಪಿ ಪಕ್ಷಕ್ಕೆ ಪಕ್ಷಾಂತರ ಮಾಡಿತ್ತು.

೧೯೯೮ರ ಕಾಲಕ್ಕೆ ಬಿಜೆಪಿ ಮಂಡ್ಯ ಜಿಲ್ಲೆ ನಾಯಕರಿಗೂ ಲೋಕಸಭಾ ಸದಸ್ಯತ್ವದ ಆಮಿಷ ಒಡ್ಡಿದ್ದರೂ, ಮಂಡ್ಯ ಜಿಲ್ಲೆಯ ಹೋರಾಟ ನಿಷ್ಠ ಕಾರ್ಯಕರ್ತರ ಅಭಿಪ್ರಾಯದೆದುರು ಮಂಡ್ಯ ಜಿಲ್ಲೆಯ ನಾಯಕರು ಬಿಜೆಪಿಗೆ ಪಕ್ಷಾಂತರ ಮಾಡಲು ಧೈರ್ಯ ಮಾಡಲಿಲ್ಲ. ಹೀಗಿದ್ದರೂ, ತಮ್ಮ ವೈಯಕ್ತಿಕ ಅನುಕೂಲಕ್ಕೆ ತಕ್ಕಂತೆ ಶಾಸನಸಭಾ ಚುನಾವಣಾ ದೃಷ್ಟಿಯಿಂದ ಏಕೈಕ ಶಾಸಕ ಜನತಾದಳದೊಂದಿಗೂ, ಲೋಕಸಭಾ ಅವಕಾಶ ಸಾಧ್ಯತೆ ದೃಷ್ಟಿಯಿಂದ ಆ ಜಿಲ್ಲೆಯ ರೈತ ಸಂಘದ ಹಿರಿಯ ಮುಖಂಡರು ಬಿಜೆಪಿ ಪಕ್ಷದೊಂದಿಗೆ ಮೈತ್ರಿ ಸಂಬಂಧ ಬೆಳೆಸಿಕೊಂಡೇ ಬಂದರು.

ಈ ನಡುವೆ ಬೆಳಗಾವಿ ಮುಖಂಡರ ತಂಡ ಬಿಜೆಪಿಗೆ ಪಕ್ಷಾಂತರ ಮಾಡಿದ ನಂತರ, ಪ್ರಬಲ ಸಂಘಟನೆ ಎನಿಸಿಕೊಂಡಿದ್ದ ಮಂಡ್ಯ ಜಿಲ್ಲೆಯ ರೈತ ಮುಖಂಡರ ಚಟುವಟಿಕೆ ಪ್ರಾರಂಭವಾಯಿತು. ರೈತ ಸಂಘಟನೆಯನ್ನೇ ತಮ್ಮ ಹಿಡಿತಕ್ಕೆ ತೆಗೆದುಕೊಂಡು ಚುನಾವಣಾ ಹೊಂದಾಣಿಕೆಗೆ ರೈತ ಚಳವಳಿಯನ್ನು ಬಲಿಕೊಡುವ ಕಾರ್ಯಕ್ರಮವನ್ನು ನಂಜುಂಡಸ್ವಾಮಿ ಅವರ ಗೈರು ಹಾಜರಿಯಲ್ಲಿ ಮೊದಲ ಬಾರಿಗೆ ತಿಪ್ಪಗೊಂಡನಹಳ್ಳಿಯಲ್ಲಿ ನಡೆಸಿದರು.

ಅನಂತರ ಅಧ್ಯಕ್ಷರ ಅನುಮತಿಯಿಲ್ಲದೇ ನಂಜುಂಡಸ್ವಾಮಿ ಅವರ ಗೈರು ಹಾಜರಿಯಲ್ಲಿ ರಾಜ್ಯ ಸಮಿತಿ ಸಭೆಗಳು ಸತತವಾಗಿ ನಡೆದು ಈ ಚಟುವಟಿಕೆಗಳು ಮುಂದುವರಿದವು.

ಈ ಎಲ್ಲಾ ಸಭೆಗಳ ಹಿಂದಿನ ಉದ್ದೇಶ ಮೂರು ತೆರನಾದುದು.

೧. ''ನಂಜುಂಡಸ್ವಾಮಿ ಅವರ ವಿರುದ್ಧ ಆಪಾದನೆಗಳನ್ನು ಹೊರಿಸಿ ಅವರ ಬಗ್ಗೆ ಕಾರ್ಯಕರ್ತರ ಮನಸ್ಸನ್ನು ಕೆಡಿಸುವುದು.

೨. ಚುನಾವಣಾ ಹೊಂದಾಣಿಕೆಯಿಲ್ಲದೇ ರೈತ ಸಂಘಕ್ಕೆ ರಾಜಕೀಯ ಭವಿಷ್ಯವಿಲ್ಲ ಎನ್ನುವ ವಿಚಾರವನ್ನು ಕಾರ್ಯಕರ್ತರ ಮನಸ್ಸಿನಲ್ಲಿ ತುಂಬುವುದು.

೩. ಹೋರಾಟಕ್ಕಿಂತ ಅಧಿಕಾರ ಗ್ರಹಣದ ಮೂಲಕವೇ ರೈತರ ಸಮಸ್ಯೆಗಳನ್ನು ಯಶಸ್ವಿಯಾಗಿ ಬಗೆಹರಿಸಬಹುದೆಂಬ ಅಪಕ್ವ ವಿಚಾರಗಳನ್ನು ಕಾರ್ಯಕರ್ತರಲ್ಲಿ ಬಿತ್ತುವುದು.''[೨೭]

ಅಷ್ಟರಲ್ಲಿಯೇ ಮತ್ತೊಂದು ಲೋಕಸಭಾ ಚುನಾವಣೆ ಬಂದ ಕಾರಣದಿಂದಾಗಿ ಮಿತಿ ಮೀರಿದ ಬಿಜೆಪಿ ಆಕರ್ಷಣೆಯಿಂದಾಗಿ ಮಂಡ್ಯದ ರೈತ ಮುಖಂಡರೊಬ್ಬರು ಬಿಜೆಪಿ ಸೇರಿದ ಕಾರಣ, ದುರ್ಬಲಗೊಂಡ ಮಂಡ್ಯ ಜಿಲ್ಲೆ ಅಲ್ಲಿನ ಏಕೈಕ ಶಾಸಕನ ನಾಯಕತ್ವಕ್ಕೆ ಜೋತುಬಿದ್ದು ಹೊಂದಾಣಿಕೆ ಕಾರ್ಯಸಾಧನೆ ಮಾಡಲು ಮುಂದಾಯಿತು. ಇಡೀ ರೈತ ಸಂಘವನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡು ಬೇರೆ ರಾಜಕೀಯ ಪಕ್ಷಗಳೊಂದಿಗೆ ಚುನಾವಣಾ ಹೊಂದಾಣಿಕೆ ಮಾಡಿಕೊಳ್ಳಬೇಕೆಂಬ ಪ್ರಬಲ ಆಸೆ ಹೆಚ್ಚಾಯಿತು. ೧೯೯೯ರ ಶಾಸನಸಭಾ ಚುನಾವಣೆಗೆ ಮುನ್ನ ಹೊಂದಾಣಿಕೆ ಬಗ್ಗೆ ತಾಲ್ಲೂಕು ಮತ್ತು ಗ್ರಾಮಮಟ್ಟದ ಕಾರ್ಯಕರ್ತರ ಅಭಿಪ್ರಾಯ ಸಂಗ್ರಹಣೆ ನಡೆದಾಗ ಈ ಮೇಲ್ಕಂಡ ತಂಡಗಳಿಗೆ ಸೋಲು ಕಾದಿತ್ತು. ೧೯೯೯ರ ವಿಧಾನಸಭಾ ಚುನಾವಣೆಯಲ್ಲಿ ಕರ್ನಾಟಕ ರಾಜ್ಯ ರೈತ ಸಂಘದಿಂದ ಒಂಭತ್ತು ಜನ ಅಭ್ಯರ್ಥಿಗಳು ಸ್ಪರ್ಧಿಸಿದರು.

ಅವರಲ್ಲಿ ಏಳು ಅಭ್ಯರ್ಥಿಗಳು ಠೇವಣಿಯನ್ನು ಕಳೆದುಕೊಂಡರು. ೧೯೯೪ರಲ್ಲಿ ಪಾಂಡವಪುರದಿಂದ ಆಯ್ಕೆಯಾಗಿದ್ದ ಪುಟ್ಟಣ್ಣಯ್ಯನವರು ಸೋಲು ಅನುಭವಿಸಿದರು. ಈ ಕಡೆಗೆ ವಿಧಾನಸಭೆಯಲ್ಲೂ ರೈತ ಸಂಘದ ಯಾವ ಅಭ್ಯರ್ಥಿಯೂ ಶಾಸಕರಾಗಿಲ್ಲ.

ಕರ್ನಾಟಕ ರಾಜ್ಯ ರೈತ ಸಂಘ ಎರಡನೇ ಬಾರಿ ಒಡೆದದ್ದಕ್ಕೆ ನಂಜುಂಡಸ್ವಾಮಿ ಅವರ ಧೋರಣೆಗಳು ಹಾಗೂ ಬಸವರಾಜ್, ಪುಟ್ಟಣ್ಣಯ್ಯ ಹಾಗೂ ನಂಜುಂಡಸ್ವಾಮಿ ಈ ಮೂವರು ವ್ಯಕ್ತಿಗಳ ನಡುವೆ ನಡೆದಂಥ ಭಿನ್ನಾಭಿಪ್ರಾಯಗಳೇ ಕಾರಣ ಎಂಬುದು[೨೮] ಕಡಿದಾಳು ಶಾಮಣ್ಣ ಅವರ ಅಭಿಪ್ರಾಯ. ಸಿಯಾಟಲ್‌ನಲ್ಲಿ ನಡೆದ ವಿಶ್ವವ್ಯಾಪಾರಿ ಸಂಸ್ಥೆಯ ಸಭೆ ಹಾಗೂ ವಿಶ್ವ ರೈತ ಚಳವಳಿ ಕಾರ್ಯಕಾರಿಣಿಯಲ್ಲಿ ಭಾಗವಹಿಸಲು ಅಧ್ಯಕ್ಷರು ಹಾಗೂ ಕಾರ್ಯಾಧ್ಯಕ್ಷರು ವಿದೇಶಕ್ಕೆ ತೆರಳಿದ್ದ ವೇಳೆಯಲ್ಲಿ ಪುಟ್ಟಣ್ಣಯ್ಯ ಅವರು ಅಧ್ಯಕ್ಷರ ಅನುಮತಿ ಇಲ್ಲದೆಯೇ ರಾಜ್ಯ ಸಮಿತಿ ಸಭೆಗಳನ್ನು ನಡೆಸಿದರು. ಈ ಸಭೆಗಳಲ್ಲಿ ನಂಜುಂಡಸ್ವಾಮಿ ಅವರ ಮೇಲೆ ಆರೋಪಗಳನ್ನು ಹೊರಿಸಿ ರೈತ ಸಂಘದ ಸದಸ್ಯರನ್ನು ವಿಚಲಿತರಾಗುವಂತೆ ಮಾಡಿದರು ಎನ್ನಲಾಗಿದೆ. ಆನಂತರದಲ್ಲಿ ಪುಟ್ಟಣ್ಣಯ್ಯ ಅವರನ್ನು ಕರ್ನಾಟಕ ರಾಜ್ಯ ರೈತ ಸಂಘದಿಂದ ಹೊರಹಾಕಿದರು. ಹೊರಹೋದ ಮೇಲೆ ತಮ್ಮದೇ ಆದ ಪ್ರತ್ಯೇಕ 'ರೈತ ಸಂಘ'ವನ್ನು ಸಂಘಟಿಸಿದರು. ನಂಜುಂಡಸ್ವಾಮಿ ಅವರೇ ಕರ್ನಾಟಕ ರಾಜ್ಯ ರೈತ ಸಂಘದ ಅಧ್ಯಕ್ಷರಾಗಿ ೨೦೦೪ರವರೆಗೂ ಮುಂದುವರಿದರು. ೧೯೯೯ರಲ್ಲಿ ಪುಟ್ಟಣ್ಣಯ್ಯ ಅವರು ಹೊರ ಹೋದ ನಂತರ ನಂಜುಂಡಸ್ವಾಮಿ ಅವರ ನೇತೃತ್ವದಲ್ಲಿ 'ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ' ಎಂದು ಹೆಸರು ಬದಲಿಸಿಕೊಂಡರು. ಅಲ್ಲದೆ 'ಅಧ್ಯಕ್ಷರಿಗೆ ವಿದೇಶ ಪ್ರವಾಸದ ಆಸೆ ಹೆಚ್ಚಾಗಿದೆ' ಎಂದೆಲ್ಲ ಆರೋಪಿಸಲಾಯಿತು. ನಂಜುಂಡಸ್ವಾಮಿ ಅವರಿಗೆ ಅಂತರಾಷ್ಟ್ರೀಯ ಕಾನೂನಿನ ಬಗ್ಗೆ ಇದ್ದ ತಿಳುವಳಿಕೆ ಹಾಗೂ ವಿಶ್ವ ವ್ಯಾಪಾರ ಸಂಸ್ಥೆಗಳ ಹುನ್ನಾರಗಳ ಬಗೆಗೆ ಇದ್ದ ಅರಿವು ಅವರನ್ನು ವಿದೇಶ ಸಭೆ, ಸಮಾರಂಭ, ವಿಚಾರಸಂಕಿರಣ ಹಾಗೂ ಚಳವಳಿಗಳಿಗೆ ಆಹ್ವಾನಿಸುತ್ತಿತ್ತು. ಇವರು ಅಂತರಾಷ್ಟ್ರೀಯ ಮಟ್ಟದಲ್ಲಿ ಹೆಸರು ಗಳಿಸಿದ್ದು ಸಂಘದಲ್ಲಿದ್ದ ಕೆಲವು ಸದಸ್ಯರುಗಳಲ್ಲಿ ಸಹಿಸದಾಯಿತು. ನಂಜುಂಡಸ್ವಾಮಿ ಅವರೇ ಹೇಳುವಂತೆ-

> ''ರೈತ ಸಂಘಟನೆಯಲ್ಲಿ ಕಂಡು ಬರುತ್ತಿರುವ ಸಣ್ಣ ಗುಣಗಳಲ್ಲಿ ಕೆಲವನ್ನು ಇಲ್ಲಿ ಗುರುತಿಸಬಹುದಾದರೂ ಅವುಗಳಲ್ಲಿ ಮುಖ್ಯವಾದವುಗಳನ್ನು ಇಲ್ಲಿ ಹೇಳಬೇಕಾಗಿದೆ. ಸ್ವಾರ್ಥವೂ ಇಲ್ಲದ ಬೇಜವಾಬ್ದಾರಿ, ಸೋಮಾರಿತನ, ಸ್ವಾರ್ಥದಿಂದ ಸಂಘಟನೆಯ ಬಗೆಗೆ ಉದ್ಭವಿಸುವ ನೀಚ ಆಲಸ್ಯ. ಸಂಘನೆಟಯಿಂದ ಸ್ವಾರ್ಥ ಸಾಧನೆಗೆ ಸಾಕಷ್ಟು ಅವಕಾಶವಿಲ್ಲವಲ್ಲಾ ಎಂಬುದರಿಂದ ಉದ್ಭವಿಸುವ ತಾತ್ಸಾರ.''[೨೯]

-ಎಂಬುದೇ ಆಗಿತ್ತು

ಈ ಎಲ್ಲಾ ಮನೋಭಾವಗಳಿಂದ ರೈತ ಸಂಘದಲ್ಲಿ ಇತರೆಯವರು ಅಧಿಕಾರ ಪಡೆಯಲು ಮುಂದಾದರು. ಅಧ್ಯಕ್ಷರ ಉಚ್ಚಾಟನೆಗೆ ಪ್ರಯತ್ನಿಸಿದ್ದೂ ನೆನಪಿಸಬೇಕಾದ ಸಂಗತಿ. ಪುಟ್ಟಣ್ಣಯ್ಯ ಅವರ ಜೊತೆಗಿನ

ಬದುಕಿನಿಂದ ನಂಜುಂಡಸ್ವಾಮಿ ಅವರಿಗೆ ನೋವಾಗಿದ್ದು ನಿಜ. ಆದರೆ ನಂಜುಡಸ್ವಾಮಿ ಅವರು ನಂಬಿದ ಅನೇಕರು ಅವರಿಗೆ ರೈತ ಸಂಘದಲ್ಲಿ ದ್ರೋಹ ಮಾಡಿದರು. ಇಂಥದ್ದೆಲ್ಲ ಆಗಬಾರದೆಂದು ತಡೆಯಲೆತ್ನಿಸಿದರು. ಇಂಥ ಬಿರುಕುಗಳು ಜನರ ಚಳವಳಿಯನ್ನು ಒಡೆಯುತ್ತವೆಂಬ ವಿಷಾದ ಅವರಿಗಿತ್ತು ಅಲ್ಲದೆ ನಂಜುಂಡಸ್ವಾಮಿ ಅವರ ಮೇಲೆ ಭ್ರಷ್ಟಾಚಾರದ ಆರೋಪಗಳು ಇದೆ ಎಂದು ಅಭಿಪ್ರಾಯ ಪಡೆಯಲಾಗಿದೆ. ಆದರೆ ಅವು ಎಷ್ಟರ ಮಟ್ಟಿಗೆ ಸಾಬೀತಾಗಿವೆ ಎಂಬುದು ಪ್ರಶ್ನೆಯಾಗಿಯೇ ಉಳಿದಿದೆ.

ಕರ್ನಾಟಕ ರಾಜ್ಯ ರೈತ ಸಂಘವನ್ನು ಫ್ಯೂಡಲ್ ಅಥವಾ ಶ್ರೀಮಂತ ಜನರ ಸಂಘಟನೆ ಎಂದು ಕರೆದಿರುವುದೂ ಉಂಟು. ಕರ್ನಾಟಕ ರಾಜ್ಯ ರೈತ ಸಂಘ ರಚನೆಯಾದ ಕೆಲವೇ ದಿನಗಳಲ್ಲಿ 'ದಲಿತ ಸಂಘರ್ಷ ಸಮಿತಿ' ಹಾಗೂ ರೈತ ಸಂಘಗಳು ಸೇರಿ ಒಂದು ಪರ್ಯಾಯ ರಾಜಕೀಯ ಪಕ್ಷವನ್ನು ಕಟ್ಟಲು ಚರ್ಚೆಗಳು ನೆಡೆದಿದ್ದವು. ಆಗ ಕೃಷ್ಣಪ್ಪನವರು ರೈತ ಚಳವಳಿಯು ಜನಸಾಮಾನ್ಯರ ಸಮಸ್ಯೆಗಳಿಗೆ ಸ್ಪಂದಿಸದೆ ಅದು ಕೇವಲ ಶ್ರೀಮಂತ ಫ್ಯೂಡಲ್ ಜನರ ಸಂಘಟನೆಯಾಗಿದೆ ಎಂಬ ವಾದ ಮಂಡಿಸಿದರು.'[೩೦] ಇದರಿಂದ ದಲಿತ ಸಂಘರ್ಷ ಸಮಿತಿ ಈ ರೈತ ಸಂಘದಿಂದ ದೂರ ಉಳಿಯುವಂತೆ ಹೇಳಿದ್ದನ್ನು ಕೃಷ್ಣಪ್ಪನವರ ಚಿಂತನೆಗಳಿಂದ ತಿಳಿಯಬಹುದು. ಈ ಚಿಂತನೆಗಳಿಂದ ಇರುವ ಗೊಂದಲಗಳನ್ನು ಪರಿಹರಿಸಿಕೊಳ್ಳಲು ಇನ್ನೂ ಹೆಚ್ಚಿನ ಅಧ್ಯಯನದ ಅವಶ್ಯಕತೆ ಇದೆ.

ನಂಜುಂಡಸ್ವಾಮಿ ಅವರ ಅಭಿಪ್ರಾಯಗಳಿಗೆ ಯಾರೂ ಎದುರು ಮಾತನಾಡುವಂತಿರಲಿಲ್ಲ. ತಾವೇ ಹೇಳಿದ್ದೇ ಅಂತಿಮ ಎನ್ನುವ ಧೋರಣೆ. ಈ ಬಗ್ಗೆ ಯಾರಾದರೂ ತಕರಾರು, ಆಕ್ಷೇಪ ಎತ್ತಿದರೆ ಏಕವಚನದಲ್ಲೇ ಬೈದು ''ನಿನಗೇನೋ ಗೊತ್ತು, ಭಾರತದಲ್ಲಿ ಹಳ್ಳಿಗಳು ಎಷ್ಟಿವೆ ಅನ್ನೋದು ಗೊತ್ತಾ? ತೆಗಿ ನೋಟ್ ಪುಸ್ತಕ, ನಾನು ಹೇಳೋದನ್ನ ಬರಕೋ... ಎಂದು ತಿರುಗಿಬೀಳುತ್ತಿದ್ದರು. ಹಾಗೆ ನೋಡಿದರೆ, ರೈತ ಚಳವಳಿಗೆ ಪ್ರವೇಶಿಸುವ ಮುನ್ನವೇ ಅವರಲ್ಲಿ ಸರ್ವಾಧಿಕಾರಿ ಗುಣ ಇತ್ತು''[೩೧] ಎಂದು ಕೆ.ರಾಮದಾಸ್ ಅವರು ತನ್ನ ಲೇಖನದಲ್ಲಿ ಉಲ್ಲೇಖಿಸಿದ್ದಾರೆ. ಸಂಪೂರ್ಣವಾಗಿ ವಿಚಾರಗಳನ್ನು ತಿಳಿದುಕೊಳ್ಳದೇ ಮಾತನಾಡುವ ಕಾರ್ಯಕರ್ತರನ್ನು ಬೈಯುತ್ತಿದ್ದದ್ದು ಸಹಜ. ತಿಳುವಳಿಕೆ ಇಲ್ಲದ ರೈತರನ್ನು ತಪ್ಪುದಾರಿಗೆ ಎಳೆಯಬಹುದು ಎಂಬ ಆತಂಕದಿಂದ ಅವರನ್ನು ನಿಯಂತ್ರಿಸುತ್ತಿದ್ದರೆಂಬ ಅಭಿಪ್ರಾಯಕ್ಕೆ ಬರಬಹುದು. ನಂಜುಂಡಸ್ವಾಮಿ ಅವರು ಹೇಗೆ ಸಂಘಟನೆಯನ್ನು ಮಾಡುತ್ತಿದ್ದರೋ ಹಾಗೆಯೇ ಸಂಘಟನೆಯನ್ನು ವಿಘಟಿಸುತ್ತಿದ್ದರು ಎಂಬ ವಾದ ಇದೆ. ಇವರಿಗೆ ಮುಂಗೋಪ, ಸಿಟ್ಟು ಹಾಗೂ ನಾನು ಅನ್ನುವ ಭಾವನೆ ಇತ್ತು ಎಂದು ಹೇಳಿದ್ದಾರೆ. ಪ್ರೊಫೆಸರ್ ಬೇರೆಯವರನ್ನು ಬೆಳೆಯಲು ಬಿಡುತ್ತಿಲ್ಲ ಎಂದು ಹಿರಿಯ ಕಾರ್ಯಕರ್ತರಿಗೆ ಅನ್ನಿಸುತ್ತಿದ್ದದು ಸಹಜ. ಯಾಕೆದರೆ ಪ್ರೊಫೆಸರ್ ಅವರ ಚಿಂತನೆಗಳು, ಯೋಚನೆಗಳು ವರ್ತಮಾನಕ್ಕೆ ಸೀಮಿತವಾಗಿರುತ್ತಿರಲಿಲ್ಲ. ಅವುಗಳಲ್ಲಿ ಭವಿಷ್ಯದ ಬಗೆಗಿನ ಆಲೋಚನೆಗಳು ಇರುತ್ತಿದ್ದವು. ಇಂದು ರೈತರ ಅನುಕೂಲಕ್ಕಾಗಿ ಸರ್ಕಾರ ಒಂದು ಕಾನೂನನ್ನು ಜಾರಿಗೆ ತಂದರೆ ಭವಿಷ್ಯದಲ್ಲಿ ರೈತರ ಮೇಲೆ ಅದರ ಕೆಟ್ಟ ಪರಿಣಾಮ ಏನು ಎಂದು

ಆ ಕ್ಷಣದಲ್ಲೇ ಹೇಳುವ ಪೂರ್ವಾಪರ ಪ್ರಜ್ಞೆ ಅವರಲ್ಲಿತ್ತು. ಅವುಗಳನ್ನು ಅರ್ಥಮಾಡಿಕೊಳ್ಳುವ ಶಕ್ತಿ ಇಲ್ಲದವರು ಪ್ರೊಫೆಸರ್ ಅವರನ್ನು ದೂರಿದರು.

ನಂಜುಂಡಸ್ವಾಮಿ ಅವರ ಸರ್ವಾಧಿಕಾರಿ ಧೋರಣೆಯಿಂದ ರೈತ ಸಂಘದಲ್ಲಿ ಒಡಕು ಕಾಣಿಸಿಕೊಂಡು, ರೈತ ಚಳವಳಿಗಳು ತನ್ನ ಪ್ರಾಮುಖ್ಯತೆ ಕಳೆದುಕೊಂಡವು ಎಂಬ ವಾದಕ್ಕೆ ಪ್ರತಿಯಾಗಿ ನಂಜುಂಡಸ್ವಾಮಿ ಅವರ ಪ್ರತಿಕ್ರಿಯೆ ಹೀಗಿರುತ್ತಿತ್ತು. ಅವರು-

> ''ರೈತ ಚಳವಳಿ ತನ್ನ ಕಾವನ್ನು ಕಳೆದುಕೊಂಡಿದೆ ಎಂದು ಮಾತನಾಡುವವರು ಅದಕ್ಕಿಂತ ಮುಂಚಿತವಾಗಿ ತಮ್ಮ ತಮ್ಮ ಕಾವು ಏನಾಗಿದೆ ಎಂದು ಪರೀಕ್ಷೆ ಮಾಡಿಕೊಳ್ಳುವುದು ಉತ್ತಮ''[೨]

ಎಂಬುದಾಗಿ ಕಟುವಾಗಿ ಹೇಳಿದ್ದುಂಟು. ರೈತ ಚಳವಳಿಯ ಕ್ರಿಯಾಶೀಲತೆಯ ಬಗೆಗೆ ಮಾತನಾಡುವವರು ಅವರು ತಮ್ಮನ್ನು ಎಷ್ಟರ ಮಟ್ಟಿಗೆ ರೈತ ಚಳವಳಿಯಲ್ಲಿ ತೊಡಗಿಸಿಕೊಂಡಿದ್ದಾರೆ ಎಂಬುದನ್ನು ಆತ್ಮಾವಲೋಕನ ಮಾಡಿಕೊಳ್ಳಬೇಕು ಎಂಬುದು ಅವರ ಚಿಂತನೆಗಳಿಂದ ವ್ಯಕ್ತವಾಗುತ್ತದೆ. ಕೊನೆಗೆ ನಂಜುಂಡಸ್ವಾಮಿ ಅವರನ್ನು 'ಜಾತಿವಾದಿ' ಎಂದು ದೂಷಿಸುವ ಹಂತಕ್ಕೂ ಹೋದರು. ಇದು ಪ್ರೊಫೆಸರ್ ಅವರ ವ್ಯಕ್ತಿತ್ವಕ್ಕೆ ಮಾಡಿದ ದೊಡ್ಡ ಅಪವಾದವಾಗಿದೆ. ನಮ್ಮಲ್ಲಿ ಆಗಲೂ ಈಗಲೂ ಎಲ್ಲದಕ್ಕೂ ಜಾತಿ ಲೆಕ್ಕಾಚಾರವೇ ಮೊದಲು. ದೇಶದ ಶೇಕಡಾ ೭೦ರಷ್ಟು ಭಾಗದ ರೈತರದ್ದು ಒಂದೊಂದು ಜಾತಿ. ಆದರೆ ಈ ಎಲ್ಲ ಜಾತಿಯ ಬೇರೆ ಬೇರೆ ಮನಸ್ಸಿನ ರೈತರನ್ನು ಒಗ್ಗೂಡಿಸುವುದು ಸುಲಭದ ಕೆಲಸವಲ್ಲ. ಇಂಥ ರೈತ ಸಮೂಹವನ್ನು ನಂಜುಂಡಸ್ವಾಮಿ ಅವರು ಸಮರ್ಥವಾಗಿ ಸಂಘಟಿಸಿರುವುದು ಇತಿಹಾಸ. ಹಾಗೆ ನೋಡಿದರೆ ನಂಜುಂಡಸ್ವಾಮಿ ಇದ್ದಾಗಲೂ, ಇಲ್ಲದಿದ್ದಾಗಲೂ ರೈತರ ಸಮಸ್ಯೆಗಳು ಇದ್ದೇ ಇವೆ. ಆದರೆ ಸಮಸ್ಯೆಯ ಮುಖಗಳು ಹಾಗೂ ಪರಿಣಾಮಗಳು ಮಾತ್ರ ಬೇರೆಯಾಗಿವೆ. ಇಷ್ಟಾದರೂ ರೈತರ ಪಾಲಿಗೆ ನಂಜುಂಡಸ್ವಾಮಿ ಅವರು ನೈತಿಕ ಶಕ್ತಿಯಾಗಿದ್ದರು ಎಂಬುದನ್ನು ಒಪ್ಪಲೇಬೇಕು.

೪.೪. ಹೋರಾಟಗಳು ಹಾಗೂ ನಂಜುಂಡಸ್ವಾಮಿ

ನಂಜುಂಡಸ್ವಾಮಿ ಅವರು ತಮ್ಮ ಸಂಪೂರ್ಣ ಜೀವನವನ್ನು ರೈತ ಪರ ಹೋರಾಟಗಳಿಗಾಗಿ ಮುಡುಪಾಗಿಟ್ಟರು. ರೈತರಿಗೆ ಆಗುತ್ತಿದ್ದ ಶೋಷಣೆಗಳ ವಿರುದ್ಧ ಸದಾ ಜಾಗೃತರಾಗಿರುತ್ತಿದ್ದರು. ಅವರು ನಡೆಸಿರುವ ಹೋರಾಟಗಳು ಗಾಂಧಿಯವರ ಹೋರಾಟದ ಮಾರ್ಗಗಳನ್ನೇ ನೆನಪಿಗೆ ತರುತ್ತವೆ. ಸಹನೆ, ಉಪವಾಸ, ಸತ್ಯಾಗ್ರಹ, ಮೌನ ಪ್ರತಿಭಟನೆ, ಸಪ್ಪಳ ಪ್ರತಿಭಟನೆಗಳಿಂದ ಹಿಡಿದು ತೀವ್ರತರವಾದ ಚಳವಳಿಗಳನ್ನು ನಡೆಸಿದರು. ಇವರ ಹೋರಾಟದ ಜೀವನ ಆರಂಭವಾದದ್ದು ಜರ್ಮನಿಯ ಸಾರ್ ವಿಶ್ವವಿದ್ಯಾಲಯದಲ್ಲಿ ಎಂದರೆ ತಪ್ಪಾಗಲಾರದು. ಪಿಎಚ್.ಡಿ ಪ್ರಬಂಧದಲ್ಲಿ ತಮ್ಮ ತಾಯ್ನಾಡಿನ ಘನತೆ, ಆತ್ಮಗೌರವಗಳಿಗೆ ಧಕ್ಕೆ ತರುವ ಸಾಮ್ರಾಜ್ಯಶಾಹಿ ಕಾನೂನಿನ ಬಗ್ಗೆ ವಿರೋಧ ವ್ಯಕ್ತಪಡಿಸಿದರು. ಆದ್ದರಿಂದ ಅಲ್ಲಿನ ವಿಶ್ವವಿದ್ಯಾಲಯದ ಕಾನೂನು ತಜ್ಞರು

ಇವರ ಪ್ರಬಂಧವನ್ನು ಒಪ್ಪಿಕೊಳ್ಳದ ಕಾರಣಕ್ಕಾಗಿ ಪದವಿಯನ್ನು ತಿರಸ್ಕರಿಸಿ ಸ್ವದೇಶಕ್ಕೆ ವಾಪಸ್ಸಾದರು. ತಾತನ ಜಮೀನಿನಲ್ಲಿ ವ್ಯವಸಾಯ ಆರಂಭಿಸಿದರು. ಆಗಲೇ ನಂಜುಂಡಸ್ವಾಮಿ ಅವರ ಅರಿವಿಗೆ ಬಂದದ್ದು ಲೆವಿ ಪದ್ಧತಿ. ಈ ಪದ್ಧತಿಯ ವಿರುದ್ಧ ಕರ್ನಾಟಕದಲ್ಲಿ ಮೊಟ್ಟ ಮೊದಲ ಬಾರಿಗೆ ಮೈಸೂರಿನಲ್ಲಿ ಹೋರಾಡುವ ಮೂಲಕ ನಂಜುಂಡಸ್ವಾಮಿ ಅವರ ಒಬ್ಬ ಮನುಷ್ಯನ ರೈತ ಚಳವಳಿ ಶುರುವಾಯಿತು. ಜೊತೆಯಲ್ಲೇ 'ಸಮಾಜವಾದಿ ಯುವ ಜನ ಸಭಾ' ಎಂಬ ಒಂದು ತರುಣರ ಉಪ ಸಂಘಟನೆಯ ಅಡಿಯಲ್ಲಿ ಮೂಢನಂಬಿಕೆ, ಮೂರ್ತಿಪೂಜೆ, ಜಾತಿ ಪದ್ಧತಿ, ಧರ್ಮ ಇವುಗಳ ವಿರುದ್ಧ ಹೋರಾಟಗಳನ್ನು ಆರಂಭಿಸಿದರು. ತಮ್ಮ ಹೋರಾಟದ ಜೀವನವನ್ನು ಹಾಗೆಯೇ ಮುಂದುವರಿಸುತ್ತಾ ರೈತರ ಶೋಷಣೆ, ಸರ್ಕಾರದ ನೀತಿಗಳು, ವಿದೇಶಿ ಶಕ್ತಿಗಳ ಸಂಚಿನ ವಿರುದ್ಧವಾಗಿ ಅನೇಕರು ಚಳವಳಿಗಳನ್ನು ನಡೆಸಿದರು. ಅಲ್ಲದೆ ಅಷ್ಟೇ ಹೋಟೆಲ್‌ಗಳಲ್ಲಿ ಕಾಫಿ, ತಿಂಡಿಗಳ ದರ ಕಡಿಮೆ ಮಾಡುವಂತೆ, ಭ್ರಷ್ಟ ಅಧಿಕಾರಿಗಳ ವಿರುದ್ಧ, ಮಹಿಳೆಯರ ಶೋಷಣೆಗೆ ಸಂಬಂಧಿಸಿದಂತೆ ಬಹುರೂಪಿ ಹೋರಾಟಗಳನ್ನು ನಡೆಸಿದರು.

ಲೆವಿ ವಿರೋಧಿ ಚಳವಳಿ

ಆಹಾರ ಧಾನ್ಯ ಸಂಗ್ರಹಣೆಯ ಕಾರ್ಯಕ್ರಮವಾಗಿ ಸರ್ಕಾರ ಪ್ರತಿ ಸುಗ್ಗಿಯಲ್ಲಿಯೂ ತಾಲ್ಲೂಕು ಜಿಲ್ಲೆಯಾದ್ಯಂತ ದಾರಿ-ದಾರಿಗಳಲ್ಲಿ 'ಲೆವಿ' ಗೇಟುಗಳನ್ನು ನಿರ್ಮಿಸುತ್ತಿದ್ದರು. ರೈತರಿಗೆ ತಿಳಿಯದಂತೆ ಅದು ಅಧಿಕಾರಿಗಳಿಗೆ ಲಂಚದ ಸುಗ್ಗಿಯಾಗಿತ್ತು. ಸುಗ್ಗೀ ಕಾಲದಲ್ಲಿ ಈ ರೀತಿ 'ಲೆವಿ' ಗೇಟು ನಿರ್ಮಿಸುವುದರಿಂದ ರೈತರ ಧಾನ್ಯಕ್ಕೆ ಒಟ್ಟಾರೆ ಧಾರಣೆ ಕಡಿಮೆಯಾಗುತ್ತಿತ್ತು.[೩೩] ರೈತರು ಮಾರಾಟ ಮಾಡಲು ತೆಗೆದುಕೊಂಡು ಹೋಗುತ್ತಿದ್ದ ಬೆಳೆಯಲ್ಲಿ ಹತ್ತನೇ ಒಂದು ಭಾಗವನ್ನು ಮಾರುಕಟ್ಟೆ ಬೆಲೆಗಿಂತ ಕಡಿಮೆ ಬೆಲೆಗೆ ಸರ್ಕಾರಕ್ಕೆ ಮಾರಬೇಕಾಗಿತ್ತು. ಅದನ್ನೇ 'ಲೆವಿ ಧಾನ್ಯ ಸಂಗ್ರಹಣೆ' ಎಂದು ಕರೆಯುತ್ತಿದ್ದರು. ನಂಜುಂಡಸ್ವಾಮಿ ಅವರು ಮೊದಲಿಗೆ ಕೈಗೆತ್ತುಕೊಂಡ ಚಳವಳಿ ಲೆವಿ ವಿರೋಧಿ ಚಳವಳಿಯಾಗಿತ್ತು.

ಲೆವಿ ಹಾಗೂ ಬೆಟರ್‌ಮೆಂಟ್ ಚಾರ್ಜ್‌ಗೆ ವಿರುದ್ಧವಾಗಿ ಹಳ್ಳಿ ಹಳ್ಳಿಗಳಲ್ಲಿ ರೈತರನ್ನು ಸಂಘಟಿಸಿದರು. ''ಸಂವಿಧಾನದಲ್ಲಿ ರೈತ ತಾನು ಬೆಳೆದ ಬೆಳೆಯನ್ನು ಯಾರಿಗಾದರೂ ಮಾರಾಟ ಮಾಡಬಹುದು ಅಂತ ಇದೆ. ಲೆವಿ ಕಾನೂನಿಗೆ ವಿರುದ್ಧ ಎಂದು ಹೇಳಿ ಗೇಟ್‌ಗಳನ್ನು ನೂರಾರು ಜನರು ಸೇರಿ ಮುರಿದು ಹಾಕಿದರು. ಲೆವಿ ಕೊಡಲು ನಿರಾಕರಿಸುವುದರ ಮೂಲಕ ಲೆವಿ ಚೀಟಿಗಳನ್ನು ಸುಡುವ ಕಾರ್ಯಕ್ರಮಗಳನ್ನು ಹಾಕಿಕೊಂಡರು. ಇದರಲ್ಲಿ ನಂಜುಂಡಸ್ವಾಮಿ, ತೇಜಸ್ವಿ, ಸುಂದರೇಶ್, ಕಡಿದಾಳು ಶಾಮಣ್ಣ ಎಲ್ಲರೂ ಭಾಗವಹಿಸಿದ್ದರು.''[೩೪] ಲೆವಿ ಚೀಟಿ ಸುಡುವ ಕಾರ್ಯಕ್ರಮ ಪ್ರತಿಭಟನೆಯಾಗಿ ಮಾರ್ಪಟ್ಟು ಮೂಡಿಗೆರೆ, ತೀರ್ಥಹಳ್ಳಿ, ಆಗುಂಬೆ, ಹೊಳೆ ಹೊನ್ನೂರುಗಳಲ್ಲಿ ತೀವ್ರ ಪ್ರತಿರೋಧ ವ್ಯಕ್ತವಾಯಿತು. ಹೀಗೆ ಆಗುಂಬೆಯಲ್ಲಿ ನಡೆದ ಈ ಹೋರಾಟ ಲೆವಿ ಪದ್ಧತಿ ಕೊನೆಗೊಳ್ಳಲು ಕಾರಣವಾಯಿತು.

ರೈತರ ಮನೆ ಜಪ್ತಿ ವಿರುದ್ಧ ನಡೆದ ಚಳವಳಿ

ಕೃಷಿಗೆ ಕೊಟ್ಟ ಸಹಕಾರಿ ಹಾಗೂ ವಾಣಿಜ್ಯ ಬ್ಯಾಂಕ್‌ಗಳ ಸಾಲವನ್ನು ಮನ್ನಾ ಮಾಡುವುದಾಗಿ ಭರವಸೆ ನೀಡಿದ್ದ ಸರ್ಕಾರ, ಆನಂತರದಲ್ಲಿ ಸಾಲ ಕಟ್ಟದ ರೈತರ ಆಸ್ತಿ, ಮನೆ ಜಪ್ತಿ ಹಾಗೂ ಹರಾಜಿಗೆ ಮುಕ್ತ ಪರವಾನಗಿ ನೀಡಿತು. ಈ ಕ್ರಮವನ್ನು ವಿರೋಧಿಸಿ ರೈತರು ಅಧಿಕಾರಿಗಳ ವಿರುದ್ಧ ತಿರುಗಿ ಬಿದ್ದರು. ಅದೇನೇ ಆದರೂ ಸಾಲ ಕಟ್ಟಬಾರದು. ಜೊತೆಗೆ ಸಾಲಮನ್ನಾ ಇತ್ಯರ್ಥವಾಗುವವರೆಗೂ ಕಂದಾಯವನ್ನು ಕಟ್ಟಬಾರದು ಎಂದು ನಿಶ್ಚಯಿಸಿದರು. ಈ ಮಧ್ಯೆ ರೈತ ಸಂಘದ ವತಿಯಿಂದ ನಂಜುಂಡಸ್ವಾಮಿ ಅವರ ಸಲಹೆಯ ಮೇರೆಗೆ ರೈತರ ಮನೆ ಜಪ್ತಿ ತಡೆಯಾಜ್ಞೆಗಾಗಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿ ತಡೆಯಾಜ್ಞೆ ತಂದರು[೩೫]. ಇಲ್ಲಿ ವಕೀಲರಾದ ಶಾಂತರಾಜ್, ರವಿವರ್ಮಕುಮಾರ್ ಹಾಗೂ ಎಸ್.ಆರ್. ನಾಯಕ್ ಅವರ ಪಾತ್ರ ಗಮನಾರ್ಹವಾದದ್ದು. ಅದರಿಂದಾಗಿ ಸಾಲ ವಸೂಲಿಗೆ ಬಂದ ಅಧಿಕಾರಿಗಳನ್ನು ರೈತರು ವಾಪಸ್ ಕಳುಹಿಸಲು ಆರಂಭಿಸಿದರು. ಜಪ್ತಿಗಾಗಿ ಬ್ಯಾಂಕ್ ಅಧಿಕಾರಿಗಳು ಬರುತ್ತಾರೆಂದು ಸುದ್ದಿ ತಿಳಿದ ಕೂಡಲೇ ದಾರಿಯಲ್ಲಿ ಗಾಂಧಿ ಫೋಟೋ ಹಿಡಿದು ಅಧಿಕಾರಿಗಳನ್ನು ತಡೆದರು. ರೈತರ ತೀವ್ರ ಪ್ರತಿರೋಧದ ನಡುವೆಯೂ ಜಪ್ತಿ ಕಾರ್ಯ ಹಾಗೆಯೇ ಮುಂದುವರೆಯಿತು. ರೈತರ ಮನೆಯ ಅಡುಗೆ ಪಾತ್ರೆಗಳು, ಹಂಡೆ, ಬಿಂದಿಗೆ, ಕುರ್ಚಿ, ರೇಡಿಯೋ, ಗಡಿಯಾರ, ಸೈಕಲ್ ಹಾಗೂ ಕೆಲವೊಮ್ಮೆ ರೈತರ ಪತ್ನಿಯರ ಮಾಂಗಲ್ಯಗಳು ಜಪ್ತಿಗೆ ಒಳಗಾದವು. ಹೀಗೆ ''ಜನತಾ ಸರ್ಕಾರಕ್ಕೆ ವಿರುದ್ಧವಾಗಿ ರಾಜ್ಯದ ರೈತರು ಬೃಹತ್ ಪ್ರದರ್ಶನವೊಂದನ್ನು ಅಕ್ಟೋಬರ್ ೨, ೧೯೮೨ ರ ಗಾಂಧೀ ಜಯಂತಿಯ ದಿನ ಬೆಂಗಳೂರಿನಲ್ಲಿ ಏರ್ಪಡಿಸಿದರು.''[೩೬] ಆನಂತರದಲ್ಲಿ ಜಪ್ತಿ ನಿಲ್ಲದೆ ಇದ್ದಾಗ ರೈತರು ಪಿಕೆಟಿಂಗ್ ಮಾಡಲು ನಂಜುಂಡಸ್ವಾಮಿ ಅವರು ಕರೆಕೊಟ್ಟರು. ಈ ಪಿಕೆಟಿಂಗ್ ಚಳವಳಿಯಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಎನ್.ಡಿ. ಸುಂದರೇಶ್ ಹಾಗೂ ಇತರೆ ಮೂವತ್ತು ಮಂದಿ ರೈತರನ್ನು ದಸ್ತಗಿರಿ ಮಾಡಿ ಶಿವಮೊಗ್ಗ ಜೈಲಿನಲ್ಲಿ ಇಡಲಾಗಿತ್ತು. 'ರೈತರ ಆಸ್ತಿ ಜಪ್ತಿ ಮಾಡವಂಥ ೧೦೧ ಸಿ ಕಾನೂನನ್ನು ವಿರೋಧಿಸಿ ೧೯೮೫ ರ ಅಕ್ಟೋಬರ್ ೨ ರಿಂದ ನವೆಂಬರ್ ೧ ರವರೆಗೆ ರಾಜ್ಯದೆಲ್ಲೆಡೆಯಿಂದ ಲಕ್ಷಾಂತರ ರೈತರು ಪಾದಯಾತ್ರೆಯನ್ನು ಹಮ್ಮಿಕೊಂಡರು.'[೩೭] ಆ ಮೂಲಕವಾಗಿ ಘನತೆ ಗಂಭೀರ್ಯಗಳಿಂದ ಬದುಕುವ ಜೀವನದ ಹಕ್ಕು, ಸಂವಿಧಾನದ ೨೧ ನೇ ನಿಯಮದ ಪ್ರಕಾರ ರೈತರಿಗೂ ಇದೆ. ಆದರೆ ಈ ಹಕ್ಕಿಗೆ ಧಕ್ಕೆ ತರುವಂಥ ಬ್ರಿಟಿಷ್ ಕಾಲದ ಸಿವಿಲ್ ಪ್ರೊಸೀಜರ್ ಕೋಡ್‌ನ ನಿಯಮಗಳು ಇನ್ನೂ ಮುಂದುವರಿದಿವೆ. ಕೇವಲ ರೈತರನ್ನು ಅವಮಾನಗೊಳಿಸಲೆಂದೇ ಇರುವ ಈ ಜಪ್ತಿ ಪದ್ಧತಿ ರದ್ದಾಗಬೇಕು ಎನ್ನುವುದು ರೈತ ಸಂಘದ ಒತ್ತಾಯವಾಯಿತು. ಅದನ್ನು ಮಾಡಲು ರಾಜ್ಯ ಸರ್ಕಾರಕ್ಕೆ ಅಧಿಕಾರವಿದೆ ಎಂಬುದನ್ನು ನಂಜುಂಡಸ್ವಾಮಿ ಅವರು ತೋರಿಸಿಕೊಟ್ಟರು.

ಸರ್ಕಾರಿ ನೌಕರರ ಲಂಚದ ಆಸ್ತಿಯ ಮರುಜಪ್ತಿ ಚಳವಳಿ

ರೈತರ ಆಸ್ತಿಯ ಜಪ್ತಿಗೆ ಪ್ರತಿಕ್ರಿಯೆಯಾಗಿ ರೈತ ಸಂಘದವರು ಆರಂಭಿಸಿದ ಹೊಸ ಬಗೆಯ ಚಳವಳಿ ಇದಾಗಿದೆ. ನಂಜುಂಡಸ್ವಾಮಿ ಅವರು ರೈತರಿಗೆ ಸ್ಥೈರ್ಯ ತುಂಬುವ ಸಲುವಾಗಿ ಈ ಬಗೆಯ ಚಳವಳಿಯನ್ನು ಹಮ್ಮಿಕೊಂಡರು. ''ರೈತರ ಆಸ್ತಿಯ ಜಪ್ತಿಯನ್ನು ಅಮಾನವೀಯವಾಗಿ ಮಾಡುತ್ತಿದ್ದ ಅಧಿಕಾರಿಗಳ ವಿರುದ್ಧ ೧೯೮೨ ರಲ್ಲಿ ಹುಟ್ಟಿಕೊಂಡದ್ದೇ ಮರುಜಪ್ತಿ ಚಳವಳಿ''[೩೮]. ಅಧಿಕಾರಿಗಳು ರೈತರ ಮನೆಯಿಂದ ವಸ್ತುಗಳನ್ನು ಜಪ್ತಿ ಮಾಡಿಕೊಂಡು ಹೋಗಿದ್ದಕ್ಕೆ ವಿರುದ್ಧವಾಗಿ ಅವನ್ನು ಮರುಜಪ್ತಿ ಮಾಡಿ ಅದೇ ರೈತನ ಮನೆಗೆ ತಲುಪಿಸುವ ಕಾರ್ಯವನ್ನು ರೈತ ಸಂಘ ಹಮ್ಮಿಕೊಂಡಿತು. ಮೊಟ್ಟ ಮೊದಲ ಮರು ಜಪ್ತಿ ಕಾರ್ಯಕ್ರಮ ನಡೆದದ್ದು ಮಾರ್ಚ್ ೮, ೧೯೮೨ ರಲ್ಲಿ ಭದ್ರಾವತಿ ತಾಲ್ಲೂಕಿನ ಮಲ್ಲಾಪುರ ಗ್ರಾಮದಲ್ಲಿ. ಈ ಕಾರ್ಯಕ್ರಮದಲ್ಲಿ ಎಚ್.ಎಸ್. ರುದ್ರಪ್ಪ, ಎನ್.ಡಿ. ಸುಂದರೇಶ್ ಹಾಗೂ ನಂಜುಂಡಸ್ವಾಮಿ ಅವರು ಭಾಗವಹಿಸಿದ್ದರು. ಅನಂತರದಲ್ಲಿ ತಮಿಳುನಾಡು ಸರ್ಕಾರದ ಮಾದರಿಯಲ್ಲೇ ಕರ್ನಾಟಕ ಸರ್ಕಾರವು ಜಪ್ತಿ ಮಾಡಬಾರದ ವಸ್ತುಗಳನ್ನು ಪಟ್ಟಿ ಮಾಡಿತು. ಸಿದ್ಧಪಡಿಸಿದ ಆಹಾರ, ಪಾತ್ರೆ, ಅಡುಗೆ ಸಾಮಗ್ರಿ, ವಧು ಧನವಾಗಿ ಬಂದ ಆಭರಣ ಇತ್ಯಾದಿ ೧೫೦ ವಸ್ತುಗಳ ಪಟ್ಟಿ ಮಾಡಿತು. ಆ ವಸ್ತುಗಳನ್ನು ಯಾವ ಕಾರಣಕ್ಕೂ ಜಪ್ತಿ ಮಾಡದಂತೆ ಆದೇಶ ಹೊರಟಿಸಿತು. ಆ ಪಟ್ಟಿ ರಾಜ್ಯದ ಎಲ್ಲ ರೈತರ ಕೈ ಸೇರಿದ ಮೇಲೆ ಅಂದಿನಿಂದ ರೈತರ ಮನೆ ಜಪ್ತಿಗೆ ಕಟಿವಾಣ ಬಿದ್ದಿತು. ಅಲ್ಲಿಂದ ಮುಂದೆ ರೈತರು ಅಧಿಕಾರಿಗಳ ಎದುರು ಧೈರ್ಯದಿಂದ ನಿಂತು ಪ್ರಶ್ನಿಸುವ ಮಟ್ಟಕ್ಕೆ ರೈತರನ್ನು ಬೆಳೆಸುವಲ್ಲಿ ನಂಜುಂಡಸ್ವಾಮಿ ಅವರ ಪ್ರಯತ್ನ ಗಮನಾರ್ಹವಾದುದು.

ಮದ್ಯಪಾನ ನಿಷೇಧ ಕುರಿತ ಹೋರಾಟ

ಎರಡು ವಿಭಿನ್ನ ಕಾಲಘಟ್ಟಗಳಲ್ಲಿ ಮದ್ಯಪಾನ ನಿಷೇಧ ಹೋರಾಟಗಳು ನಡೆದಿರುವುದನ್ನು ಕಾಣಬಹುದು. ಮೊದಲನೆಯ ಅವಧಿಯನ್ನು ೧೯೮೦-೮೬ ಎಂದು, ಹಾಗೂ ೧೯೯೦ ರ ನಂತರದ ಅವಧಿಯನ್ನು ಎರಡನೆಯದಾಗಿ ಗುರುತಿಸಬಹುದು. ಮದ್ಯಪಾನ ಮಾರಾಟದ ಹಿಂದಿನ ರಾಜಕೀಯವನ್ನು ವಿವರಿಸುವ ರೈತ ಸಂಘವು ತನ್ನ ಸಿದ್ಧಾಂತದಲ್ಲೇ ದ್ವಂದ್ವವನ್ನು ಹೊಂದಿದೆಯೆಂದು ಅಸ್ಸಾದಿಯವರು ವಾದಿಸುತ್ತಾರೆ. ಒಂದು ಕಡೆ ಭಾಗಶಃ ನಿಷೇಧದ ಕುರಿತಂತೆ ಮಾತನಾಡಿದರೆ, ಇನ್ನೊಂದು ಕಡೆ ಪೂರ್ಣ ನಿಷೇಧದ ಬಗ್ಗೆ ನಂಜುಂಡಸ್ವಾಮಿ ಅವರು ಮಾತನಾಡುವುದು ದ್ವಂದ್ವದಂತೆ ಗೋಚರಿಸುತ್ತದೆ. ನಂಜುಂಡಸ್ವಾಮಿ ಅವರು ಆಲೋಚಿಸುವಂತೆ ಅಕ್ಕಿ, ಗೋಧಿ ಹಾಗೂ ತರಕಾರಿಗಳಿಂದ ತಯಾರಿಸುವ ಮದ್ಯವನ್ನು ಮನೆಯಲ್ಲಿಯೇ ತಯಾರು ಮಾಡುವುದಾದರೆ ಅದನ್ನು ತಡೆಯಬಾರದು ಎಂದಿದ್ದಾರೆ.

ಶಿವಮೊಗ್ಗ ಹಾಗೂ ಹಾಸನ ಜಿಲ್ಲೆಗಳಲ್ಲಿ ಹೊಸ ಸಾರಾಯಿ ಅಂಗಡಿಗಳನ್ನು ತೆಗೆಯುವ ಸಂದರ್ಭದಲ್ಲಿ ಮಹಿಳೆಯರ ನೇತೃತ್ವದಲ್ಲಿ ಹೋರಾಟ ಕೈಗೊಂಡು ಕೊನೆಗೆ ಅವುಗಳನ್ನು ಮುಚ್ಚಿಸಿದ್ದರು. ೧೯೮೨ ರಲ್ಲಿ

ಹಾಸನದಲ್ಲಿಯೂ ಇಂಥ ಘಟನೆಗಳು ಸಂಭವಿಸಿದವು. ೧೯೮೨ ಹಾಗೂ ೧೯೮೩ ರಲ್ಲಿ ಹಾಸನ ಜಿಲ್ಲೆಯ ಏಳುಮಾಲಹಳ್ಳಿ ಮತ್ತು ಏರಿಕೇರಿಗಳಲ್ಲಿ ಹೆಂಡದಂಗಡಿಗಳ ಹರಾಜನ್ನು ರೈತರು ತಡೆದರು. ೧೯೮೬ ರಲ್ಲಿ ಶಿವಮೊಗ್ಗದಲ್ಲಿ ಮದ್ಯ ಉದ್ದಿಮೆಯೊಂದಕ್ಕೆ ಸರಬರಾಜು ಆಗುತ್ತಿದ್ದ ನೀರನ್ನು ನಿಲ್ಲಿಸಿದ ಘಟನೆಗಳೂ ಇವೆ.

೧೯೯೦ ರ ನಂತರ ನಂಜುಂಡಸ್ವಾಮಿ ಅವರು ರೈತ ಸಂಘದ ಮೂಲಕ ಸಂಪೂರ್ಣ ಮದ್ಯಪಾನ ನಿಷೇಧಕ್ಕೆ ಕರೆನೀಡಿದರು. ತಮ್ಮ ಎರಡನೆಯ ಘಟ್ಟದ ನಿಲುವನ್ನು ಅವರು ಪ್ರತಿಪಾದಿಸಿದರು. ಧಾರವಾಡದಿಂದ ಈ ಬಗೆಯ ಚಳವಳಿ ಆರಂಭವಾಗಿ ಶಿವಮೊಗ್ಗ ಹಾಗೂ ಬೆಳಗಾಂ ಜಿಲ್ಲೆಗಳಿಗೆ ಹಬ್ಬಿತು. ಶಿವಮೊಗ್ಗದ ಅಲ್ಲಾಪುರ, ಉದಿಕೆರೆ, ಬಾಬಕೆರೆ ಮುಂತಾದ ೩೬ ಪ್ರದೇಶಗಳಲ್ಲಿ ಸಂಪೂರ್ಣವಾಗಿ ಮದ್ಯಪಾನ ನಿಷೇಧ ಜಾರಿಗೆ ತರುವಲ್ಲಿ ರೈತ ಸಂಘದ ಮೂಲಕ ಯಶಸ್ವಿಯಾಗಿದ್ದರು. ವಿವಿಧ ಹಳ್ಳಿಗಳಲ್ಲಿ ದೀರ್ಘ ಪಾದಯಾತ್ರೆ ಮೂಲಕ, ಹೆಂಡದಂಗಡಿಗಳನ್ನು ಮುಚ್ಚಿಸುವ ಮೂಲಕ ಪ್ರತಿಭಟನೆಗಳನ್ನು (ಉದಾಹರಣೆ: ೧೯೯೩ ರಲ್ಲಿ ತೀರ್ಥಹಳ್ಳಿ ಘಟನೆ) ನಡೆಸಿದರು. ೧೯೯೩ರಲ್ಲಿ ಶಿವಮೊಗ್ಗ ಜಿಲ್ಲೆಯ ಮಲ್ಲಿಗೆಕಟ್ಟೆಯಲ್ಲಿ, ೧೯೯೪ ರಲ್ಲಿ ನಾಗಸಮುದ್ರದಲ್ಲಿ ಸಾರಾಯಿ ವ್ಯಾಪಾರವನ್ನು ಹರಾಜು ಮಾಡುವುದನ್ನು ವಿರೋಧಿಸಲಾಯಿತು. ಹಾಗೆಯೇ ಅದರ ಮಾರಾಟವನ್ನು ನಿಲ್ಲಿಸಿ, ಅಲ್ಲಿದ್ದ ಹೆಂಡದ ಪಾತ್ರೆಗಳಿಗೆ ಬೆಂಕಿ ಹಚ್ಚಿದರು. ಹೆಂಡದ ವಾಹನಗಳೂ ಸುಟ್ಟುಹೋದವು. ಮಹಿಳೆಯರ ನೇತೃತ್ವದಲ್ಲಿ ನಡೆದ ಈ ಚಳವಳಿಯಲ್ಲಿ ಸ್ಥಳೀಯ ಶಿಕ್ಷಕರು ಹಾಗೂ ವಿದ್ಯಾರ್ಥಿಗಳೂ ಭಾಗವಹಿಸಿದ್ದರು ಎನ್ನುವುದು ಗಮನಾರ್ಹವಾದ ಸಂಗತಿಯಾಗಿದೆ.

ಪ್ರಾಕೃತಿಕ ಸಂಪನ್ಮೂಲಗಳನ್ನು ಆಯಾ ಗ್ರಾಮಗಳಲ್ಲೇ ಮೀಸಲಿಡುವ ಚಳವಳಿ

ಗಾಂಧಿ ಅವರ 'ಗ್ರಾಮ ಸ್ವರಾಜ್ಯ ಘೋಷಣೆ'ಯನ್ನು ನಂಜುಂಡಸ್ವಾಮಿ ಅವರು ಅಳವಡಿಸಿಕೊಂಡಿರುವುದನ್ನು ಕಾಣಬಹುದು. ನಂಜುಂಡಸ್ವಾಮಿ ಅವರು ಅಭಿವ್ಯಕ್ತಗೊಳಿಸಿರುವ ಹಾಗೆ ಗ್ರಾಮ ಸ್ವರಾಜ್ಯದ ಕಲ್ಪನೆಯಲ್ಲಿ ಗ್ರಾಮಗಳಲ್ಲಿನ ರೈತರು ಸ್ವಂತ ಶಕ್ತಿಯ ಮೂಲಕ ಹಾಗೂ ತಮ್ಮ ಉಪಯೋಗಕ್ಕಾಗಿ ಪರಿಸರದ ಉತ್ಪನ್ನಗಳನ್ನು ಬಳಸಿಕೊಳ್ಳಬೇಕು ಎಂದಿದ್ದಾರೆ. ಗ್ರಾಮ ಸ್ವರಾಜ್ಯಕ್ಕೆ ಸಂಬಂಧಿಸಿದಂತೆ ಪಾಕೃತಿಕ ಸಂಪನ್ಮೂಲಗಳನ್ನು ಆಯಾ ಗ್ರಾಮಗಳಲ್ಲೇ ಮೀಸಲಿಡುವ ಚಳವಳಿಯನ್ನು ರೈತಸಂಘದ ಮುಖೇನ ನಂಜುಂಡಸ್ವಾಮಿ ಆರಂಭಿಸಿದರು. ಗ್ರಾಮಗಳಲ್ಲಿರುವ ಸಂಪನ್ಮೂಲಗಳನ್ನು ಅಲ್ಲಿನ ಜನರಿಗಾಗಿಯೇ ಉಪಯೋಗಿಸಬೇಕು ಹಾಗೂ ಅದರಿಂದ ಬರುವ ಲಾಭಗಳನ್ನು ಆಯಾ ಹಳ್ಳಿಯ ಅಭ್ಯುದಯ, ಅಭಿವೃದ್ಧಿಗಾಗಿ ಬಳಸಿಕೊಳ್ಳಬೇಕೆಂಬುದು ನಂಜುಂಡಸ್ವಾಮಿ ಅವರ ಆಲೋಚನಾ ಕ್ರಮವಾಗಿತ್ತು. ಈ ಚಳವಳಿಯು ಗ್ರಾನೈಟ್‌ಗೆ ಸಂಬಂಧಿಸಿದ ಪ್ರಕರಣಗಳಿಗೆ ಮೀಸಲಾಗಿದ್ದವು. ಇದರ ಪರಿಣಾಮವಾಗಿ ೧೯೮೨ ರಲ್ಲಿ ಮಳವಳ್ಳಿ, ಮದ್ದೂರು, ರಾಮನಗರ, ಚನ್ನಪಟ್ಟಣ, ದೊಡ್ಡ ಆಲಹಳ್ಳಿ, ಸಾತನೂರು, ಕೋಡಿಹಳ್ಳಿ, ಉಯ್ಯಂಬಳಿ ಹೋಬಳಿಗಳಲ್ಲಿ ಗ್ರಾನೈಟ್ ಕಲ್ಲು ಗಣಿಗಾರಿಕೆ ವಿರುದ್ಧದ ಹೋರಾಟಗಳು ಆರಂಭವಾದವು.[೧೦] ಗ್ರಾನೈಟ್

ನಿಕ್ಷೇಪ ಹಳ್ಳಿಗಳ ಒಡೆತನಕ್ಕೆ ಸರ್ಕಾರಿ ಜಮೀನಿನಲ್ಲಿದ್ದರೂ ಸೇರಿದ್ದೆಂದು ಜನರಲ್ಲಿ ಅರಿವು ಮೂಡಿಸಿದ ಪ್ರೊಫೆಸರ್ ಆ ಸಂಪನ್ಮೂಲದ ರಾಯಧನ ಹಳ್ಳಿಗಳಿಗೆ ಸೇರಬೇಕೆಂದು ಹೋರಾಟ ಆರಂಭಿಸಿದರು. ಗ್ರಾನೈಟ್ ತುಂಬಿದ ಲಾರಿಗಳನ್ನು ತಡೆಹಿಡಿದು, ಅವುಗಳನ್ನು ಸ್ಥಳದಲ್ಲೇ ರಾಶಿ ಹಾಕಿದ ಕಾರಣಕ್ಕಾಗಿ ಸುಮಾರು ೧,೩೦೦ ರೈತರು ನ್ಯಾಯಾಂಗ ಬಂಧನಕ್ಕೊಳಗಾದರು. ಈ ಹೋರಾಟದಲ್ಲಿ ಹೆಚ್ಚಾಗಿ ಯುವಕರೇ ಭಾಗವಹಿಸಿದ್ದರು. ಈ ಹಿನ್ನೆಲೆಯಲ್ಲಿ ''೧೯೯೦ರ ದಶಕದಲ್ಲಿ ಸರ್ಕಾರ ತಜ್ಞರ ಸಮಿತಿಯೊಂದನ್ನು ನೇಮಕ ಮಾಡಿ ಆಕ್ರಮವಾಗಿ ಕಂಟ್ರ್ಯಾಕ್ಟರುಗಳಿಗೆ ಲೈಸೆನ್ಸ್ ನೀಡಿ ಪರಿಸರವನ್ನು ಹಾಗೂ ಪ್ರಾಕೃತಿಕ ಸಂಪನ್ಮೂಲಗಳನ್ನು ಲೂಟಿ ಮಾಡಿರುವ ಆಪಾದನೆಯನ್ನು ಪರಿಶೀಲಿಸಲು ಕೇಳಿಕೊಂಡಿತು.''[೪೧] ೧೯೯೧ರ 'ರಸ್ತೆ ರೋಕೋ' ಸಂದರ್ಭದಲ್ಲಿ ಪ್ರಾಕೃತಿಕ ಸಂಪನ್ಮೂಲಗಳನ್ನು ಹಳ್ಳಿಗಳ ಆಸ್ತಿಯೆಂದು ನಂಜುಂಡಸ್ವಾಮಿ ಅವರು ಘೋಷಿಸಿದರು. ಈ ಮೂಲಕ ಗ್ರಾಮ ಸ್ವರಾಜ್ಯದ ಕಲ್ಪನೆಯನ್ನು ರೈತರ ಮುಂದಿಡಲು ನಂಜುಂಡಸ್ವಾಮಿ ಅವರು ಅವಿರತವಾಗಿ ಶ್ರಮಿಸಿದರು. ''ನೈಸರ್ಗಿಕ ಸಂಪತ್ತಿನ ಲೂಟಿ ಹಾಗೂ ಅದರ ಕೇಂದ್ರೀಕೃತ ಆಡಳಿತದಿಂದಾಗುತ್ತಿದ್ದ ಭ್ರಷ್ಟಾಚಾರ, ಲೂಟಿ ಮತ್ತು ಅದಕ್ಷತೆಯ ವಿರುದ್ಧ ಕನಕಪುರದಲ್ಲಿ ರೈತ ಸಂಘ ಹೂಡಿದ್ದ ಚಳವಳಿಯ ಒತ್ತಾಯಗಳನ್ನು ರಾಜ್ಯ ಸರ್ಕಾರ ಒಪ್ಪಿಗೆ ನೀಡಿತ್ತು.''[೪೨] ಆದರೆ ಇಂದಿಗೂ ನೈಸರ್ಗಿಕ ಸಂಪತ್ತಿನ ಲೂಟಿ ಬಗೆಹರಿಯದ ಸಮಸ್ಯೆಯಾಗಿದೆ. ಇಂದು ಗ್ರಾನೈಟ್ ಕಲ್ಲು, ಮರಳು, ಖನಿಜ ಸಂಪತ್ತು, ಅರಣ್ಯ ಸಂಪತ್ತು ಬಹುರೂಪಗಳಲ್ಲಿ ನಿಲ್ಲದೆ ಲೂಟಿ ನಡೆಯುತ್ತಿದೆ.

೧೯೮೨ ರ ಕರ್ನಾಟಕದ ಮೊಟ್ಟ ಮೊದಲ ರೈತ ಸಮಾವೇಶ

ಕರ್ನಾಟಕ ರಾಜ್ಯ ರೈತ ಸಂಘದ ಹೋರಾಟ ಸಮಿತಿಯ ಸಂಚಾಲಕರಾಗಿದ್ದ ನಂಜುಂಡಸ್ವಾಮಿ ಅವರು ರಾಜ್ಯದಾದ್ಯಂತ ರೈತರನ್ನು ಸಂಘಟನೆ ಮಾಡಲು ಪ್ರಯತ್ನಿಸಿದರು. ಈ ಬಗೆಯಲ್ಲಿ ಅದನ್ನು ಐತಿಹಾಸಿಕ ರ್‍ಯಾಲಿಯೆಂದೇ ಗುರುತಿಸಲಾಗಿದೆ. ಅದು ''ಕರ್ನಾಟಕದ ಮೊಟ್ಟ ಮೊದಲ ಬೃಹತ್ ರೈತ ಸಮಾವೇಶ ಆಗಿತ್ತು. ಸಮಾವೇಶದಲ್ಲಿ ರೈತ ಸಂಘದ ಆಶೋತ್ತರಗಳನ್ನು ಬಿಂಬಿಸಿ ಸುಮಾರು ಹತ್ತು ಲಕ್ಷಕ್ಕೂ ಹೆಚ್ಚು ಜನ ೧೯೮೨ ಅಕ್ಟೋಬರ್ ೨ ರಂದು ''ಹೊಸ ಕರ್ನಾಟಕ ಕಟ್ಟಲು'' ಎಂಬ ಘೋಷಣೆಯೊಂದಿಗೆ ಪ್ರತಿಜ್ಞೆ ಮಾಡಿದರು. ೩೫.೦೦೦ ಜನರನ್ನು ಈ ಸಮಾವೇಶದಲ್ಲಿ ಬಂಧಿಸಲಾಗಿತ್ತು.''[೪೩] ಹೊಸ ಕರ್ನಾಟಕ ಕಟ್ಟಲು ಅಂದರೆ ಗ್ರಾಮೀಣ ಪ್ರದೇಶದ ಬಡವರ ಹಾಗೂ ರೈತರ ಆಶೋತ್ತರಗಳನ್ನು ಪ್ರತಿನಿಧಿಸಲು ಸರ್ಕಾರವನ್ನು ರಚಿಸುವುದು ಎಂದರ್ಥ. ಪರಿಣಾಮವಾಗಿ ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲಿ ಪಕ್ಷಾತೀತವಾದ ಮತದಾರರ ವೇದಿಕೆಯನ್ನು ಸ್ಥಾಪಿಸಬೇಕೆಂಬ ಉದ್ದೇಶವನ್ನಿಟ್ಟುಕೊಂಡು ಈ ಸಮಾವೇಶವನ್ನು ನಡೆಸಲಾಯಿತು. ೩೫,೦೦೦ ಜನರನ್ನು ಈ ಸಮಾವೇಶದಲ್ಲಿ ಬಂಧಿಸಲಾಯಿತು. ಕರ್ನಾಟಕದ ಎಲ್ಲಾ ಜೈಲುಗಳೂ ಭರ್ತಿಯಾಗಿ ೧೯೪೭ ರ ಕ್ವಿಟ್ ಇಂಡಿಯಾ ಚಳವಳಿಯಲ್ಲೂ ಆಗದಂಥ ಹೋರಾಟದ ಕೀರ್ತಿ ಲಭಿಸಿತು.

೧೯೮೮ ರ ರೈಲು ಮತ್ತು ರಸ್ತೆ ತಡೆ ಚಳವಳಿ

ಜನತಾ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ರೈತರ ಮೇಲಿನ ಚಳವಳಿ ಮೊಕದ್ದಮೆಗಳನ್ನು ಅಲ್ಲಲ್ಲಿ ವಾಪಸ್ಸು ತೆಗೆದುಕೊಂಡಿತು. ಬಡ್ಡಿ ಹಾಗೂ ಸುಸ್ತಿ ಬಡ್ಡಿಯನ್ನು ಮಾತ್ರ ರದ್ದು ಮಾಡಿತು. ರೈತರು ಈ ಆಮಿಷಕ್ಕೊಳಗಾಗಿ, ಜಮೀನು ವಿಲೇವಾರಿ ಮಾಡಿ ಇನ್ನೂ ಹೆಚ್ಚಿನ ಕಷ್ಟಕ್ಕೆ ಸಿಲುಕುವಂಥ ನಯವಂಚನೆಯ ಕೆಲಸವನ್ನು ಮಾಡಿತು. ಬೆಳೆಗಳಿಗೆ ಸೂಕ್ತ ಬೆಲೆಗಳನ್ನು ಗೊತ್ತು ಮಾಡುವಿಕೆಯಲ್ಲಿಯೂ ರೈತರಿಗೆ ವಂಚನೆ ಮಾಡುತ್ತಿತ್ತು. ರಾಜಕೀಯ ಉದ್ದೇಶಕ್ಕಾಗಿಯೇ ನಡೆದ ಚಳವಳಿ ಇದಾಗಿತ್ತು. ಈ ಚಳವಳಿಯಲ್ಲಿ ಮುಖ್ಯವಾಗಿ ಕೇಂದ್ರ ಸರ್ಕಾರ ಆರ್ಥಿಕ ಕೃಷಿ ನೀತಿಗಳನ್ನು ವಿರೋಧಿಸುವ ವಿಚಾರಗಳಿದ್ದರೂ, ಅಂತಿಮವಾಗಿ ರೈತ ಸಂಘವು ರಾಜ್ಯ ಸರ್ಕಾರದೊಡನೆಯೇ ಕಾದಾಡಲು ಆರಂಭಿಸಿದ್ದು ಗನಮನಾರ್ಹ. ೧೯೮೮ ಜನವರಿ ೨೬ರ ಗಣರಾಜ್ಯೋತ್ಸವ ದಿನದಂದು ರಾಜ್ಯದ ವಿವಿದೆಡೆಗಳಲ್ಲಿ ರಸ್ತೆ ಹಾಗೂ ರೈಲು ಮಾರ್ಗಗಳನ್ನು ತಡೆಯಲಾಯಿತು.[೪೪] ರೈತರ ಸಮಸ್ಯೆಗಳನ್ನು ಬಗೆಹರಿಸದ ಅನವಶ್ಯಕ ಕೆಲಸಗಳನ್ನು ಮಾಡುತ್ತಿದ್ದ ಸರ್ಕಾರವನ್ನು ಸ್ಥಗಿತಗೊಳಿಸುವ ಕಾರ್ಯಕ್ರಮ ಇದಾಗಿತ್ತು. ಈ ಅಸಹಕಾರ ಚಳವಳಿಯಲ್ಲಿ ೩೭,೭೨೫ ರೈತರು ಬಂದನಕ್ಕೊಳಗಾದರು. ಬೆಂಗಳೂರು, ಮೈಸೂರು, ಅರಸೀಕೆರೆ, ಹುಬ್ಬಳ್ಳಿ, ಧಾರವಾಡ, ಮುಂತಾದೆಡೆಗಳಲ್ಲಿ ರೈಲನ್ನು ನಿಲ್ಲಿಸಿದ ಘಟನೆಗಳು ಜರುಗಿದವು.

ಸೋಷಿಯಲ್ ಫಾರೆಸ್ಟ್ರಿಯ ವಿರುದ್ಧ ಚಳವಳಿ

ಐದನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸೋಷಿಯಲ್ ಫಾರೆಸ್ಟ್ರಿಯನ್ನು ಗ್ರಾಮೀಣ ಜನರ ಹಾಗೂ ಗ್ರಾಮೀಣ ಉದ್ದಿಮೆಗಳ ಅಭಿವೃದ್ಧಿಯನ್ನು ಗಮನದಲ್ಲಿ ಇಟ್ಟುಕೊಂಡು ಕಾರ್ಯರೂಪಕ್ಕೆ ತರಲಾಯಿತು. ಹಾಗೆಯೇ ಭೂಮಾಲೀಕರು ಭೂ ಮಸೂದೆಯನ್ನು ಜಾರಿಗೆ ತರದಂತೆ ಸೋಷಿಯಲ್ ಫಾರೆಸ್ಟ್ರೀಯನ್ನು ತರಲಾಯಿತು ಎನ್ನಲಾಗಿದೆ. ''ಏಕರೂಪದ ಸಸ್ಯ (ಮೋನೋಕಲ್ಚರ್)ಗಳನ್ನು ಗ್ರಾಮಗಳಲ್ಲಿ ಬೆಳೆಯುವ ಯೋಜನೆಯನ್ನು ಜಾಗತಿಕ ಬ್ಯಾಂಕ್ ಸಹಕಾರದಿಂದ ೧೯೮೦ ರ ದಶಕದಲ್ಲಿ ಕಾರ್ಯರೂಪಕ್ಕೆ ತಂದಿತು.''[೪೫] ಇದರ ಮುಖ್ಯ ಉದ್ದೇಶ ನಗರ ಕೇಂದ್ರಿತ ಉದ್ದಿಮೆಗಳ ಬೆಳವಣಿಗೆಯನ್ನು ಗಮನದಲ್ಲಿಟ್ಟುಕೊಂಡು ತರುವುದಾಗಿತ್ತು. ಏಕರೂಪದ ಸಸ್ಯ ಎಂದರೆ ನೀಲಗಿರಿ ಮರಗಳು ಅವುಗಳನ್ನು ರೇಯಾನ್ ಹಾಗೂ ಕಾಗದ ಕೈಗಾರಿಕೆಗಳಲ್ಲಿ ಬಳಸಲಾಗುತ್ತಿತ್ತು. ಆರಂಭದಲ್ಲಿ ನಂಜುಂಡಸ್ವಾಮಿ, ರೈತ ಸಂಘದ ಸದಸ್ಯರು ಹಾಗೂ ಪರಿಸರವಾದಿಗಳು ಪ್ರತಿಭಟಿಸಿದರು. ಕಾರಣವೆಂದರೆ ನೀಲಗಿರಿ ಗಿಡಗಳು ನೆಲದ ತೇವಾಂಶವನ್ನು ಕಡಿಮೆ ಮಾಡುತ್ತವೆ ಹಾಗೂ ಫಲವತ್ತತೆಯನ್ನು ನಾಶ ಮಾಡುತ್ತವೆ. ವಿದ್ವಾಂಸರ ಸಂಶೋಧನೆಗಳ ಆಧಾರದಲ್ಲಿ ನೀಲಗಿರಿ ಮರಗಳು ನೆಲವನ್ನು ಒಣ ಹಾಗೂ ಬರಡು ಮಾಡುತ್ತವೆ ಎಂಬುದು ಒಂದಂಶವಾದರೆ, ನೀಲಗಿರಿ ಗಿಡದ ಬೇರುಗಳಿಂದ ಭೂಮಿ ಹಾಗೂ ಹುಲ್ಲುಗಳಿಗೆ ಆಪತ್ತು ಬರುತ್ತದೆಂಬ ಕಾರಣದಿಂದ ರೈತರು

ವಿರೋಧಿಸಿದರು. ಈ ಗಿಡಗಳನ್ನು ನೆಟ್ಟ ಜಾಗದಲ್ಲಿ ಬೆಳೆಯುವ ಹುಲ್ಲನ್ನು ಮೇವಿಗಾಗಲಿ ಅಥವಾ ಗಿಡದ ಸೌದೆಗಳನ್ನು ಉರುವಲಿಗಾಗಲೀ ಉಪಯೋಗಿಸುವಂತಿಲ್ಲ. ಕುಡಿಯುವ ನೀರನ್ನು ಕಲುಷಿತ ಮಾಡುವುದರೊಂದಿಗೆ ರೈತರ ಆರೋಗ್ಯವನ್ನು ಹಾಳು ಮಾಡುವುದರಿಂದ ತೀವ್ರ ಪ್ರತಿರೋಧ ವ್ಯಕ್ತವಾಯಿತು. ರೈತ ಸಂಘ ಗ್ರಾಮ ಸ್ವರಾಜ್ಯಕ್ಕಾಗಿ ನಡೆಸಿದ ಹೋರಾಟಗಳಲ್ಲಿ ಇದೂ ಒಂದು. ೧೯೮೭ ರಲ್ಲಿ ಭೂಮಿಯ ಸತ್ತ್ವ ಹಾಗೂ ಫಲವತ್ತತೆಯನ್ನು ಹೀರುತ್ತಿದ್ದ ನೀಲಗಿರಿ ಬೇಸಾಯದ ವಿರುದ್ಧ "ನೆಡದಿರಿ ನೀಲಗಿರಿ" ಎಂಬ ಆಂದೋಲನವನ್ನು ಹಮ್ಮಿಕೊಂಡರು.

ಚಿಕ್ಕಮಗಳೂರು, ಹಾಸನ, ಶಿವಮೊಗ್ಗದಲ್ಲಿ ಈ ಪ್ಲಾಂಟೇಶನ್ ನಡೆಯುವ ಸಂದರ್ಭದಲ್ಲಿ ೧೯೮೨ ರಲ್ಲಿ ನೀಲಗಿರಿ ಸಸಿಗಳನ್ನು ನಾಶಮಾಡಲಾಯಿತು. ೧೯೮೨ ರಲ್ಲಿ ಹಾಸನದ ತಿರುಮಲ ದೇವರ ಬೆಟ್ಟ, ಏಳುಗುಂಡ, ರಾಮದೇವರಪುರಗಳಲ್ಲಿ, ೧೯೮೬ರ ಸುಮಾರಿಗೆ ಚಿಕ್ಕಮಗಳೂರು ಜಿಲ್ಲೆಯ ಕೋಗಿಲೆಹಳ್ಳಿ, ಚೆನ್ನಹಳ್ಳಿ, ಮೊದಲಾದೆಡೆಗಳಲ್ಲಿ ಹಾಗೂ ಅದೇ ವರ್ಷ ಹಾಸನದ ಗೂಜಹಳ್ಳಿಗಳಲ್ಲಿ ಮೂರು ಲಕ್ಷಕ್ಕೂ ಹೆಚ್ಚಿನ ನೀಲಗಿರಿ ಸಸಿಗಳನ್ನು ನಾಶಮಾಡಲಾಯಿತು. ಈ ಎಲ್ಲಾ ಘಟನೆಗಳಲ್ಲಿ ೧೯೮೨ ರಿಂದ ೧೯೮೬ರ ವರೆಗೆ ೪೦೦ಕ್ಕೂ ಹೆಚ್ಚು ರೈತರು ಬಂಧಿತರಾದರು.

''ಕರ್ನಾಟಕದ ಮೊಟ್ಟ ಮೊದಲ ಮಹಿಳಾ ಸಮಾವೇಶವನ್ನು ೧೯೮೭ ನವೆಂಬರ್ ೨೩ ರಂದು ಧಾರವಾಡ ಜಿಲ್ಲೆಯ ಹಳಿಯಾಳದಲ್ಲಿ ಹಮ್ಮಿಕೊಳ್ಳಲಾಯಿತು.''[೪೬] ರಾಜ್ಯದ ವಿವಿಧೆಡೆಯಿಂದ ಲಕ್ಷಾಂತರ ರೈತ ಮಹಿಳೆಯರು ಆಗಮಿಸಿದ್ದರು. ತಮಗಗಾತ್ತಿರುವ ಶೋಷಣೆಯ ವಿರುದ್ಧ ಒಗ್ಗಟ್ಟಿನ ಧ್ವನಿ ಎತ್ತಿದರು.

''೧೯೯೧ ರಲ್ಲಿ ಕಾಂಗ್ರೆಸ್ ಸರ್ಕಾರದ ವಿರುದ್ಧ ವಿಧಾನಸೌಧದ ಮುಂದೆ ಐತಿಹಾಸಿಕ ನಗುವ ಚಳವಳಿ ನಡೆಸಿದರು.''[೪೭]

೧೯೯೨ ರಲ್ಲಿ ಕರ್ನಾಟಕದಲ್ಲಿ ಬರಗಾಲವಿದ್ದರೂ ಕಾಂಗ್ರೆಸ್ ಸರ್ಕಾರವು ಅಂತರಾಷ್ಟ್ರೀಯ ಚಲನಚಿತ್ರೋತ್ಸವವನ್ನು ಹಮ್ಮಿಕೊಂಡಿದ್ದರ ವಿರುದ್ಧ ಉಗ್ರ ಹೋರಾಟ ನಡೆಸಿದರು.

ಗ್ಯಾಟ್‌ನ ನಿರ್ದೇಶಕರಾಗಿದ್ದ ಪೀಟರ್ ಸದರ್‌ಲ್ಯಾಂಡ್ ಅವರ ಭಾರತ ಭೇಟಿಯ ವಿರುದ್ಧ "ಸದರ್‌ಲ್ಯಾಂಡ್ ಗೋಬ್ಯಾಕ್" ಎಂಬ ಘೋಷಣೆಯಡಿ ದೆಹಲಿಯಲ್ಲಿ ತೀವ್ರವಾದ ಹೋರಾಟ ನಡೆಸಿದರು.

ಬೀಜ ಸತ್ಯಾಗ್ರಹ

ಗ್ಯಾಟ್ ಹಾಗೂ ಡಂಕಲ್ ಪ್ರಸ್ತಾವನೆಯ ವಿರುದ್ಧ ಎರಡನೇ ಸ್ವಾತಂತ್ರ್ಯ ಹೋರಾಟ ನಡೆಸಲು ವಿಶ್ವದಲ್ಲೇ ಪ್ರಥಮ ಬಾರಿಗೆ ಗಾಂಧಿಯವರ ಉಪ್ಪಿನ ಸತ್ಯಾಗ್ರದ ರೀತಿಯಲ್ಲಿ "ಬೀಜ ಸತ್ಯಾಗ್ರಹ" ವನ್ನು ಹಮ್ಮಿಕೊಂಡರು. ಬೀಜ ಸ್ವಾತಂತ್ರ್ಯಕ್ಕಾಗಿ ಬೀಜ ಸತ್ಯಾಗ್ರಹ ಭಾರತದ ರೈತರಿಗೆ ಅನಿವಾರ್ಯವಾಯಿತು. ಬೀಜ ಸ್ವಾತಂತ್ರ್ಯವೇ ದೇಶದ ಸ್ವಾತಂತ್ರ್ಯ. ಆದ್ದರಿಂದ ೧೯೯೩ರ ಮಾರ್ಚ್ ೩ ಹಾಗೂ ೪ ರಂದು ರೈತರಿಂದ ದೆಹಲಿ ಮುತ್ತಿಗೆ

ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.[೮೮] ಈ ಕಾರ್ಯಕ್ರಮದ ಹಿಂದಿನ ಉದ್ದೇಶವೆಂದರೆ ಬೀಜ ಸಂಪತ್ತು ರಾಷ್ಟ್ರದ ಸಂಪತ್ತು, ಬೀಜದ ಮೇಲಿನ ಸ್ವಾಮ್ಯ, ಬೀಜ ತಯಾರಿಕೆ ಹಾಗೂ ಬೀಜದ ಮಾರಾಟ ರೈತರ ಹಕ್ಕಾಗಿ ಉಳಿಸಲು, ಭಾರತದ ಸ್ವಾಮ್ಯ ಕಾನೂನು (ಪೇಟೆಂಟ್ ಲಾ) ತಿದ್ದುಪಡಿಗೆ ವಿರೋಧ ವ್ಯಕ್ತಪಡಿಸಲು, ಬೀಜ ಉತ್ಪಾದನೆ ಕ್ಷೇತ್ರದಲ್ಲಿ ಬಹುರಾಷ್ಟ್ರೀಯ ಕಂಪೆನಿಗಳ ಪ್ರವೇಶ, ಆಹಾರ ಕ್ಷೇತ್ರದಲ್ಲಿ ವಿಶ್ವ ಮುಕ್ತ ಮಾರುಕಟ್ಟೆ ವ್ಯವಸ್ಥೆಯ ವಿರುದ್ಧ ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದಂತೆ ದೆಹಲಿ ಮುತ್ತಿಗೆ ಕಾರ್ಯಕ್ರಮ ಆಯೋಜಿಸಿದರು. ಇದರ ಜೊತೆಗೆ ''ನವದೆಹಲಿಯ ಬೋಟ್ ಕ್ಲಬ್‌ನಲ್ಲಿ ಉತ್ತರ ಭಾರತದ ರೈತನಾಯಕ ಮಹೇಂದ್ರಸಿಂಗ್ ಟಿಕಾಯತ್ ಅವರ ಬೆಂಬಲದೊಂದಿಗೆ ಐತಿಹಾಸಿಕ ಸಮಾವೇಶ ಹಮ್ಮಿಕೊಂಡರು. ಈ ಸಮಾವೇಶದಲ್ಲಿ ರೈತ ಸಂಘವು ಉತ್ತರ ಪ್ರದೇಶ ಹಾಗೂ ಪಂಜಾಬಿನ ಭಾರತೀಯ ಕಿಸಾನ್ ಯುನಿಯನ್ ಜೊತೆಗೆ ಭಾಗವಹಿಸಿ "ಚಾರ್ಟರ್ ಆಫ್ ಡಿಮಾಂಡ್" (ಬೇಡಿಕೆಗಳ ಪಟ್ಟಿ) ಅನ್ನು ಜನರ ಮುಂದಿರಿಸಿತು. ಡಂಕಲ್ ಪ್ರಸ್ತಾವನೆಯನ್ನು ಕಟುವಾಗಿ ಟೀಕಿಸಿದ ಈ ಸಮಾವೇಶ ಆಂತರಿಕ ವಿಷಯಗಳಲ್ಲಿ ಅಂತರಾಷ್ಟ್ರೀಯ ಶಕ್ತಿಗಳು ತಲೆಹಾಕುವುದನ್ನು ಪ್ರತಿಭಟಿಸಿತು.''[೮೯] ಆಮದಿನ ವಿಚಾರದಲ್ಲಿ ಭಾರತವು ತನ್ನ ಕೈಯಲ್ಲೇ ಪೂರ್ಣ ಅಧಿಕಾರವನ್ನು ಇಟ್ಟುಕೊಳ್ಳಬೇಕೆಂದು ರೈತರ ಈ ಸಮಾವೇಶ ಆಗ್ರಹಿಸಿತು. ಬೌದ್ಧಿಕ ಆಸ್ತಿಯ ಮೇಲಿನ ಹಕ್ಕು (ಇಂಟಲೆಕ್ಚುಯಲ್ ಪ್ರಾಪರ್ಟಿ ರೈಟ್) ಎನ್ನುವುದು "ಗ್ಯಾಟ್" ಒಪ್ಪಂದದ ಭಾಗವಾಗಬಾರದೆಂದು ಕೂಡ ಸಮಾವೇಶವು ಸರ್ಕಾರವನ್ನು ಒತ್ತಾಯಿಸಿತು.

ಕಾರ್ಗಿಲ್ ಬೀಜ ಕಂಪೆನಿಗಳ ಮೇಲಿನ ದಾಳಿ

ಉದಾರವಾದದ ಪರಿಣಾಮ ಭಾರತದಲ್ಲಿ ಬಹುಸಂಖ್ಯೆಯ ವಿದೇಶಿ ಬಹುರಾಷ್ಟ್ರೀಯ ಬೀಜ ಕಂಪೆನಿಗಳು ನೆಲೆಸಿದವು. ಅವುಗಳಲ್ಲಿ ಕಾರ್ಗಿಲ್ ಹಾಗೂ ಮಾನ್ಸಾಂಟೋ ಬೀಜ ಕಂಪೆನಿಗಳು ಪ್ರಮುಖವಾದವು. ಕಾರ್ಗಿಲ್ ಬೀಜ ಕಂಪೆನಿ ಇಡೀ ವಿಶ್ವದಲ್ಲೇ ಆರನೇ ಬಹುದೊಡ್ಡ ಕಂಪೆನಿಗಳಲ್ಲೊಂದಾಗಿತ್ತು. ಈ ಕಂಪೆನಿಯ ಬೀಜಗಳಿಂದ ಅಮೇರಿಕಾ ಸರ್ಕಾರಕ್ಕೆ ಅತಿ ಹೆಚ್ಚಿನ ಲಾಭವನ್ನು ತಂದುಕೊಡುವ ಸಂಸ್ಥೆಯಾಗಿತ್ತು. ಈ ಕಂಪೆನಿಯು ಸಸ್ಯಗಳಿಗೆ, ಜೀನ್ಸ್‌ಗಳಿಗೆ ಹಾಗೂ ಬೀಜಗಳಿಗೆ ಪೇಟೆಂಟನ್ನು ಪಡೆದುಕೊಂಡಿತ್ತು. ಅಲ್ಲದೆ ಈ ಸಂಸ್ಥೆಗಳಯಲ್ಲಿ ಕೆಲಸ ಮಾಡುವವರೆಲ್ಲರೂ ಅಮೇರಿಕಾ ಸರ್ಕಾರದಲ್ಲಿ ಸಲಹೆಗಾರರಾಗಿದ್ದರು. ಈ ಬಹುರಾಷ್ಟ್ರೀಯ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದವರೆಲ್ಲ ಗ್ಯಾಟ್ ಸಂಸ್ಥೆಯಲ್ಲಿ ಅಧಿಕಾರಿಗಳು. ಕಾರ್ಗಿಲ್ ಸಂಸ್ಥೆ ತನ್ನ ಶಾಖೆಗಳನ್ನು ಉತ್ತರ ಕರ್ನಾಟಕದ ಭಾಗದಲ್ಲಿ, ಬೆಂಗಳೂರು, ಬಳ್ಳಾರಿ ಹಾಗೂ ರಾಜ್ಯದ ವಿವಿಧ ಕಡೆಗಳಲ್ಲಿ ಸ್ಥಾಪಿಸಲಾಗಿತ್ತು.''[೯೦] ದೇಶದ ಸ್ವಾತಂತ್ರ್ಯ ಹಾಗೂ ಸ್ವಾವಲಂಬನೆಗೆ ಮಾರಕವಾದ ಗ್ಯಾಟ್ ಒಪ್ಪಂದಕ್ಕೆ ಭಾರತ ಸರ್ಕಾರ ಒಪ್ಪಿಗೆ ಕೊಟ್ಟಿರುವ ಹಿನ್ನೆಲೆಯಲ್ಲಿ ದೇಶದಾದ್ಯಂತ ಬಹುರಾಷ್ಟ್ರೀಯ ಕಂಪೆನಿಗಳ ವಿರುದ್ಧ ವ್ಯಾಪಕ ಹೋರಾಟ ರೂಪಿಸಲು ಕರ್ನಾಟಕ ರಾಜ್ಯ ರೈತ ಸಂಘ ತೀರ್ಮಾನಿಸಿತು. ಸ್ವಾತಂತ್ರ್ಯ ರಕ್ಷಣೆಗಾಗಿ ಅವಶ್ಯಕವಾಗಿರುವ ''ನೇರ ಕಾರ್ಯಕ್ರಮ" (DIRECT ACTION) ಗಳನ್ನು ನಂಜುಂಡಸ್ವಾಮಿ

ಅವರು ಹಮ್ಮಿಕೊಂಡರು. ಸುಂದರೇಶ್ ಅವರ ಹೋರಾಟದ ನೆನಪಿಗಾಗಿ ಅವರು ಸತ್ತು ಒಂದು ವರ್ಷದ ಶ್ರದ್ಧಾಂಜಲಿ ನೆನಪಿಗಾಗಿ ೧೯೯೨ರ ಡಿಸೆಂಬರ್ ೨೧ ರಂದು ಬೆಂಗಳೂರಿನ ಕಾರ್ಗಿಲ್ ಕಂಪನಿ ಮೇಲೆ ದಾಳಿ ನಡೆಸಿದರು.

೧೯೯೩ರ ಜುಲೈ ೧೨ ರಂದು ಬಳ್ಳಾರಿ ಜಿಲ್ಲೆಯ ತೆಕ್ಕಲಕೋಟೆಯಲ್ಲಿನ ಕಾರ್ಗಿಲ್ ಕಂಪೆನಿಯ ಮೇಲೂ ದಾಳಿಯನ್ನು ನಡೆಸಿ ಸಂಪೂರ್ಣ ಧ್ವಂಸ ಮಾಡಿದರು. ಈ ಎಲ್ಲಾ ಹೋರಾಟಗಳ ಮಧ್ಯೆ ೧೯೯೩ರ ಅಕ್ಟೋಬರ ೨ ರಂದು ಬೆಂಗಳೂರಿನ ಕಬ್ಬನ್ ಪಾರ್ಕಿನಲ್ಲಿ ಅಂತರಾಷ್ಟ್ರೀಯ ರೈತ ಸಮಾವೇಶವನ್ನು ಸಂಘಟಿಸಿದರು. ಒಂದು ಲಕ್ಷಕ್ಕೂ ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿದ್ದ ರೈತರ ಈ ಸಮಾವೇಶಕ್ಕೆ ಮೂರನೇ ಜಗತ್ತಿನ ರಾಷ್ಟ್ರಗಳಾದ ಇಂಡೋನೇಷಿಯಾ, ಮಲೇಶಿಯಾ, ನಿಕಾರುಗುವ, ಜಿಂಬಾಬ್ವೆ, ಶ್ರೀಲಂಕಾ ಹಾಗೂ ಫಿಲಿಫೈನ್ಸ್‌ಗಳಿಂದ ರೈತ ಪ್ರತಿನಿಧಿಗಳು ಭಾಗವಹಿಸಿದ್ದರು. ಡಂಕಲ್ ಪ್ರಸ್ತಾವನೆಯನ್ನು ಅಲ್ಲಿ ವಿರೋಧಿಸಲಾಯಿತು. ಹಾಗೆಯೇ ತೃತೀಯ ಜಗತ್ತಿನಲ್ಲಿ ಸಾಮಾನ್ಯವಾಗಿರುವ ಚಾದ್ದಿಕ ಆಸ್ತಿಯ ಮೇಲಿನ ಹಕ್ಕನ್ನು ಗೌರವಿಸಬೇಕು ಎಂದು ಪ್ರಸ್ತಾಪಿಸಲಾಯಿತು.''[೫೯] ಕರ್ನಾಟಕದ ರೈತರ ಹಾಗೂ ವಿಜ್ಞಾನಿಗಳ ಅಂತರಾಷ್ಟ್ರೀಯ ಕೇಂದ್ರವೊಂದನ್ನು ತೆರೆದು ಮೂರನೇ ಜಗತ್ತಿನ ರಾಷ್ಟ್ರಗಳ ಮೇಲೆ ನಡೆಯುತ್ತಿರುವ ದೌರ್ಜನ್ಯವನ್ನು ಪ್ರತಿಭಟಿಸಬೇಕೆಂದು ತೀರ್ಮಾನಿಸಲಾಯಿತು. ಮೂರನೇ ಜಗತ್ತಿಗೆ ಸಂಬಂಧಿಸಿದಂತೆ ಎಲ್ಲರಿಗೂ ಸಾಮಾನ್ಯವಾಗಿರುವ ಚಾದ್ದಿಕ ಆಸ್ತಿಯ ಮೇಲಿನ ಹಕ್ಕುಗಳನ್ನು ರೂಪಿಸಬೇಕೆಂದು ಕರೆ ನೀಡಲಾಯಿತು. ರೈತರು ತಮ್ಮಲ್ಲಿರುವ ಸಾಂಪ್ರದಾಯಿಕ ಅಥವಾ ಬದಲೀ ಕೃಷಿ ಬೀಜಗಳನ್ನು ವಿತರಿಸುವ ಅಥವಾ ಹಂಚಿಕೊಳ್ಳುವ ಸಂದರ್ಭದಲ್ಲಿ ಯಾವುದೇ ನಿರ್ಬಂಧಗಳು ಇರಬಾರದೆಂದೂ ನಿರ್ಣಯವನ್ನು ಸಮಾವೇಶವು ತೆಗೆದುಕೊಂಡಿತು. ಜಗತ್ತಿನಾದ್ಯಂತ ನಡೆಯುತ್ತಿರುವ ಎಲ್ಲಾ ಬಗೆಯ ರೈತರ ಹೋರಾಟಗಳಿಗೆ ಬೆಂಬಲಿಸುವುದು ಹಾಗೂ ಡಂಕಲ್ ಪ್ರಸ್ತಾವನೆಗೆ ಬೆಂಬಲಿಸುವವರನ್ನು ಮುಂದಿನ ಚುನಾವಣೆಗಳಲ್ಲಿ ಸೋಲಿಸಬೇಕೆಂದು ರೈತರ ಸಮಾವೇಶ ನಿರ್ಣಯಿಸಿತು.

ಕೆಂಟಕಿ ಫ್ರೈಡ್ ಕೋಳಿ ಮಳಿಗೆಗಳ ಮೇಲೆ ದಾಳಿ

೧೯೯೫ ರಲ್ಲಿ ವಿಶ್ವದಲ್ಲೇ ಮೊಟ್ಟ ಮೊದಲ ಜಾರಿಗೆ ಆರೋಗ್ಯಕ್ಕೆ ಹಾನಿಕಾರಕವಾದ ಬಹುರಾಷ್ಟ್ರೀಯ ಕಂಪೆನಿಯ ಕೋಳಿ ಉಪಹಾರ ಮಳಿಗೆಯಾದ ಕೆಂಟಕಿ ಫ್ರೈಡ್ ಚಿಕನ್, ಪಿಜ್ಜಾಹಟ್, ಮ್ಯಾಕ್ಡೋನಾಲ್ಡ್ಸ್ ಹಾಗೂ ಇನ್ನಿತರ ವಿಷಪೂರಿತ ಆಹಾರ ಮಳಿಗೆಗಳ ವಿರುದ್ಧ ಆಂದೋಲನ ಹಮ್ಮಿಕೊಂಡರು. ಇದಕ್ಕೆ ಪರಿಸರವಾದಿ ಹಾಗೂ ಮಾಜಿ ಕೇಂದ್ರ ಸಚಿವೆ ಶ್ರೀಮತಿ ಮೇನಕಾ ಗಾಂದೀಯವರೂ ಸಹ ಬೆಂಬಲ ಸೂಚಿಸಿದರು. ''ಪೆಪ್ಸಿ ಫುಡ್ ಸಂಸ್ಥೆ ಭಾರತದಲ್ಲಿ ಸುಮಾರು ೬೦ ಉಪಹಾರ ಗೃಹಗಳನ್ನು ತೆರೆದಿತ್ತು. ಈ ಸಂಸ್ಥೆಯ ಮಳಿಗೆಗಳಲ್ಲಿ ಬಳಸುವ ಕೋಳಿಗಳನ್ನು ಅತ್ಯಾಧುನಿಕ ರೀತಿಯಲ್ಲಿ ಬೆಳೆಸುವುದು ಹಾಗೂ ಕೊಲ್ಲುವುದಾಗಿತ್ತು. ಈ ಕೋಳಿಗಳನ್ನು ಬೆಳೆಸಲು ಜೀವನಿರೋಧಕಗಳು, ಆರ್ಸೆನಿಕ್ ಇರುವ ಸಂಯುಕ್ತಗಳು, ಸಲ್ಫಾ ಔಷಧಗಳನ್ನು ಕೃತಕ ಹಾರ್ಮೋನುಗಳನ್ನು ಬಳಸಿ ಕೃತಕವಾಗಿ ತೂಕ ಹೆಚ್ಚಿಸಲಾಗುತ್ತಿತ್ತು. ಈ

ಕೋಳಿಗಳು ಹೆಚ್ಚಿನದಾಗಿ ಕ್ಯಾನ್ಸರ್‌ನಿಂದ ನರಳುತ್ತಿದ್ದವಾಗಿದ್ದವು[೫೨] ಎಂಬುದನ್ನು ಮಾಧವ ಐತಾಳರು ಉಲ್ಲೇಖಿಸುತ್ತಾರೆ. ಕೆಂಟಕಿ ಫ್ರೈಡ್ ಚಿಕನ್ ಆಹಾರ ತರುವ ದುಷ್ಪರಿಣಾಮಗಳಲ್ಲಿ ಬೊಜ್ಜು, ರಕ್ತದಲ್ಲಿ ಕೊಲೆಸ್ಟರಾಲ್ ಹೆಚ್ಚಳ ಹಾಗೂ ಕರುಳಿನ ಕ್ಯಾನ್ಸರ್ ಸೇರಿದಂತೆ ಅನೇಕ ಬಗೆಯ ಕ್ಯಾನ್ಸರ್‌ಗಳಿಗೆ ಜನರು ತುತ್ತಾಗುವ ಭೀತಿ ಇತ್ತು. ಅಲ್ಲದೆ ಪೆಪ್ಸಿ ಸಂಸ್ಥೆಗೆ ಸರಬರಾಜು ಮಾಡುವ ಕೋಳಿಗಳನ್ನು ಸಾಕುವ ಕೇಂದ್ರವನ್ನು ಭಾರತದಲ್ಲಿಯೇ ಸ್ಥಾಪಿಸಿಕೊಂಡು, ಇಲ್ಲಿಯ ಜೋಳ, ಆಹಾರ, ನೀರು, ಶಕ್ತಿ, ವಿದ್ಯುತ್ ಹಾಗೂ ಕೃಷಿ ಭೂಮಿಯನ್ನು ಅನಗತ್ಯವಾಗಿ ಬಳಸಿಕೊಂಡು ದುಂದು ಮಾಡುತ್ತಿದ್ದವು.

೧೯೯೬ರ ಜನವರಿ ೩೦ ರಂದು ಬೆಂಗಳೂರಿನ ಬ್ರಿಗೇಡ್ ರಸ್ತೆಯಲ್ಲಿದ್ದ 'ಕೆಂಟಕಿ ಫ್ರೈಡ್ ಚಿಕನ್ (ಕೆ.ಎಫ್.ಸಿ) ಮೇಲೆ ರೈತ ಸಂಘದವರು ದಾಳಿ ನಡೆಸಿ ಮಳಿಗೆಯನ್ನು ಸಂಪೂರ್ಣ ಧ್ವಂಸ ಮಾಡಿದರು.'[೫೩] ನೂರಾರು ಜನ ರೈತ ಹೋರಾಟಗಾರರನ್ನು ಪೊಲೀಸರು ಬಂಧಿಸಿದರು. ದಾಳಿಯಾದ ಒಂದು ವಾರದ ನಂತರ ನಂಜುಂಡಸ್ವಾಮಿ ಅವರನ್ನೂ ಸಹ ಬಂಧಿಸಿ ಸುಮಾರು ಒಂದು ತಿಂಗಳ ಸೆರೆವಾಸದ ನಂತರ ಜಾಮೀನಿನ ಮೇಲೆ ಬಿಡುಗಡೆ ಮಾಡಿದರು.

ಪಿಟ್ಸಾಹಟ್ ಸ್ಥಾಪನೆ ವಿರುದ್ಧ ೧೯೯೬ರ ಜೂನ್ ೧ ರಂದು ಪ್ರತಿಭಟನೆ ನಡೆಸಲು ನಂಜುಂಡಸ್ವಾಮಿ ಅವರು ಆಯೋಜಿಸಿದ್ದರು. ಕಾರಣವೆಂದರೆ ಕೇವಲ ಉಪಹಾರ ಮಂದಿರಗಳನ್ನು ತೆರೆಯುವ ಸೋಗನ್ನು ಹಾಕಿಕೊಂಡು ದೇಶದಲ್ಲಿ ಲಭ್ಯವಿರುವ ಜಾನುವಾರು ಮಾಂಸವನ್ನು ಇಡೀ ಪ್ರಪಂಚಕ್ಕೆ ರಫ್ತು ಮಾಡುವ ಮೂಲ ಉದ್ದೇಶವನ್ನು ಹೊಂದಿದ್ದರಿಂದ ಈ ಕಾರಣಕ್ಕಾಗಿಯೇ "ಪಿಟ್ಸಾಹಟ್" ವಿರುದ್ಧ ಪ್ರತಿಭಟನೆ ನಡೆಸಿ, ದೇಶದ ಜಾನುವಾರು ಸಂಪತ್ತು ಹಾಗೂ ಆಹಾರ ಭದ್ರತೆಯ ಬಗೆಗೆ ಜನರಲ್ಲಿ ಕಾಳಜಿ ಮೂಡಿಲಾಯಿತ್ತು.

ವಿದ್ಯುಚ್ಛಕ್ತಿ ಕರ ನಿರಾಕರಣೆ ಚಳವಳಿ

ಗ್ರಾಮಾಂತರ ವಿದ್ಯುಚ್ಛಕ್ತಿ ಕರ ಹಾಗೂ ನೀರಾವರಿ ಪಂಪು ಸೆಟ್ಟುಗಳಿಗೆ ಕರ ವಿಧಿಸುವ ಹಾಗೂ ಒಟ್ಟಾರೆ ಬೆಲೆ ಏರಿಕೆ ಬಗ್ಗೆ ಸರ್ಕಾರ ಕಾನೂನು ಬಾಹಿರ ಕ್ರಮಗಳನ್ನು ಅನುಸರಿಸಿತ್ತು. ಗ್ರಾಮಾಂತರ ವಿದ್ಯುಚ್ಛಕ್ತಿ ಸರಬರಾಜಿನ ಆಧುನೀಕರಣಕ್ಕೆ ಹಣಬೇಕೆಂದು, ಭವಿಷ್ಯದಲ್ಲಿ ಸಮರ್ಪಕ ಸರಬರಾಜಿನ ಆಶ್ವಾಸನೆ ಆಧಾರದ ಮೇಲೆ ಮಾಡುವ ಕರ ಆಕರಣೆ ಅವೈಜ್ಞಾನಿಕವಲ್ಲದೆ ಕಾನೂನು ಬಾಹಿರ ಸೇವಾ ತೆರಿಗೆಯೂ ಆಗಿತ್ತು. ಮೊದಲು ಸಮರ್ಪಕ ಸರಬರಾಜಿನ ವ್ಯವಸ್ಥೆ ಮಾಡಿ ರೈತರ ಪಂಪುಸೆಟ್ಟುಗಳು ಸುಟ್ಟು ಹೋಗದಂತೆ ಹಾಗೂ ರೈತರ ಬೆಳೆಗಳು ಹಾಳಾಗದಂತೆ ವಿದ್ಯುಚ್ಛಕ್ತಿ ಸರಬರಾಜು ಮಾಡುವವರೆಗೂ ಕರ ಪಾವತಿ ಮಾಡಬಾರದು. ಅದಕ್ಕೆ ಸಂಬಂಧಿಸಿದಂತೆ ಸರ್ಕಾರ ರೈತರೊಂದಿಗೆ ಕರಾರನ್ನು ಮಾಡಿಕೊಳ್ಳುವವರೆಗೂ ಸಾಧ್ಯವಿಲ್ಲವೆಂಬುದು ಕರನಿರಾಕರಣೆ ಚಳವಳಿಯ ಉದ್ದೇಶವಾಗಿತ್ತು. ''ವಿದ್ಯುಚ್ಛಕ್ತಿ ಚಳವಳಿ ವಿಸ್ತರಣೆಯನ್ನು ೧೯೯೬ರಿಂದ ೨೦೦೧ರವರೆಗೂ ಮುಂದುವರಿಸಿಕೊಂಡು ಬಂದರು. ಇದರ ಜೊತೆಗೆ ರಾಜ್ಯದಾದ್ಯಂತ ''ಅಕ್ಕಿ-ಬೇಳೆ'' ಚಳವಳಿ ಮಾಡುವುದಾಗಿ ನಂಜುಂಡಸ್ವಾಮಿ ಅವರು ಪತ್ರಿಕಾ ಹೇಳಿಕೆ ನೀಡಿದ್ದರು.''[೫೪] ವಿದ್ಯುತ್ ಸರಬರಾಜಿನಲ್ಲಿ

ಗ್ರಾಮಾಂತರ ಪ್ರದೇಶಕ್ಕೆ ಎಲ್ಲ ರೀತಿಯ ತಾರತಮ್ಯ ನೀತಿಯನ್ನು ಮುಂದುವರಿಸಿ ಶುಲ್ಕವನ್ನು ಹೆಚ್ಚಿಸಿದ ಸರ್ಕಾರದ ವಿರುದ್ಧ ಈ ಬಗೆಯ ಚಳವಳಿಯನ್ನು ಹಮ್ಮಿಕೊಂಡರು.

ಬೆಂಗಳೂರಿನಲ್ಲಿ ರೈತರ ಬೃಹತ್ ಸಮಾವೇಶ

ರೈತರೊಂದಿಗೆ ಸಮಾಲೋಚಿಸದೆ ಕೃಷಿ ನೀತಿಗಳನ್ನು ರೂಪಿಸುವ ಸರ್ಕಾರಗಳು, ರೈತ ಸಂಘಟನೆಗಳನ್ನು ದೂರ ಇಟ್ಟು ಆಹಾರ ನೀತಿ, ಬಿತ್ತನೆ ಬೀಜ, ಸಂಪತ್ತಿನ ನೀತಿ ಹಾಗೂ ಜೈವಿಕ ವೈವಿಧ್ಯತೆ ನೀತಿಯನ್ನು ರೂಪಿಸಲು ಪ್ರಯತ್ನಿಸುತ್ತಿರುವ ಅಂತರಾಷ್ಟ್ರೀಯ ಕೃಷಿ ಮತ್ತು ಆಹಾರ ಸಂಸ್ಥೆ (FAO) ಹಾಗೂ ವಿಶ್ವಸಂಸ್ಥೆ ಈ ಕ್ಷೇತ್ರಗಳಲ್ಲಿ ಅವಶ್ಯಕವಾಗಿ ಗುರುತಿಸಬೇಕಾದ ರೈತರ ಹಕ್ಕುಗಳ ಬಗ್ಗೆ ನಿರ್ಲಕ್ಷ್ಯ ತೋರಿದವು. ಈ ಕಾರಣದಿಂದಾಗಿ ೧೯೯೬ರ ಜನವರಿ ೩೦ರಂದು ರೈತರ ಹಕ್ಕುಗಳನ್ನು ಪ್ರತಿಪಾದಿಸಲು ಬೆಂಗಳೂರಿನ ನ್ಯಾಷನಲ್ ಕಾಲೇಜು ಮೈದಾನದಲ್ಲಿ ರಾಷ್ಟ್ರಮಟ್ಟದ ರೈತರ ಬೃಹತ್ ಸಮಾವೇಶವನ್ನು ಹಮ್ಮಿಕೊಳ್ಳಲಾಯಿತು.[೨೧] ಈ ಸಮಾವೇಶದಲ್ಲಿ ಭಾರತದ ರೈತರಿಂದ ರೈತರ ಹಕ್ಕುಗಳ ಘೋಷಣೆಗಳನ್ನು ಹಾಗೂ ಸಮಾವೇಶದ ಒತ್ತಾಯಗಳನ್ನು ಮುಂದಿಟ್ಟರು.

೧೯೯೬ರಲ್ಲಿ ಬೆಂಗಳೂರಿನಲ್ಲಿ ಜರುಗಿದ ವಿಶ್ವಸುಂದರಿ ಸ್ಪರ್ಧೆಯ ವಿರುದ್ಧ ತೀವ್ರವಾದ ವಿರೋಧವನ್ನು ವ್ಯಕ್ತಪಡಿಸಿದರು. ಕೋಜೆಂಟ್ರಿಕ್ಸ್ ಹಾಗೂ ಎನ್ರಾನ್‌ನ ವಿರುದ್ಧ ಚಿಕ್ಕಮಗಳೂರಿನಲ್ಲಿ ಮೇನಕಾಗಾಂಧಿ ಅವರೊಡನೆ ನಂಜುಂಡಸ್ವಾಮಿ ಅವರು ಒಡಗೂಡಿ ೧೯೯೬ರಲ್ಲಿ ಉಗ್ರ ಹೋರಾಟವನ್ನೇ ನಡೆಸಿದರು.

ಮಾನ್ಸಾಂಟೋ ಬೀಜದ ಕಂಪೆನಿಯ ಮೇಲೆ ದಾಳಿ

ಮಾನ್ಸಾಂಟೋ ಬಹುರಾಷ್ಟ್ರೀಯ ಬೀಜ ಕಂಪೆನಿಯು ಬಿ.ಟಿ.ಹತ್ತಿ ಬೀಜ ಮಾರುವ ಮಳಿಗೆಗಳನ್ನು ಕರ್ನಾಟಕದಾದ್ಯಂತ ತೆರೆದಿತ್ತು. ಬಿ.ಟಿ.ತಂತ್ರಜ್ಞಾನದಿಂದ ಮಾನವ ಹಾಗೂ ನಿಸರ್ಗದ ಮೇಲಾಗುವ ಪರಿಣಾಮಗಳನ್ನು ಗಮನದಲ್ಲಿಟ್ಟುಕೊಂಡು, ರಾಯಚೂರು, ದಾವಣಗೆರೆ ಹಾಗೂ ಬಳ್ಳಾರಿ ಜಿಲ್ಲೆಯ ಹಡಗಲಿ ತಾಲ್ಲೂಕಿನಲ್ಲಿ ಬಿ.ಟಿ.ಹತ್ತಿ ಗಿಡಗಳನ್ನು ಕಿತ್ತು ಸುಡುವುದರ ಮುಖೇನ ನಂಜುಂಡಸ್ವಾಮಿ ನೇತೃತ್ವದ ಕರ್ನಾಟಕ ರಾಜ್ಯ ರೈತ ಸಂಘದವರು ವಿರೋಧ ವ್ಯಕ್ತಪಡಿಸಿದರು. ೧೯೯೮ರಲ್ಲಿ ಮಾನ್ಸಾಂಟೋ ಬೀಜದ ಕಂಪೆನಿಯ ಟರ್ಮಿನೇಟರ್ ತಂತ್ರಜ್ಞಾನದ ವಿರುದ್ಧ ಹಮ್ಮಿಕೊಂಡಿದ್ದ ಆಂದೋಲನಕ್ಕೆ ''ಆಪರೇಷನ್ ಕ್ರಿಮೇಶನ್ ಮಾನ್ಸಾಂಟೋ'' ಎಂದು ಹೆಸರಿಟ್ಟರು. ಈ ಹಿನ್ನೆಲೆಯಲ್ಲಿ ಭಾರತೀಯ ವಿಜ್ಞಾನ ಸಂಸ್ಥೆ ಹಾಗೂ ಮಾನ್ಸಾಂಟೋ ಎರಡಕ್ಕೂ ಎಚ್ಚರಿಕೆ ನೋಟೀಸನ್ನು ನಂಜುಂಡಸ್ವಾಮಿ ಅವರು ನೀಡಿದ್ದರು.

೨೦೦೨ರಲ್ಲಿ ದಾವಣಗೆರೆಯಲ್ಲಿ ಮಾನ್ಸಾಂಟೋ ಕಂಪೆನಿ ಬಿ.ಟಿ.ಹತ್ತಿಯ ಪರೀಕ್ಷೆ ಹಾಗೂ ಸಂಶೋಧನೆ ನಡೆಸುತ್ತಿದ್ದ ಜಮೀನಿನ ಮೇಲೆ ದಾಳಿ ನಡೆಸಿ ಬೆಳೆ ಸುಟ್ಟು ಹಾಕುವ ಮೂಲಕ ಚಳವಳಿ ನಡೆಸಿದರು. ಬೆಂಗಳೂರಿನಲ್ಲಿ ಬಿ.ಟಿ. ಹತ್ತಿ ವಿರುದ್ಧ ಬೃಹತ್ ಪ್ರತಿಭಟನೆ ನಡೆಸಿ ೨೦೦೨ರ ಏಪ್ರಿಲ್ ೧೬ರ 'ವಿಶ್ವ

ರೈತ ಹುತಾತ್ಮರ ದಿನ'ದಂದು ಧಾರವಾಡದಲ್ಲಿ ಮಾನ್ಸಾಂಟೋ ಕಂಪೆನಿಯ ವಿರುದ್ಧ ರಾಷ್ಟ್ರ ಮಟ್ಟದ ಬೃಹತ್ ಸಮಾವೇಶ ಹಮ್ಮಿಕೊಳ್ಳಲಾಯಿತು.[೯೬] ಚೌಧರಿ ಮಹೇಂದ್ರಸಿಂಗ್ ಟಿಕಾಯತ್ ಹಾಗೂ ತಮಿಳುನಾಡಿನ ರೈತ ನಾಯಕ ಸೆಲ್ವಮುತ್ತು ಈ ಸಮಾವೇಶದಲ್ಲಿ ಭಾಗವಹಿಸಿ ತಮ್ಮ ಬೆಂಬಲ ಸೂಚಿಸಿದ್ದರು. ೨೦೦೩ರ ಸೆಪ್ಟಂಬರ್ ೧೧ರಂದು ಬೆಂಗಳೂರಿನ 'ಭಾರತೀಯ ವಿಜ್ಞಾನ ಸಂಸ್ಥೆ'ಯಲ್ಲಿದ್ದ ಪರಿಸರಕ್ಕೆ ಮಾರಕವಾದ ಮಾನ್ಸಾಂಟೋ ಬೀಜದ ಕಂಪೆನಿಯ ಮೇಲೆ ರೈತ ಕಾರ್ಯಕರ್ತರಿಂದ ನೇರ ಕಾರ್ಯಕ್ರಮವನ್ನು ನಡೆಸಿ ಕಛೇರಿ ಹಾಗೂ ಪ್ರಯೋಗಶಾಲೆಯನ್ನು ಧ್ವಂಸ ಮಾಡಿದ್ದನ್ನು ಉಲ್ಲೇಖಿಸಬಹುದು.

ರೈತರಿಂದ ಬೆಂಗಳೂರು ಮುತ್ತಿಗೆ

ರೈತರ ಜೀವನವನ್ನು ಸದಾ ಸಾಲದಲ್ಲಿಟ್ಟು ಹಾಳುಗೆಡುವುತ್ತಿರುವ ಸರ್ಕಾರವನ್ನು ಎಚ್ಚರಿಸಲು, 'ಕೃಪಾಂಕ' ಹಾಗೂ 'ಆಶ್ರಯ' ಯೋಜನೆಗಳನ್ನು ರದ್ದು ಮಾಡಿದ ನ್ಯಾಯಾಂಗವನ್ನು ಹಳ್ಳಿಗಳಿಗೆ ಆಹ್ವಾನಿಸಲು ಮೇ ೩, ೨೦೦೦ ರಂದು ರೈತರಿಂದ ಬೆಂಗಳೂರು ಮುತ್ತಿಗೆ ಕಾರ್ಯಕ್ರಮ ಹಮ್ಮಿಕೊಂಡರು. ಮುಖ್ಯವಾಗಿ ಕೃಷಿ ಉತ್ಪಾದನೆ (ನೀರಾವರಿ ಕರ, ವಿದ್ಯುಚ್ಛಕ್ತಿ ಕರ, ಎಲ್ಲ ಸಬ್ಸಿಡಿಗಳ ರದ್ದು), ಶಿಕ್ಷಣ ಹಾಗೂ ಸರ್ಕಾರಿ ಉದ್ಯೋಗಗಳ ವಂಚನೆ (ಶಿಕ್ಷಣಕ್ಕೆ ಬಜೆಟ್ ಕಡಿತ, ಕೃಪಾಂಕ ರದ್ದು), ಕೃಷಿ ಮಾರುಕಟ್ಟೆಗಳ ಪೂರ್ಣ ನಿಷ್ಕ್ರಿಯತೆ (ಕೃಷಿ ಆಮದು ನೀತಿಯಿಂದ ಎಲ್ಲ ಬೆಳೆಗಳ ಬೆಲೆ ನಷ್ಟ). ಇದರ ಪರಿಣಾಮವಾಗಿ ಉದ್ಭವವಾಗುತ್ತಿದ್ದ ಸಾಲದ ಸಮಸ್ಯೆ ಮತ್ತು ರೈತರ ಆತ್ಮಹತ್ಯೆಗಳ ಹೆಚ್ಚಳದಿಂದಾಗಿ ಸರ್ಕಾರವನ್ನು ಎಚ್ಚರಿಸಲು ಈ ಕಾರ್ಯಕ್ರಮ ಹಮ್ಮಿಕೊಂಡರು. ಸಮಾನ ವಿದ್ಯುಚ್ಛಕ್ತಿ ಸೌಲಭ್ಯ, ಕೃಷಿ ಆಮದು ರದ್ದು, ಕೃಷಿ ಸಾಲ ರದ್ದು, ಹಾಗೂ ಸಮಾನ ಶಿಕ್ಷಣ ಇಲ್ಲವೇ ಶೇಕಡಾ ೧೫ ''ಗೌರವಾಂಕ'' ನೀಡಬೇಕೆಂಬ ನಾಲ್ಕು ಒತ್ತಾಯಗಳನ್ನು ಸರ್ಕಾರದ ಮುಂದೆ ಇಟ್ಟರು.

ಬಂಡಿ ಯಾತ್ರೆ

ಭಾರತದ ನೆಲ, ಜಲ ಮುಂದೆ ಶಾಪವಾಗುವ ವ್ಯವಸ್ಥೆಯನ್ನು ಬಹುರಾಷ್ಟ್ರೀಯರು ನಡೆಸುತ್ತಿದ್ದಾರೆ. ನಮ್ಮ ದೇಶದ ಕೃಷಿ ಹಾಗೂ ಕೈಗಾರಿಕಾ ಕ್ಷೇತ್ರಗಳನ್ನು ಹಾಳು ಮಾಡುವ ಹುನ್ನಾರಗಳನ್ನು ಬಹುರಾಷ್ಟ್ರೀಯ ಕಂಪೆನಿಗಳು ಹೊಂದಿವೆ. ಈ ಹಿನ್ನೆಲೆಯಲ್ಲಿ ರೈತ ಬೆಳೆದ ಆಹಾರ ಧಾನ್ಯಕ್ಕೆ ಬೆಲೆ ಇಲ್ಲದೆ ಮುಂದೆ ಅವು ತನಗೆ ಬೀಜಗಳನ್ನಾಗಿ ಬಿತ್ತಲು ಸ್ವಾತಂತ್ರ್ಯ ಇಲ್ಲದೇ ಅತಂತ್ರ ಸ್ಥಿತಿಯನ್ನು ಸೃಷ್ಟಿಸುತ್ತಿದ್ದವು. ೨೦೦೧ ರಲ್ಲಿ ವಿಶ್ವದ 'ಪ್ರಥಮ ವಿಶ್ವ ರೈತ ಹುತಾತ್ಮರ ದಿನ'ವನ್ನು ಬಿಜಾಪುರದಲ್ಲಿ ರೈತರ ಬೃಹತ್ ಸಮಾವೇಶ ನಡೆಸಿ ಹಮ್ಮಿಕೊಂಡರು. ಕೇಂದ್ರ ಸರ್ಕಾರದ ಪರಿಮಾಣದ ಮಿತಿಯಿಲ್ಲದೇ ಆಮದು ಮಾಡಿಕೊಳ್ಳಬಹುದು ಎಂದು ಜಾರಿಗೊಳಿಸಿದ್ದ ಮುಕ್ತ ಆಮದು ನೀತಿಯ ವಿರುದ್ಧ ಪ್ರಭಟನೆ ಆರಂಭಿಸಿದರು. ಈ ಕಾರ್ಯಗಳಿಂದಾಗಿ ಕರ್ನಾಟಕ ರಾಜ್ಯ ರೈತ ಸಂಘದ ಅಧ್ಯಕ್ಷರಾಗಿದ್ದ ನಂಜುಂಡಸ್ವಾಮಿ ಅವರು ರಾಷ್ಟ್ರವ್ಯಾಪಿಯಾಗಿ ಜನರನ್ನು

ಜಾಗೃತ ಗೊಳಿಸಲು "ಬಂಡೀಯಾತ್ರೆ" ಎಂಬ ಮಹತ್ವದ ಪ್ರತಿಭಟನೆಯ ಕಾರ್ಯಕ್ರಮವನ್ನು ಆಯೋಜಿಸಿದರು. "ಕನ್ಯಾಕುಮಾರಿ ಹಾಗೂ ಕಾಶ್ಮೀರದಿಂದ ಏಕ ಕಾಲಕ್ಕೆ ಫೆಬ್ರವರಿ ೧೯, ೨೦೦೧ ರಂದು ರೈತರ "ಬಂಡಿಯಾತ್ರೆ"ಯನ್ನು ಹಮ್ಮಿಕೊಳ್ಳಲಾಗಿತ್ತು. ಉತ್ತರ ಹಾಗೂ ದಕ್ಷಿಣ ರಾಜ್ಯಗಳಿಂದ ಸಾವಿರಾರು ಸಂಖ್ಯೆಯಲ್ಲಿ ರೈತರು ಮುಂಬೈ ಬಂದರಿನಲ್ಲಿ ಸೇರಿ ಆಮದುಗಳ ವಿರುದ್ಧ ನೇರ ಕಾರ್ಯಕ್ರಮವನ್ನು ವಿದೇಶದಿಂದ ಬರುವ ಎಲ್ಲಾ ವಸ್ತುಗಳನ್ನು ಸಮುದ್ರಕ್ಕೆ ಚೆಲ್ಲುವ ಮೂಲಕ ಪ್ರತಿಭಟನೆ ನಡೆಸಿದರು."[೬೭] ಅಂದು ಗಾಂಧಿ ಅವರು ಬ್ರಿಟಿಷರ ವಿರುದ್ಧ ಉಪ್ಪಿನ ಸತ್ಯಾಗ್ರಹವನ್ನು ನಡೆಸಿದ ಬಗೆಯಲ್ಲಿ ಇಂದಿನ ಬಂಡಿಯಾತ್ರೆ ಸತ್ಯಾಗ್ರಹ ನಂಜುಂಡಸ್ವಾಮಿ ನೇತೃತ್ವದಲ್ಲಿ ನಡೆದದ್ದು ಗಮನಾರ್ಹ.

ನೀರಾ ಚಳವಳಿ

ವಿದೇಶಿ ಶಕ್ತಿಗಳ ಹುನ್ನಾರದಲ್ಲಿ ತೆಂಗಿನ ಮರಗಳಿಗೆ ಇಂದು ಬಂದಿರುವ ನುಸಿ ಪೀಡೆ ರೋಗವು ಒಂದಾಗಿದೆ. ಕರ್ನಾಟಕದಲ್ಲಿ ತೆಂಗಿನ ಬೆಳೆ ನುಸಿಪೀಡೆ ಎಂಬ ರೋಗದಿಂದ ವಿನಾಶದ ಅಂಚಿಗೆ ಸಿಲುಕಿ, ತೆಂಗು ಬೆಳೆಗಾರರ ಆರ್ಥಿಕ ಪರಿಸ್ಥಿತಿ ಅಧೋಗತಿಗೆ ತಲುಪಿತು. ಈ ವೇಳೆಯಲ್ಲಿ ಸರ್ಕಾರ ವೈಮಾನಿಕ ರಾಸಾಯನಿಕ ಸಿಂಪಡಣೆಯನ್ನು ತೆಂಗು ಪ್ರದೇಶದ ಮೇಲೆ ಮಾಡಲು ಮುಂದಾದಾಗ ಅದನ್ನು ವಿರೋಧಿಸಿದರು. ತೆಂಗಿನ ಮರದಿಂದ ನೀರಾ ಇಳಿಸುವ ಚಳವಳಿ ಆರಂಭಿಸಿದರು. ಹಾಸನದ ಅರಸೀಕೆರೆಯಲ್ಲಿ ರೈತ ನಾಯಕ ಕೋಡಿಹಳ್ಳಿ ಚಂದ್ರಶೇಖರ್ ಅವರ ತೋಟದಿಂದ ಚಾಲನೆ ಕೊಟ್ಟರು. ಆನಂತರದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಚನ್ನಪಟ್ಟಣ ತಾಲ್ಲೂಕಿನ ವಿಠಲೇನಹಳ್ಳಿ ತೆಂಗು ಬೆಳೆಗಾರರು ಅಕ್ಟೋಬರ್ ೯, ೨೦೦೧ ರಂದು ತೆಂಗಿನ ಮರಗಳಿಂದ ನೀರಾ ಇಳಿಸುವ ಚಳವಳಿ ಆರಂಭಿಸಿದರು. ಈ ರೀತಿ ತೆಂಗಿನ ಮರಗಳಿಂದ ಇಳಿಸುತ್ತಿದ್ದ ನೀರಾ ಮಾರಾಟಕ್ಕೆ ಸರ್ಕಾರ ವಿರೋಧ ವ್ಯಕ್ತಪಡಿಸಿತು. ಆದರೂ ನೀರಾ ಇಳಿಸಲು ರೈತರು ಮುಂದಾದಾಗ, ಅವರ ಮೇಲೆ ಗೋಲಿಬಾರ್ ನಡೆಸಿ ಇಬ್ಬರು ರೈತರು ಮೃತಪಟ್ಟು ಹೋರಾಟ ಉಗ್ರ ಸ್ವರೂಪ ಪಡೆಯಿತು. ಸರ್ಕಾರ ರೈತರ ಹೋರಾಟಕ್ಕೆ ಮಣಿದು ನೀರಾ ಇಳಿಸಲು ಪರವಾನಗಿ ಕೊಟ್ಟಿತು. ಈ ಹೋರಾಟವನ್ನು ದುರ್ಬಳಕೆ ಮಾಡಿಕೊಂಡು ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರು ತಮ್ಮ ರಾಜಕೀಯ ಪುನರ್ಜನ್ಮವನ್ನು ಪಡೆದುಕೊಂಡರೆಂಬ ವದಂತಿ ಇದೆ. ಈ ಚಳವಳಿಯನ್ನು ರಾಜಕೀಯ ಉದ್ದೇಶಕ್ಕಾಗಿ ಬಳಸಿಕೊಂಡು ಸರ್ಕಾರದ ಪ್ರತಿಪಕ್ಷಗಳು ರಾಜೀನಾಮೆ ನೀಡಬೇಕು, ನ್ಯಾಯಾಂಗ ತನಿಖೆ ನಡೆಸಬೇಕು ಹಾಗೂ ಗೋಲಿಬಾರ್‌ನಲ್ಲಿ ಸತ್ತ ರೈತರಿಗೆ ಪರಿಹಾರ ಕೊಡಬೇಕು ಎನ್ನುವ ಮೂರು ಅಂಶಗಳ ಕಾರ್ಯಕ್ರಮವನ್ನು ಹೇಳಿ ರೈತರ ಚಳವಳಿಯನ್ನು ತಣ್ಣಗೆ ಮಾಡಿದರು. ಸರ್ಕಾರ ಒತ್ತಾಯಕ್ಕೆ ಮಣಿದು ಜನರ ಕಣ್ಣೊರೆಸುವ ಉದ್ದೇಶದಿಂದ ಒಂದು ವಿಚಾರಣಾ ಆಯೋಗವನ್ನು ನೇಮಿಸಿತು. ಆಯೋಗ ಜನವರಿ ೧, ೨೦೦೨ ರಂದು ೨೭೩ ಪುಟಗಳ ವರದಿ ಸಲ್ಲಿಸಿತು.[೬೮] ಆದರೆ ತಪ್ಪಿತಸ್ಥರಿಗೆ ಶಿಕ್ಷೆಯಾದ ವರದಿ ಇನ್ನೂ ಬಂದಿಲ್ಲ, ಬರುವ ಸಾಧ್ಯತೆಯೂ ಇಲ್ಲ. ನೀರಾ ಪಾನೀಯ ಕೆಡದಂತೆ ಸಂರಕ್ಷಿಸುವ ತಂತ್ರಜ್ಞಾನದ ಬಗೆಗೆ

ಅರಿವಿಲ್ಲದಂತೆ ನಟಿಸುತ್ತಿದ್ದ ಸರ್ಕಾರದ ಅಧಿಕಾರಿಗಳಿಗೆ ೧೯೭೪ ರಿಂದಲೇ ಲಭ್ಯವಿರುದ ಈ ತಂತ್ರಜ್ಞಾನವನ್ನು ಹಾಗೂ ಪರಿಷ್ಕೃತ ನೀರಾ ಪಾನೀಯವನ್ನು ಒದಗಿಸಲು ನಂಜುಂಡಸ್ವಾಮಿ ಅವರು ತೀರ್ಮಾನಿಸಿ ಅದಕ್ಕೆ ಮುಖ್ಯಮಂತ್ರಿಯನ್ನು ಆಹ್ವಾನಿಸಿದ ನಿದರ್ಶನಗಳು ಇವೆ.

ಕರ್ನಾಟಕ ರಾಜ್ಯ ರೈತ ಸಂಘ ಅನ್ಯಾಯ, ಶೋಷಣೆ, ದೌರ್ಜನ್ಯಗಳಿಲ್ಲದ ಸಮಾಜಕ್ಕಾಗಿ ಹೋರಾಟ ನಡೆಸಿದೆ. ನ್ಯಾಯ ಕೇಳುವ ರೈತರ ಮೇಲೆ ಗೋಲಿಬಾರ್, ಲಾಠಿಚಾರ್ಜ್ ಮಾಡುವುದು ಈ ದೇಶದ ನಗ್ನ ಸತ್ಯವಾಗಿದೆ. ಇವುಗಳ ಬಗೆಗೆ ಗಂಭೀರವಾಗಿ ಆಲೋಚಿಸಿ, ಸಂಘಟಿತವಾದ ಹೋರಾಟವನ್ನು ನಡೆಸುವ ಅಗತ್ಯವಿದೆ. ಈ ದಿಸೆಯಲ್ಲಿ ನಂಜುಂಡಸ್ವಾಮಿ ಅವರ ನೇತೃತ್ವದ ಕರ್ನಾಟಕ ರಾಜ್ಯ ರೈತ ಸಂಘ ಸಕ್ರಿಯವಾಗಿ ಕಾರ್ಯನಿರ್ವಹಿಸಿದೆ. ಸಂಘ ಸ್ಥಾಪನೆಯಾದ ೧೯೮೦ ರಿಂದ ೮೯ ರವರೆಗೆ 'ವೈಚಾರಿಕ ಸಂಪನ್ನತೆ'ಯ ದಶಕವೆಂದೂ, ೧೯೯೦ ರಿಂದ ೧೯೯೯ರ ವರೆಗೆ 'ವೈಚಾರಿಕ ವಿಚಲತೆ'ಯ ದಶಕವೆಂದೂ, ೨೦೦೦ ದಿಂದೀಚೆಗೆ 'ಆತ್ಮಾವಲೋಕನ'ದ ದಶಕದ ಆರಂಭವೆಂದೂ ಹೇಳಬಹುದು. ನಂಜುಂಡಸ್ವಾಮಿ ಅವರು ಕರ್ನಾಟಕ ರಾಜ್ಯ ರೈತ ಸಂಘದ ಸಾರಥಿಯಾಗಿ ರಾಜ್ಯದಾದ್ಯಂತ ರೈತರ ಪರವಾಗಿ ಹೋರಾಡಿ ಅವರಲ್ಲಿ ಜಾಗೃತಿ ಮೂಡಿಸಿದರು. ಆನಂತರದ ೯೦ರ ದಶಕದಲ್ಲಿ ಸಂಘಟನೆಯಲ್ಲಿ ಮನಸ್ತಾಪ, ಒಳಜಗಳ, ಉಚ್ಚಾಟನೆ, ಭ್ರಷ್ಟಾಚಾರ ಆರೋಪಗಳು ಆರಂಭವಾದವು. ಇದರಿಂದ ಸಂಘಟನೆಯು ತನ್ನ ಮಹತ್ವ ಹಾಗೂ ಕ್ರಿಯಾಶೀಲತೆಯನ್ನು ಕಳೆದುಕೊಂಡಿತ್ತು ಎನ್ನುವ ಅಭಿಪ್ರಾಯ ವ್ಯಕ್ತಪಡಿಸಬಹುದು. ರಾಜಕಾರಣ ಪ್ರವೇಶಿಸಿದ ಕರ್ನಾಟಕ ರಾಜ್ಯ ರೈತ ಸಂಘದ ಮುಖಂಡರು ತಮ್ಮ ಮೂಲ ಉದ್ದೇಶವನ್ನು ಗಾಳಿಗೆ ತೂರಿ, ಸ್ವಹಿತಾಸಕ್ತಿಗೆ ಮುಂದಾಗಿದ್ದು ವಿಷಾದದ ಸಂಗತಿಯಾಗಿದೆ.

ಕರ್ನಾಟಕ ರಾಜ್ಯ ರೈತ ಸಂಘ ಒಡೆದು ಅದು ಎರಡು ಸಂಘಟನೆಗಳಾಗಿದ್ದರಿಂದ ರೈತರ ಬೆಂಬಲವನ್ನು ಪಡೆಯುವಲ್ಲಿ ಅಸಮರ್ಥವಾಯಿತು. ಕರ್ನಾಟಕ ರಾಜ್ಯ ರೈತ ಸಂಘದ ಕುರಿತಾಗಿ ಟೀಕೆ-ಟಿಪ್ಪಣಿಗಳು ಏನೇ ಇದ್ದರೂ ಕರ್ನಾಟಕದಲ್ಲಿ ರೈತರ ಪರವಾಗಿ ಅದು ನಂಜುಂಡಸ್ವಾಮಿ ಅವರ ನೇತೃತ್ವದಲ್ಲಿ ಹೋರಾಡಿದ್ದು ಮಾತ್ರ ಗಮನಾರ್ಹವಾದುದು.

ಟಿಪ್ಪಣಿಗಳು

೧. ಮುಜಾಫರ್ ಅಸ್ಸಾದಿ., ರೈತ, ರೈತ ಹೋರಾಟ ಹಾಗೂ ಸಾಮಾಜಿಕ ಚಳವಳಿ, ಪುಟ-೭೯

೨. ಲೆವಿ ಪದ್ಧತಿ ಅಂದರೆ ರೈತರು ಬೆಳೆದ ಬೆಳೆಯಲ್ಲಿ ಹತ್ತರಲ್ಲಿ ಒಂದು ಭಾಗವನ್ನು ಮಾರುಕಟ್ಟೆ ಬೆಲೆಗಿಂತ ಕಡಿಮೆ ಬೆಲೆಯಲ್ಲಿ ಸರ್ಕಾರಕ್ಕೆ ಮಾರಬೇಕಿತ್ತು ಅಥವಾ ಬೆಳೆಯ ರೂಪದಲ್ಲಿಯೂ ಕೊಡಬೇಕಿತ್ತು. ಬೆಟರ್‌ಮೆಂಟ್ ಚಾರ್ಜ್ ಅಂದರೆ ನೀರಾವರಿ ಪ್ರದೇಶಗಳಲ್ಲಿ ನೀರಾವರಿ ಯೋಜನೆಗಳಿಗೆ ತಗುಲಿದ ವೆಚ್ಚವನ್ನು ರೈತರ ಮೇಲೆ ವಿಧಿಸುತ್ತಿದ್ದರು. ಗೌರಿಲಂಕೇಶ್ (ವಾರಪತ್ರಿಕೆ, ಫೆಬ್ರವರಿ ೧೮, ೨೦೦೯).

೩. ತಂಬಂಡ ವಿಜಯ್ ಪೂಣಚ್ಚ., ರೈತ ಚಳವಳಿಗಳು, ಪುಟ:೨೧

೪. ಅಸ್ಸಾದಿ., ರೈತ, ರೈತ ಹೋರಾಟ ಹಾಗೂ ಸಾಮಾಜಿಕ ಚಳವಳಿ, ಪುಟ:೮೪

೫. ತಂಬಂಡ ವಿಜಯ್ ಪೂಣಚ್ಚ., ರೈತ ಚಳವಳಿಗಳು, ಪುಟ:೨೨

೬. ಮೇಲಿನದೆ, ಪುಟ:೨೪

೭. ಮೇಲಿನದೆ, ಪುಟ:೨೫

೮. ಅಸ್ಸಾದಿ., ರೈತ, ರೈತ ಹೋರಾಟ ಹಾಗೂ ಸಾಮಾಜಿಕ ಚಳವಳಿ, ಪುಟ:೯೦

೯. ಮೇಲಿನದೆ, ಪುಟ:೯೦

೧೦. ಮೇಲಿನದೆ, ಪುಟ:೯೨

೧೧. ಮೇಲಿನದೆ, ಪುಟ:೯೨

೧೨. ಮುಜಾಫರ್ ಅಸ್ಸಾದಿ., ರೈತ, ರೈತ ಹೋರಾಟ ಹಾಗೂ ಸಾಮಾಜಿಕ ಚಳವಳಿ, ಪುಟ:೯೩-೯೪

೧೩. ಪೋಲಂಕಿ ರಾಮಮೂರ್ತಿ., 'ರುಮಾಲು ಬಾರುಕೋಲು ನಂಜುಂಡಸ್ವಾಮಿ ಒಂದು ವ್ಯಕ್ತಿ ಚಿತ್ರ', (ನಟರಾಜ್ ಹುಳಿಯಾರ್., (ಸಂ), ಹಸಿರು ಸೇನಾನಿ), ಪುಟ:೪

೧೪. ಮೇಲಿನದೆ, ಪುಟ:೪

೧೫. ರವಿವರ್ಮಕುಮಾರ್., 'ಪ್ರೊಫೆಸರ್ ಕಲಿಸಿದ ಡೈರೆಕ್ಟ್ ಆ್ಯಕ್ಷನ್', (ವೀರಭದ್ರಪ್ಪ ಬಿಸ್ಲಳ್ಳಿ, (ಸಂ), ಪ್ರೊಫೆಸರ್ ಎಂಡಿಎನ್), ಪುಟ:೩೭

೧೬. ಪುಟ್ಟಯ್ಯಸ್ವಾಮಿ.ಕೆ., 'ಚಳವಳಿಯಿಂದ ಒಡಮೂಡಿದ ಅದ್ಭುತ ಚೇತನ', (ನಟರಾಜ್ ಹುಳಿಯಾರ್., (ಸಂ), ಹಸಿರು ಸೇನಾನಿ), ಪುಟ:೧೩

೧೭. ಮುಜಾಫರ ಅಸ್ಸಾದಿ., ರೈತ, ರೈತ ಹೋರಾಟ ಹಾಗೂ ಸಾಮಾಜಿಕ ಚಳವಳಿ, ಪುಟ:೯೦

೧೮. ನಂಜುಂಡಸ್ವಾಮಿ ಎಂ.ಡಿ., ರೈತ ಚಳವಳಿ ೨೦೦೦, ಪುಟ:೨-೩

೧೯. ವಿಠ್ಠಲಮೂರ್ತಿ.ಆರ್.ಟಿ., 'ರೈತ ಚಳವಳಿ ', (ಕಮಲೇಶ್, ಕೆ.ಆರ್., (ಸಂ), ಕರ್ನಾಟಕದ ರಾಜಕೀಯ ಚಿಂತನೆ), ಪುಟ:೭೪೧

೨೦. ನಟರಾಜ್ ಹುಳಿಯಾರ್., (ಸಂ), ಹಸಿರು ಸೇನಾನಿ (ಫೆಬ್ರವರಿ ೮, ೨೦೦೪ ರಂದು ನಡೆದ ನಂಜುಂಡಸ್ವಾಮಿ., ನೆನಪು ಕಾರ್ಯಕ್ರಮದಲ್ಲಿ ಮಾಡಿದ ಭಾಷಣದಲ್ಲಿ ಪ್ರೊಫೆಸರ್ ಪದೇ ಪದೇ ಹೇಳುತ್ತಿದ್ದ ಮಾತನ್ನು ನೆನಪಿಸಿಕೊಂಡದ್ದು), ಪುಟ:೯೧

೨೧. ಸದಾಶಿವ ಎ.ಜೆ., 'ಪ್ರೊಫೆಸರ್ ರೂಪಿಸಿದ ಮತದಾರ ಅಭ್ಯರ್ಥಿಯ ಕಲ್ಪನೆ', (ನಟರಾಜ ಹುಳಿಯಾರ್.,(ಸಂ), ಹಸಿರು ಸೇನಾನಿ), ಪುಟ:೧೦೩

೨೨. ಮೇಲಿನದೆ, ಪುಟ:೧೨೦

೨೩. ಪ್ರಕಾಶ್ ಕಮ್ಮರಡಿ, ಟಿ.ಎನ್., 'ರೈತ ಚಳವಳಿಗಳು ಮತ್ತು ಸೈದ್ಧಾಂತಿಕ ಹಿನ್ನೆಲೆ', (ರುಜುವಾತು; ತ್ರೈಮಾಸಿಕ, ಸಂಚಿಕೆ ೩೧-೩೨, ಜುಲೈ-ಡಿಸೆಂಬರ್ ೧೯೮೮), ಪುಟ:೧೫೫

೨೪. ನಂಜುಂಡಸ್ವಾಮಿ, ಎಂ.ಡಿ., ರೈತ ಚಳವಳಿ-೨೦೦೦ ಮತ್ತೆ ಪರ್ಯಾಯ ಸರ್ಕಾರದೆಡೆಗೆ, ಪುಟ:೩

೨೫. ರಹಮತ್ ತರೀಕೆರೆ., ಲೋಕವಿರೋಧಿಗಳ ಜೊತೆಯಲ್ಲಿ, ಪುಟ:೨೦೦

೨೬. ವಿಠ್ಠಲಮೂರ್ತಿ.ಆರ್.ಟಿ., 'ರೈತ ಚಳವಳಿ ', (ಕಮಲೇಶ್, ಕೆ.ಆರ್., (ಸಂ), ಕರ್ನಾಟಕದ ರಾಜಕೀಯ ಚಿಂತನೆ), ಪುಟ:೭೪೧

೨೭. ನಂಜುಂಡಸ್ವಾಮಿ ಎಂ.ಡಿ., ಮತ್ತೆ ಪರ್ಯಾಯ ಸರ್ಕಾರದೆಡೆಗೆ, ಪುಟ:೮

೨೮. ರಹಮತ್ ತರೀಕೆರೆ., ಲೋಕ ವಿರೋಧಿಗಳ ಜೊತೆಯಲ್ಲಿ (ಸಂದರ್ಶನ: ಕಡಿದಾಳು ಶಾಮಣ್ಣ ಅವರನ್ನು ಸಂದರ್ಶಿಸಿದ ವೇಳೆಯಲ್ಲಿ ಹೇಳಿರುವ ಅಭಿಪ್ರಾಯ), ಪುಟ:೨೦೦

೨೯. ರಾಮದಾಸ್.ಕೆ., 'ಎಂ.ಡಿ.ಎನ್. ಎಂಬ ಹೋರಾಟಗಳ ಚಿಲುಮೆ', (ನಟರಾಜ್ ಹುಳಿಯಾರ್., (ಸಂ), ಹಸಿರು ಸೇನಾನಿ), ಪುಟ:೬೭

೩೦. ಉಮಾದೇವಿ., ಪ್ರೊ.ಬಿ. ಕೃಷ್ಣಪ್ಪ, ದಲಿತ ಚಿಂತನೆಗಳ ವಿಶ್ಲೇಷಣೆ, (ಪ್ರಕಟಿತ ಎಂ.ಫಿಲ್. ನಿಬಂಧ), ಪುಟ:೨೮

೩೧. ರಾಮದಾಸ್.ಕೆ., 'ಎಂ.ಡಿ.ಎನ್. ನಿಧನದ ಸಂದರ್ಭದಲ್ಲಿ ವಿಜಯಕರ್ನಾಟಕ ಪತ್ರಿಕೆಗೆ ನೀಡಿರುವ ಪ್ರತಿಕ್ರಿಯೆ', (ನಟರಾಜ್ ಹುಳಿಯಾರ್., (ಸಂ), ಹಸಿರು ಸೇನಾನಿ), ಪುಟ:೬೭

೩೨. ಮೇಲಿನದೆ, ಪುಟ:೪೯

೩೩. ಕರ್ನಾಟಕ ರಾಜ್ಯ ರೈತ ಸಂಘದ ಕರಪತ್ರ, ತೀರ್ಥಹಳ್ಳಿ ತಾಲ್ಲೂಕು ಶಾಖೆ, ೨೭.೧.೧೯೮೩

೩೪. ಗೌರಿಲಂಕೇಶ್ (ವಾರಪತ್ರಿಕೆ, ಫೆಬ್ರವರಿ ೧೯, ೨೦೦೯)

೩೫. ಕರ್ನಾಟಕ ರಾಜ್ಯ ರೈತ ಸಂಘದ ಕರಪತ್ರ, ಶಿವಮೊಗ್ಗ, ೧೮.೧.೧೯೮೨

೩೬. ನಂಜುಂಡಸ್ವಾಮಿ ಅವರು ಬರೆದಿರುವ ಕರಪತ್ರ, "ನಿದ್ದೆಯಲ್ಲಿರುವ ವಿಧಾನಸೌಧ ಎಬ್ಬಿಸಲು ರೈತರ ಬೃಹತ್ ಪ್ರದರ್ಶನ", ಅಕ್ಟೋಬರ್ ೨, ೧೯೮೨

೩೭. ಕರ್ನಾಟಕ ರಾಜ್ಯ ರೈತ ಸಂಘದ ಕರಪತ್ರ, 'ರೈತರ ಪಾದಯಾತ್ರೆ', ೧.೧೧.೧೯೮೫

೩೮. ಹೊನ್ನಾಳಿ ಚಂದ್ರಶೇಖರ್., 'ಜಪ್ತಿಯ ಮಂತ್ರಕ್ಕೆ ಮರುಜಪ್ತಿಯ ತಿರುಮಂತ್ರ', (ವೀರಭದ್ರಪ್ಪ ಬಿಸ್ಲಳ್ಳಿ., (ಸಂ), ಪ್ರೊಫೆಸರ್ ಎಂಡಿಎನ್), ಪುಟ:೧೦೦

೩೯. ತಂಬಂಡ ವಿಜಯ್ ಪೂಣಚ್ಚ., ರೈತ ಚಳವಳಿಗಳು, ಪುಟ:೩೭

೪೦. ಪುಟ್ಟಯ್ಯಸ್ವಾಮಿ.ಕೆ., 'ಚಳವಳಿಯಿಂದ ಒಡಮೂಡಿದ ಅದ್ಭುತ ಚೇತನ', (ನಟರಾಜ್ ಹುಳಿಯಾರ್., (ಸಂ), ಹಸಿರು ಸೇನಾನಿ), ಪುಟ:೧೦

೪೧. ತಂಬಂಡ ವಿಜಯ್ ಪೂಣಚ್ಚ., ರೈತ ಚಳವಳಿಗಳು, ಪುಟ:೪೦

೪೨. ಕರ್ನಾಟಕ ರಾಜ್ಯ ರೈತ ಸಂಘ., ಕನಕಪುರ ತಾಲ್ಲೂಕು, ನೈಸರ್ಗಿಕ ಸಂಪತ್ತಿನ ವಿಕೇಂದ್ರೀಕರಣ ರೈತ ಸಂಘದ ಒತ್ತಾಯಕ್ಕೆ ಸಕಾರದ ಒಪ್ಪಿಗೆ ಪತ್ರ, ೩೦.೪.೧೯೮೩

೪೩. ತಂಬಂಡ ವಿಜಯ್ ಪೂಣಚ್ಚ., ರೈತ ಚಳವಳಿಗಳು, ಪುಟ:೫

೪೪. ಕರ್ನಾಟಕ ರಾಜ್ಯ ರೈತ ಸಂಘದ ಕರಪತ್ರ., ಶಿವಮೊಗ್ಗ, ೧೯೮೪ ಜನವರಿ ೨೬

೪೫. ತಂಬಂಡ ವಿಜಯ್ ಪೂಣಚ್ಚ., ರೈತ ಚಳವಳಿಗಳು, ಪುಟ:೩೮

೪೬. ಕರ್ನಾಟಕ ರಾಜ್ಯ ರೈತ ಸಂಘದ ಕರಪತ್ರ., ಧಾರವಾಡ ಜಿಲ್ಲೆ, ೧೯೮೭ ನವೆಂಬರ್ ೨೩

೪೭. ನಂಜುಂಡಸ್ವಾಮಿ ಅವರ ಬಹಿರಂಗ ಸಭೆಗಳ ಭಾಷಣಗಳ ಸಂಗ್ರಹ, ಛಡಿ ಏಟು:೧

೪೮. ಕರ್ನಾಟಕ ರಾಜ್ಯ ರೈತ ಸಂಘದ ಕರಪತ್ರ., ಬೀಜ ಸತ್ಯಾಗ್ರಹ, ೧೯೯೩ ಮಾರ್ಚ್ ೩

೪೯. ತಂಬಂಡ ವಿಜಯ್ ಪೂಣಚ್ಚ, ರೈತ ಚಳವಳಿಗಳು, ಪುಟ:೪೯

೫೦. ನಂಜುಂಡಸ್ವಾಮಿ, ಎಂ.ಡಿ. ಅವರು ೧೯೯೩ ರ ಫೆಬ್ರವರಿ ೨೫ ರಂದು ವಿಧಾನ ಸಭೆಯಲ್ಲಿ ಮಾಡಿದ ಭಾಷಣ. (ನಂಜುಂಡಸ್ವಾಮಿ ಹಾಗೂ ಬಾಬಾಗೌಡ ಪಾಟೀಲ, ವಿಧಾನಸಭೆಯಲ್ಲಿ ರೈತಸಂಘ), ಪುಟ:೨೮

೫೧. ತಂಬಂಡ ವಿಜಯ್ ಪೂಣಚ್ಚ., ರೈತ ಚಳವಳಿಗಳು, ಪುಟ:೫೦

೫೨. ಮಾಧವ ಐತಾಳ್., 'ಕೆಂಟುಕಿ ಕೋಳಿಯೋ ಭಾರತ ಗಣರಾಜ್ಯವೋ'(ರುಜುವಾತು, ಜನವರಿ, ಮಾರ್ಚ್ ೧೯೯೬, ಸಂಪುಟ ೪೨, ಸಂಚಿಕೆ.೧), ಪುಟ:೨೮

೫೩. ಕನ್ನಡಪ್ರಭ, (ದಿನಪತ್ರಿಕೆ, ೧೯೯೬, ಜನವರಿ ೩೦)

೫೪. ನಂಜುಂಡಸ್ವಾಮಿ ಅವರು ನೀಡಿರುವ ಪತ್ರಿಕಾ ಹೇಳಿಕೆ, ೨೦೦೧ ಜುಲೈ ೩

೫೫. ಕರ್ನಾಟಕ ರಾಜ್ಯ ರೈತ ಸಂಘದ ಕರಪತ್ರ, 'ರೈತರ ಹಕ್ಕುಗಳನ್ನು ಪ್ರತಿಪಾದಿಸಲು', ೧೯೯೭ ಜನವರಿ ೩೦

೫೬. ಕರ್ನಾಟಕ ರಾಜ್ಯ ರೈತ ಸಂಘದ ಕರಪತ್ರ, ೨೦೦೨ ಏಪ್ರಿಲ್ ೧೭

೫೭. ತಳಮಳ (ವಾರಪತ್ರಿಕೆ, ೨೦೦೧, ಫೆಬ್ರವರಿ ೨೨), ಪುಟ:೨

೫೮. ನಂಜುಂಡಸ್ವಾಮಿ ಅವರು ೨೦೦೧ ಮೇ ೧೯ ರಂದು ನೀಡಿರುವ ಪತ್ರಿಕಾ ಹೇಳಿಕೆ

* * *

ಅಧ್ಯಾಯ ಐದು

ಸರ್ಕಾರದ ಕೃಷಿ ನೀತಿಗಳು ಹಾಗೂ ರೈತರ ಪ್ರತಿರೋಧದ ಚಿಂತನೆ

೫.೧. ಜಾಗತೀಕರಣ : ಗ್ಯಾಟ್ ಒಪ್ಪಂದ ಹಾಗೂ ವಿಶ್ವ ವ್ಯಾಪಾರ ಸಂಸ್ಥೆ

೫.೨. ಜೈವಿಕ ತಂತ್ರಜ್ಞಾನ

೫.೩. ರೈತರ ಆತ್ಮಹತ್ಯೆಗಳು

ಭಾರತದಲ್ಲಿ ಇನ್ನೂರು ವರ್ಷಗಳ ಕಾಲ ಆಳ್ವಿಕೆ ನಡೆಸಿದ ಬ್ರಿಟಿಷರು ತಮ್ಮ ಆಡಳಿತಾವಧಿಯಲ್ಲಿ ರೈತರನ್ನು ಕಂದಾಯ ನೀತಿಗಳಿಂದಾಗಿ ಶೋಷಣೆಗೆ ಒಳಪಡಿಸಿದರು. ಅದರ ಪುನರಾವರ್ತನೆ ಎಂಬಂತೆ ಸ್ವಾತಂತ್ರ್ಯೋತ್ತರದಲ್ಲಿ ಬ್ರಿಟಿಷ್ ಸರ್ಕಾರದ ಕೆಲವೊಂದು ನೀತಿಗಳು ಹಾಗೆಯೇ ಮುಂದುವರಿದವು. ದೇಶದ ಸಂಪತ್ತನ್ನು ಬ್ರಿಟಿಷರು ಲೂಟಿ ಮಾಡುವುದಕ್ಕೆ ಯಾವ ಯೋಜನೆಗಳನ್ನು ಕಾನೂನುಗಳ ಮೂಲಕ ಹಾಕಿಕೊಂಡಿದ್ದರೋ ಅದೇ ಕಾನೂನುಗಳು ಇಂದಿಗೂ ಭಾರತದಲ್ಲಿ ಇವೆ. ಸಂವಿಧಾನದ ೨೧ನೇ ನಿಯಮದಲ್ಲಿ ರೈತರಿಗೂ ವ್ಯಕ್ತಿ ಸ್ವಾತಂತ್ರ್ಯವಿದೆ. ಆದರೆ ಬ್ರಿಟಿಷರ ಕಾಲದ ಕ್ರಿಮಿನಲ್ ಪ್ರೊಸಿಜರ್ ಕೋಡಿನ ನಿಯಮಗಳು ಇನ್ನೂ ಮುಂದುವರಿದಿವೆ. ಅವುಗಳ ಪ್ರಕಾರ ರೈತರನ್ನು ವಾರಂಟಿಲ್ಲದೆ ಪೊಲೀಸರು ಠಾಣೆಗೆ ಕರೆಸಬಹುದು, ಇಲ್ಲವೇ ದಸ್ತಗಿರಿ ಮಾಡಬಹುದಾಗಿದೆ. ಇದು ಸಂವಿಧಾನಕ್ಕೆ ವಿರುದ್ಧವಲ್ಲದೆ ರೈತರ ವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆ ತರುತ್ತದೆ. ಆದ್ದರಿಂದ ಇದನ್ನು ರದ್ದುಮಾಡಿ ರೈತರಿಗೆ ಸ್ವಾತಂತ್ರ್ಯ ಸಿಗುವಂತೆ, ವಾರಂಟಿಲ್ಲದೆ ರೈತರನ್ನು ದಸ್ತಗಿರಿ ಮಾಡಬಾರದೆಂದು ಕಾನೂನು ತಿದ್ದುಪಡಿ ಮಾಡಬೇಕೆಂಬುದು ನಂಜುಂಡಸ್ವಾಮಿ ಅವರ ಆಶಯ. ರಾಜ್ಯದ ಶೇಕಡಾ ೭೦ ಭಾಗ ರೈತರಿಗೆ ಜಮೀನನನ್ನು ಖಾತೆ ಮಾಡಿಸಿಕೊಳ್ಳಲು ಅಥವಾ ಪರಬಾರೆ ಮಾಡಲು ತೊಂದರೆಯಾಗಿರುವ ತುಂಡು ಭೂಮಿ ಕಾಯಿದೆ ಕೂಡ ರೈತರಿಗೆ ಸಂವಿಧಾನದಲ್ಲಿ ದೊರಕಬೇಕಾದ ೧೯ ಹಾಗೂ ೨೧ನೇ ನಿಯಮಗಳ ಹಕ್ಕುಗಳನ್ನು ಮೊಟಕುಗೊಳಿಸಿದೆ. ರಾಜ್ಯ ಸರ್ಕಾರವೇ ಈ ಕಾನೂನು ಮಾಡಿರುವುದರಿಂದ ಅದನ್ನು ರದ್ದು ಮಾಡುವ ಅಧಿಕಾರವೂ ಸರ್ಕಾರಕ್ಕೇ ಇದೆ. ಹೀಗಾಗಿ ಈ ನಿಯಮವನ್ನು ರದ್ದು ಮಾಡಬೇಕೆಂಬುದು ರೈತರ ಪ್ರತಿರೋಧವಾಗಿತ್ತು.

ರೈತರು ಕಚ್ಚಾವಸ್ತುಗಳನ್ನು ಬೆಳೆಯುವ ಕೃಷಿ ಕ್ಷೇತ್ರ ಕೊಳ್ಳುವವರ ಮಾರುಕಟ್ಟೆಯಾಗಿದೆ. ಉಳಿದದ್ದು ಮಾರುವವರ ಮಾರುಕಟ್ಟೆಯಾಗಿದೆ. ಬ್ರಿಟಿಷರ ಕಾಲದಲ್ಲಿದ್ದಂತೆ ಏನೇನು ಕಚ್ಚಾ ವಸ್ತುಗಳನ್ನು ಬೆಳೆದಿದ್ದಾರೋ ಅದೆಲ್ಲವನ್ನೂ ಹರಾಜಿನ ಮೂಲಕ ಕೊಂಡುಕೊಳ್ಳುವ ವ್ಯವಸ್ಥೆ ಹಾಗೆಯೇ ಮುಂದುವರಿದಿದೆ. ಆದ್ದರಿಂದ ಕೊಳ್ಳುವವರ ಮಾರುಕಟ್ಟೆಯನ್ನು ಮಾರುವವರ ಮಾರುಕಟ್ಟೆಯಾಗಿ ಪರಿವರ್ತಿಸುವುದರಿಂದ ಹರಾಜಿನಲ್ಲಿ

ರೈತರು ಬೆಳೆದ ಬೆಳೆಗಳನ್ನು ಮಾರಾಟ ಮಾಡುವಂಥ ಪರಿಸ್ಥಿತಿಯಿಂದ ರಾಜ್ಯದ ರೈತರನ್ನು ಮುಕ್ತಗೊಳಿಸುವ ನೀತಿಯನ್ನು ಜಾರಿಗೊಳಿಸಬೇಕೆಂಬುದು ನಂಜುಂಡಸ್ವಾಮಿ ಅವರ ಆಶಯವಾಗಿತ್ತು.

ಸಂವಿಧಾನದಲ್ಲಿ ಯಾವುದೇ ತನ್ನ ಉತ್ಪಾದಕ ವಸ್ತುವನ್ನು ಭಾರತದ ಯಾವುದೇ ಭಾಗದಲ್ಲಿ ಮಾರಾಟ ಮಾಡುವ ಅವಕಾಶ ಇದೆ. ಅನುಚ್ಛೇದ ೩೦೧ರ ಪ್ರಕಾರ ಕೃಷಿ ವಸ್ತುಗಳಿಗೆ ಸಾಗಾಣಿಕೆ ನಿರ್ಬಂಧ ತಂದವರು ಬ್ರಿಟಿಷರು. ಈ ನಿರ್ಬಂಧಗಳನ್ನು ಸರ್ಕಾರದವರು ಹಾಗೆಯೇ ಮುಂದುವರಿಸಿಕೊಂಡು ಬಂದಿದ್ದಾರೆ. ದೇಶದಲ್ಲಿ ಎಲ್ಲಾ ಕೈಗಾರಿಕಾ ವಸ್ತುಗಳಿಗೂ ಸಾಗಾಣಿಕೆ ಸ್ವಾತಂತ್ರ್ಯ ಇದೆ. ಆದರೆ ರೈತರು ಬೆಳೆದ ಬೆಳೆಗಳಿಗೆ ಮಾತ್ರ ಸಾಗಾಣಿಕೆ ಸ್ವಾತಂತ್ರ್ಯ ಇಲ್ಲ. ಹಾಗೆಯೇ ಕೈಗಾರಿಕಾ ವಸ್ತುಗಳಿಗೆ ಬೆಲೆ ನಿಗದಿ ಮಾಡಿ ಬೆಲೆಯನ್ನು ನಿಯಂತ್ರಣ ಮಾಡುವಂಥ ಕೆಲಸ ಮಾಡುತ್ತಿಲ್ಲ. ಕೈಗಾರಿಕಾ ವಸ್ತುಗಳ ಉತ್ಪಾದನಾ ಬೆಲೆಯನ್ನು ಪರೀಕ್ಷೆ ಮಾಡಿ ಪ್ರಕಟಣೆ ಮಾಡುವ ಅಧಿಕಾರ ಸರ್ಕಾರಕ್ಕೆ ಇದೆ. ಇದರ ಜೊತೆಗೆ ಕೃಷಿ ವಸ್ತುಗಳಿಗೆ ವೈಜ್ಞಾನಿಕ ಬೆಲೆ ನಿಗದಿ ಮಾಡಿ ಅದನ್ನು ಪ್ರಕಟಣೆ ಮಾಡುವಂಥ ಅಧಿಕಾರವೂ ಇದೆ. ಅದನ್ನು ಸಂವಿಧಾನದಲ್ಲಿ ಹೇಳಲಾಗಿದೆ. ಆದರೆ ಈ ಕಾರ್ಯವನ್ನು ಸರ್ಕಾರ ಮಾಡುತ್ತಿಲ್ಲ. ಇದರಿಂದಾಗಿ ರೈತರು ನಷ್ಟವನ್ನು ಅನುಭವಿಸುತ್ತಿದ್ದಾರೆ. ಬೆಲೆ ನಿಯಂತ್ರಣ ಸಂವಿಧಾನದ ಜಂಟಿ ಪಟ್ಟಿಯಲ್ಲಿದೆ. ಎಲ್ಲಾ ಕೈಗಾರಿಕಾ ವಸ್ತುಗಳ ಉತ್ಪಾದನಾ ಬೆಲೆ ಮತ್ತು ಎಲ್ಲ ಕೃಷಿ ಬೆಳೆಗಳ ವ್ಯವಸಾಯದ ಖರ್ಚುಗಳನ್ನು ಲೆಕ್ಕ ಮಾಡುವ ಅಧಿಕಾರ ರಾಜ್ಯ ಸರ್ಕಾರಕ್ಕೆ ಇದೆ. ಆದರೆ ಇಂದಿನವರೆಗೂ ಯಾವ ಸರ್ಕಾರಗಳು ಇನ್ನೂ ಈ ನಿಟ್ಟಿನಲ್ಲಿ ಕ್ರಮ ತೆಗೆದುಕೊಳ್ಳದಿಲ್ಲರುವುದು ಒಂದು ವಿಷಾದನೀಯ ಸಂಗತಿ.

ಕೈಗಾರಿಕೆಗಳು ಉತ್ಪಾದಿಸುವ ಉತ್ಪನ್ನಗಳಿಗೆ ಬೆಲೆ ನಿಗದಿ ಮಾಡಿ ನಿಗದಿತ ಬ್ರಾಂಡಿನ ಅಡಿಯಲ್ಲಿ ಮಾರಾಟ ಮಾಡುವ ಅಧಿಕಾರವನ್ನು ಸರ್ಕಾರ ನೀಡಿದೆ. ಆದರೆ ಕೃಷಿ ಉತ್ಪನ್ನಗಳಿಗೆ ಈ ಬಗೆಯ ಅಧಿಕಾರ ನೀಡಿಲ್ಲ. ಆದ್ದರಿಂದಲೇ ರೈತರು ತಾವು ಉತ್ಪಾದಿಸಿದ ಉತ್ಪನ್ನಗಳಿಗೆ 'ನಮ್ದು' ಎಂಬ ಬ್ರಾಂಡಿನ ಅಡಿಯಲ್ಲಿ ಮಾರಾಟ ಮಾಡುವುದರ ಮೂಲಕ ಪ್ರತಿರೋಧ ವ್ಯಕ್ತಪಡಿಸಿದ್ದು, ಹಾಗೆಯೇ ಜೈವಿಕ ವೈವಿಧ್ಯತೆ ಹಾಗೂ ಆ ಮೂಲಕ ಆಹಾರ ಭದ್ರತೆ ಸಾಧಿಸಲು ಬೇಕಾದ ಬೀಜ, ಭೂಮಿ, ನೀರು ಮತ್ತು ರೈತರ ಹಕ್ಕುಗಳು ಮೊಟುಗೊಳಿಸುವಂಥ ಒಪ್ಪಂದಗಳಿಗೆ ಸರ್ಕಾರ ಸಹಿ ಹಾಕಿದೆ. ಜೈವಿಕ ಸಂಪತ್ತಿಗೆ ಸಂಬಂಧಿಸಿದ (PLANT VARITIES PROTECTION ACT) ಕಾನೂನು ಹಾಗೂ ಅವುಗಳ ಮೇಲಿನ ಸ್ವಾಮ್ಯಕ್ಕೆ (INDIAN PATENT ACT) ಸಂಬಂಧಿಸಿದ ಕಾನೂನುಗಳಿಗೆ ಭಾರತ ಸರ್ಕಾರ ತಿದ್ದುಪಡಿ ಮಾಡಲು ಪ್ರಯತ್ನಿಸಿದ್ದಕ್ಕೆ ರೈತರು ಹೋರಾಟಗಳನ್ನು ಮಾಡಿದರು.

೧೯೮೦ ರಿಂದ ೨೦೦೦ನೇ ವರ್ಷದವರೆಗೂ ರೈತರ ಹೋರಾಟ ಹಾಗೂ ಪ್ರತಿರೋಧಗಳು ನಡೆಯುತ್ತಲೇ ಬಂದಿವೆ. ಭೂಮಿ, ತೆರಿಗೆ, ವಿದ್ಯುತ್, ಬೆಳೆ, ಕೃಷಿಸಾಲ, ಸಬ್ಸಿಡಿ, ಮಾರುಕಟ್ಟೆ, ಬೆಲೆ, ಆಮದು ಹಾಗೂ

ರಫ್ತು ನೀತಿಗಳಿಗೆ ವಿರುದ್ಧವಾಗಿ ರೈತರ ಪ್ರತಿರೋಧಗಳು ನಡೆದಿವೆ. ಈಗಲೂ ನಡೆಯುತ್ತಲೇ ಇವೆ. ಕೈಗಾರಿಕೆ ಹಾಗೂ ಬಂಡವಾಳಶಾಹಿಗಳಿಗೆ ಅನುಕೂಲವಾಗುವಂಥ ಕಾನೂನುಗಳನ್ನು ಮಾಡಿ ರೈತರನ್ನು ಶೋಷಣೆ ಮಾಡುತ್ತಿರುವ ಸರ್ಕಾರ ಹಾಗೂ ಅದರ ನೀತಿಗಳ ವಿರುದ್ಧ ನಂಜುಂಡಸ್ವಾಮಿ ಅವರ ಪ್ರತಿರೋಧಗಳು ಗಮನಾರ್ಹವಾದವು. ಅಭಿವೃದ್ಧಿ ಹೊಂದಿರುವ ದೇಶಗಳು ಅಭಿವೃದ್ಧಿಶೀಲ ರಾಷ್ಟ್ರಗಳ ಮೇಲೆ ಹಲವಾರು ಕಟ್ಟಳೆಗಳನ್ನು ಹೇರುವುದರ ಮೂಲಕ ಹತೋಟಿ ಸಾಧಿಸುತ್ತಿವೆ. ಜಾಗತೀಕರಣ, ಗ್ಯಾಟ್, ಡಂಕಲ್ ಪ್ರಸ್ತಾವನೆ, ವಿಶ್ವ ವ್ಯಾಪಾರ ಸಂಘಟನೆಗಳ ಮೂಲಕವಾಗಿ ಕೃಷಿ, ಕೈಗಾರಿಕೆ, ಮಾರುಕಟ್ಟೆ ಹಾಗೂ ಎಲ್ಲ ಕ್ಷೇತ್ರಗಳಲ್ಲಿಯೂ ನಿಯಂತ್ರಣ ಸಾಧಿಸುತ್ತಿವೆ. ಇದನ್ನು ಇಂದು ನವ ವಸಾಹತುಶಾಹಿಯ ನೀತಿ ಎಂದು ಕರೆಯಬಹುದು.

೫.೧ ಜಾಗತೀಕರಣ : ಗ್ಯಾಟ್, ಡಂಕಲ್ ಪ್ರಸ್ತಾವನೆ ಹಾಗೂ ವಿಶ್ವ ವ್ಯಾಪಾರ ಸಂಘಟನೆ

ಇಪ್ಪತ್ತನೆಯ ಶತಮಾನದ ಉತ್ತರಾರ್ಧ ಹಾಗೂ ಅದರ ಕೊನೆಯ ಎರಡು ದಶಕಗಳು ಅತ್ಯಂತ ವಿಶಿಷ್ಟವಾದ ಮಹತ್ವಪೂಣವಾದ ಕಾಲಘಟ್ಟವೆಂದು ಪರಿಗಣಿಸಬಹುದು. ಈ ಕಾಲಘಟ್ಟದ ಆಗು-ಹೋಗುಗಳನ್ನು ಅದರ ರಾಜಕೀಯ, ಸಾಂಸ್ಕೃತಿಕ, ವೈಜ್ಞಾನಿಕ, ನೈತಿಕ ಆಯಾಮಗಳನ್ನು ಯುಗ ಮೌಲ್ಯದ ನೆಲೆ-ಸೆಲೆಗಳನ್ನು ಪ್ರತಿನಿಧಿಸುವ, ಪ್ರತಿಬಿಂಬಿಸುವ ರೂಪಕ ಒಂದಕ್ಕೆ ತಡಕಾಡಿದಾಗ ಹೊಳೆಯುವ ಶಬ್ದಗಳೆಂದರೆ ಜಾಗತೀಕರಣ, ಉದಾರೀಕರಣ ಹಾಗೂ ಖಾಸಗೀಕರಣ.

ದೇಶವೊಂದರ ಬಾಹ್ಯ ಮತ್ತು ಆಂತರಿಕ ಆರ್ಥಿಕ ಕ್ರಿಯೆಗಳಲ್ಲಿ ಉದಾರೀಕರಣ ಮತ್ತು ಖಾಸಗೀಕರಣವನ್ನು ಜಾರಿಗೊಳಿಸುವ ಮೂಲಕ ಜಾಗತೀಕರಣ ಅಸ್ತಿತ್ವಕ್ಕೆ ಬರುತ್ತದೆ. ಈ ಅರ್ಥದಲ್ಲಿ ಜಾಗತೀಕರಣದ ಸಾಧನಗಳಾಗಿ ಉದಾರೀಕರಣ ಹಾಗೂ ಖಾಸಗೀಕರಣಗಳು ಕಾರ್ಯಚರಿಸುವುವು.

ಜಾಗತೀಕರಣ, ಉದಾರೀಕರಣ ಹಾಗೂ ಖಾಸಗೀಕರಣ ಪರಿಕಲ್ಪನೆಗಳು ೧೯೮೦ರ ದಶಕದ ಮಧ್ಯಭಾಗದಿಂದಲೂ ಜಗತ್ತಿನಾದ್ಯಂತ ಚಾಲ್ತಿಯಲ್ಲಿವೆ. ಈ ಪದಗಳು ಹೊಸ ಆರ್ಥಿಕ ನೀತಿಯ ಅಂಗಾಂಶಗಳಾಗಿವೆ. ಈ ಮೂರು ಕ್ರಿಯೆಗಳು ಸ್ವತಂತ್ರವಲ್ಲ; ಅವುಗಳು ಪರಸ್ಪರ ಪೂರಕವಾಗಿವೆ. ಈ ಮೂರು ಕ್ರಿಯೆಗಳು ಒಟ್ಟು ಸೇರಿ ಅಂತಿಮವಾಗಿ ಜಗತ್ತಿನಾದ್ಯಂತ ಅಂತರಾಷ್ಟ್ರೀಯ ಬಂಡವಾಳಶಾಹಿತ್ವವನ್ನು ಹುಟ್ಟು ಹಾಕುವ ಉದ್ದೇಶ ಹೊಂದಿವೆ.

ನವ ಉದಾರ ನೀತಿಯನ್ನಾಧರಿಸಿದ ಮುಕ್ತ ಮಾರುಕಟ್ಟೆಯ ವ್ಯವಸ್ಥೆಯನ್ನು ಅಂತರಾಷ್ಟ್ರೀಯ ವ್ಯಾಪಾರದ ಸಂಘಟನೆಯ ರೂಪದಲ್ಲಿ ಅನುಷ್ಠಾನಕ್ಕೆ ತರಬೇಕೆಂಬ ಚಿಂತನೆಯನ್ನು ಬ್ರಿಟನ್ ವುಡ್ಸ್ ಸಭೆಯಲ್ಲಿ ಪ್ರತಿಪಾದಿಸಲಾಗಿತ್ತು. ಗ್ಯಾಟ್ ಒಪ್ಪಂದ ಎರಡನೇ ಮಹಾಯುದ್ಧದ ನಂತರ ಅಸ್ತಿತ್ವಕ್ಕೆ ಬಂದಿತು. ಗ್ಯಾಟ್ ಜಿ.ಎ.ಟಿ.ಟಿ) ಎಂದರೆ "ಜನರಲ್ ಅಗ್ರಿಮೆಂಟ್ ಆನ್ ಟ್ಯಾರಿಫ್ ಅಂಡ್ ಟ್ರೇಡ್" ಅಂದರೆ, "ವಾಣಿಜ್ಯ

ಮತ್ತು ತೆರಿಗೆಗಳ ಸಾರ್ವತ್ರಿಕ ಒಪ್ಪಂದ". ಎರಡನೇ ಮಹಾಯುದ್ಧದ ನಂತರ ಯಾವ ರಾಷ್ಟ್ರಗಳು ಯುದ್ಧದಲ್ಲಿ ಭಾಗವಹಿಸಿದ್ದವೋ, ಅವುಗಳ ಆರ್ಥಿಕ ಪರಿಸ್ಥಿತಿ ಹದಗೆಟ್ಟಿತ್ತು. ಅವುಗಳು ಗ್ಯಾಟ್ ಒಪ್ಪಂದದಿಂದ ತಮ್ಮ ಆರ್ಥಿಕತೆಯನ್ನು ಸುಧಾರಿಸಿಕೊಳ್ಳಲು ನಿರ್ಧರಿಸಿದವು. ಈ ಒಪ್ಪಂದ ರೂಪಿತವಾದದ್ದು ೧೯೪೮ರಲ್ಲಿ. ೧೯೪೬ ರಿಂದ ಎಲ್ಲ ದೇಶಗಳಿಗೂ ಸ್ವಾತಂತ್ರ್ಯ ಕೊಡಬೇಕೆಂಬ ಅಂತರಾಷ್ಟ್ರೀಯ ಒತ್ತಡದ ನಡುವೆಯೂ ಈ ದೇಶಗಳ ಲೂಟಿಯನ್ನು ಮುಂದುವರಿಸಲು ಬೇಕಾದ ಸಂಸ್ಥೆಗಳನ್ನು ಬಿಳಿಯ ದೇಶಗಳು ರೂಪಿಸುತ್ತಿದ್ದ ಕಾಲ ಅದು. ಕೃಷಿಯನ್ನು ಈ ಸಂಸ್ಥೆಯಲ್ಲಿ ಸೇರಿಸಬೇಕೆಂಬ ಅಂಶವೂ ಆಗ ಸೇರಿತ್ತು. ಪುರಾತನ ವಸಾಹತು ಪದ್ಧತಿಯನ್ನು ನವಸಾಮ್ರಾಜ್ಯಶಾಹಿ ಪದ್ಧತಿಗೆ ಬದಲಾಯಿಸುವುದೇ ಆಗಿತ್ತು. ಗ್ಯಾಟ್ ವ್ಯವಹರಿಸುತ್ತಿದ್ದ ವಿಷಯಗಳ ವ್ಯಾಪ್ತಿಯನ್ನು ಆಧರಿಸಿ ಗ್ಯಾಟ್ ನಡೆದು ಬಂದ ದಾರಿಯನ್ನು ಎರಡು ಭಾಗಗಳಾಗಿ ವಿಂಗಡಿಸಬಹುದು. ಹಳೇ ಗ್ಯಾಟ್ ಹಾಗೂ ಹೊಸ ಗ್ಯಾಟ್. ಹಳೆ ಗ್ಯಾಟ್‌ನ ಆಶ್ರಯದಲ್ಲಿ ಏಳು ಸುತ್ತಿನ ಮಾತುಕತೆಗಳ ಕಾಲಮಾನ ೧೯೪೮ ರಿಂದ ೧೯೮೫. ಎಂಟನೆಯ ಸುತ್ತಿನ ಮಾತುಕತೆಯನ್ನು ಉರುಗ್ವೆ ಸುತ್ತಿನ ಮಾತುಕತೆ ಎಂದು ಕರೆಯುತ್ತಾರೆ.''[೧] ಇದೇ ಹೊಸ ಗ್ಯಾಟ್ ಎಂದು ಹೇಳಲಾಗಿದೆ. ಉರುಗ್ವೆ ಸುತ್ತಿನ ಮಾತುಕತೆಯಲ್ಲಿ ಭಾಗವಹಿಸಿದವರು ಎರಡನೇ ಮಹಾಯುದ್ಧದ ವಿಜಯಿಗಳಾಗಿದ್ದರು ಮತ್ತು ಜಿ.೭ ರಾಷ್ಟ್ರಗಳೆಂದು ಗುರುತಿಸಲ್ಪಟ್ಟಿದ್ದರು. ಈ ರಾಷ್ಟ್ರಗಳು ತಮ್ಮ ಆರ್ಥಿಕ ಉದ್ದೇಶ ಸಾಧನೆಗೆ ಅಭಿವೃದ್ಧಿಶೀಲ ರಾಷ್ಟ್ರಗಳನ್ನು ನಿಯಂತ್ರಿಸಲು ಗ್ಯಾಟ್‌ನ್ನು ಒಂದು ಸಾಧನವಾಗಿ ಬಳಸುತ್ತಾ ಬಂದವು. ಉರುಗ್ವೆ ಸುತ್ತಿನ ಮಾತುಕತೆಗಳು ೧೯೮೬ ರ ಸೆಪ್ಟಂಬರ್‌ನಲ್ಲಿ ಆರಂಭಗೊಂಡು ೧೯೯೩ರ ಡಿಸೆಂಬರ್‌ವರೆಗೆ ನಡೆದವು. ೧೯೯೪ರ ಏಪ್ರಿಲ್ ವೇಳೆಗೆ ೧೧೭ ರಾಷ್ಟ್ರಗಳು ಡಂಕಲ್ ಪ್ರಸ್ತಾವನೆಗೆ ಸಹಿ ಹಾಕಿದ ಮೇಲೆ ಮುಗಿದುವು.[೨] ಈ ಗ್ಯಾಟ್‌ನ ಅಂದಿನ ಮಹಾನಿರ್ದೇಶಕ ಆರ್ಥರ್ ಡಂಕಲ್ ೧೯೯೧ ರಲ್ಲಿ ಕ್ರಿಯಾ ಯೋಜನೆಯ ಸ್ವೀಕೃತವಾದಂಥ ಪ್ರಸ್ತಾಪಗಳಿದ್ದು ಅದನ್ನೇ ಡಂಕಲ್ ಪ್ರಸ್ತಾವನೆ ಎನ್ನುವುದು. ಭಾರತವೂ ಕೂಡ ಗ್ಯಾಟ್ ಒಪ್ಪಂದದ ಸ್ಥಾಪಕ ಸದಸ್ಯ ರಾಷ್ಟ್ರ. ಅದರ ''ಸದಸ್ಯ ರಾಷ್ಟ್ರಗಳಿಗೆ ೧೯೯೨ರಲ್ಲಿ 'ಒಪ್ಪಿದರೆ ಪೂರ್ಣ ಒಪ್ಪಿರಿ; ಇಲ್ಲವೇ ಹೊರಗಿರಿ" ಎನ್ನುವ ಷರತ್ತಿನೊಂದಿಗೆ ಗ್ಯಾಟ್‌ನ ಕಾರ್ಯದರ್ಶಿ ಡಂಕಲ್ ತಯಾರಿಸಿದ ಕರಡು ವರದಿಯಲ್ಲಿರುವ ತಂತ್ರಗಳಾಗಲೀ ತಿಳಿದಿಲ್ಲ ಎನ್ನುವುದು ಸ್ಪಷ್ಟವಾಗುತ್ತದೆ.''[೩] ಆದರೆ ಪರೋಕ್ಷವಾಗಿ ಅದನ್ನು ನಿರಾಕರಿಸಲು ಅವಕಾಶಗಳನ್ನು ಮಿತಿಗೊಳಿಸಿದರು.

ಉರುಗ್ವೆಯಲ್ಲಿ ನಡೆದ ಗ್ಯಾಟ್ ಸಭೆಯಲ್ಲಿ ಮೊದಲ ಬಾರಿಗೆ ಕೃಷಿ ವಿಷಯವನ್ನು ಗ್ಯಾಟ್‌ನ ವ್ಯಾಪ್ತಿಯಲ್ಲಿ ಸೇರಿಸಲಾಯಿತು. ವ್ಯಾಪಾರ ಸಂಬಂಧೀ ಬೌದ್ಧಿಕ ಆಸ್ತಿ ಹಕ್ಕು, ವ್ಯಾಪಾರ ಸಂಬಂಧಿ ಬಂಡವಾಳ ವಿನಿಯೋಗಗಳಲ್ಲೂ ಪ್ರಾಥಮಿಕ ವಲಯದ ವ್ಯಾಪಾರದ ಮೇಲೆ ಮಹತ್ತ್ವದ ಪರಿಣಾಮ ಬೀರುವ ಅಂಶಗಳಿವೆ. ಉರುಗ್ವೆ ಸುತ್ತಿನ ವಾಣಿಜ್ಯ ಮಾತುಕತೆಗಳ ಫಲವಾಗಿ ಅಂದಿನ ಗ್ಯಾಟ್ ಬದಲಾಗಿ ಹೆಚ್ಚು ವಾಣಿಜ್ಯ ಉದಾರೀಕರಣ ಪ್ರಾಧಿಕಾರವುಳ್ಳ "ವಿಶ್ವ ವ್ಯಾಪಾರ ಸಂಸ್ಥೆ" ಸ್ಥಾಪಿಸಲು ತೀರ್ಮಾನಿಸಿ ಜನವರಿ

೧, ೧೯೯೫ ರಿಂದ ಅಸ್ತಿತ್ವಕ್ಕೆ ಬಂದಿತು. ಸ್ಥಾಪನೆಯ ದಿನದಂದು ೭೭ ದೇಶಗಳು ಸದಸ್ಯತ್ವ ಪಡೆದವು. ಪ್ರಸ್ತುತ ೧೪೭ ದೇಶಗಳು ಸದಸ್ಯತ್ವ ಪಡೆದಿವೆ. ವಿಶ್ವ ವ್ಯಾಪಾರ ಸಂಘಟನೆಯ ಸ್ಥಾಪನೆಯಲ್ಲಿ ಭಾರತ ಮಹತ್ವದ ಪಾತ್ರವಹಿಸಿ, ಅದರ ಸಂಸ್ಥಾಪಕ ರಾಷ್ಟ್ರಗಳಲ್ಲೊಂದಾಗಿದೆ.[9] ಇದರ ಕೇಂದ್ರ ಕಛೇರಿಯು ಸ್ವಿಟ್ಜರ್‌ಲ್ಯಾಂಡಿನ ಜಿನಿವಾದಲ್ಲಿದೆ. ಟೀಕೆ ಎಂದರೆ ''ಗ್ಯಾಟ್‌ನ ಉತ್ತರಾಧಿಕಾರಿ ಎನಿಸಿ ಜನ್ಮ ತಳೆದಿರುವ ವಿಶ್ವ ವ್ಯಾಪಾರ ಸಂಘಟನೆ (WTO) ಕೂಡ ಬಲಿಷ್ಠ ರಾಷ್ಟ್ರಗಳ ಪಕ್ಷಪಾತಿ ಆಗಿರುವುದು."

ಪಾಶ್ಚಿಮಾತ್ಯ ರಾಷ್ಟ್ರಗಳು ತಮ್ಮ ರಾಷ್ಟ್ರೀಯ ಹಿತಾಸಕ್ತಿಯನ್ನು ಪೂರೈಸಿಕೊಳ್ಳಲು ತಮ್ಮ ಆರ್ಥಿಕ ಬಲವನ್ನು ಅಭಿವೃದ್ಧಿಶೀಲ ರಾಷ್ಟ್ರಗಳ ಮೇಲೆ ಪ್ರಭುತ್ವ ಸಾಧಿಸಲು ಬಳಸುತ್ತಿವೆ. ಸಸ್ಯಗಳ ಮತ್ತು ಪ್ರಾಣಿ ಪ್ರಕಾರಗಳ ಸ್ವಾಮ್ಯದ ಸನ್ನದು ಅಭಿವೃದ್ಧಿಶೀಲ ರಾಷ್ಟ್ರಗಳ ಮೇಲೆ ಬೀರುವ ಪ್ರತಿಕೂಲ ಪರಿಣಾಮಗಳನ್ನು ನಂಜುಂಡಸ್ವಾಮಿ ಅವರ ಚಿಂತನೆಗಳಿಂದ ಗ್ರಹಿಸಬಹುದು.

ಅಭಿವೃದ್ಧಿಶೀಲ ರಾಷ್ಟ್ರಗಳ ರಫ್ತುಗಳು ಪ್ರಾಥಮಿಕ ಸರಕುಗಳಾದ ಕಾಫಿ, ಹತ್ತಿ, ಕೋಕೋ ಇತ್ಯಾದಿಗಳ ಬೆಲೆಗಳು ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಯಂತ್ರಗಳು ಅಥವಾ ಸಿದ್ಧ ವಸ್ತುಗಳ ಬೆಲೆಗಳು ವಿರುದ್ಧವಾಗಿ ಕಡಿಮೆಯಾಗುತ್ತವೆ. ಪಶ್ಚಿಮದ ತಾಂತ್ರಿಕ ಪ್ರಾಬಲ್ಯ ಸ್ವಾಮ್ಯದ ಸನ್ನದು, ಚಿಹ್ನೆ, ಸ್ವಾಮ್ಯದ ಹಕ್ಕು, ಕೈಗಾರಿಕಾ ವಿನ್ಯಾಸ ಒಳಗೊಂಡ ಒಂದು ಚಾದ್ಧಿಕ ಆಸ್ತಿ ಹಕ್ಕಿನ ಪದ್ಧತಿಯಿಂದ ಹೇರಲ್ಪಟ್ಟಿತು. ಈ ನಿಯಮಗಳು ತಂತ್ರಜ್ಞಾನ ಹೊಂದಿದವರಿಗೆ ಸಾಮಾನ್ಯವಾಗಿ ಅಂತರಾಷ್ಟ್ರೀಯ ನಿಗಮಗಳಿಗೆ ಭಾರತದಂಥ ಅಭಿವೃದ್ಧಿಶೀಲ ರಾಷ್ಟ್ರಗಳ ಮಾರುಕಟ್ಟೆಯ ಮೇಲೆ ಏಕಸ್ವಾಮ್ಯದ ಹಕ್ಕುಗಳನ್ನು ನೀಡಿದವು.

ಅಭಿವೃದ್ಧಿಶೀಲ ರಾಷ್ಟ್ರಗಳ ಸಣ್ಣ ಸೀಮಾಂತ ರೈತರು ಮತ್ತು ಕೃಷಿ ಕಾರ್ಮಿಕರು, ಬೀಜ, ಗೊಬ್ಬರಗಳು ಹಾಗೂ ಕ್ರಿಮಿನಾಶಕಗಳ ಮೇಲೆ ಬಹುರಾಷ್ಟ್ರೀಯ ಕಂಪೆನಿಗಳು ಸ್ವಾಮ್ಯತೆ ಸಾಧಿಸಿರುವುದರಿಂದ ಹತೋಟಿ ಕಳೆದುಕೊಳ್ಳುವ ಗಂಡಾಂತರವನ್ನು ಎದುರಿಸುತ್ತಿದ್ದಾರೆ. ಕೇಂದ್ರ ಸರ್ಕಾರದ ಉದಾರೀಕರಣ ಕಾರ್ಯ ಮುಂದುವರಿಸುವ ನಿರ್ಧಾರ ಭವಿಷ್ಯದಲ್ಲಿ ರಾಷ್ಟ್ರದ ಅವನತಿಯನ್ನು ಸೂಚಿಸಿದೆ. ಇದಲ್ಲದೆ ವಿಶ್ವ ವ್ಯಾಪಾರ ಸಂಘ ಶೋಷಣೆಯ ಆಧಾರವನ್ನು ಬಲಪಡಿಸಿದೆ ಹಾಗೂ ಆಳವಾಗಿಸಿದೆ. ಅಂತರಾಷ್ಟ್ರೀಯ ಹಣಕಾಸು ನಿಧಿ ಮತ್ತು ವಿಶ್ವ ಬ್ಯಾಂಕಿನೊಂದಿಗೆ, ವಿಶ್ವ ವ್ಯಾಪಾರ ಸಂಘ ಜಾಗತೀಕರಣದ ಯುಗದಲ್ಲಿ ಒಂದು ಬಲಶಾಲಿ ಸಾಮ್ರಾಜ್ಯಶಾಹಿ ಶಕ್ತಿಯಾಗಿದೆ. ರೈತರ ಮತ್ತು ಕಾರ್ಮಿಕರ ಹೋರಾಟಗಳು ರಾಜ್ಯದಿಂದ ದಮನ ಮಾಡಲ್ಪಟ್ಟಿವೆ ಹಾಗೂ ಶ್ರೀಮಂತ ಮತ್ತು ಬಡವರ ನಡುವಣ ಅಂತರ ನಿರಂತರವಾಗಿ ಹೆಚ್ಚುತ್ತಿದೆ 'ಎಂಬುದನ್ನು ನಂಜುಂಡಸ್ವಾಮಿ ಅವರ ಚಿಂತನೆಗಳಿಂದ ಗಮನಿಸಬೇಕಾದ ಅಂಶಗಳಾಗಿವೆ.

ಪಾಶ್ಚಿಮಾತ್ಯ ರಾಷ್ಟ್ರಗಳ ನಿರ್ದೇಶನದಂತೆ ಸರ್ಕಾರ ತನ್ನ ಸಹಾಯಧನಗಳನ್ನು ಹಿಂತೆಗೆದುಕೊಂಡಾಗ ಡಂಕಲ್ ಪ್ರಸ್ತಾವನೆಯನ್ನು ನಂಜುಂಡಸ್ವಾಮಿ ನೇತೃತ್ವದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ವಿರೋಧಿಸಿತು. ನೆಹರೂ ಅಭಿವೃದ್ಧಿ ಮಾದರಿ ಭಾರತೀಯ ಕೃಷಿಗೆ ಶಾಪವೆಂದು ಟೀಕಿಸಿದ್ದಾರೆ. ಏಕೆಂದರೆ ನೆಹರೂ ಅವರ

ಅಭಿವೃದ್ಧಿ ಮಾದರಿಯು, ಹುಟ್ಟುವ ಪ್ರತಿಯೊಂದು ಮಗುವು ತನ್ನ ತಲೆಯ ಮೇಲೆ ೨೦೦೦ ರೂಪಾಯಿ ಸಾಲ ಹೊರುವಂತೆ ಮಾಡಿದೆ.[೬] ಆದ್ದರಿಂದ ನೆಹರೂ ಮಾದರಿಯನ್ನು ಭಾರತೀಯ ಅಭಿವೃದ್ಧಿ ನೀತಿಯ ದಾರಿ ತಪ್ಪಿಸಿದ ರೂಪವೆಂದು ಎಂ.ಡಿ.ಎನ್ ಕರೆದಿದ್ದಾರೆ. ಪಾಶ್ಚಿಮಾತ್ಯ ಬಂಡವಾಳ ಪ್ರಭುತ್ವ ರಾಷ್ಟ್ರಗಳು ತಮ್ಮ ರಾಷ್ಟ್ರಗಳಲ್ಲಿ ಬೆಲೆ ನಿಯಂತ್ರಿಸಲು ಮತ್ತು ಹೆಚ್ಚುವರಿ ಉತ್ಪಾದನೆಗಾಗಿ ಸಹಾಯಧನವನ್ನು ಕೃಷಿಗೆ ನೀಡುತ್ತವೆ. ಆದರೆ ಅವರು ತೃತೀಯ ಜಗತ್ತಿನ ರಾಷ್ಟ್ರಗಳು ಕೃಷಿಗೆ ನೀಡುವ ಎಲ್ಲಾ ಸಹಾಯಧನಗಳನ್ನು ಹಿಂತೆಗೆದುಕೊಳ್ಳುವಂತೆ ಆದೇಶ ನೀಡುತ್ತಾರೆ ಎಂಬುದು ಎಂ.ಡಿ.ಎನ್ ಅವರ ಚಿಂತನೆಯಾಗಿದೆ.

ವೈ.ಕೆ. ಅಲಗ್ ಹಾಗೂ ಇತರರ ಅಂದಾಜಿನ ಪ್ರಕಾರ, "ಭಾರತೀಯ ರೈತನಿಗೆ ಕೊಡಬೇಕಾದ ಸಹಾಯಧನ ಶೇಕಡಾ ೪೦ಕ್ಕಿಂತ ಹೆಚ್ಚಿರಬೇಕು. ಏಕೆಂದರೆ ಭಾರತೀಯ ಕೃಷಿ ಜಾಗತಿಕ ವ್ಯಾಪಾರದ ಸವಾಲುಗಳನ್ನು ಎದುರಿಸಲು ಪ್ರಮುಖವಾಗಿ ಒಣ ಹಾಗೂ ಅರೆ ಒಣ ಭೂಮಿಯಲ್ಲಿ ಮತ್ತು ರೈತರು ಕಡಿಮೆ ಉತ್ಪಾದನೆ ತರುವ ಏಕ ಬೆಳೆ ಪದ್ಧತಿಯಿಂದ ಹೆಚ್ಚು ಉತ್ಪಾದನೆ ತರುವ ಬಹುಮುಖ ಬೆಳೆ ಪದ್ಧತಿಗೆ ವರ್ಗಾವಣೆ ಆಗಲು ಮತ್ತು ಒಂದು ವೇಳೆ ಭಾರತೀಯ ಕೃಷಿಯ ವೈವಿಧ್ಯೀಕರಣವನ್ನು ನಿರಂತರವಾಗಿ ಕಾಯ್ದುಕೊಳ್ಳಬೇಕಾದರೆ ಕೃಷಿ ವೈವಿಧ್ಯೀಕರಣ ಅಗತ್ಯವಿದೆ. ಭಾರತ ಈ ಸಹಾಯಧನವನ್ನು ಮುಂದುವರಿಸಲೇಬೇಕು"[೭] ಎಂದಿದ್ದಾರೆ.

ನಂಜುಂಡಸ್ವಾಮಿ ಅವರು ಇತರ ದೇಶಗಳ ಸಹಾಯಧನವನ್ನು ಭಾರತಕ್ಕೆ ಹೋಲಿಸಿ ಒಂದು ಪಟ್ಟಿಯನ್ನು ನೀಡಿದ್ದಾರೆ. ಅದು ಭಾರತೀಯ ಸಹಾಯಧನಕ್ಕಿಂತ ಹೆಚ್ಚಿದ್ದೂ ಮತ್ತು ಇಂದಿಗೂ ಮುಂದುವರಿಯುತ್ತಿದೆ.

ರಾಷ್ಟ್ರಗಳು ನೀಡುತ್ತಿರುವ ಕೃಷಿ ಸಹಾಯಧನ

ರಾಷ್ಟ್ರ	ಬೆಳೆ ಉತ್ಪಾದನೆ ದರ (ರೂಪಾಯಿಗಳಲ್ಲಿ)	ಸಹಾಯಧನ ದರ (ರೂಪಾಯಿಗಳಲ್ಲಿ)
ಜಪಾನ್	೧೦೦	೭೨.೫೦
ದಕ್ಷಿಣ ಕೊರಿಯಾ	೧೦೦	೬೦.೬೭
ಕೊಲಂಬಿಯಾ	೧೦೦	೫೪.೫೦
ಯೂರೋಪಿನ ಸಮುದಾಯ	೧೦೦	೩೭.೦೦
ಚೀನಾ	೧೦೦	೩೪.೧೭
ಯು.ಎಸ್.ಎ	೧೦೦	೨೬.೨೭
ಪಾಕಿಸ್ತಾನ	೧೦೦	೨೧.೮೦
ಆಸ್ಟ್ರೇಲಿಯಾ	೧೦೦	೧೦.೩೩
ಭಾರತ	೧೦೦	೨.೩೩

ಟಿಪ್ಪಣಿ: ಭಾರತದಲ್ಲಿ ೨.೩೩ ರೂಪಾಯಿ ಸಹಾಯಧನ ದರ ಕೃಷಿಗೆ, ಆದರೆ ಇತರ ದೇಶಗಳಲ್ಲಿರುವಂತೆ ಒಬ್ಬ ರೈತನಿಗೆ ಅಲ್ಲ.

(**ಮೂಲ:** ನಂಜುಂಡಸ್ವಾಮಿ ಅವರ "ಡಂಕಲ್ ಪ್ರಸ್ತಾವನೆ ಕೆಟ್ಟ ಪರಿಣಾಮಗಳು", ೨೫ ನೇ ಫೆಬ್ರವರಿ ೧೯೯೩ರಂದು ಕರ್ನಾಟಕ ವಿಧಾನ ಸಭೆಯಲ್ಲಿ ಮಾಡಿದ ಭಾಷಣ)

ಅಲ್ಲದೆ ನಂಜುಂಡಸ್ವಾಮಿ ಅವರು ವಿಧಾನ ಸಭೆಯಲ್ಲಿ-

ಭಾರತ ಸರ್ಕಾರವು ರಸಗೊಬ್ಬರದ ಮೇಲಿನ ಸಬ್ಸಿಡಿಯನ್ನು ತೆಗೆದಿರುವುದು ವಿಶ್ವಬ್ಯಾಂಕನ್ನು ಸಂತೋಷಗೊಳಿಸುವುದಕ್ಕೆ, ಈಗ ಅಖಿಲ ಭಾರತ ಮಟ್ಟದಲ್ಲಿ ಪವರ್ ಸಬ್ಸಿಡಿಯನ್ನು ತೆಗೆಯಲು ವಿದ್ಯುಚ್ಛಕ್ತಿ ನೀತಿಯನ್ನು ತರುತ್ತಿದೆ. ಅದು ಒಂದು ಯೂನಿಟ್‌ಗೆ ೫೦ ಪೈಸೆಯನ್ನು ನಿಗದಿ ಮಾಡಬೇಕೆಂದು ತೀರ್ಮಾನಕ್ಕೆ ಬಂದಿರುವುದು ಕೂಡ ವಿಶ್ವಬ್ಯಾಂಕ್‌ನ ಒತ್ತಡಕ್ಕೆ ಮಣಿದೇ ಮಾಡುತ್ತಿರುವುದು. ಅದನ್ನು ಸಂತೋಷಪಡಿಸುವುದಕ್ಕೆ ಕೈಗಾರಿಕಾ ಕ್ಷೇತ್ರಕ್ಕೆ ಏನು ಸಾಲ ಬೇಕು ಅದನ್ನು ತರುವುದಕ್ಕೋಸ್ಕರ, ಗೊಬ್ಬರದ ಸಬ್ಸಿಡಿ ತೆಗೆದ ಮೇಲೆ ಭಾರತದ ಕೃಷಿಕ ಒಂದು ರೂಪಾಯಿಯ ಸಬ್ಸಿಡಿಗೆ ಬರುತ್ತಾನೆ. ವಿದ್ಯುಚ್ಛಕ್ತಿ ಸಬ್ಸಿಡಿ ತೆಗೆದರೆ ೫೦ ಪೈಸೆಗೆ ಬರುತ್ತಾನೆ. ನೀರಾವರಿ ಸಬ್ಸಿಡಿ ತೆಗೆದರೆ ೦ (ಸೊನ್ನೆ)ಗೆ ಬರುತ್ತಾನೆ. ವಿಶ್ವಬ್ಯಾಂಕಿನ ಇಚ್ಛೆಯನ್ನು ನೆರವೇರಿಸುವುದಕ್ಕೋಸ್ಕರ ಸಹಾಯಧನವನ್ನು ತೆಗೆಯುತ್ತಿದ್ದಾರೆ ಎಂದು ಟೀಕಿಸಿದ್ದಾರೆ.'

ಇನ್ನಿತರ ಬೇರೆ ರಾಷ್ಟ್ರಗಳಿಗೆ ಹೋಲಿಸಿದಾಗ ಭಾರತದಲ್ಲಿ ಕೃಷಿಗೆ ಇರುವ ಸಹಾಯಧನ ದರ ಕಡಿಮೆ ಇದೆ. ಆದ್ದರಿಂದ ಭಾರತದಲ್ಲಿ ಸಹಾಯಧನವನ್ನು ತೆಗೆದು ಹಾಕಿದರೆ, ಆಹಾರ ವಸ್ತುಗಳ ಉತ್ಪಾದನಾ ವೆಚ್ಚ ಸಹಜವಾಗಿಯೇ ಹೆಚ್ಚುತ್ತದೆ ಎಂದು ನಂಜುಂಡಸ್ವಾಮಿ ಅವರು ವಾದಿಸಿದರು. ಇದರೊಂದಿಗೆ ಆಹಾರ ವಸ್ತುಗಳ ಬೆಲೆಗಳೂ ಹೆಚ್ಚುತ್ತವೆ. ಇಂಥ ಅವಕಾಶವನ್ನು ಬಳಸಿಕೊಂಡು, ಪಾಶ್ಚಿಮಾತ್ಯ ಬಂಡವಾಳ ಪ್ರಭುತ್ವ ದೇಶಗಳು ಭಾರತೀಯ ಮಾರುಕಟ್ಟೆಗೆ ತಮ್ಮ ಕೃಷಿ ಸರಕುಗಳನ್ನು ಒಟ್ಟಾಗಿ ಹಂಚಿಕೊಳ್ಳಲು ಬಯಸುತ್ತವೆ. ಪ್ರಾರಂಭದಲ್ಲಿ ಅವರು ತಮ್ಮ ಸರಕುಗಳನ್ನು ತುಲನಾತ್ಮಕವಾಗಿ ಕಡಿಮೆ ಬೆಲೆಗೆ ಮಾರಾಟ ಮಾಡುತ್ತಾರೆ. ಇದು ಭಾರತದ ಕೃಷಿ ಹಾಗೂ ಆಹಾರ ಉತ್ಪಾದನೆಯ ಮೇಲೆ ದುಷ್ಪರಿಣಾಮ ಬೀರುತ್ತದೆ. ನಿಧಾನವಾಗಿ ಅನುಭೋಗಿಗಳು ಕಡಿಮೆ ಬೆಲೆಯ ಆಮದಾದ ಸರಕುಗಳನ್ನು ಬಯಸುತ್ತಾರೆ. ಇದು ಭಾರತೀಯರನ್ನು ಉತ್ಪಾದಕರ ಬದಲಿಗೆ ಕೇವಲ ಅನುಭೋಗಿಗಳಾಗಿ ಪರಿವರ್ತಿಸುತ್ತದೆ. ನಂಜುಂಡಸ್ವಾಮಿ ಅವರು ನಿರೀಕ್ಷಿಸುವಂತೆ ಅದು ಮುಂದಿನ ದಿನಗಳಲ್ಲಿ ಬಂಡವಾಳ ಪ್ರಭುತ್ವ ದೇಶಗಳು ತೃತೀಯ ಜಗತ್ತಿನ ದೇಶಗಳಲ್ಲಿ ತಮ್ಮ ಸರಕುಗಳನ್ನು ಒಟ್ಟಾಗಿ ಹಂಚಿಕೊಳ್ಳುವ ಮೂಲಕ ನವ ಸಾಮ್ರಾಜ್ಯಶಾಹಿತ್ವದ ಸ್ಥಾಪನೆಗೆ ಅವಕಾಶ ನೀಡುತ್ತದೆ.

ಸರಕುಗಳನ್ನು ಪೈಪೋಟಿಯುತ ಬೆಲೆಯಲ್ಲಿ ಮಾರಾಟ ಮಾಡುವ ಈ ನೀತಿ, ತೃತೀಯ ಜಗತ್ತನ್ನು ಒಳಗೊಂಡಂತೆ ವಿಶ್ವ ಮಾರುಕಟ್ಟೆಯನ್ನು ಆಕ್ರಮಿಸಲು ಬಂಡವಾಳಶಾಹಿ ದೇಶಗಳು ಹಾಕಿಕೊಂಡ ಬೃಹತ್ ಕಾರ್ಯತಂತ್ರದ ಒಂದು ಭಾಗವಾಗಿದೆ. ಬಂಡವಾಳಶಾಹಿ ರಾಷ್ಟ್ರಗಳು ಇಂಥ ಕಾರ್ಯತಂತ್ರಗಳನ್ನು ತೃತೀಯ ಜಗತ್ತಿನ ಮೇಲೆ ಪ್ರಾಬಲ್ಯ ಸಾಧಿಸಲು ಬಳಸುತ್ತವೆ. ಬಂಡವಾಳಶಾಹಿ ರಾಷ್ಟ್ರಗಳು ತೃತೀಯ ಜಗತ್ತಿನ ಮೇಲೆ ಪ್ರಭುತ್ವ ಸಾಧಿಸುವ ಸಾಲ ನೀಡುವಾಗ ಅದರ ಜೊತೆಯಲ್ಲೇ ಕೆಲವು ಇತರೆ ಷರತ್ತು ವಿಧಿಸುವುದು ಮತ್ತು ಜನರ ಭಾಗವಹಿಸುವಿಕೆಗೆ ಅವಕಾಶ ಇಲ್ಲದಂತೆ ಅವರು ನಿರ್ಧಾರ ಕೈಗೊಳ್ಳುವ ಹಕ್ಕನ್ನು ನಿರಾಕರಿಸುವುದು ಇಂಥ ಕಾರ್ಯತಂತ್ರಗಳನ್ನು ಬಳಸುತ್ತವೆ. ಇದು ಒಂದು ರಾಷ್ಟ್ರದ ಸಾರ್ವಭೌಮತೆಗೆ ಪೆಟ್ಟು ಎಂಬುದಾಗಿ

ಪರಿಗಣಿಸಲ್ಪಟ್ಟಿದೆ. ಈ ಕಾರ್ಯತಂತ್ರದಿಂದ ನಂಜುಂಡಸ್ವಾಮಿ ಅವರು ಅಭಿಪ್ರಾಯ ಪಡುವಂತೆ ಭಾರತೀಯ ಸರ್ಕಾರ ಮಾರುಕಟ್ಟೆ ನಿಯಂತ್ರಣದ ಎಲ್ಲಾ ಅಧಿಕಾರಗಳನ್ನು ಕಳೆದುಕೊಳ್ಳುತ್ತದೆ. ಅವುಗಳೆಂದರೆ ಆಮದು ಪ್ರಮಾಣ ನಿಗದಿಸುವ ಅಧಿಕಾರ, ಆಮದು ಅನುಮತಿ, ಇವು ನಮ್ಮ ಆಹಾರ ಮಾರುಕಟ್ಟೆಯ ದ್ವಾರಗಳನ್ನು ಬಂಡವಾಳಶಾಹಿ ದೇಶಗಳಿಗೆ ತೆರೆಯುತ್ತದೆ. ಅದನ್ನು ಅವರು 'ಜಾಗತಿಕ ಆಹಾರ ಮಾರುಕಟ್ಟೆ' ಎಂದು ಕರೆಯುತ್ತಾರೆ.

ಡಂಕಲ್ ಪ್ರಸ್ತಾವನೆಗಳು ಭಾರತದಂಥ ಅಬಿವೃದ್ಧಿಶೀಲ ರಾಷ್ಟ್ರಗಳ ಕೃಷಿ ಸರಕುಗಳನ್ನು ಕನಿಷ್ಠ ಪ್ರಮಾಣದಲ್ಲಿ ಆಮದು ಮಾಡಿಕೊಳ್ಳುವಂತೆ ಒತ್ತಡ ಹೇರಿವೆ. ಭಾರತ ಸರ್ಕಾರಕ್ಕೆ ಪ್ರಸ್ತುತ ಮಾರುಕಟ್ಟೆ ಪ್ರವೇಶ ಅವಕಾಶಗಳಲ್ಲಿ ೧೯೮೬-೮೭ರ ಅವಧಿಯ ಸರಾಸರಿ ವಾರ್ಷಿಕ ಆಮದಿಗಿಂತ ಕಡಿಮೆ ಇಲ್ಲದಂತೆ ಆಮದು ಮಾಡಿಕೊಳ್ಳಬೇಕು ಅಥವಾ ಆ ಅವಧಿಯಲ್ಲಿ ಆಮದಿಗೆ ಅನುಮತಿ ಇದ್ದಷ್ಟು ಆಮದು ಮಾಡಿಕೊಳ್ಳಬೇಕೆಂದು ಷರತ್ತುಗಳನ್ನು ವಿಧಿಸಿದೆ. ೧೯೮೬-೮೯ರ ವರೆಗೆ ಮೂರು ವರ್ಷದಲ್ಲಿ ಭಾರತೀಯರು ಒಟ್ಟಾರೆ ಆಹಾರದಲ್ಲಿ ಅನುಭೋಗ ಮಾಡಿರುವ ಪ್ರಮಾಣದಲ್ಲಿ ಅದರ ಶೇಕಡಾ ೩ ರಷ್ಟು ಆಹಾರ ಧಾನ್ಯವನ್ನು ನಮಗೆ ಬೇಕೋ ಬೇಡವೋ, ಅವಶ್ಯಕತೆ ಇದೆಯೋ ಇಲ್ಲವೋ, ಕಡ್ಡಾಯವಾಗಿ ಭಾರತದವರು ಆಮದು ಮಾಡಿಕೊಳ್ಳಬೇಕು. ಶೇಕಡಾ ೩ರಿಂದ ಪ್ರಾರಂಭವಾಗಿ ಶೇಕಡಾ ೫ಕ್ಕೆ ಬರಬೇಕು ಎಂಬ ಒಂದು ನಿಬಂಧನೆ ಇದೆ.''[೧೦] ಈ ಸರಾಸರಿಯ ಆಧಾರದ ಮೇಲೆ, ೧೯೯೩ರಲ್ಲಿ ಭಾರತ ಸುಮಾರು ೭೦ ಲಕ್ಷಟನ್ನುಗಳಷ್ಟು ಆಹಾರ ವಸ್ತುಗಳನ್ನು ಮುಕ್ತ ಮಾರುಕಟ್ಟೆಯಿಂದ ಕಡ್ಡಾಯವಾಗಿ ಆಮದು ಮಾಡಿಕೊಂಡಿತು. ಏಕೆಂದರೆ ವಿಶ್ವಬ್ಯಾಂಕು ಅದನ್ನು ಭಾರತದ ಕೈಗಾರಿಕೆಗಳಿಗೆ ಸಾಲ ಬಿಡುಗಡೆ ಮಾಡಲು ಅವಶ್ಯಕವೆಂದು ಹೇಳಿತು. ಇಂಥ ಮುಕ್ತ ಮಾರುಕಟ್ಟೆ ಪ್ರವೇಶ ಉದಾರೀಕರಣದನೀತಿ ಭಾರತೀಯ ಕೃಷಿಯನ್ನು ತೀವ್ರ ಒತ್ತಡಕ್ಕೆ ಒಳಪಡಿಸುತ್ತದೆ ಮತ್ತು ಅಂತಿಮವಾಗಿ ಅದನ್ನು ನಾಶಪಡಿಸುತ್ತದೆ ಎಂಬುದನ್ನು ಎಂ.ಡಿ.ಎನ್ ಪ್ರತಿಪಾದಿಸಿದರು.

ಅಮೇರಿಕಾದ ಕೃಷಿ ಮತ್ತು ಧಾನ್ಯ ವ್ಯಾಪಾರಿಗಳು ಅಮೇರಿಕಾ ಸರ್ಕಾರದಿಂದ ಅಧಿಕ ಸಹಾಯಧನ ಪಡೆದಿದ್ದರು. ಆದ್ದರಿಂದ ಕಾರ್ಗಿಲ್ ಕಂಪನಿ ವಿಶ್ವದಲ್ಲಿ ಆರನೇ ದೊಡ್ಡ ಧಾನ್ಯದ ವ್ಯಾಪಾರಿಯಾಗಿತ್ತು. ಅಲ್ಲದೆ ಅಮೇರಿಕಾ ಸಂಯುಕ್ತ ಸಂಸ್ಥಾನದಿಂದ ಹೆಚ್ಚು ಸಹಾಯಧನ ಪಡೆದ ಫಲಾನುಭವಿಯಾಗಿತ್ತು. ಒಂದು ವೇಳೆ ಭಾರತ ತನ್ನ ಆಹಾರ ಮಾರುಕಟ್ಟೆಯ ದ್ವಾರಗಳನ್ನು ತೆರೆದರೆ, ಈ ಬಹುರಾಷ್ಟ್ರೀಯ ಸಂಸ್ಥೆಗಳು ಅಸ್ತಿತ್ವದಲ್ಲಿರುವ ಬೆಲೆಗಿಂತ ಕಡಿಮೆ ಬೆಲೆಗೆ ಆಹಾರದ ವಸ್ತುಗಳನ್ನು ಮಾರುವ ಸಾಮರ್ಥ್ಯ ಹೊಂದಿವೆ. ಉದಾಹರಣೆ, ಅವರು ಸೂರ್ಯಕಾಂತಿ ಎಣ್ಣೆಯನ್ನು ಪ್ರತಿ ಕೆ.ಜಿ.ಗೆ. ೨೦ ರೂಪಾಯಿಯಂತೆ ಬಿಡುಗಡೆ ಮಾಡಬಹುದು (ಭಾರತದ ಮಾರುಕಟ್ಟೆಯಲ್ಲಿ ಅದು ಪ್ರತಿ ಕೆ.ಜಿ.ಗೆ. ೪೦ ರೂಪಾಯಿ). ಏಕೆಂದರೆ ಅದು ಅಧಿಕ ಸಹಾಯಧನ ಪಡೆಯುತ್ತದೆ ಮತ್ತು ಅಧಿಕ ಉತ್ಪಾದನೆ ಹೊಂದಿದೆ.[೧೧] ನಿಖರವಾಗಿ ಅದು

ಸೂರ್ಯಕಾಂತಿ ಉತ್ಪಾದನೆಯ ಮೇಲೆ ಪರಿಣಾಮ ಬೀರುತ್ತದೆ ಮತ್ತು ಅಂತಿಮವಾಗಿ ಅದು ಭಾರತದ ಕೃಷಿ ಕ್ಷೇತ್ರದಿಂದ ಮರೆಯಾಗಬಹುದು ಎಂಬ ಆತಂಕವನ್ನು ನಂಜುಂಡಸ್ವಾಮಿ ಅವರು ವ್ಯಕ್ತಪಡಿಸಿದರು.

ಅಮೇರಿಕಾದಲ್ಲಿ ೧೯೨೦ ರವರೆಗೆ, ಆಹಾರ ಧಾನ್ಯಗಳನ್ನು ಅಧಿಕ ಪ್ರಮಾಣದಲ್ಲಿ ಬೆಳೆಯಲಾಗುತ್ತಿತ್ತು. ಅವರು ಹೆಚ್ಚುವರಿ ಆಹಾರ ಧಾನ್ಯಗಳನ್ನು ಬೆಲೆ ಇಳಿತ ತಪ್ಪಿಸಲು ಅಥವಾ ಬೆಲೆ ಸ್ಥಿತಿಯನ್ನು ವಿಶ್ವ ಮಾರುಕಟ್ಟೆಯಲ್ಲಿ ಕಾಯ್ದುಕೊಳ್ಳಲು ಸಮುದ್ರಕ್ಕೆ ಎಸೆಯುತ್ತಿದ್ದರು. ಬೃಹತ್ ಪ್ರಮಾಣದ ಹಾಲು ಮತ್ತು ತುಪ್ಪವನ್ನು ಉತ್ಪಾದಿಸಲಾಗಿತ್ತು. ಬೆಣ್ಣೆ ಮತ್ತು ಗಿಣ್ಣನ್ನು ಮೈಲು ತುತ್ತ ಬೆರೆಸಿ (ತಾಮ್ರದ ಸಲ್ಫೇಟ್) ವಿಷವಾಗಿಸಲಾಗಿತ್ತು. ೧೯೨೦ ರಿಂದ ೧೯೯೦ ರವರೆಗೆ ಅಮೇರಿಕಾ ಸರ್ಕಾರ ಮತ್ತೊಂದು ಕಾರ್ಯತಂತ್ರವನ್ನು ಅಳವಡಿಸಿಕೊಂಡಿತು.[೨] ಅದು ತನ್ನ ರೈತರನ್ನು ತಮ್ಮ ಭೂಮಿಯಲ್ಲಿ ಅರ್ಧಭಾಗ ಸಾಗುವಳಿ ಮಾಡಬಾರದೆಂದು ಕೇಳಿಕೊಂಡಿತು ಮತ್ತು ಆ ಅರ್ಧ ಭಾಗದ ಸಾಗುವಳಿ ಮಾಡದ ಭೂಮಿಗೆ ಅದರ ಸಾಗುವಳಿ ಮಾಡಲಾದ ಉತ್ಪಾದನಾ ಭಾಗದಷ್ಟು ಸಮವಾಗಿ ಪಾವತಿ ಮಾಡುವ ಭರವಸೆ ನೀಡಿತು. ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕೃಷಿ ಸರಕುಗಳ ಬೆಲೆ ಸ್ಥಿರತೆ ಕಾಪಾಡಲು ಇದು ನ್ಯಾಯೋಚಿತವಾಗಿತ್ತು.

ಪ್ರಸ್ತುತ ಸಂದರ್ಭದಲ್ಲಿ, ಅಮೇರಿಕಾ ಮೂರನೇ ಕಾರ್ಯತತ್ವವನ್ನು ಜಾರಿಗೆ ತಂದಿದೆ. ಸಮುದ್ರಕ್ಕೆ ಎಸೆಯುವ ಬದಲಿಗೆ ಅಥವಾ ಅರ್ಧದಷ್ಟು ಭೂಮಿಯನ್ನು ಸಾಗುವಳಿ ಮಾಡದೇ ಹಾಗೇ ಉಳಿಸುವುದಕ್ಕೆ ಬದಲಾಗಿ ಜಾರಿಗೆ ತಂದಿರುವ ಕಾರ್ಯತಂತ್ರ ಏನೆಂದರೆ, ತನ್ನ ಹೆಚ್ಚುವರಿ ಉತ್ಪನ್ನಕ್ಕೆ ಮೂರನೇ ವಿಶ್ವದ ರಾಷ್ಟ್ರಗಳನ್ನು ಮಾರುಕಟ್ಟೆಯಾಗಿ ಪರಿವರ್ತಿಸುವುದು. ಈ ಮೂರನೇ ಕಾರ್ಯತಂತ್ರವನ್ನು ಜಾರಿಗೆ ತರಲು ಅಮೇರಿಕಾದ ಸಾಮ್ರಾಜ್ಯಶಾಹಿ ಗ್ಯಾಟ್ ಒಪ್ಪಂದವನ್ನು ಸಾಧನವನ್ನಾಗಿ ಬಳಸಿಕೊಂಡಿತು.

ಮಾರುಕಟ್ಟೆಯಲ್ಲಿ ಶೇಂಗಾ ಎಣ್ಣೆ ಬೆಲೆ ೩೫ ರೂಪಾಯಿ ಅಥವಾ ೩೨ ರೂಪಾಯಿ, ಅಮೇರಿಕಾ ಅದನ್ನು ಕೇವಲ ೨೫ ರೂಪಾಯಿಗೆ ಮಾರಬಹುದು. ಮುಂದಿನ ವರ್ಷ ಭಾರತದವರು ಶೇಂಗಾ ಬೆಳೆಯಲು ಸಾಧ್ಯವಿಲ್ಲ. ಇತರ ಬೆಳೆಗಳಿಗೂ ಇದೇ ಆಗುತ್ತದೆ. ಒಂದೇ ವರ್ಷದ ಅವಧಿಯಲ್ಲಿ ಕೋಟಿಗಟ್ಟಲೆ ರೈತರು ಸಾಗುವಳಿ ರಹಿತರಾಗುತ್ತಾರೆ. ತದ ನಂತರ ಒಂದು ವೇಳೆ ಅಮೇರಿಕಾ ಸರ್ಕಾರ ಕಡಿಮೆ ಬೆಲೆಯಲ್ಲಿ ಮಾರಾಟ ಮಾಡಿದರೂ, ನಾವು ಅದನ್ನು ಖರೀದಿಸಲು ಸಾಧ್ಯವಿಲ್ಲ. ಏಕೆಂದರೆ ಭಾರತ ಈಗಾಗಲೇ ಸಂದಾಯ ಬಾಕಿ ಸಂಕಷ್ಟದಲ್ಲಿದೆ. ಅಂದರೆ 'ಸಾಲಬೋನು' 'ಸಾಲ ವ್ಯಾಪಾರ' ಅಧಿಕವಾಗಿದ್ದು ಈ ಬೋನಿನಿಂದ ಶಾಶ್ವತವಾಗಿ ಹೊರಬರಲು ಸಾಧ್ಯವಿಲ್ಲವೆಂದು ನಂಜುಂಡಸ್ವಾಮಿ ಅವರ ಚಿಂತನೆಗಳಿಂದ ತಿಳಿಯಬಹುದು.

ಹೀಗೆ ಭಾರತದ ಅಧ್ಯಯನದ ಪ್ರಕಾರ ಸಹಾಯಧನ ವಿಷಯದಲ್ಲಿ ಪೈಪೋಟಿಯುತ ಅನುಕೂಲತೆಯನ್ನು ಪಡೆಯುತ್ತಿಲ್ಲ. ಉರುಗ್ವೆ ಸುತ್ತಿನಲ್ಲಿ ಆಜ್ಞೆಯಾದಂತೆ ಸಹಾಯಧನದ ಇಳಿತಗಳು ಉಷ್ಣ ಬೆಳೆಗಳಾದ ಗೋಧಿ, ಎಣ್ಣೆ ಬೀಜಗಳು, ಬೀಟ್‌ರೂಟ್ ಮತ್ತು ಸಕ್ಕರೆ ಬೆಲೆಗಳನ್ನು ಹೆಚ್ಚಿಸುತ್ತದೆ ಎಂಬ ಅಂಶವನ್ನು ಪ್ರಮುಖವಾಗಿ ಗಮನಿಸಬೇಕಾಗಿದೆ. ಭಾರತದ ಸಾಂಪ್ರದಾಯಿಕ ಕೃಷಿ ಬೆಳೆಗಳ ರಫ್ತು ಬೆಲೆಗಳು, ಭಾರತಕ್ಕೆ ತುಲನಾತ್ಮಕ

ಅನುಕೂಲತೆಯನ್ನು ನೀಡಿದೆ. ಆದ್ದರಿಂದ ಉರುಗ್ವೆ ಸುತ್ತಿನ ಫಲಿತಾಂಶದಿಂದ ಪ್ರಭಾವಿತವಾಗುವುದಿಲ್ಲ. ಪ್ರಸ್ತುತ ಭಾರತದ ಎಣ್ಣೆ ಬೀಜಗಳು ಮತ್ತು ಖಾದ್ಯ ತೈಲಗಳ ಹಿನ್ನೆಲೆಯಲ್ಲಿ ನಿವ್ವಳ ಆಮದುದಾರನಾಗಿದೆ. ಆದ್ದರಿಂದ ಈ ಸರಕುಗಳ ವ್ಯಾಪಾರದಲ್ಲಿ ಭಾರತ ಮತ್ತಷ್ಟು ಕೆಳಮಟ್ಟಕ್ಕೆ ಹೋಗುತ್ತದೆ ಎಂಬುದು ನಂಜುಂಡಸ್ವಾಮಿ ಅವರ ಚಿಂತನೆಗಳಿಂದ ಗಮನಿಸಬಹುದು.

ವ್ಯಾಪಾರ ಸಂಬಂಧೀ ಬೌದ್ಧಿಕ ಆಸ್ತಿ ಹಕ್ಕುಗಳು (ಟ್ರಿಪ್ಸ್)

ಸಸ್ಯಗಳು ಮತ್ತು ಪ್ರಾಣಿಗಳನ್ನು ಒಳಗೊಂಡಂತೆ ಎಲ್ಲಾ ಜೈವಿಕ ಪ್ರಕಾರಗಳ ಸ್ವಾಮ್ಯದ ಸನ್ನದು. ಜ್ಞಾನದ ಖಾಸಗೀಕರಣ, ಸಾಕ್ಷ್ಯಗಳ ಹೊರೆ, ಬೀಜಗಳು, ಸಸ್ಯಗಳು ಹಾಗೂ ವಂಶವಾಹಕಗಳ (ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ಗುಣಗಳನ್ನು ವರ್ಗಾಯಿಸುವ) ಏಕಸ್ವಾಮ್ಯ ಸಾಧಿಸುವುದು ಡಂಕಲ್ ಪ್ರಸ್ತಾವನೆಯ ಭೀಕರ ಭಾಗವಾಗಿದೆ. ಜೈವಿಕ ಗೊಬ್ಬರ ಮತ್ತು ''ಜೈವಿಕ ಕೀಟನಾಶಕಗಳ ಸಾಂಪ್ರದಾಯಿಕ ಸಾಗುವಳಿಯನ್ನು ಪುರಾತನ ಕಾಲದಿಂದಲೂ ಬಳಸಲಾಗುತ್ತಿದೆ. ಇನ್ನೂ ಕೆಲವೇ ಅವಧಿಯಲ್ಲಿ ಅವುಗಳನ್ನು ಸ್ವಾಮ್ಯದ ಸನ್ನದಿನ ಪಟ್ಟಿಯಲ್ಲಿ ಸೇರಿಸಲಾಗುತ್ತದೆ. ಏಕೆಂದರೆ ಪೇಟೆಂಟ್ ಕಾಯ್ದೆಯಲ್ಲಿ ಸೂಕ್ಷ್ಮ ಜೈವಿಕಗಳನ್ನು ಸೇರಿಸುವಂತೆ ಡಂಕಲ್ ಪ್ರಸ್ತಾವನೆ ಒತ್ತಾಯಿಸುತ್ತಿದೆ ಹಾಗೂ ಭಾರತದಲ್ಲಿ ಕೃಷಿ ಅಭಿವೃದ್ಧಿಗೆ ಅಪಾಯ ಉಂಟುಮಾಡುತ್ತವೆ. ಅದು ಭಾರತದ ೧೯೭೦ರ ಪೇಟೆಂಟ್ ಕಾಯ್ದೆಯನ್ನು ಬದಲಾಯಿಸಲು ಒತ್ತಾಯಿಸಿದೆ.''[೧] ಅದರ ಮೂಲಕ ಜೈವಿಕ ಪ್ರಕಾರಗಳ ಪೇಟೆಂಟ್ ಮಾಡುವುದು ಮತ್ತೆ ಪೇಟೆಂಟನ್ನು ೨೦ ವರ್ಷಕ್ಕೆ ವಿಸ್ತರಿಸುವುದು ಭಾರತಕ್ಕೆ ಪ್ರತಿಕೂಲವಾಗಿದೆ.

ಬಹುರಾಷ್ಟ್ರೀಯ ಬೀಜ ಕಂಪೆನಿಯ ವಿರುದ್ಧ ಹೋರಾಟ ಮಾಡಿದ್ದಕ್ಕೆ ಉದಾಹರಣೆ ನಂಜುಂಡಸ್ವಾಮಿ ಅವರ ನೇತೃತ್ವದಲ್ಲಿ ಕಾರ್ಗಿಲ್ ಕಂಪೆನಿಯನ್ನು ಕರ್ನಾಟಕ ರಾಜ್ಯ ರೈತ ಸಂಘ ಆಕ್ರಮಣ ಮಾಡಿ ನಾಶ ಮಾಡಿದ್ದು. [ಹೆಚ್ಚಿನ ಮಾಹಿತಿಗಾಗಿ ಅಧ್ಯಾಯ ನಾಲ್ಕರಲ್ಲಿ ಹೋರಾಟಗಳಲ್ಲಿ ನೋಡಬಹುದು]

ಮೊಟ್ಟ ಮೊದಲ ಬಾರಿಗೆ ಕೇಂದ್ರ ಸರ್ಕಾರ ೧೯೯೧ ರಲ್ಲಿ ಕೃಷಿಯ ರಸಗೊಬ್ಬರದ ಸಹಾಯಧನವನ್ನು ಹಿಂದಕ್ಕೆ ತೆಗೆದುಕೊಂಡಿತು. ನಂಜುಂಡಸ್ವಾಮಿ ಅವರು ಹೋರಾಟಗಳ ಮೂಲಕ ಡಂಕಲ್ ವಿರೋಧವಾದ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ಅಲ್ಲದೆ ಅವರು ಡಂಕಲ್ ಪ್ರಸ್ತಾವನೆಗಳನ್ನು ಹಲವು ರೀತಿಯಲ್ಲಿ ಆರೋಪಿಸಿದರು. ಮೊದಲನೆಯದಾಗಿ ಸಹಾಯಧನವನ್ನು ಹಿಂದಕ್ಕೆ ಪಡೆಯುವುದು, ರಸಗೊಬ್ಬರಗಳ ಬೆಲೆಯನ್ನು ಮತ್ತು ಪರೋಕ್ಷವಾಗಿ ಆಹಾರ ಧಾನ್ಯಗಳ ಬೆಲೆಗಳನ್ನು ಹೆಚ್ಚಿಸುತ್ತದೆ. ಎರಡನೆಯದಾಗಿ ತೃತೀಯ ಜಗತ್ತಿನ ರಾಷ್ಟ್ರಗಳನ್ನು ಅಧೀನತೆಯ ವಿಷವೃತ್ತದಲ್ಲಿ ಸಿಲುಕಿಸಲು ನೆರವು ಮತ್ತು ಸಾಲಗಳ ಗಂಟನ್ನು ದುರುಪಯೋಗ ಮಾಡಿಕೊಳ್ಳುವುದು. ಕೊನೆಯದಾಗಿ ಭಾರತದಲ್ಲಿ ಕೃಷಿಗೆ ನೀಡಿರುವ ಸಹಾಯಧನ ತುಲಾನಾತ್ಮಕವಾಗಿ ಬಹಳ ಕಡಿಮೆ ಇದೆ ಎಂದು ಅವರು ವಾದಿಸಿದರು.

ನಂಜುಂಡಸ್ವಾಮಿ ಅವರು ಕೇಂದ್ರ ಸಂಸ್ಥೆಗಳನ್ನು ಹಾಗೂ ಹಲವು ಬೌದ್ಧಿಕ ಸಂಸ್ಥೆಗಳನ್ನು ಸಂಪರ್ಕಿಸಿದರು. ಈ ಸಂಸ್ಥೆಗಳೆಲ್ಲ ಕರ್ನಾಟಕದ ರೈತ ಚಳವಳಿಗೆ ಬೆಂಬಲ ನೀಡಿದವು. ಪ್ರಮುಖ ಚಿಂತಕರಾದ ತೃತೀಯ ಜಗತ್ತಿನ ಜಾಲದ ವಂದನಾ ಶಿವ, ವಂಶವಾಹಿ ಪ್ರಣಾಳಿಕೆಯ ಸುಮನ್ ಸಹಾಯ, ನವಧಾನ್ಯದ ವನಜ ರಮ್ ಪ್ರಸಾದ್, ಪೇಟೆಂಟ್ ಕಾಯ್ದೆ ಮೇಲಿನ ರಾಷ್ಟ್ರೀಯ ಕಾರ್ಯ ತಂಡದ ಬಿ.ಕೆ. ಕೇಯ್ಲ, ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ತೃತೀಯ ಜಗತ್ತಿನ ಜಾಲದ ಸಂಯೋಗದೊಂದಿಗೆ ೧೯೯೨ ರ ಫೆಬ್ರವರಿಯಲ್ಲಿ "ಸಣ್ಣ ರೈತರ ಸ್ವಾತಂತ್ರ್ಯ ಮತ್ತು ಸ್ವಾಯತ್ತತೆಯನ್ನು ಡಂಕಲ್ ಪ್ರಸಾವನೆಯ ಮುಷ್ಟಿಯಿಂದ ರಕ್ಷಿಸಲು" ಒಂದು ಕಾರ್ಯತಂತ್ರ ಯೋಜನೆ ತಯಾರಿಸಲು ಒಂದು ಚರ್ಚಾಕೂಟವನ್ನು ವ್ಯವಸ್ಥೆಗೊಳಿಸಿದರು.

ರಾಷ್ಟ್ರವ್ಯಾಪಿ 'ಬೀಜ ಸತ್ಯಾಗ್ರಹ' ತೀರ್ಮಾನವನ್ನು ೧೯೯೨ ರ ಅಕ್ಟೋಬರ್‌ನಲ್ಲಿ ಹೊಸಪೇಟೆಯಲ್ಲಿ ನಡೆದ ರ್‍ಯಾಲಿಯಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ತೆಗೆದುಕೊಂಡಿತು. ಒಂದು ತಿಂಗಳ ನಂತರ ಅದು ಡಂಕಲ್ ಪ್ರಸ್ತಾವನೆಯ ಮೇಲೆ ಐದು ತೀರ್ಮಾನಗಳನ್ನು ಕೈಗೊಂಡಿತು. ಅವುಗಳೆಂದರೆ:

೧. ''ನಿರ್ಧಾರ ಕೈಗೊಳ್ಳುವ ಮೊದಲು ಸರ್ಕಾರ ರೈತ ಪ್ರತಿನಿಧಿಗಳನ್ನು ಸಂಪರ್ಕಿಸಬೇಕು.

೨. ಡಂಕಲ್ ಪ್ರಸ್ತಾವನೆಗೆ ಸಹಿ ಹಾಕುವ ಮೊದಲು ಕೇಂದ್ರ ಸರ್ಕಾರ ಎಲ್ಲಾ ರಾಜ್ಯ ಶಾಸಕಾಂಗಗಳನ್ನು ಸಂಪರ್ಕಿಸಬೇಕು.

೩. ಬೌದ್ಧಿಕ ಆಸ್ತಿ ಹಕ್ಕುಗಳಲ್ಲಿ ಸಸ್ಯ ಮತ್ತು ಜೈವಿಕ ವಸ್ತುಗಳನ್ನು ಪೇಟೆಂಟ್ ಮಾಡುವುದನ್ನು ರದ್ದು ಪಡಿಸಬೇಕು.

೪. ರೈತರು ಉತ್ಪಾದಿಸುವ, ಸುಧಾರಿಸುವ ಮತ್ತು ಮಾರಾಟದ ಹಕ್ಕುಗಳನ್ನು ಸಂರಕ್ಷಿಸಬೇಕು.

೫. ಬೀಜ ಕ್ಷೇತ್ರದಲ್ಲಿ ಬಹುರಾಷ್ಟ್ರೀಯ ಕಂಪೆನಿಗಳ ಪ್ರವೇಶವನ್ನು ರದ್ದುಪಡಿಸಬೇಕು ಎಂಬುದೇ ಆಗಿದೆ.''[೧೪]

ಬೌದ್ಧಿಕ ಆಸ್ತಿ ಹಕ್ಕನ್ನು ಬೀಜ ಮತ್ತು ಸಸ್ಯ ವಂಶವಾಹಿ ಸಂಪನ್ಮೂಲಗಳಲ್ಲಿ ಅಳವಡಿಸುವುದನ್ನು ವಿರೋಧಿಸಿದರು. ಏಕೆಂದರೆ ಅದು ವಿಸ್ತೃತವಾದ ಪರಿಣಾಮಗಳನ್ನು ಹೊಂದಿದೆ. ೧೯೯೩ ರ ಮಾರ್ಚ್‌ನಲ್ಲಿ ಭಾರತದ ಎಲ್ಲಾ ಭಾಗಗಳಿಂದ ಡಂಕಲ್ ಪ್ರಸ್ತಾವನೆಯನ್ನು ವಿರೋಧಿಸಿದರು ಮತ್ತು ಅದನ್ನು ಸುಟ್ಟು ಹಾಕಿದರು. ಈ ಕಾರ್ಯದಲ್ಲಿ ಕರ್ನಾಟಕ ರಾಜ್ಯ ರೈತ ಸಂಘವೂ ಭಾಗವಹಿಸಿತ್ತು. ಗ್ಯಾಟ್‌ನಿಂದ ರೈತರ ಸಸ್ಯ ಸಂಕರಣಶಾಸ್ತ್ರಜ್ಞರ ಹಕ್ಕುಗಳ ಸಂರಕ್ಷಣೆಗೆ ಸಂಬಂಧಿಸಿದ ಸರ್ಕಾರದ ದುರ್ಬಲವಾದ ಹೇಳಿಕೆಗಳನ್ನು ಟೀಕಿಸಿದರು. ಅವರು ಬೀಜದ ಹಕ್ಕು ಒಂದು ಧನಾತ್ಮಕ ಹಕ್ಕು, ಋಣಾತ್ಮಕ ಹಕ್ಕು ಅಲ್ಲ, ಅದು ಮೂಲಭೂತ ಹಕ್ಕು ಆದರೆ ರಿಯಾಯಿತಿ ಅಲ್ಲ ಎಂದು ಹೇಳಿದರು ಮತ್ತು ಅವರು ತಮ್ಮ ಬೀಜದ ಹಕ್ಕನ್ನು "ಸಮುದಾಯದ ಬೌದ್ಧಿಕ ಹಕ್ಕುಗಳೆಂದು" ಕರೆದರು.

ಮತ್ತೊಂದು ಹಕ್ಕುಗಳಿಗಾಗಿ ರೈತರ ಧನಾತ್ಮಕ ಪ್ರದರ್ಶನ ೧೯೯೩ ರ ಆಗಸ್ಟ್ ೧೫ ರ ಸ್ವಾತಂತ್ರ್ಯ ದಿನದಂದು ಕಂಡು ಬಂದಿತು. "ಸಾಮೂಹಿಕ ಜ್ಞಾನ ಸನ್ನದು" ರಕ್ಷಿಸಲ್ಪಡುವುದು ರೈತರು ತಮ್ಮ ಜ್ಞಾನ ಮತ್ತು ಜೈವಿಕ ವೈವಿಧ್ಯತೆಯಿಂದ ಎಂದು ಘೋಷಿಸಿದರು. ವಂದನಾ ಶಿವ ಉಲ್ಲೇಖಿಸಿರುವಂತೆ "ಅವರು ಯಾವುದೇ ಕಂಪೆನಿ ಅವರ ಸ್ಥಳೀಯ ಜ್ಞಾನ ಅಥವಾ ಸಂಪನ್ಮೂಲಗಳನ್ನು ಸ್ಥಳೀಯ ವರ್ಗಗಳ ಅನುಮತಿಯಿಲ್ಲದೆ ಬಳಸಿದರೆ ಬೇವಿನ ಪೇಟೆಂಟ್‌ಗಳ ವಿಷಯದಲ್ಲಿ ಇರುವಂತೆ ಅದು ಬೌದ್ಧಿಕ ದರೋಡೆ" ಎಂದು ಒತ್ತಾಯಿಸಿದರು.

ಕರ್ನಾಟಕ ರಾಜ್ಯ ರೈತ ಸಂಘ ನವದೆಹಲಿಯ ಉನ್ನತ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಿಗೆ ಒಂದು ಮನವಿಯನ್ನು ಸಲ್ಲಿಸಿತು. ಭಾರತದ ಸಾಂಪ್ರದಾಯಿಕ ಸರಕುಗಳನ್ನು ವಿದೇಶೀ ಬಹುರಾಷ್ಟ್ರೀಯ ಕಂಪೆನಿಗಳು ಕೊಳ್ಳೆ ಹೊಡೆಯುತ್ತಿರುವುದರ ವಿರುದ್ಧ ಸಲ್ಲಿಸಿತ್ತು.

ಡಂಕಲ್ ಪ್ರಸ್ತಾವನೆ ಮತ್ತು ರೈತರ ಹಕ್ಕುಗಳು

ಡಂಕಲ್ ಪ್ರಸ್ತಾವನೆಯನ್ನು ಅಳವಡಿಸುವ ಮೂಲಕ ರೈತ ತನ್ನದೇ ಆದ ಬೀಜ ಮತ್ತು ಗೊಬ್ಬರಗಳನ್ನು ಉತ್ಪಾದಿಸುವ ಹಕ್ಕನ್ನು ಕಳೆದುಕೊಳ್ಳುತ್ತಾನೆ. ಅದು ಸಂಶೋಧನೆಯ ಮೇಲೆ ದುಷ್ಪರಿಣಾಮ ಬೀರುತ್ತದೆ ಮತ್ತು ಅಂತಿಮಾವಾಗಿ ರೈತರು ಮಾನವ ಹಕ್ಕುಗಳ ವೆಚ್ಚದಲ್ಲಿ ಜ್ಞಾನ ಖಾಸಗಿ ಕಂಪೆನಿಗಳ ಆಸ್ತಿಯಾಗುತ್ತದೆ. ಡಂಕಲ್ ಪ್ರಸ್ತಾವನೆ ಮಾನವನ ಮೂಲಭೂತ ಹಕ್ಕುಗಳನ್ನು ವಿರೋಧಿಸುತ್ತದೆ ಎಂದು ನಂಜುಂಡಸ್ವಾಮಿ ಅವರು ಹೇಳಿದರು. ಅಂತೆಯೇ-

> ''ಭಾರತ ಸರ್ಕಾರ ೨೦೦೧ರಲ್ಲಿ ಪ್ರಭೇದಗಳ ರಕ್ಷಣೆ ಮತ್ತು ರೈತರ ಹಕ್ಕು ಕಾಯಿದೆಯನ್ನು ಜಾರಿಗೆ ತಂದಿತು. ಅದು ರೈತರನ್ನು ಸಾಗುವಳಿದಾರ ಮತ್ತು ಸಂರಕ್ಷಕ ಎಂದು ವ್ಯಾಖ್ಯಾನಿಸಿದೆ. ಆದರೆ ಪೋಷಕ ಎಂದಲ್ಲ.''[೧೪]

ಕೃಷಿ ಸರಕುಗಳ ಆಮದು ಮತ್ತು ರಫ್ತು ಹಾಗೂ ಬಹುರಾಷ್ಟ್ರೀಯ ಕಂಪೆನಿಗಳು

ಉತ್ಪತ್ತಿ ಮೂಲದ ಸಂಪನ್ಮೂಲಗಳ ಒಡೆತನಕ್ಕೆ ಸಂಬಂಧಿಸಿದೆ. ಒಂದು ವೇಳೆ ಉತ್ಪತ್ತಿ ಮೂಲದ ಸಂಪನ್ಮೂಲಗಳು ತೃತೀಯ ಜಗತ್ತಿನ ರಾಷ್ಟ್ರಗಳಿಗೆ ಸೇರಿದರೆ, ಆಗ ಅವುಗಳನ್ನು ಮಾನವ ಜನಾಂಗದ ಸಾಮಾನ್ಯ ಆಸ್ತಿಯೆಂದು ಪರಿಗಣಿಸಲಾಗುತ್ತದೆ. ಆದರೆ ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಉತ್ಪತ್ತಿ ಮೂಲದ ಸಂಪನ್ಮೂಲಗಳು ಯಾವ ರಾಷ್ಟ್ರದಲ್ಲಿ ಕಂಡುಬರುತ್ತವೆಯೋ ಆ ರಾಷ್ಟ್ರಕ್ಕೆ ಸಂಬಂಧಿಸಿದ ಆಸ್ತಿಯೆಂದು ಪರಿಗಣಿಸಲಾಗುತ್ತದೆ ಎಂಬ ಡಂಕಲ್ ಪ್ರಸ್ತಾವನೆಯ ದ್ವಂದ್ವಾತ್ಮಕ ವಿಧಾನವನ್ನು ನಂಜುಂಡಸ್ವಾಮಿ ಅವರು ದೂಷಿಸಿದರು.

ಡಂಕಲ್ ಪ್ರಸ್ತಾವನೆಯ ಉದಾರೀಕರಣ ನೀತಿಯಿಂದ ಭಾರತ ಬಹುರಾಷ್ಟ್ರೀಯ ಕಂಪೆನಿಗಳನ್ನು ಶೇಕಡಾ ೧೦೦ರಷ್ಟು ಈಕ್ವಿಟಿಯೊಂದಿಗೆ ಬರಮಾಡಿಕೊಳ್ಳಬೇಕು. ಇಲ್ಲಿ ಬಹುರಾಷ್ಟ್ರೀಯ ಕಂಪೆನಿಗಳು ಪರೋಪಕಾರಿಗಳಾಗಿ

ಬರುತ್ತಿಲ್ಲ. ಆದರೆ ಸಾಮ್ರಾಜ್ಯಶಾಹಿಗಳಾಗಿ ಮತ್ತು ವಸಾಹತುಶಾಹಿಗಳಾಗಿ ಬರುತ್ತಿದ್ದಾರೆ. ಆದರೆ ಅವರು ಸಿದ್ಧ ವಸ್ತುಗಳನ್ನು ಉತ್ಪಾದಿಸುತ್ತಾರೆ ಮತ್ತು ರಫ್ತು ಮಾಡುತ್ತಾರೆ. ಆದ್ದರಿಂದ ಸ್ಥಳೀಯ ರೈತರು ಹಾಗೂ ಉತ್ಪಾದಕರು ಅನುಭೋಗದಲ್ಲಾಗಲೀ ಅಥವಾ ಉತ್ಪಾದನೆಯಲ್ಲಾಗಲೀ ಭಾಗಿಗಳಾಗುವುದಿಲ್ಲ. ಆದರೆ ಸ್ಥಳೀಯ ಉತ್ಪಾದಕರು ಬಿಳಿಯ ಸಾಮ್ರಾಜ್ಯಶಾಹಿಗಳು ನಮ್ಮ ನೈಸರ್ಗಿಕ ಸಂಪನ್ಮೂಲಗಳನ್ನು ಕೊಳ್ಳಹೊಡೆಯುವುದನ್ನು ನೋಡುವ ಪ್ರೇಕ್ಷಕರು ಮಾತ್ರ ಆಗಿರುತ್ತಾರೆ ಎಂದು ನಂಜುಂಡಸ್ವಾಮಿ ಅವರು ಹೇಳಿದ್ದಾರೆ.

ಭಾರತದ ಆಂತರಿಕ ವಿಷಯಗಳಲ್ಲಿ ಹಸ್ತಕ್ಷೇಪ ಮಾಡುತ್ತಿದೆ ಎಂಬ ಕಾರಣಕ್ಕಾಗಿ ಅಮೇರಿಕಾವನ್ನು ಟೀಕಿಸಿದ್ದು ನಂಜುಂಡಸ್ವಾಮಿ ಅವರು. 'ಅಮೇರಿಕಾ ''ಜೈವಿಕ ವೈವಿಧ್ಯತೆ, ಪೇಟೆಂಟ್ ಮತ್ತು ಸಸ್ಯ ಪ್ರಕಾರಗಳ ಸಂರಕ್ಷಣೆಯ ವಿಷಯದಲ್ಲಿ ಮೂರು ಮುಖ್ಯ ನೀತಿಗಳನ್ನು ರಚಿಸುವಂತೆ ಭಾರತದ ಹಸ್ತಗಳನ್ನು ತಿರುಚುತ್ತಿದೆ'' ಎಂದು ಹೇಳಿದ್ದಾರೆ. ಶೇಕಡಾ ೮೦ರಷ್ಟು ಬಿತ್ತನೆ ಬೀಜ ರೈತರಿಂದಲೇ ಉತ್ಪಾದನೆಯಾಗುತ್ತದೆ ಮತ್ತು ಬೀಜ ಕಂಪೆನಿಗಳು ಉಳಿದ ಶೇಕಡಾ ೨೦ ರಷ್ಟನ್ನು ನೀಡುತ್ತವೆ. ಬಹುರಾಷ್ಟ್ರೀಯ ಕಂಪೆನಿಗಳು ಕೃಷಿಕರ ಆಸಕ್ತಿಗಳನ್ನು ನಿಗ್ರಹಿಸುವ ಮೂಲಕ ತಮ್ಮ ಪಾಲನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಿಸುತ್ತಿವೆ ಎಂಬುದನ್ನು ನಂಜುಂಡಸ್ವಾಮಿ ಅವರ ಚಿಂತನೆಗಳಿಂದ ಗ್ರಹಿಸಬಹುದು.

ವಿದೇಶೀ ರಾಷ್ಟ್ರಗಳ ನಿಯಮಾನುಸಾರ ಕೈಗಾರಿಕಾ ಯೋಜನೆಯನ್ನು ಕೈಗೊಂಡಿದ್ದಕ್ಕಾಗಿ ಕೇಂದ್ರ ಸರ್ಕಾರವನ್ನು ನಂಜುಂಡಸ್ವಾಮಿ ಅವರು ಟೀಕಿಸಿದರು. ಆದ್ದರಿಂದ ಭಾರತದ ಕೈಗಾರಿಕೆಗಳು ವಿಲಾಸಿ ಸರಕುಗಳ ಉತ್ಪಾದಕರ ಮಟ್ಟಕ್ಕೆ ಇಳಿದಿವೆ. ಆದರೂ ಇದರಿಂದ ಸರ್ಕಾರ ಪಾಠ ಕಲಿತಿಲ್ಲ. ಈಗ ಅದು ಗ್ಯಾಟ್ ಒಪ್ಪಂದಕ್ಕೆ ಸಹಿ ಹಾಕುವ ಮೂಲಕ ಕೃಷಿಯನ್ನು ಅದೇ ನೀರಿಗೆ ತಳ್ಳುತ್ತಿದೆ. ಅದರ ಮೂಲಕ ಭಾರತದ ರೈತರನ್ನು ಅದು ಗುಲಾಮರ ಮಟ್ಟಕ್ಕೆ ತಳ್ಳಿದೆ ಹಾಗೂ ಅಮೇರಿಕಾದ ಬಹುರಾಷ್ಟ್ರೀಯ ಕಂಪೆನಿಗಳನ್ನು ಅವರಿಗೆ ಬೀಜ ಸ್ವಾತಂತ್ರ್ಯವನ್ನು ಬಿಟ್ಟುಕೊಟ್ಟು ಹಾಗೂ ನಮ್ಮ ಮಾರುಕಟ್ಟೆಯನ್ನು ಅವರಿಗೆ ತೆರೆದಿಡುವ ಮೂಲಕ ನವವಸಾಹತುಶಾಹಿಗೆ ಅವಕಾಶ ನೀಡಿದೆ.

ನಂಜುಂಡಸ್ವಾಮಿ ಅವರು ಚಿಂತಿಸಿರುವಂತೆ ವಿಶ್ವ ವ್ಯಾಪಾರ ಸಂಘಟನೆ ತೃತೀಯ ಜಗತ್ತಿನ ವಿರುದ್ಧ ಮತ್ತು ಪಶ್ಚಿಮದ ಪರವಾಗಿ ಕೆಲಸ ಮಾಡುತ್ತದೆ. ಇದರಿಂದ ತೃತೀಯ ಜಗತ್ತು ಪಶ್ಚಿಮದ ಬಂಧಿತ ಶ್ರಮಿಕನಾಗಿರುತ್ತಾನೆ ಎಂಬ ಭೀತಿ ಸತ್ಯವಾಗಿದೆ. ವಿಶ್ವ ವಾಣಿಜ್ಯ ಸಂಘಟನೆ ರಾಷ್ಟ್ರದ ರಾಜಕಾರಣದಲ್ಲಿ ಅನುಕೂಲವಾಗಿರಬಹುದು. ಆದರೆ ಅದುವೇ ಇತರ ತತ್ತ್ವಗಳನ್ನು ತಳ್ಳಿಹಾಕುವ ಹಂತದಲ್ಲಿದೆ. ಆದ್ದರಿಂದ ಅಂಥ ಪೇಟೆಂಟ್‌ಗಳನ್ನು ರದ್ದು ಮಾಡಲು ಕ್ರಮ ಕೈಗೊಳ್ಳುವಂತೆ ಕೇಂದ್ರ ಸರ್ಕಾರವನ್ನು ಅವರು ಒತ್ತಾಯಿಸಿದರು. ಒಂದು ವೇಳೆ ವಿಶ್ವ ವಾಣಿಜ್ಯ ಸಂಘಟನೆ ಪೇಟೆಂಟ್ ನೀಡುವುದನ್ನು ನಿಲ್ಲಿಸದಿದ್ದರೆ ಅದು ವಿಶ್ವ ವಾಣಿಜ್ಯ ಸಂಘಟನೆಯಿಂದ ದೂರ ಇರಲು ಚಿಂತಿಸಬೇಕು ಎಂದಿದ್ದಾರೆ.

ಒಟ್ಟಿನಲ್ಲಿ ಹೇಳುವುದಾದರೆ ನಂಜುಂಡಸ್ವಾಮಿ ಅವರು ಸೈದ್ಧಾಂತಿಕವಾಗಿ ಮತ್ತು ಪ್ರಾಯೋಗಿಕವಾಗಿ ಬಹುರಾಷ್ಟ್ರೀಯ ಕಂಪೆನಿಗಳನ್ನು ದಾಳಿ ನಡೆಸಿ ಹಾಗೆಯೇ ಅವುಗಳನ್ನು ನಾಶಪಡಿಸಲು ಪ್ರೇರಣೆ ನೀಡಿದ್ದರು. ಇನ್ನೊಂದೆಡೆ ರೈತರ ಹಕ್ಕುಗಳನ್ನು ರಕ್ಷಿಸಲು ಪ್ರಯತ್ನಿಸಿದರು. ಅವರು ತಮ್ಮ ಚಳವಳಿಗಳಿಗೆ ಚಿಂತನಾ ವರ್ಗವನ್ನು ಬಳಸಿಕೊಂಡಿದ್ದರು. ಪ್ರಸ್ತುತ ಸಂದರ್ಭದಲ್ಲಿ ಆ ಚಿಂತನಾ ವರ್ಗ ತನ್ನ ವಿಜಯದ ಹಾದಿಯಲ್ಲಿ ಬಹಳಷ್ಟು ದೂರ ಸಾಗಬೇಕಾಗಿದೆ. ಮುಖ್ಯವಾಗಿ ಕೃಷಿಯನ್ನು ವಿಶ್ವ ವಾಣಿಜ್ಯ ಸಂಸ್ಥೆಯ ವ್ಯಾಪ್ತಿಯಿಂದ ಹೊರ ತಂದು ಭಾರತದ ರೈತರನ್ನು ರಕ್ಷಣೆ ಮಾಡಬೇಕಾಗಿದೆ. ಹೊಸ ಆರ್ಥಿಕ ನೀತಿಯಿಂದ ಬೌದ್ಧಿಕ ಸನ್ನದು, ಬೀಜ ಸ್ವಾತಂತ್ರ್ಯ, ಸಸ್ಯ ಸಂಪತ್ತಿನ ಸನ್ನದು, ಆಹಾರ ಭದ್ರತೆ, ದೇಶದ ಸಾರ್ವಭೌಮತ್ವವನ್ನು ಕಳೆದುಕೊಳ್ಳುತ್ತಿದ್ದೇವೆ. ಆದ್ದರಿಂದ ನಾವು ಬೇರೆಯವರ ಗುಲಾಮರಾಗಿ ನಿಲ್ಲದೆ ವೈಯಕ್ತಿಕ ಮತ್ತು ಸಮುದಾಯ ಹಕ್ಕುಗಳನ್ನು ರಕ್ಷಿಸಿಕೊಂಡು ಹೊರದೇಶಗಳ ದಾಸ್ಯದಿಂದ ಮುಕ್ತರಾಗಿ ಸಾರ್ವಭೌಮ ಭಾರತ ನಿರ್ಮಾಣ ಮಾಡಲು ಎರಡನೇ ಸ್ವಾತಂತ್ರ್ಯ ಹೋರಾಟ ಪ್ರಾರಂಭವಾಗಬೇಕಿದೆ ಎಂದಿದ್ದಾರೆ.

೫.೨. ಜೈವಿಕ ತಂತ್ರಜ್ಞಾನ

ಆಹಾರ ಸರಪಳಿಯ ಮೊದಲ ಕೊಂಡಿ ಬೀಜ. ೫೦೦೦ ವರ್ಷಗಳಿಂದ ರೈತರು ಬೀಜಗಳನ್ನು ಉತ್ಪಾದಿಸಿ, ಶೇಖರಿಸಿ, ಆಯ್ದು ಬಿತ್ತುತ್ತಿದ್ದರು. ಆಹಾರ ಬೆಳೆಗಳ ಜೈವಿಕ ವೈವಿಧ್ಯ ಹಾಗೂ ಸ್ವಯಂ ಪುನರುತ್ಪಾದನೆಯ ಮೂಲವಾದ ಜರ್ಮ್‌ಪ್ಲಾಸಂ (ಜೀವದ್ರವ್ಯ) ತೃತೀಯ ಜಗತ್ತಿನ ರೈತರ ನಿಯಂತ್ರಣದಲ್ಲಿತ್ತು. ಹಸಿರು ಕ್ರಾಂತಿಯೊಂದಿಗೆ ಇವೆಲ್ಲವೂ ಬದಲಾಯಿತು. ಬೀಜ ಹಾಗೂ ರಾಸಾಯನಿಕಗಳು ಹಸಿರು ಕ್ರಾಂತಿಯ ಎರಡು ಮುಖ್ಯ ಒಳಸುರಿಗಳಾಗಿವೆ. ಇದರ ಕೇಂದ್ರದಲ್ಲಿದ್ದದು ಹೊಸ ವಿಧದ ಪವಾಡ ಸದೃಶ ಬೀಜಗಳ ಜೈವಿಕ ತಂತ್ರಜ್ಞಾನ. ಇವು ಆಹಾರ ಉತ್ಪಾದನೆ ಹಾಗೂ ಆಹಾರ ವ್ಯವಸ್ಥೆ ಮೇಲಿನ ನಿಯಂತ್ರಣವನ್ನು ಸಂಪೂರ್ಣವಾಗಿ ಬದಲಿಸಿದವು. ನಾರ್ಮನ್ ಬೋರ್ಲಾಗ್‌ಗೆ ನೊಬೆಲ್ ಪ್ರಶಸ್ತಿ ಗಳಿಸಿಕೊಟ್ಟ ಈ ಬೀಜಗಳು ತೃತೀಯ ಜಗತ್ತಿನೆಲ್ಲೆಡೆ ತೀವ್ರ ವೇಗದಲ್ಲಿ ಹರಡಿ, ಹೊಸ ವಾಣಿಜ್ಯೀಕರಣದ ಬೀಜ ಬಿತ್ತಿದವು. ಜೈವಿಕ ತಂತ್ರಜ್ಞಾನದಿಂದ ಬೀಜ ಮತ್ತು ರಾಸಾಯನಿಕಗಳು ಬಹುರಾಷ್ಟ್ರೀಯ ಸಂಸ್ಥೆಗಳ ಕೈವಶವಾಗಿವೆ. ಹೀಗೆ ಭಾರತದ ಕೃಷಿಯ ಮೇಲೆ ಘೋರ ಪರಿಣಾಮವುಳ್ಳ ಹೊಸ ತಂತ್ರಜ್ಞಾನವನ್ನು ತರುವ ದೊಡ್ಡ ಪ್ರಯತ್ನವೇ ಜೈವಿಕ ತಂತ್ರಜ್ಞಾನ ಆಗಿದೆ.

ಜೈವಿಕ ತಂತ್ರಜ್ಞಾನ (BIO-TECHNOLOGY) ಎಂದರೆ ಬೇರೆ ಬೇರೆ ಜಾತಿಯ ತಳಿಗಳ ವಂಶವಾಹಿಯನ್ನು ಬೆರೆಸಿ ಅಧಿಕ ಆಹಾರ ಉತ್ಪಾದನೆ ಮಾಡಬಹುದೆಂದು ಹೇಳಿಕೊಳ್ಳುವ ತಂತ್ರಜ್ಞಾನ. ಜೈವಿಕ ತಂತ್ರಜ್ಞಾನ ಬೀಜಗಳ ಮೇಲೆ ನಿಯಂತ್ರಣ ಸಾಧಿಸಲು ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಅನುವು ಮಾಡಿಕೊಟ್ಟ ಈ ತಂತ್ರಜ್ಞಾನ ಆಹಾರ ಉತ್ಪಾದನೆಯಲ್ಲಿ ಕಾರ್ಪೋರೇಟ್ ನಿಯಂತ್ರಣದ ಹೊಸ ಯುಗದ ಸೃಷ್ಟಿಗೆ ಕಾರಣವಾಯಿತು. ''ಜೈವಿಕ ತಂತ್ರಜ್ಞಾನದ ಸಂಶೋಧನೆಯ ದಿಕ್ಕನ್ನು ವಿಶ್ವವಿದ್ಯಾಲಯಗಳು ನಿರ್ಧರಿಸುತ್ತಿಲ್ಲ. ಬದಲಿಗೆ ಅದನ್ನು

ನಿರ್ಧರಿಸುತ್ತಿರುವುದು ೩೫೦ ಕ್ಕೂ ಹೆಚ್ಚು ಸಣ್ಣ ಹಾಗೂ ದೊಡ್ಡ ಬಹುರಾಷ್ಟ್ರೀಯ ಸಂಸ್ಥೆಗಳ ಕೂಟ. ಜೈವಿಕ ತಂತ್ರಜ್ಞಾನ ಸಂಸ್ಥೆಗಳು ಬೀಜೋತ್ಪಾದನೆ ಸಂಸ್ಥೆಗಳೊಡನೆ ಒಂದಾಗಿಬಿಟ್ಟಿವೆ. ಈ ಬೀಜೋತ್ಪಾದನಾ ಸಂಸ್ಥೆಗಳೇ ಗೊಬ್ಬರ ಕೀಟನಾಶಕಗಳನ್ನೂ ತಯಾರಿಸುತ್ತವೆ. ಹೊಸ ಬೀಜಗಳು ಡೋ, ಡ್ಯೂಪಾಂಟ್, ಎಲಿಲಿಲಿ, ಎಕ್ಸಾನ್, ಮರ್ಕ್, ಮಾನ್ಸಾಂಟೋ, ಫೀಜರ್, ಆಪ್‌ಜಾನ್ ಇತ್ಯಾದಿ ಹಳೆಯ ಕಾರ್ಪೋರೇಟ್ ಸಂಸ್ಥೆಗಳಿಂದಲೇ ಬರುತ್ತವೆ.''[೧೫] ಈ ಎಲ್ಲಾ ಕಂಪೆನಿಗಳು ಹಿಂದೆ ಬ್ರಿಟಿಷರ ಈಸ್ಟ್ ಇಂಡಿಯಾ ಕಂಪೆನಿ ಅನುಸರಿಸಿದ ಸಂಪ್ರದಾಯವನ್ನೇ ಮತ್ತೊಮ್ಮೆ ಮುಂದುವರಿಸುತ್ತಿವೆ.

೧೯೬೫ ರಿಂದೀಚೆಗೆ "ಅಧಿಕ ಇಳುವರಿ ಮಿಶ್ರತಳಿ"ಗಳ ಮೂಲಕ ಉತ್ಪಾದನೆ ಹೆಚ್ಚಿಸುವ ಆ ಮೂಲಕ ಆದಾಯ ಹೆಚ್ಚಿಸಿಕೊಳ್ಳುವ ಹುಚ್ಚಿನಿಂದಾಗಿ ಈಗಾಗಲೇ ನಾವು ಕಾಪಾಡಿಕೊಂಡಿದ್ದ 'ಬೀಜ ಸ್ವಾತಂತ್ರ್ಯ' ಮತ್ತು ಆ ಮುಖೇನ 'ಒಕ್ಕಲುತನದ ಸ್ವಾತಂತ್ರ್ಯ'ವನ್ನು ಕಳೆದುಕೊಂಡಿದ್ದೇವೆ. ರೋಗಗಳೊಂದಿಗೆ ತಯಾರಿಸಿದ ಕಂಪೆನಿ ಬೀಜಗಳು ಮತ್ತು ಈ ರೋಗಗಳ ನಿವಾರಣೆಗೆ ಬೇಕಾದ ಕೀಟನಾಶಕ ರಾಸಾಯನಿಕಗಳಿಗೆ ಈಗಾಗಲೇ ಸಾಕಷ್ಟು ಗುಲಾಮರನ್ನಾಗಿ ಮಾಡಿವೆ. ನಮ್ಮ ದೇಶೀಯ ತಳಿಗಳನ್ನು ಬಿತ್ತದೆಯೇ ನೂರಾರು ತಳಿಗಳನ್ನು ಕಳೆದುಕೊಳ್ಳುವಂತೆ ಮಾಡಿವೆ. ಇದಕ್ಕೆಲ್ಲ ಮೂಲ ಕಾರಣ ವಿಶ್ವ ವಾಣಿಜ್ಯ ಸಂಸ್ಥೆಯ 'ಬೌದ್ಧಿಕ ಹಕ್ಕುಗಳ ನಿಯಮ'ಗಳು ಎನ್ನುವ ಪ್ರತಿರೋಧದ ಹಿನ್ನೆಲೆಯಲ್ಲಿ ನಂಜುಂಡಸ್ವಾಮಿ ಅವರ ಚಿಂತನಾ ಕ್ರಮವನ್ನು ಗಮನಿಸಬೇಕು.

ಬೀಜ ಕಂಪೆನಿಗಳು ತಾವು ತಾಯರಿಸಿದ ಬಿತ್ತನೆ ಬೀಜಗಳಿಗೆ ಬೌದ್ಧಿಕ ಹಕ್ಕು (ಪೇಟೆಂಟ್) ಪಡೆಯುತ್ತವೆ. ಇದರಿಂದಾಗಿ ರೈತರು ಮತ್ತೆ ಈ ಬೀಜಗಳನ್ನು ಮುಂದಿನ ಬೆಳೆಗೆ ಬಳಸುವಂತಿಲ್ಲ. ಬಳಸಿದರೆ ದಂಡ ತೆರಬೇಕಾಗುತ್ತದೆ. ಕಂಪೆನಿ ಬೀಜದ ಸೋಂಕು ರೈತರ ತಳಿಯ ಬೆಳೆಗಳಲ್ಲಿ ಕಂಡಾಗಲೂ ಕಂಪೆನಿಗಳು ದಂಡ ಹಾಕಿದ ನಿದರ್ಶನಗಳು ಈಗಾಗಲೇ ಬೇರೆ ದೇಶಗಳಲ್ಲಿ ನಡೆದಿವೆ. ಪ್ರತಿ ಬೆಳೆಗೂ ಕಂಪೆನಿ ಬೀಜಗಳಿಗೇ ಮೊರೆಹೋಗುವ ದುಃಸ್ಥಿತಿ ಬರುತ್ತದೆ. ಜೊತೆಗೆ ರೈತರ ತಳಿಗಳಿಂದ ಕಂಪೆನಿ ಬೀಜದ ಬೆಳೆಗಳಿಗೆ ಸೋಂಕು ತಗಲಬಾರದೆಂಬ ಕಾನೂನು ಆಗಲಿವೆ. ''ರೈತರ ತಳಿಗಳನ್ನು ಈಗಾಗಲೇ ಜರ್ಮನಿಯಲ್ಲಿ ನಿಷೇಧಿಸಲಾಗಿದೆ. ರೈತರೇ ತಯಾರುಮಾಡಿಕೊಂಡ ಬೀಜಗಳಿಗೆ ಫ್ರಾನ್ಸ್ ದೇಶದಲ್ಲಿ ತೆರಿಗೆ ಹಾಕಿದ ನಿದರ್ಶನಗಳನ್ನು ನಂಜುಂಡಸ್ವಾಮಿ ಅವರು ಉದಾಹರಣೆ ಮೂಲಕ ಪ್ರಸ್ತುತ ಪಡಿಸಿದ್ದಾರೆ.''[೧೬] ಅವರು ''ರಾಯಚೂರು ಹಾಗೂ ಬಳ್ಳಾರಿ ಜಿಲ್ಲೆಗಳಲ್ಲಿ ಜೈವಿಕ ತಂತ್ರಜ್ಞಾನದ ಬೀಜಗಳನ್ನು ಬಳಸಿ ಬೆಳೆದ ಬೆಳೆಯನ್ನು ಕಿತ್ತು ಹಾಕಿ ಬೆಂಕಿ ಹಚ್ಚುವುದುರ ಮೂಲಕ ಪ್ರಯೋಗಾತ್ಮಕ (ಭೂ-ಭಾಗ) ಬಯಲನ್ನು ನಾಶಪಡಿಸಿದರು. ಅವರು ಮಾನ್ಸಾಂಟೋ ಕಂಪೆನಿಯನ್ನು ಅದೇ ಕಾರ್ಯಕ್ಕಾಗಿ "ಆಪರೇಷನ್ ಕ್ರಿಯೇಷನ್ ಮಾನ್ಸಾಂಟೋ" ಎಂಬ ಹೆಸರಿನಲ್ಲಿ ದಾಳಿ ನಡೆಸಿ ನಾಶಪಡಿಸಿದರು.''[೧೭]

ಕುಲಾಂತರಿ (ಟರ್ಮಿನೇಟರ್) ಬೀಜ ತಂತ್ರಜ್ಞಾನ

ಬೇರೆ ಬೇರೆ ಜಾತಿಯ ತಳಿಗಳ ವಂಶವಾಹಿಯನ್ನು ಬೆರೆಸಿ ಅಧಿಕ ಆಹಾರ ಉತ್ಪಾದನೆ ಮಾಡಬಹುದೆಂದು ಹೇಳುವ ತಂತ್ರಜ್ಞಾನ. ಕೆಲವು ಬಾರಿ ಬೇರೆ ಬೇರೆ ಕುಲಗಳಿಗೆ ಸೇರಿದ ಸಸ್ಯಗಳ ವಂಶವಾಹಿಯ ಬೆರಕೆ ಹಾಗೂ ಕೆಲವು ಬಾರಿ ಸಸ್ಯಗಳಿಗೆ ಪ್ರಾಣಿಗಳ ವಂಶವಾಹಿ ಬೆರೆಸುವ ತಂತ್ರಜ್ಞಾನ ಇದು. ಇವುಗಳನ್ನು 'ಕುಲಾಂತರಿ ಬೀಜ' ಗಳೆಂದು ಕರೆಯುತ್ತಾರೆ.

ಬಹುರಾಷ್ಟ್ರೀಯ ಬೀಜದ ಕಂಪೆನಿಗಳು ಭಾರತದಲ್ಲಿ ಮಾರಾಟ ಮಾಡಲು ಪ್ರಯತ್ನಿಸಿರುವುದು ಎರಡು ಗುಣಗಳಿರುವ ಕುಲಾಂತರಿ ಬೀಜಗಳನ್ನು. ಅವುಗಳೆಂದರೆ

೧. ಕೀಟ ನಿರೋಧಕ ತಳಿಗಳು

೨. ಕಳೆ ನಿರೋಧಕ ತಳಿಗಳು

ಕೀಟ ನಿರೋಧಕ ತಳಿಯ ಬಳಕೆಯಿಂದಾಗುವ ಪರಿಣಾಮಗಳು

ಬೀಜ ಕಂಪೆನಿಗಳು (ಮಾನ್ಸಾಂಟೋ ಕಂಪೆನಿ) ಭಾರತದಲ್ಲಿ ಪ್ರಯೋಗ ಮಾಡುತ್ತಿರುವ ಕೀಟ ನಿರೋಧಕ ತಳಿ ಬಿ.ಟಿ (BT) ತಂತ್ರಜ್ಞಾನದ ತಳಿ ''ಬಿ.ಟಿ (BT) ಎಂದರೆ 'ಬ್ಯಾಸಿಲಸ್ ತುರಿಂಗಿಯೆನ್ಸಿಸ್'. ಇದು ಒಂದು ಸೂಕ್ಷ್ಮಜೀವಿ, ಇದು ಜೀವಿ ಕೀಟಗಳನ್ನೇ ನಾಶ ಮಾಡುವ ವಿಷವನ್ನು ಹೊಂದಿರುವ ಸೂಕ್ಷ್ಮಪ್ರಾಣಿ''[೧೮]. ಇದನ್ನು ಹತ್ತಿ ಬೀಜದೊಳಗೆ ಜೈವಿಕ ತಂತ್ರಜ್ಞಾನದ ಮೂಲಕ ಅಳವಡಿಸುವುದರಿಂದ ಹತ್ತಿಯ ಗಿಡ ಬೆಳೆಯುತ್ತಾ ತನ್ನ ಎಲ್ಲಾ ಭಾಗಗಳಲ್ಲಿ ಕೀಟನಾಶಕ ವಿಷವನ್ನು ಉತ್ಪಾದಿಸುತ್ತದೆಯಾದ್ದರಿಂದ ಇಂಥ ಗಿಡದ ಯಾವುದೇ ಭಾಗವನ್ನು ಹತ್ತಿಯ ಕಾಯಿ ಕೊರೆಯುವ ಹುಳ ತಿಂದ ಕೂಡಲೇ ಸಾಯುತ್ತದೆ. ರೈತರು ಈ ಕೀಟವನ್ನು ನಾಶ ಮಾಡಲು ಖರ್ಚು ಮಾಡಬೇಕಾಗಿಲ್ಲ. ಕಡಿಮೆ ಖರ್ಚಿನಲ್ಲಿ ಹೆಚ್ಚು ಇಳುವರಿ ಬರುವ ಹತ್ತಿ ತಳಿ ಇದೆಂದು ಕಂಪೆನಿಯವರ ಪ್ರಚಾರ. ಅಲ್ಲದೇ ಕೆಲ ರೈತರಿಗೆ ಆಮಿಷ ಒಡ್ಡಿ ತಮ್ಮ ಕಂಪೆನಿಯ ಹೊಗಳು ಭಟ್ಟರನ್ನಾಗಿಸಿಕೊಂಡಿದೆ. ಬಿ.ಟಿ ಹತ್ತಿಯ ಬಗ್ಗೆ ರೈತ ಸಂಘದವರು ತಮ್ಮ ವೈಯಕ್ತಿಕ ಲಾಭಕ್ಕಾಗಿ ಮಾತ್ರ ವಿರೋಧಿಸುತ್ತಿಲ್ಲ. ಇದರಲ್ಲಿ ಸಾರ್ವಜನಿಕರ ಆರೋಗ್ಯದ ಹಿತದೃಷ್ಟಿಯೂ ಇದೆ ಎಂಬುದನ್ನು ನಾವು ಮರೆಯುವಂತಿಲ್ಲ.

ನಂಜುಂಡಸ್ವಾಮಿ ಅವರು ಚಿಂತಿಸಿರುವಂತೆ ಬಿ.ಟಿ ತಳಿಯ ಬಳಕೆಯಿಂದಾಗುವ ಪರಿಣಾಮಗಳನ್ನು ಹಂತ ಹಂತವಾಗಿ ವಿವರಿಸಿದ್ದಾರೆ. ಮೊದಲನೆಯದಾಗಿ ಈ ಹತ್ತಿಕಾಯಿ ಕೊರೆಯುವ ಹುಳುಗಳು ಈ ಗಿಡದಲ್ಲಿರುವ ವಿಷಕ್ಕೆ ನಿರೋಧಕ ಶಕ್ತಿ ಬಳಸಿಕೊಂಡು ಬಿಡುತ್ತವೆ (ಮಲೇರಿಯಾ ಸೊಳ್ಳೆಗಳು ಡಿಡಿಟಿಗೆ ನಿರೋಧಕ ಶಕ್ತಿ ಬೆಳೆಸಿಕೊಂಡಿರುವ ರೀತಿಯಲ್ಲಿ) ಅನಂತರ ಅವು ಸಾಯುವುದೇ ಇಲ್ಲ. ಜೊತೆಗೆ ಬೇರೆ ಕೀಟಗಳೊಂದಿಗಿನ ಲೈಂಗಿಕ ಸಂಪರ್ಕದಿಂದಾಗಿ ಕೀಟನಾಶಕ ನಿರೋಧಕ ಶಕ್ತಿಯಿರುವ ಮರಿಗಳನ್ನೇ ಹುಟ್ಟಿಸುತ್ತವೆ. ಈ ಕೀಟನಾಶಕ

ನಿರೋಧಕ ಶಕ್ತಿಯಿರುವ ಸಂತಾನಾಭಿವೃದ್ಧಿಯಿಂದಾಗಿ, ನಂತರ ಎಷ್ಟೇ ಕೀಟನಾಶಕ ಬಳಸಿದರೂ ಬೆಳೆ ಉಳಿಸಿಕೊಳ್ಳಲು ಸಾಧ್ಯವಿಲ್ಲ (ಆಂಧ್ರಪ್ರದೇಶದಲ್ಲಿ ಆದದ್ದು ಹೀಗೆಯೇ. ಆಲ್ಲಿಯ ೫೦೦ ೬೦೦ ಹತ್ತಿ ಬೆಳೆಗಾರರು ಆತ್ಮಹತ್ಯೆ ಮಾಡಿಕೊಂಡದ್ದು).

ಎರಡನೆಯದಾಗಿ ಈ ಬಿಟಿ ವಿಷ ಕೇವಲ ಹತ್ತಿಕಾಯಿ ಕೊರೆಯುವ ಹುಳವನ್ನು ಸಾಯಿಸಲು ನಿರ್ದಿಷ್ಟವಾಗಿ ತಯಾರಾದದ್ದೇನಲ್ಲ. ಇದು ಎಲ್ಲ ಜೀವಿಗಳನ್ನು ಹಾಗೂ ಇತರ ಕೀಟಗಳನ್ನು ಕೊಲ್ಲುವಂಥ ವಿಷ. ಹಾಗೆಯೇ ಈ ವಿಷವು ಗಿಡದ ಎಲ್ಲ ಭಾಗಗಳಲ್ಲಿ ಉತ್ಪಾದನೆಯಾಗುವುದರಿಂದ, ಬೇರುಗಳ ಮೂಲಕ ಹಾಗೂ ನೆಲಕ್ಕೆ ಉದುರುವ ಎಲೆಗಳಲ್ಲಿರುವ ವಿಷ ಮಣ್ಣಿನೊಂದಿಗೆ ಬೆರೆತು ಮಣ್ಣಿನಲ್ಲಿರುವ ಭೂಮಿಯ ಫಲವತ್ತತೆಗೆ ಅತ್ಯವಶ್ಯಕವಾದ ಸೂಕ್ಷ್ಮಾಣುಜೀವಿಗಳನ್ನು ಮತ್ತು ಎಲ್ಲ ರೀತಿಯ ಬೂಷ್ಟ್ (Fungi)ಗಳನ್ನು ಸಾಯಿಸುತ್ತದೆ. ಇದರಿಂದಾಗಿ ಭೂಮಿಯ ಫಲವತ್ತತೆ ಬಹುಬೇಗ ನಾಶವಾಗುತ್ತದೆ. ಮನುಷ್ಯ ಸತ್ತರೆ ಮಣ್ಣಿಗೆ ಹಾಕಿ ಮುಚ್ಚುತ್ತಾರೆ. ಆದರೆ ಫಲವತ್ತಾದ ಮಣ್ಣು ಇಂದು ಸಾಯಿತ್ತಿದೆ. ಮಣ್ಣಿನ ಸಾವಿಗೆ ಹಸಿರು ಕ್ರಾಂತಿಯ ಈ ಬಿಟಿ ತಂತ್ರಜ್ಞಾನವೇ ಕಾರಣ. ಸಾವಯವ ಕೃಷಿ ಮೂಲಕ ಎಚ್ಚರದಿಂದ ಕಾಯ್ದುಕೊಂಡಿದ್ದ ಮಣ್ಣು ಪಾಶ್ಚಿಮಾತ್ಯ ವೈಜ್ಞಾನಿಕ ದಾರ್ಷ್ಟ್ಯಕ್ಕೆ ಬಲಿಯಾಗುತ್ತಿದೆ ಎಂದು ರೈತರಲ್ಲಿ ಜಾಗೃತಿ ಮೂಡಿಸುವಲ್ಲಿ ನಂಜುಂಡಸ್ವಾಮಿ ಅವರು ಶ್ರಮಿಸಿದರು.

ಮೂರನೆಯದಾಗಿ ಈ ಗಿಡದ ವಿಷ ಬೇರೆ ಎಲ್ಲ ಕೀಟಗಳನ್ನು ತಿನ್ನುವ ಮಿತ್ರ ಕೀಟಗಳನ್ನು ಸಾಯಿಸುವುದರಿಂದ ಬೆಳೆಗಳಿಗೆ ಬೇರೆ ಬೇರೆ ರೋಗಗಳು ತಗುಲಿಕೊಳ್ಳುತ್ತವೆ. ಹತ್ತಿಯಲ್ಲದೆ ಬೇರೆ ಬೆಳೆಗಳಿಗೂ ಇದರಿಂದಾಗಿ ರೋಗಗಳು ಹೆಚ್ಚಾಗುತ್ತವೆ. ಅಷ್ಟೇ ಅಲ್ಲದೆ ಕೀಟಗಳನ್ನು ತಿನ್ನುವ ಪಕ್ಷಿಗಳೂ ಈ ವಿಷದಿಂದಾಗಿ ಸತ್ತಿರುವುದೂ ಗಮನಕ್ಕೆ ಬಂದಿದೆ. ಈ ಕಾರಣದಿಂದಲೂ ಬೆಳೆರೋಗಗಳು ಹೆಚ್ಚಾಗುತ್ತವೆ.

ಇವೆಲ್ಲಕ್ಕಿಂತ ಬಿಟಿ ಹತ್ತಿ ತಳಿಯಿಂದಾಗುವ ಹಾನಿಯೇನೆಂದರೆ, ಈ ತಳಿಯ ಪರಾಗ ಸುಮಾರು ಎರಡು ಕಿಲೋಮೀಟರ್‌ವರೆಗೂ ಗಾಳಿಯಲ್ಲಿ ಪ್ರಯಾಣ ಮಾಡುತ್ತದೆ. ನಮ್ಮ ಎಲ್ಲಾ ದೇಶೀಯ ತಳಿಗಳಿಗೂ ಇದರ 'ಪರಾಗ ಮಾಲಿನ್ಯ'ದಿಂದಾಗಿ ಅದರಲ್ಲಿರುವ ಎಲ್ಲಾ ಗುಣಗಳೂ ವರ್ಗಾವಣೆಯಾಗಿ ಕ್ರಮೇಣ ನಮ್ಮ ಎಲ್ಲಾ ದೇಶೀಯ ತಳಿಗಳೂ ನಾಶವಾಗುವ ಅಂಶ ತುಂಬಾ ಗಮನಾರ್ಹವಾದದು. ನಮ್ಮ ಜೈವಿಕ ವೈವಿಧ್ಯತೆಯಂಥ ಅಮೂಲ್ಯ ಸಸ್ಯ ಸಂಪತ್ತು ಶಾಶ್ವತವಾಗಿ ನಾಶವಾಗುತ್ತಿದೆ. ಆದ್ದರಿಂದ ರೈತರು ಬಿಟಿ ತಂತ್ರಜ್ಞಾನದಿಂದ ತಯಾರಾದ ಬೀಜಗಳನ್ನು ಬಳಸದೆ ದೇಶೀಯ ತಳಿಗಳನ್ನು ಬಳಸಬೇಕೆಂದು ಅರಿವು ಮೂಡಿಸಲು ನಂಜುಂಡಸ್ವಾಮಿ ಅವರು ಪ್ರಯತ್ನಿಸಿರುವುದು. ರೈತರ ಬಗೆಗೆ ಇರಿಸಿದ್ದ ಕಾಳಜಿಯನ್ನು ಬಿಂಬಿಸುತ್ತದೆ. ಆದರೂ ''೨೦೧೦ ರವೇಳೆಗೆ ಬಿಟಿ ಟಮೋಟೊ ಬೆಳೆಯನ್ನು ಅಭಿವೃದ್ಧಿಪಡಿಸಲು ಕೃಷಿ ವಿಶ್ವವಿದ್ಯಾಲಯಗಳು ಮುಂದಾಗಿವೆ.''[೯] ಬಿಟಿ ಹತ್ತಿಯಿಂದ ಆಗುತ್ತಿರುವ ಪರಿಣಾಮಗಳನ್ನು ಗಮನಿಸಿದ್ದರೂ ಕುಲಾಂತರಿ ತಳಿಗಳ ಅಭಿವೃದ್ಧಿಗೆ ಸರ್ಕಾರ ಪ್ರಯತ್ನಿಸುತ್ತಿರುವುದು, ಖಂಡನಾರ್ಹವಾದುದು.

ಕಳೆ ನಿರೋಧಕ ತಳಿಗಳಿಂದಾಗುವ ಹಾನಿಗಳು

''ಭಾರತದಲ್ಲಿ ಈಗಾಗಲೇ ಬೀಜದ ಕಂಪೆನಿಗಳು (ಮಾನ್ಸಾಂಟೋ) ಮಾರಾಟ ಮಾಡುತ್ತಿರುವ ಕಳೆ ನಿರೋಧಕ ತಳಿಯೆಂದರೆ 'ರೌಂಡ್ ಅಪ್ ರೆಡಿ' (Round UP Ready)ಎನ್ನುವ ತಳಿಗಳು. ರೌಂಡ್ ಅಪ್ ರೆಡಿ ಎನ್ನುವುದು ಈ ಕಂಪೆನಿ ತಯಾರು ಮಾಡಿರುವ ಕಲೆ ನಾಶಕ''[೩೭]. ಈ ಕಳೆನಾಶಕ ಉಪಯೋಗಿಸುವುದರಿಂದ ಕಂಪೆನಿ ಕೊಡುವ 'ರೌಂಡ್ ಅಪ್ ರೆಡಿ' ತಳಿಯೊಂದನ್ನು ಬಿಟ್ಟು ಮಿಕ್ಕೆಲ್ಲ ಕಳೆಗಳೂ ನಾಶವಾಗುತ್ತವೆ. ಈ ಕಾರಣ ರೈತರು ಕಳೆ ತೆಗೆಯುವ ಖರ್ಚಿನ ಉಳಿತಾಯವಾಗಿ ಕಡಿಮೆ ಖರ್ಚಿನಲ್ಲಿ ಹೆಚ್ಚು ಬೆಳೆ ತೆಗೆಯಬಹುದೆಂಬುದು ಈ ಕಂಪೆನಿಯ ಪ್ರಚಾರ.

ಆದರೆ ಈ ತಳಿಯ ಮತ್ತು ಕಳೆನಾಶಕದ ಬಳಕೆಯಿಂದಾಗುವ ಪರಿಣಾಮಗಳೇ ಬೇರೆ. ಅವುಗಳೆಂದರೆ ಇದು ಯಾವುದೇ ವಿಶಿಷ್ಟ ಕಳೆಗಳನ್ನು ನಾಶಮಾಡಲು ತಯಾರು ಮಾಡಿದ ರಾಸಾಯನಿಕ ಅಲ್ಲ. ಹೀಗಾಗಿ ಇದೇ ಕಂಪೆನಿ ತಯಾರು ಮಾಡಿದ ಈ ರಾಸಾಯನಿಕಕ್ಕೆ ನಿರೋಧಕ ಶಕ್ತಿಯಿರುವ ತಳಿಗಳು ಮಾತ್ರ ಬದುಕುಳಿಯುತ್ತವೆಯೇ ಹೊರತು ಮಿಕ್ಕೆಲ್ಲ ಸಸ್ಯ ಸಂಪತ್ತು ಶಾಶ್ವತವಾಗಿ ನಾಶವಾಗುತ್ತವೆ. ಇದರಿಂದ ಭಾರತದ ದೇಶೀಯ ತಳಿಗಳೆಲ್ಲ ನಾಶವಾಗುತ್ತವೆಂದು ನಂಜುಂಡಸ್ವಾಮಿ ಅವರ ಅಭಿಪ್ರಾಯವಾಗಿದೆ.

ಹಾಗೆಯೇ ಈ 'ರೌಂಡ್ ಅಪ್' ರಾಸಾಯನಿಕ ಬಳಕೆಯಿಂದ ಮಣ್ಣಿನಲ್ಲಿರುವ ಎಲ್ಲ ಸೂಕ್ಷ್ಮಾಣುಗಳೂ ಸಾಯುತ್ತವೆ. ಎಲ್ಲ 'ಬೂಷ್ಟ್' (Fungi) ಸಾಯುತ್ತವೆ. ಹೀಗಾಗಿ ಮಣ್ಣಿನ ಫಲವತ್ತತೆ ಕಳೆದುಕೊಂಡು ಬರಡಾಗುತ್ತದೆ.

ವಂಶವಾಹಿ ಬೆರಕೆ ಆಹಾರ (Genetically Modified Food)ದಿಂದ ಮಾನವನ ಮೇಲೆ ಆಗುವ ಹಾನಿಗಳು:

ಅಧಿಕ ಇಳುವರಿ ಕಾರಣ ಕೊಟ್ಟು ಜೈವಿಕ ತಂತ್ರಜ್ಞಾನದ ಮೂಲಕ ವಂಶವಾಹಿ ವಿಕೃತ ತಳಿಗಳನ್ನು ತಯಾರಿಸಲಾಗುತ್ತಿದೆ. ಈ ತಂತ್ರಜ್ಞಾನದಲ್ಲಿ ಪ್ರಾಣಿಗಳ ವಂಶವಾಹಿಯನ್ನು ಸಸ್ಯಗಳಿಗೆ ಕೂಡಿಸುವುದು ಬಹುದೊಡ್ಡ ಕಾರ್ಯಕ್ರಮವಾಗಿದೆ. ಅದರಲ್ಲಿಯೂ ಸಸ್ತನಿ(Mammals)ಗಳ ವಂಶವಾಹಿಯನ್ನು ಹಾಗೂ ಮಾನವನ ವಂಶವಾಹಿಯನ್ನು ಕೊಡಿಸಿ ತಯಾರಿಸುವ ಸಸ್ಯದ ತಳಿಗಳು ಮಾರಾಟಕ್ಕೆ ಬಂದಿವೆ. ಇದಕ್ಕಿಂತ ದೊಡ್ಡ ಅಪಾಯ ಎಂದರೆ ಮಾನವನಿಗೆ ರೋಗ ತರುವ ರೋಗಾಣುಗಳನ್ನು ಕೂಡಿಸಿ ತಯಾರಿಸಿದ ಸಸ್ಯಗಳ ತಳಿಗಳೂ ಮಾರಾಟಕ್ಕೆ ಬರಲಿವೆ ಎಂದು ನಂಜುಂಡಸ್ವಾಮಿ ಅವರು ಹೇಳಿದ್ದಾರೆ.

ಇಂಥ ವಂಶವಾಹಿ ಬೆರಕೆ ಬೆಳೆಗಳಿಂದ ಬೆಳೆಯಲಾದ ವಂಶವಾಹಿ ವಿಕೃತ ಆಹಾರ ಸೇವನೆಯಿಂದ ಮಾನವನ ಆರೋಗ್ಯದ ಮೇಲಾಗುವ ದುಷ್ಪರಿಣಾಮಗಳೆಂದರೆ, ಮಾನವನ ಕರುಳಿನಲ್ಲಿರುವ ರಸಗಳಿಗೆ ಇಂಥ ಆಹಾರದಲ್ಲಿ ಬರುವ ಜೈವಾಂಶ (DNA)ಗಳನ್ನೆಲ್ಲ ಅರಗಿಸಿಕೊಳ್ಳುವ ಶಕ್ತಿಯಿಲ್ಲವೆಂಬುದು ಹಾಗೂ ಈ

ಹೊರಗಿನ ಜೈವಾಂಶಗಳು ಬದುಕುಳಿದು ಮಾನವನ ರಕ್ತ ಸಂಚಾರದೊಳಗೆ ಸೇರುತ್ತವೆ ಎನ್ನುವುದು ಗೊತ್ತಾಗಿದೆ. ಅಷ್ಟೇ ಅಲ್ಲದ ಇವು ಮಾನವನ ಹಾಗೂ ಪ್ರಾಣಿಗಳ ಗುಲ್ಮ ಮತ್ತು ಪಿತ್ತ ಜನಕಾಂಗಗಳನ್ನು ಪ್ರವೇಶಿಸುವುದರ ಜೊತೆಗೆ ಬಿಳಿ ರಕ್ತಕಣಗಳೊಳಕ್ಕೂ ಪ್ರವೇಶ ಮಾಡುತ್ತವೆ. ಇದರಿಂದಾಗಿ ವಿವಿಧ ರೀತಿಯ 'ಅಲರ್ಜಿನಿಕ್' (Allergenic) ಅಂದರೆ ತುರಿಕೆ ರೋಗಗಳು ಬರುತ್ತವೆ ಎಂಬ ಅಂಶಗಳು ಗಮನಾರ್ಹವಾದವು.

ರೋಗನಿರೋಧಕಗಳಿಗೆ ನಿರೋಧಕ ಶಕ್ತಿಯಿರುವ ವಂಶವಾಹಿಗಳು ಮಾನವನ ಕರುಳನ್ನು, ರಕ್ತ ಸಂಚಾರವನ್ನು, ಆ ಮೂಲಕ ಮಾನವನ ವಂಶವಾಹಿ ರಚನೆಯನ್ನೇ ಪ್ರವೇಶ ಮಾಡುತ್ತವೆ. ಮಾನವನಿಗೂ ಕೂಡ ರೋಗ ನಿರೋಧಕಗಳಿಗೆ ನಿರೋಧಕ (STEROID RESISTANCE) ಗುಣಗಳು ಮೈಗೂಡಿ ಎಲ್ಲ ರೀತಿಯ ರೋಗಗಳಿಗೆ ಆಹ್ವಾನ ನೀಡಿದಂತಾಗುತ್ತದೆ. ಇದು ಕ್ಯಾನ್ಸರ್ ರೋಗಕ್ಕೂ ಎಡೆಮಾಡಿಕೊಡುತ್ತದೆ.

ಇತ್ತೀಚೆಗೆ ''ಅಮೇರಿಕದಿಂದ ಬಂದಿರುವ ಒಂದು ವರದಿಯ ಪ್ರಕಾರ ಬಿಟಿ ತಂತ್ರಜ್ಞಾನದಿಂದ ತಯಾರಾದ ಮುಸುಕಿನ ಜೋಳವನ್ನು ತಿಂದರೆ ಗಂಡಸರಲ್ಲಿ ವೀರ್ಯಾಣುವಿನ ಚಟುವಟಿಕೆಯೇ ನಿಂತು ಹೋಗುತ್ತದೆ. ಸ್ತ್ರೀ ಗರ್ಭಿಣಿಯಾಗುವ ಅವಕಾಶವೇ ಇಲ್ಲವಾಗುತ್ತದೆ ಎಂದು ಸಾಬೀತು ಪಡಿಸಿದೆ.''[೨೦] ಆದ್ದರಿಂದ ಬಿಟಿ ತಳಿಗಳ ಬಗ್ಗೆ ಪ್ರಪಂಚದಾದ್ಯಂತ ವ್ಯಾಪಕ ಚರ್ಚೆ, ವಿರೋಧಗಳು ವ್ಯಕ್ತವಾಗುತ್ತಿವೆ. ಆಫ್ರಿಕಾ, ಜಿಂಬಾಬ್ವೆ, ಜಾಂಬಿಯಾದಂಥ ಹಿಂದುಳಿದಿರುವ ದೇಶಗಳು ಅಮೇರಿಕದಿಂದ ಆಹಾರದ ನೆರವನ್ನು ಪಡೆಯುತ್ತಿದ್ದು, ಬಿಟಿ ತಂತ್ರಜ್ಞಾನದಿಂದ ತಯಾರಾದ ಆಹಾರ ಧಾನ್ಯಗಳನ್ನು ತಿರಸ್ಕರಿಸಿವೆ. ಬಿಟಿ ಹತ್ತಿ ಅಮೇರಿಕದ ಕ್ಯಾಲಿಫೋರ್ನಿಯಾದಲ್ಲಿ ಯಶಸ್ವಿಯಾದರೆ ಟೆಕ್ಸಾಸ್‌ನಲ್ಲಿ ಉತ್ಪಾದನೆಯೇ ಇಲ್ಲವಾಗಿದೆ. ಈಗಾಗಲೇ ಇಂಡೋನೇಷಿಯಾದಲ್ಲಿನ ದೇಶೀಯ ತಳಿಗಿಂತ ಬಿಟಿ ಹತ್ತಿಯಿಂದ ಕಡಿಮೆ ಇಳುವರಿ ಬಂದಿದೆ. ಖರ್ಚು ಮಾತ್ರ ದುಬಾರಿಯಾಗಿದೆ. ಚೈನಾ, ಸ್ವಿಟ್ಜರ್‌ಲ್ಯಾಂಡ್ ಸರ್ಕಾರ ಬಿಟಿ ಪ್ರಯೋಗಗಳನ್ನು ಹತ್ತು ವರ್ಷ ಮುಂದೂಡಿದೆ. ಬಹುತೇಕ ರಾಷ್ಟ್ರಗಳು ಎಚ್ಚರಗೊಂಡಿದ್ದರ ಪರಿಣಾಮವಾಗಿ ಜೈವಿಕವಾಗಿ ಮಾರ್ಪಡಿಸಲಾದ ಕುಲಾಂತರಿ ಧಾನ್ಯಗಳ ಅಮೇರಿಕದ ರಫ್ತು ಮಾರುಕಟ್ಟೆ ಸರ್ವನಾಶವಾಗಿದೆ. ೧೯೯೭-೯೮ ರಲ್ಲಿ ೨.೮ ಮಿಲಿಯನ್ ಧಾನ್ಯವನ್ನು ಅಮೇರಿಕ ಯುರೋಪಿಯನ್ ಒಕ್ಕೂಟಕ್ಕೆ ರಫ್ತು ಮಾಡುತ್ತಿದ್ದುದು ೨೦೦೦-೦೧ರಲ್ಲಿ ಕೇವಲ ೬೩೦೦ ಮೆಟ್ರಿಕ್ ಟನ್‌ಗಳಿಗೆ ಇಳಿದಿದೆ.

ಬಿಟಿ ತಳಿಯ ವಿಚಾರ ಬರೀ ರೈತರ ಬಿತ್ತನೆ ಬೀಜ, ಗೊಬ್ಬರಕ್ಕೆ ಅಷ್ಟೇ ಸಂಬಂಧಿಸಿದ್ದಲ್ಲ. ಯಾಕೆಂದರೆ ರೈತ ಬೆಳೆದ ಧಾನ್ಯಗಳನ್ನು ಆತನೊಬ್ಬನೇ ಏನು ತಿನ್ನುವುದಿಲ್ಲ. ಆ ಕಾರಣ ಬಿಟಿ ತಂತ್ರಜ್ಞಾನವನ್ನು ಮುಖ್ಯವಾಗಿ ವಿರೋಧಿಸಬೇಕಾಗಿರುವುದು ಬಳಕೆದಾರರು. ಯಾಕೆಂದರೆ ಯೂರೋಪಿನ ದೇಶಗಳಲ್ಲಿ ಜೈವಿಕ ತಂತ್ರಜ್ಞಾನದಿಂದ ತಯಾರಾದ ಆಹಾರ ಪದಾರ್ಥಗಳನ್ನು ಅಂಗಡಿಗಳಲ್ಲಿ ಪ್ರತ್ಯೇಕವಾಗಿ ಮಾರಾಟ ಮಾಡಬೇಕು. ಅಲ್ಲಿ ತಮಗೆ ಇಷ್ಟವಿದ್ದವರು ಬೇಕಾದ ಆಹಾರವನ್ನು ಕೊಂಡುಕೊಳ್ಳುವ ವ್ಯವಸ್ಥೆ ಇದೆ. ಆದರೆ ಭಾರತದಂಥ ಅಭಿವೃದ್ಧಿಶೀಲ ದೇಶಗಳಲ್ಲಿ ಈ ಬಗೆಯ ಮಾರುಕಟ್ಟೆ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲು ಸಾಧ್ಯವೇ?

ಆದ್ದರಿಂದ ಬಳಕೆದಾರರನ್ನು ಬಿಟಿ ತಂತ್ರಜ್ಞಾನದ ಆಹಾರದ ಬಗೆಗೆ ಎಚ್ಚರಗೊಳಿಸಬೇಕೆಂದು ಪ್ರಯತ್ನಿಸಿದರೂ ಜನರಲ್ಲಿ ಎಷ್ಟೇ ಜಾಗೃತಿಯನ್ನು ನಂಜುಂಡಸ್ವಾಮಿ ಅವರು ಮೂಡಿಸಿದ್ದರೂ ಕೂಡ ರೈತರು ಹಣದ ಆಸೆಗಾಗಿ ಹಾಗೂ ಬಹುಬೇಗ ಆರ್ಥಿಕವಾಗಿ ಅಭಿವೃದ್ಧಿ ಸಾಧಿಬೇಕೆಂಬ ಉದ್ದೇಶದಿಂದ ಬಿಟಿ ತಂತ್ರಜ್ಞಾನದ ಬೆಳೆಗಳ ಮೇಲಿನ ಒಲವು ಹಾಗೆಯೇ ಮುಂದುವರಿಯುತ್ತಿರುವುದು ವಿಪರ್ಯಾಸದ ಸಂಗತಿ. ದಾವಣಗೆರೆ, ಬಳ್ಳಾರಿ, ಚಿತ್ರದುರ್ಗ ಜಿಲ್ಲೆಗಳಲ್ಲಿ ಬಿಟಿ ಹತ್ತಿ ತಳಿಗಳನ್ನು ಬಳಸಿ ಬೆಳೆಯಲಾಗಿದ್ದ ಬೆಳೆಯನ್ನು ನಂಜುಂಡಸ್ವಾಮಿ ಅವರ ನೇತೃತ್ವದಲ್ಲಿ ರೈತ ಸಂಘದವರು ಕಿತ್ತು ಸುಟ್ಟು ಹಾಕಿದ ನಿದರ್ಶನಗಳು ನಮ್ಮ ಎದುರಿಗಿವೆ. ಎಷ್ಟೇ ನಿದರ್ಶನಗಳಿದ್ದರೂ ಬಿಟಿ ತಂತ್ರಜ್ಞಾನದ ಮೇಲೆ ಇರುವ ರೈತರ ಒಲವನ್ನು ಕಡಿಮೆ ಮಾಡಲು ಸಾಧ್ಯವಾಗಿಲ್ಲ.

ಮೊದಲನೆ ಹಸಿರು ಕ್ರಾಂತಿಯಿಂದಾಗಿ ಅಧಿಕ ಇಳುವರಿ ಮಿಶ್ರತಳಿಗಳಿಂದಾಗಿ ಪ್ರಪಂಚದ ಎಲ್ಲ ಜನರಿಗೆ ಆಹಾರ ಒದಗಿಸಲು ಸಾಧ್ಯವಾಗಲಿಲ್ಲವಾದ ಕಾರಣ ಹಾಗೂ ಭಾರತದಲ್ಲಿ ಹೆಚ್ಚುತ್ತಿರುವ ಜನಸಂಖ್ಯೆಗೆ ಸಾಕಷ್ಟು ಆಹಾರ ಬೆಳೆಯ ಬೇಕಾಗಿರುವುದರಿಂದ ಈ 'ಜೈವಿಕ ತಂತ್ರಜ್ಞಾನ'ವನ್ನು ಎರಡನೇ ಹಸಿರು ಕ್ರಾಂತಿ ತಂತ್ರಜ್ಞಾನವೆಂದು ಪ್ರಚಾರ ಮಾಡುತ್ತದೆ. ಇದರಿಂದ ಸಸ್ಯ ಮತ್ತು ಮಾನವ ಕುಲಕ್ಕೆ ಅಪಾಯಗಳಿವೆಯೆಂದು ಗೊತ್ತಿದ್ದರೂ ಸಹ ಕೆಲವು ಬೀಜ ಕಂಪೆನಿಗಳು ಮತ್ತು ಕೃಷಿ ವ್ಯಾಪಾರಿಗಳ ಒತ್ತಡಕ್ಕೆ ಹಾಗೂ ಆಮಿಷಗಳಿಗೆ ಬಲಿಯಾಗಿ ಭಾರತ ಸರ್ಕಾರ ಈಗಿರುವ ವ್ಯವಸ್ಥೆಯಲ್ಲಿ ಹಲವಾರು ಬದಲಾವಣೆಗಳನ್ನು ಮಾಡಿ ಈ ಕಂಪೆನಿಗಳಿಗೆ ಸೌಲಭ್ಯಗಳನ್ನು ಒದಗಿಸುತ್ತಿವೆ.

ಭಾರತದಲ್ಲಿ ಈಗಾಗಲೇ ಜಾರಿಗೆ ಬಂದಿರುವ ಕೃಷಿ ನೀತಿಯು ಅಭಿವೃದ್ಧಿ ಹೊಂದಿದ ದೇಶಗಳ ಅನುಕೂಲಕ್ಕೆ ತಕ್ಕಂತೆ ರೂಪಿತವಾಗಿವೆ. ಶ್ರೀಮಂತ ದೇಶದವರಿಗೆ ಬೇಕಾದ ಆಹಾರ ಮತ್ತು ಅವರ ದನ ಹಾಗೂ ಹಂದಿಗಳಿಗೆ ಬೇಕಾದ ಆಹಾರ ಬೆಳೆಯುವುದಕ್ಕೆ ಭಾರತದ ಕೃಷಿ ನೀತಿ ಬೆಂಬಲ ಕೊಡುತ್ತಿದೆ.

ಭಾರತದಲ್ಲಿ ಈಗಾಗಲೇ ಬೆಳೆಯುತ್ತಿರುವ ಸೋಯಾ ಅವರೆ ಹಾಗೂ ಹಲ್ಲಿನ ಜೋಳ (ಗೋವಿನ ಜೋಳ) ದಲ್ಲಿ ಬಹುಪಾಲು ಶ್ರೀಮಂತ ದೇಶದ ದನಗಳ ಆಹಾರದ ಕಾರ್ಖಾನೆಗಳಿಗೆ ರಫ್ತಾಗುತ್ತಿದೆ. ಇಲ್ಲವೆ ದನದ ಆಹಾರವಾಗಿ ತಯಾರಾಗಿ ರಫ್ತಾಗುತ್ತಿದೆ. ಇದೇ ರೀತಿ ಆಹಾರ ಧಾನ್ಯಗಳನ್ನು ದೊಡ್ಡ ಪ್ರಮಾಣದಲ್ಲಿ ಬಳಸುವ ಕೋಳಿ ಸಾಕಣೆ ಹಾಗೂ ಹೈನುಗಾರಿಕೆಗೆ ಬೆಂಬಲ ಕೊಡಲಾಗುತ್ತಿದೆ. ಮಾಂಸದ ರಫ್ತಿನಿಂದಾಗಿ ಜಾನುವಾರುಗಳ ಸಂಖ್ಯೆ ಕಡಿಮೆಯಾಗುತ್ತಿದೆ. ಹಾಗೆಯೇ ಶ್ರೀಮಂತ ದೇಶದ ಜನರಿಗೆ ಬೇಕಾದ ಮೀನು ಮತ್ತು ಸೀಗಡಿ ಬೇಸಾಯಕ್ಕೆ ಕೃಷಿಯ ಸ್ಥಾನಮಾನ ಕೊಡಲಾಗಿದೆ. ಕಡಲತೀರದ ಲಕ್ಷಾಂತರ ಎಕರೆ ಭತ್ತದ ಗದ್ದೆಗಳು ಶಾಶ್ವತವಾಗಿ ಹಾಳಾಗಿವೆ. ಇದೆಲ್ಲ ಸಾಲದೆಂಬಂತೆ ಹೂವುಗಳನ್ನು ಬೆಳೆಯುವ ಪುಷ್ಪಕೃಷಿಗೂ ಬೆಂಬಲ ಕೊಡಲಾಗಿದೆ.

ಇವೆಲ್ಲ ನೀತಿಗಳಿಂದ ಆಹಾರ ಬೆಳೆಯುವ ಪ್ರದೇಶ ಕಡಿಮೆಯಾಗಿ ಆಹಾರವನ್ನು ಬೇರೆ ದೇಶಗಳಿಂದ ಖರೀದಿಮಾಡಿ ತಿನ್ನಬೇಕಾದ ಸ್ಥಿತಿಗೆ ಭಾರತ ತಲುಪುತ್ತಿದೆ. ದೇಶದ ಆಹಾರ ಭದ್ರತೆಗೆ ಉಂಟಾಗುತ್ತಿರುವ

ಗಂಡಾಂತರಗಳನ್ನು ಎಲ್ಲರೂ ತಡೆಯಬೇಕೆಂದು ಜನರಲ್ಲಿ ಜಾಗೃತಿ ಮೂಡಿಸಲು ನಂಜುಂಡಸ್ವಾಮಿ ಅವರು ಶ್ರಮಿಸಿದರು.

೫.೩ ರೈತರ ಆತ್ಮಹತ್ಯೆಗಳು

ಭಾರತ ರೈತ ಪ್ರಧಾನ ದೇಶ. ''ಕೋಟಿ ವಿದ್ಯೆಗಿಂತ ಮೇಟಿ ವಿದ್ಯೆ ಮೇಲು'' ಎಂಬುದು ಇಲ್ಲಿ ಕೃಷಿ ಬದುಕಿಗಿದ್ದ ಘನತೆ. ಆದರೆ ಇಂದು ''ಬೇಸಾಯ-ಎಂದರೆ ನಾಸಾಯ-ನೀಸಾಯ, ಮನಮಂದಿಯೆಲ್ಲಾ ಸಾಯ''[೨೧] ಎಂದು ಶಿವಸುಂದರ್ ಅವರು ಉಲ್ಲೇಖಿಸಿದ್ದಾರೆ. ಸಾವಿರಾರು ವರ್ಷಗಳ ಈ ದೇಶದ ಕೃಷಿ ಇತಿಹಾಸದಲ್ಲಿ ರೈತರು ಕೃಷಿಯಿಂದ ಬದುಕುವ ಭರವಸೆಯನ್ನೇ ನೀಗಿಕೊಂಡು ಕೊರಗಿ, ಕರಗಿ ಆತ್ಮಹತ್ಯೆ ಮಾಡಿಕೊಂಡ ಉದಾಹರಣೆಗಳು ಬಹಳ ಕಡಿಮೆ. ಆದರೆ ಕಳೆದ ಹದಿನೈದು ವರ್ಷಗಳಲ್ಲಿ ಕರ್ನಾಟಕವನ್ನು ಒಳಗೊಂಡಂತೆ ಹಲವಾರು ರಾಜ್ಯಗಳಲ್ಲಿ ಸಾವಿರಾರು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈಗಲೂ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ರೈತರ ಇಂದಿನ ಈ ಬರ್ಬರ ಪರಿಸ್ಥಿತಿ ಬ್ರಿಟಿಷ್ ವಸಾಹತುಶಾಹಿ ಕಾಲದ ಬರ್ಬರ ರೈತರ ಶೋಷಣೆಯನ್ನೇ ನೆನಪಿಗೆ ತರುತ್ತಿದೆ.

ದೇಶದ ರೈತರ ಭವಿಷ್ಯವನ್ನೇ ಅಳಿಸಿ ಹಾಕುತ್ತಿರುವ ಭೂತ ಜಾಗತೀಕರಣ. ಉದಾರೀಕರಣ ಈ ದೇಶ ಪ್ರದೇಶ ಮಾಡಿ ಕೇವಲ ಹದಿನೈದು ವರ್ಷಗಳಲ್ಲಿ ಐದು ಲಕ್ಷಕ್ಕೂ ಅಧಿಕ ರೈತರನ್ನು ಸಮಾಧಿ ಮಾಡಿದೆ. ಇದು ನಮ್ಮ ಸಂಸ್ಕೃತಿಯ ಮೇಲೆ ಆಕ್ರಮಣ ಮಾಡಿ ನಮ್ಮ ಕಲೆ, ಭಾಷೆ ಸಂಸ್ಕೃತಿಯನ್ನು ನಾಶ ಮಾಡುತ್ತ ತನ್ನದೇ ಆದ ಕೊಳ್ಳುಬಾಕ ಪರಂಪರೆಯೊಂದನ್ನು ಸೃಷ್ಟಿಸುತ್ತಿದೆ. ಇದಕ್ಕೆ ಕಾರಣ ಸರ್ಕಾರಗಳು ಜಾರಿಗೆ ತರುವ ರೈತ ವಿರೋಧಿ ಯೋಜನೆಗಳು ಹಾಗೂ ಮಾರ್ಗದರ್ಶನವಿಲ್ಲದ ಕೃಷಿ ನೀತಿಗಳು. ಅಂಥವುಗಳೆಂದರೆ ಅತ್ಯಂತ ಹೆಚ್ಚಿನ ಸಾಂಸ್ಥಿಕ ಹಾಗೂ ಅನೌಪಚಾರಿಕ ಮೂಲದ ಸಾಲಗಳು, ಮಾರುಕಟ್ಟೆ ಶಕ್ತಿಗಳ ಕಾರಣದಿಂದ ಬೆಲೆ ಕುಸಿತ, ಕನಿಷ್ಟ ಬೆಂಬಲ ಬೆಲೆಯನ್ನೂ ನೀಡದ ಸರ್ಕಾರ, ನೀಡದರೂ ಸರಕನ್ನು ಕೊಳ್ಳದ ಸಂದರ್ಭ, ಅಂತರ್ಜಲದ ಇಳಿಕೆ ಮತ್ತು ಬೋರ್‌ವೆಲ್‌ಗಳ ವೈಫಲ್ಯ, ಜಾಗತೀಕರಣದಿಂದ ಹೆಚ್ಚು ಮಾರುಕಟ್ಟೆ ವಿಕೃತಿಗಳು ಅಂದರೆ ಬೆಲೆ ಕುಸಿತ, ಹೂಡಿಕಾ ವೆಚ್ಚ ಹೆಚ್ಚಳ, ರೈತರ ಅಸ್ತಿತ್ವದ ಕುರುಹಾದ ಭೂಮಿಯನ್ನು ಕಳೆದುಕೊಳ್ಳುವ ಭಯ, ಕಳಪೆ ಬೀಜ, ಕೀಟನಾಶಕ ಹಾಗೂ ರಾಸಾಯನಿಕಗಳ ಬಳಕೆ ರೈತರ ಆತ್ಮಹತ್ಯೆಗಳು ಗಣನೀಯವಾಗಿ ಹೆಚ್ಚಲು ಕಾರಣವಾಗಿವೆ. ಇವುಗಳೇ ಅಲ್ಲದೆ ಮಾನಸಿಕ ಶಕ್ತಿ ಕುಸಿತ, ಮನೋದೌರ್ಬಲ್ಯಗಳು, ದುಶ್ಚಟಗಳು ಕೂಡ ರೈತರನ್ನು ಆತ್ಮಹತ್ಯೆಗೆ ಪ್ರೇರೇಪಿಸುತ್ತವೆ.

ಮಾರುಕಟ್ಟೆಯ ಬೇಡಿಕೆ ಹಾಗೂ ಪೂರೈಕೆಗಳಿಂದಾಗಿ ಸರಕುಗಳ ಬೆಲೆಗಳಲ್ಲಿ ಬಾರೀ ವೈಪರೀತ್ಯವನ್ನು ರೈತ ಅನುಭವಿಸುತ್ತಾನೆ. ಆದ್ದರಿಂದಲೇ ''ರೈತರಿಗೆ ಸಾಲ ಬೇಡ; ಬೆಳೆಗೆ ನ್ಯಾಯವಾದ ಬೆಲೆ ಬೇಕು.''[೨೨] ಎಂದು ನಂಜುಂಡಸ್ವಾಮಿ ಅವರು ರೂಪಿಸಿದ ರೈತ ಹೋರಾಟದ ಘೋಷಣೆಗಳಲ್ಲಿ ಕಾಣಬಹುದು. ಬೆಳೆದ

ಬೆಳೆಗೆ ವೈಜ್ಞಾನಿಕ ಬೆಲೆ ಸಿಗದೆ ಇದ್ದಾಗ, ಸಾಲವನ್ನು ಮಾಡಲು ರೈತ ಮುಂದಾಗುತ್ತಾನೆ. ಬೆಳೆಗೆ ವೈಜ್ಞಾನಿಕ ಬೆಲೆ ಸಿಕ್ಕಿದಲ್ಲಿ ಅದರಲ್ಲಿಯೇ ಕೃಷಿಗೆ ಸಂಬಂಧಿಸಿದ ಖರ್ಚು, ಕುಟುಂಬಕ್ಕೆ ಸಂಬಂಧಿಸಿದ ಖರ್ಚುಗಳೆಲ್ಲವನ್ನು ಭರಿಸುತ್ತಾನೆ. ಇದರಿಂದಾಗಿ ರೈತರಿಗೆ ಸಾಲದ ಅವಶ್ಯಕತೆ ಪ್ರಮಾಣ ಕಡಿಮೆಯಾಗುತ್ತದೆ. ಬೆಳೆಗಳ ಬೆಲೆಯಲ್ಲಿ ಕುಸಿತ ಕಂಡಾಗ ರೈತ ಸಾಲ ತೀರಿಸಲಾಗದೆ ಹತಾಶನಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ.

ಭಾರತದ ಕೃಷಿ ಇಂದು ಬಹುರಾಷ್ಟ್ರೀಯ ಕಂಪೆನಿಗಳ ಹಿಡಿತಕ್ಕೆ ಸಿಕ್ಕಿದೆ. ಅವರು ನೀಡುವ ಕುಲಾಂತರಿ ಬೀಜ ಅಥವಾ ತಳಿಗಳನ್ನು ರೈತರು ಉಪಯೋಗಿಸಬೇಕಾಗಿದೆ. ಅವುಗಳ ವಿಪರೀತವೆನ್ನಿಸುವ ಬೆಲೆ, ಕಳಪೆ ಗುಣಮಟ್ಟ, ಮೊಳಕೆಯೊಡೆಯದಿರುವುದು ಹಾಗೂ ಬೆಳೆಗಳಿಗೆ ಕೀಟ ಬಾದೆ, ಕಳಪೆ ಗುಣಮಟ್ಟದ ಕೀಟನಾಶಕಗಳ ಪೂರೈಕೆ ಇಂಥ ನೂರಾರು ಕರಾಳ ಮುಖಗಳು ಇದರ ಅಂತರಂಗದಲ್ಲಿವೆ. ಉದಾಹರಣೆ ಬಿಟಿ ಹತ್ತಿ. ಇಂಥ ಬಹುರಾಷ್ಟ್ರೀಯ ಕಂಪೆನಿಗಳ ವಂಚನೆಯ ಜಾಡನ್ನು ಬಹಳ ಮೊದಲೇ ಅರ್ಥ ಮಾಡಿಕೊಂಡಿದ್ದ ನಂಜುಂಡಸ್ವಾಮಿ ಅವರು ರೈತರು ಬಿಟಿಹತ್ತಿ ಬೆಳೆಯದಂತೆ, ಬಹುರಾಷ್ಟ್ರೀಯ ಕಂಪೆನಿಗಳ ಬಣ್ಣದ ಮಾತಿಗೆ ಮರುಳಾಗದಂತೆ ರೈತರಿಗೆ ಮನವಿ ಮಾಡಿದ್ದರು. ಅಲ್ಲದೆ ದಾವಣಗೆರೆ ಹಾಗೂ ಬಳ್ಳಾರಿ ಜಿಲ್ಲೆಗಳಲ್ಲಿ ಬೆಳೆದಿದ್ದ ಬಿಟಿ ಹತ್ತಿಯನ್ನು ಕಿತ್ತು ಸುಡುವುದರ ಮೂಲಕ ಕಂಪೆನಿಗಳಿಗೆ ನಡುಕ ಹುಟ್ಟಿಸಿದ್ದರು. ಅವರ ಮಾತನ್ನು ನಂಬದ ಅನೇಕರು ಅದೇ ಬಿಟಿ ಹತ್ತಿ ಬೆಳೆದು ನಷ್ಟ ಅನುಭವಿಸಿ, ಸಂಕಟಪಟ್ಟು ಅವರಲ್ಲಿ ಕೆಲವರು ಆತ್ಮಹತ್ಯೆಗೂ ಶರಣಾದರು. ಇಂದಿಗೂ ಕೂಡ ಈ ಬಿಟಿ ಹತ್ತಿಯ ಮೇಲೆ ರೈತರ ಒಲವನ್ನು ಕಡಿಮೆ ಮಾಡಲಿಕ್ಕೆ ಸಾಧ್ಯವಾಗಿಲ್ಲ.

''ಬಹುರಾಷ್ಟ್ರೀಯ ಬೀಜ ಕಂಪೆನಿಗಳು 'ಕಂಪೆನಿ ಕೃಷಿ' ಅಥವಾ 'ಒಪ್ಪಂದ ಕೃಷಿ'ಯನ್ನು ರೈತರೊಂದಿಗೆ ಮಾಡಿಕೊಳ್ಳುವ ತಂತ್ರವನ್ನು ಬಳಸುತ್ತಿದ್ದಾರೆ. ಈ ಒಪ್ಪಂದದಂತೆ ಮೂರರಿಂದ ನಾಲ್ಕು ವರ್ಷಗಳ ವರೆಗೆ ಒಂದೇ ಬೆಳೆ ಬೆಳೆಯುವುದು. ಕಂಪೆನಿ ಸರಬರಾಜು ಮಾಡಿದ ಬೀಜಗಳನ್ನೇ ಬಿತ್ತುವುದು. ಕೆಲವು ರೈತರ ಏಳಿಗೆಯನ್ನು ನೋಡಿದ ಇತರೆ ರೈತರು ಕೂಡ ಅದೇ ಬೆಳೆ ಬೆಳೆಯಲು ಮುಂದಾದರು. ಇದರಿಂದಾಗಿ ಬೆಳೆಗಳಿಗೆ ಬೆಲೆ ಕುಸಿತ ಕಂಡುಬಂದಿದೆ. ಸ್ವಲ್ಪ ಅವಧಿಯವರೆಗೆ ಮಾತ್ರ ಈ ಒಪ್ಪಂದ ಮುಂದುವರೆಯುತ್ತದೆ. ಅತಿಯಾದ ರಾಸಾಯನಿಕಗಳ ಬಳಕೆಯಿಂದಾಗಿ ಮಣ್ಣು ಕ್ಷಾರಯುಕ್ತವಾದಾಗ ಕಂಪೆನಿಗಳು ಒಪ್ಪಂದವನ್ನು ಕೈಬಿಟ್ಟು ಬೇರೆ ಕಡೆ ಮುಖ ಮಾಡಿದವು[೨೩]. ಅಂತಿಮವಾಗಿ ರೈತನಿಗೆ ಆತ್ಮಹತ್ಯೆಯೊಂದೇ ಏಕೈಕ ಮಾರ್ಗವಾಯಿತು.

''ಜ್ಞಾನವನ್ನು ಬಹುರಾಷ್ಟ್ರೀಯ ಕಂಪೆನಿಗಳಿಗೆ ಮಾರುವವರು ವಿಜ್ಞಾನಿಗಳಾದರೆ ಅವರಿಂದ ನಾವು ಏನನ್ನು ನಿರೀಕ್ಷಿಸಲು ಸಾಧ್ಯವಿಲ್ಲ. ಅವರೆಲ್ಲ ಅಂತರಾಷ್ಟ್ರೀಯ ವಂಚಕ ಜಾಲದ ಏಜೆಂಟರು. ಅವರಿಗೆ ಬೆಂಕಿ ಹಚ್ಚಬೇಕು''[೨೪] ಎಂದು ರೈತ ನಾಯಕ ನಂಜುಂಡಸ್ವಾಮಿ ವಿಜ್ಞಾನಿಗಳನ್ನು ತರಾಟೆಗೆ ತೆಗೆದುಕೊಂಡಿದ್ದರು. ಲಾಭಕೋರನೊಬ್ಬ ವಿಜ್ಞಾನಿಯಾದರೆ ದೇಶ, ರೈತ ಸಮುದಾಯ ಇಂಥ ಗಂಡಾಂತರಗಳನ್ನು ಎದುರಿಸಬೇಕಾಗುತ್ತದೆ.

ಈ ಹೊತ್ತಿನಲ್ಲಿ ಮೌಲ್ಯಗಳು, ಮಾನವೀಯತೆ, ಪರಂಪರೆ ಎಂಬ ಮಾತುಗಳ ಬರೀ ಬೂಟಾಟಿಕೆಯಾಗಿ ಕಾಣಲಾರಂಭಿಸುತ್ತವೆ. ಇದು ಉದಾರೀಕರಣ ಸೃಷ್ಟಿಸಿದ ಅವಾಂತರ.

''ರೈತರು ಸಾಲಗಾರರಲ್ಲ ಸರ್ಕಾರವೇ ಬಾಕಿದಾರ'' ರೈತರು ಸಾಲಗಾರರಲ್ಲ. ಅವರು ಸಾಲ ಕೊಡಬೇಕಾಗಿಲ್ಲ. ಅವರಿಗೆ ಸರ್ಕಾರದಿಂದಲೇ ಬಾಕಿ ಬರಬೇಕು. ಆ ಕಾರಣದಿಂದ ರೈತ ಸಂಘ ಸ್ಥಾಪನೆಯಾಗಿರುವುದೇ ಹೊರತು ಸಾಲವನ್ನು ರದ್ದು ಮಾಡಿಸುವುದಕ್ಕಲ್ಲ. ರೈತರಿಗೆ ಬಾಕಿ ಬರಬೇಕಾದುದನ್ನು ವಸೂಲು ಮಾಡುವ ಉದ್ದೇಶದಿಂದ ರೈತ ಸಂಘ ಸ್ಥಾಪಿಸಲಾಗಿದೆ. ರೈತರು ಭಿಕ್ಷೆ ಬೇಡುವವರಲ್ಲ, ರೈತರು ಸಾಲಗಾರರಾಗಿ ಸಾಯಬೇಕಾಗಿಲ್ಲ. ರೈತರು ಬೆಳೆದುದಕ್ಕೆ ವೈಜ್ಞಾನಿಕವಾಗಿ ಲೆಕ್ಕ ಹಾಕಿ ಬೆಲೆ ನಿಗದಿ ಮಾಡಿದರೆ ಸಾಕು. ರೈತರೇ ಸರ್ಕಾರಕ್ಕೆ ಸಾಲ ಕೊಡುವಂತಾಗುತ್ತಾರೆ.''[೨೫] ಯಾಕೆಂದರೆ ರೈತರು ಸರಳ ಜೀವಿಗಳು. ದುಂದುವೆಚ್ಚ ಮಾಡುವವರಲ್ಲ. ಆ ಕಾರಣದಿಂದ ಸರ್ಕಾರಕ್ಕೆ ಸಾಲ ಕೊಡುವ ಮಟ್ಟಕ್ಕೆ ರೈತರು ಬೆಳೆಯುತ್ತಾರೆ. ಆದ್ದರಿಂದ ರೈತರಿಗೆ ವೈಜ್ಞಾನಿಕವಾಗಿ ವ್ಯವಸಾಯದ ವೆಚ್ಚ ಲೆಕ್ಕ ಹಾಕಿ ಬೆಳೆದ ಬೆಳೆಗೆ ಒಳ್ಳೆಯ ಬೆಲೆ ಕೊಡುವ ಪದ್ಧತಿ ಜಾರಿಗೆ ತರಬೇಕು. ಇದರಿಂದ ಸಹಕಾರ ಸಂಸ್ಥೆಗಳನ್ನು ನಾಶ ಮಾಡುವ ಉದ್ದೇಶ ಅಲ್ಲ. ಬದಲಿಗೆ ರೈತನನ್ನು ನಾಶ ಮಾಡುವ ಸಹಕಾರಿ ವ್ಯವಸ್ಥೆ ದೇಶಕ್ಕೆ ಬೇಕಾಗಿಲ್ಲ. ಸಹಕಾರಿ ಸಂಸ್ಥೆಗಳನ್ನು ಉತ್ತಮಪಡಿಸಬೇಕೆಂಬುದು ನಂಜುಂಡಸ್ವಾಮಿ ಅವರ ಸಲಹೆಯಾಗಿದೆ. ಇದನ್ನು ವಿಶ್ಲೇಷಿಸಿ ನೋಡಿದಾಗ ರೈತರು ವಿದ್ಯುಚ್ಛಕ್ತಿ ತೆರಿಗೆ, ಕಂದಾಯ, ನೀರಿನ ತೆರಿಗೆ ಹೀಗೆ ಅನೇಕ ಬಗೆಯ ತೆರಿಗೆಗಳನ್ನು ಸರ್ಕಾರಕ್ಕೆ ಕಟ್ಟುತ್ತಾರೆ. ಇದರಿಂದ ಸರ್ಕಾರಕ್ಕೆ ಸಂಗ್ರಹ ಆಗುವ ಹಣ ರೈತರಿಂದ ಸರ್ಕಾರಕ್ಕೆ ಸಿಗುವ ಆದಾಯವಾಗಿದೆ. ರೈತರು ಬೆಳೆದ ಬೆಳೆಗೆ ವೈಜ್ಞಾನಿಕ ಬೆಲೆ ಸಿಗುವಂತೆ ಮಾಡಬೇಕಾಗಿರುವುದು ಸರ್ಕಾರದ ಕೆಲಸ. ಯಾವಾಗ ರೈತನಿಗೆ ವೈಜ್ಞಾನಿಕ ಬೆಲೆ ಸಿಗುವುದಿಲ್ಲವೋ ಆಗ ರೈತನು ಆರ್ಥಿಕವಾಗಿ ದುರ್ಬಲನಾಗುತ್ತಾನೆ. ಈ ಪರಿಸ್ಥಿತಿ ರೈತರನ್ನು ಸಾಲ ಮಾಡಲು ಸರ್ಕಾರ ಪ್ರೇರಣೆ ನೀಡಿದಂತೆ ಆಗುತ್ತದೆ. ಆದ್ದರಿಂದ ಸರ್ಕಾರ ವೈಜ್ಞಾನಿಕ ಬೆಲೆ ಕೊಡುವವರೆಗೂ ಸರ್ಕಾರವೇ ಬಾಕಿದಾರ ಎಂದು ಹೇಳಿರುವುದು ನಂಜುಂಡಸ್ವಾಮಿ ಅವರ ಚಿಂತನಾ ಕ್ರಮ ಎಂಥದು ಎಂಬುದನ್ನು ತಿಳಿಸಿಕೊಡುತ್ತದೆ.

ರೈತರ ಸರಣಿ ಆತ್ಮಹತ್ಯೆ ಹೆಚ್ಚುತ್ತಿರುವಂತೆ ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲಿ ಆತ್ಮಹತ್ಯೆ ನಿಯಂತ್ರಣಕ್ಕೆ ಚಾಲನೆ ದೊರೆತಂತಾಗಿ ವಿವಿಧ ರಾಜಕೀಯ ಪಕ್ಷದವರು, ಸಮಾಜದ ಪ್ರಜ್ಞಾವಂತರು, ಪ್ರಗತಿಪರರು, ಬುದ್ಧಿಜೀವಿಗಳು, ಸಂಘಸಂಸ್ಥೆಗಳ ಮುಖಂಡರು ಕಾರ್ಯೋನ್ಮುಖರಾದರು. ''ರಾಜ್ಯ ಸರ್ಕಾರ ಕೃಷಿ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಡಾ.ಜಿ.ಕೆ. ವೀರೇಶ್ ನೇತೃತ್ವದಲ್ಲಿ ಸಮಿತಿಯೊಂದನ್ನು ರಚಿಸಿ ಆತ್ಮಹತ್ಯೆಗೆ ಕಾರಣಗಳನ್ನು ಹುಡುಕಲು ಮುಂದಾದರು. ಡಾ.ವೀರೇಶ್ ಅವರ ತಜ್ಞರ ಸಮಿತಿಯ ವರದಿ ಅನೇಕ ಗೊಂದಲಗಳನ್ನು ಹುಟ್ಟುಹಾಕಿ ಅನೇಕ ಮುಖಂಡರ ಟೀಕೆಗೆ ಗುರಿಯಾಗಿ ಇವರ ವರದಿಯ ಪ್ರಕಾರ ಕುಡಿತ, ಜೂಜು ಕಾರಣಗಳೆಂಬ ಗೊಂದಲಗಳನ್ನು ಹೆಣೆದರು. ತಜ್ಞರ ವರದಿ ಸರ್ಕಾರದ ಬುಟ್ಟಿಗೆ ಸೇರಿತು. ಆದರೆ ೧೯೯೮ರಲ್ಲಿ ಜೆ.ಬಿ. ಶಿವಕುಮಾರ ಸಮಿತಿ ನೇಮಿಸಲ್ಪಟ್ಟು ವರದಿಯೊಂದನ್ನು ನೀಡಿದರು''[೨೬]. ಕೃಷಿತಜ್ಞ

ಶಿವಕುಮಾರ್ ಅವರು ರೈತರ ಆತ್ಮಹತ್ಯೆ ಕುರಿತು ಸರ್ಕಾರಕ್ಕೆ ನೀಡಿದ್ದ ವರದಿಯಲ್ಲಿ ೫೪ ಉತ್ತಮ ಸಲಹೆಗಳಿವೆ. ಅಂದರೆ ಹಿಂದೂಸ್ಥಾನ್ ಅವರ ಮಾನ್ಸಾಂಟೋ ಸೇರಿದಂತೆ ೨೮ ಕಂಪೆನಿಗಳ ವಿರುದ್ಧ ಮೊಕದ್ದಮೆಗಳನ್ನು ಹೂಡುವಂತೆ ಹಾಗೂ ೧೦೧ ಕೀಟನಾಶಕಗಳನ್ನು ನಿಷೇಧಿಸುವಂತೆ ಸರ್ಕಾರಕ್ಕೆ ನೀಡಿರುವ ತಜ್ಞರ ವರದಿಯಲ್ಲಿದೆಯಾದರೂ ಯಾರ ವಿರುದ್ಧವು ಯಾವ ಮೊಕದ್ದಮೆಯಾಗಲಿ, ಯಾವ ಕೀಟನಾಶಕದ ವಿರುದ್ಧವಾಗಲಿ ಕ್ರಮ ತೆಗೆದುಕೊಳ್ಳಲಿಲ್ಲ. ಈ ಮೇಲಿನಂತೆ ಯಾವುದೇ ವರದಿಯನ್ನು ಅನುಷ್ಠಾನಕ್ಕೆ ತರುವಲ್ಲಿ ಸರ್ಕಾರ ಹಿಂದೇಟು ಹಾಕುತ್ತದೆ.

ನಂಜುಂಡಸ್ವಾಮಿ ಅವರು ಬದುಕಿದ್ದಾಗ ರೈತರ ಆತ್ಮಹತ್ಯೆಗಳು ನಡೆಯುತ್ತಿದ್ದವು. ಆ ವೇಳೆಯಲ್ಲಿ ಅವರ ಸಲಹೆಗಳನ್ನು ರೈತರು ಸ್ವೀಕರಿಸುವಲ್ಲಿ ಎಲ್ಲೋ ಎಡವಿದ್ದಾರೆ ಎಂದು ಅಭಿಪ್ರಾಯಪಡಬಹುದು. ನಂಜುಂಡಸ್ವಾಮಿ ಅವರು ರೈತ ಸಂಘದ ಮುಖೇನ ಸರ್ಕಾರ, ''ರೈತರನ್ನು ಜಾಗೃತಗೊಳಿಸಲು ಜನವರಿ ೩೦, ೨೦೦೩ ರಂದು ಹೊಸಪೇಟೆಯಲ್ಲಿ ''ಗ್ರಾಮಸ್ವರಾಜ್ಯ'' ಘೋಷಣೆ, ಪ್ರತಿಜ್ಞೆ ಹಾಗೂ ನಿರ್ಣಯಗಳನ್ನು ಕೈಗೊಂಡರು.''[೭] ನಂಜುಂಡಸ್ವಾಮಿ ಅವರ ಮುಖಂಡತ್ವದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ರೈತರ ಆತ್ಮಹತ್ಯೆ ಹಾಗೂ ಸರ್ಕಾರದ ಧೋರಣೆಗಳನ್ನು ಖಂಡಿಸುತ್ತ ರೈತರ ಸಂಕಷ್ಟಕ್ಕೆ ಸ್ಪಂದಿಸಿ ನಡೆಸಿದ ಹೋರಾಟಗಳು ದಾಖಲಾರ್ಹ.

ಕೊನೆಯದಾಗಿ ಹೇಳಬೇಕಾದ ವಿಚಾರವೆಂದರೆ ರೈತರ ಆರ್ಥಿಕತೆಗೆ ಹಾಗೂ ಆತ್ಮಹತ್ಯೆಗಳಿಗೆ ಸಂಬಂಧಿಸಿದಂತೆ ರಾಜ್ಯ ಜವಾಬ್ದಾರಿಯನ್ನು ಹೊರಲೇಬೇಕಾಗಿದೆ. ರೈತರಿಗಾಗಿ ಹೊಸ ಕಾರ್ಯಸೂಚಿಯನ್ನು ರಚಿಸಿ ಮಹತ್ತರವಾದ ಬದಲಾವಣೆಯನ್ನು ತರಬೇಕಾಗಿದೆ. ಹೀಗೆ ಮಾಡದಿದ್ದರೆ ನಮ್ಮ ಸಮಾಜ ತೀವ್ರ ಅಸಮಾನತೆಯ ಅಸಮತೋಲನದ ಸಮಾಜವಾಗುವುದರಲ್ಲಿ ಸಂಶಯವಿಲ್ಲ. ಪ್ರಪಂಚದ ಜನರ ಹೊಟ್ಟೆ ತುಂಬಿಸುವ ರೈತರನ್ನು ಸರ್ಕಾರಗಳು ಮಾನವೀಯತೆಯ ನೆಲೆಯಲ್ಲಿ ನಡೆಸಿಕೊಳ್ಳಬೇಕಾದ ಕಾಲ ಬರಬೇಕಾಗಿದೆ.

ಟಿಪ್ಪಣಿಗಳು

೧. ಮಹೇಶನ್, ಮ., ಜಾಗತೀಕರಣ, ಪುಟ:೧೮೭

೨. ನಾಗರಾಜ್, ಎಂ.ಜಿ., ರೈತ ಚಳವಳಿ-ಸತ್ಯಾಗ್ರಹಗಳು, ಪುಟ:೩೯೬

೩. ನಂಜುಂಡಸ್ವಾಮಿ ಎಂ.ಡಿ., 'ಜಾಗತೀಕರಣ: ಕರ್ನಾಟಕದ ಸಾಹಿತಿಗಳಿಗೆ ಮೂರು ಪತ್ರಗಳು', (ವೀರಭದ್ರಪ್ಪ ಬಿಸ್ಲಳ್ಳಿ., (ಸಂ), ಪ್ರೊಫೆಸರ್ ಎಂಡಿಎನ್), ಪುಟ:೨೬೬

೪. ಒಡೆಯರ್ ಡಿ. ಹೆಗ್ಗಡೆ ಮತ್ತು ಅನ್ನಪೂರ್ಣೇಶ್ವರಿ, ಎನ್., ಭಾರತದ ಆರ್ಥಿಕಾಭಿವೃದ್ಧಿ, ಪುಟ:೫೬೪

೫. ನಾಗರಾಜ್ ಎಂ.ಜಿ., ಕರ್ನಾಟಕ ರೈತ ಚಳವಳಿ-ಸತ್ಯಾಗ್ರಹಗಳು, ಪುಟ:೩೯೯

೬. ನಂಜುಂಡಸ್ವಾಮಿ ಎಂ.ಡಿ., ವಿಧಾನ ಸಭೆಯಲ್ಲಿ ರೈತ ಸಂಘ, ೧೯೯೧-೯೩, ಪುಟ:೧೨೪

೭. ಕುಮಾರ್ ಕೆ.ಎಂ., ಕರ್ನಾಟಕದಲ್ಲಿನ ರೈತ ಚಳವಳಿ, ಪುಟ:೧೨೮

೮. ನಂಜುಂಡಸ್ವಾಮಿ ಅವರು ಡಂಕಲ್ ಪ್ರಸ್ತಾವನೆ ಕಟ್ಟೆ ಪರಿಣಾಮಗಳು, ೨೫ನೇ ಫೆಬ್ರವರಿ ೧೯೯೩ರಂದು ವಿಧಾನಸಭೆಯಲ್ಲಿ ಮಾಡಿದ ಭಾಷಣ, (ನಂಜುಂಡಸ್ವಾಮಿ, **ವಿಧಾನಸಭೆಯಲ್ಲಿ ರೈತ ಸಂಘ**), ಪುಟ:೧೨೧

೯. ನಂಜುಂಡಸ್ವಾಮಿ ಎಂ.ಡಿ., **ವಿಧಾನ ಸಭೆಯಲ್ಲಿ ರೈತ ಸಂಘ** ೧೯೯೧-೯೩, ಪುಟ:೧೨೬

೧೦. ಮೇಲಿನದೆ, ಪುಟ:೧೨೭

೧೧. ಮೇಲಿನದೆ, ಪುಟಂ:೧೩೩

೧೨. ಮೇಲಿನದೆ, ಪುಟ:೧೩೩

೧೩. ಮಾಧವ ಐತಾಳ್., 'ರೈತರ ಉಸಿರು ಕಟ್ಟಿಸುವ ಬೀಜ ಕಾಯಿದೆ', (ವೀರಭದ್ರಪ್ಪ ಬಿಸ್ಲಳ್ಳಿ., (ಸಂ), **ಪ್ರೊಫೆಸರ್ ಎಂಡಿಎನ್**), ಪುಟ:೨೦೯

೧೪. ಕುಮಾರ್.ಕೆ.ಎಂ., **ಕರ್ನಾಟಕದಲ್ಲಿನ ರೈತ ಚಳವಳಿ**, ಪುಟ ೧೩೭

೧೪. ಮೇಲಿನದೆ, ಪುಟ:೧೪೦

೧೫. ವಂದನಾಶಿವ, (ಅನು)., **ಬತ್ತದ ಚಿಲುಮೆ**, ಪುಟ:೧೦೫

೧೬. ನಂಜುಂಡಸ್ವಾಮಿ, ಎಂ.ಡಿ., **ರೈತ ಚಳವಳಿ-೨೦೦೦ ಮತ್ತೆ ಪರ್ಯಾಯ ಸರ್ಕಾರದೆಡೆಗೆ**, ಪುಟ:೨೨

೧೭. ಸೆರ್ಗಿಯೋ ಓಶೇರಾನ್ಸ್ಕಿ., 'ಜಾಗತಿಕ ಹೋರಾಟಗಳು', (ನಟರಾಜ ಹುಳಿಯಾರ್, (ಸಂ), **ಹಸಿರು ಸೇನಾನಿ**), ಪುಟ-೪೫

೧೮. ನಂಜುಂಡಸ್ವಾಮಿ, ಎಂ.ಡಿ., **ಮತ್ತೆ ಪರ್ಯಾಯ ಸರ್ಕಾರದೆಡೆಗೆ**, ಪುಟ:೨೨

೧೯. ಸಂಯುಕ್ತ ಕರ್ನಾಟಕ (ದಿನಪತ್ರಿಕೆ, ೨೦೦೯ ಸೆಪ್ಟಂಬರ್ ೭)

೨೦. ನಟರಾಜ್ ನಾಗಸಂದ್ರ., 'ಬಿಟ್ಟಿ ಕೊಟ್ಟರೂ ಬೇಡ ಬಿ.ಟಿ. ಹತ್ತಿ', (ವೀರಭದ್ರಪ್ಪ ಬಿಸ್ಲಳ್ಳಿ, (ಸಂ), **ಪ್ರೊಫೆಸರ್ ಎಂಡಿಎನ್**), ಪುಟ:೨೩೫

೨೧. **ಶಿವಸುಂದರ್., ರೈತರ ಆತ್ಮ-ಹತ್ಯೆ**, ಪುಟ:೧

೨೨. ಎಂಡಿಎನ್ ರೂಪಿಸಿದ ರೈತ ಹೋರಾಟದ ಘೋಷಣೆಗಳು, ಕರ್ನಾಟಕ ರಾಜ್ಯ ರೈತ ಸಂಘ ದ ಕರಪತ್ರ

೨೩. ಮೇಲಿನದೆ, ಪುಟ:೧೨೫

೨೪. ಮೇಲಿನದೆ, ಪುಟ:೩೯

೨೫. ನಂಜುಂಡಸ್ವಾಮಿ ಅವರು ರೂಪಿಸಿದ ಹೋರಾಟದ ಘೋಷಣೆ, ಕರ್ನಾಟಕ ರಾಜ್ಯ ರೈತ ಸಂಘ ದ ಕರಪತ್ರ

೨೬. ಮೂರ್ತಿ, ಎನ್., **ಹೋರಾಟದ ಮಹಾ ಪ್ರಬಂಧ** ಸಂ.೨, ಪುಟ:೧೫೮

೨೭. ಜನವರಿ ೩೦, ೨೦೦೩ ರ ಗ್ರಾಮ ಸ್ವರಾಜ್ಯ ಘೋಷಣೆ ಹಾಗೂ ಕೈಗೊಂಡ ನಿರ್ಣಯಗಳು, ಕರ್ನಾಟಕ ರಾಜ್ಯ ರೈತ ಸಂಘ

* * *

ಅಧ್ಯಾಯ ಆರು

ಭವಿಷ್ಯದ ಕರ್ನಾಟಕ: ರೈತರ ಬಗೆಗೆ ಕಂಡ ಕನಸುಗಳು ಮತ್ತು ಆಶಯಗಳು

ಎಪ್ಪತ್ತರ ದಶಕದ ರೈತ ಚಳವಳಿಯ ಹರಿಕಾರರಾದ ಪ್ರೊ.ಎಂ.ಡಿ. ನಂಜುಂಡಸ್ವಾಮಿ ಅವರು ತಮ್ಮ ಜೀವನವನ್ನೇ ರೈತ ಸಮುದಾಯದ ಅಭಿವೃದ್ಧಿಗಾಗಿ ಮುಡುಪಾಗಿ ಇಟ್ಟಿದ್ದರು. ನಂಜುಂಡಸ್ವಾಮಿ ಅವರು ಭಾರತ ಕಂಡ ಅಪರೂಪದ ಸಂವಿಧಾನ ತಜ್ಞ, ಬುದ್ಧಿಜೀವಿ, ರೈತ ಸಮಸ್ಯೆಗಳ ಕ್ರಿಯಾಶೀಲ ಹೋರಾಟಗಾರ ಹಾಗೂ ಸೃಜನಶೀಲ ಚಿಂತಕರೂ ಹೌದು. ರೈತರ ಏಳಿಗೆಯ ಕನಸುಗಳನ್ನು ಕಂಡ ಎಂ.ಡಿ.ಎನ್ ಅವುಗಳ ಸಾಫಲ್ಯಕ್ಕಾಗಿ ಪಟ್ಟ ಶ್ರಮ ಅಷ್ಟಿಷ್ಟಲ್ಲ. ರೈತರು, ಯುವಕರು, ಕೃಷಿ ಕಾರ್ಮಿಕರಲ್ಲಿರುವ ವಿವೇಕಕ್ಕೆ ಹೊಸ ಸೂಕ್ಷ್ಮಗಳನ್ನು, ಎಚ್ಚರವನ್ನು ಅವರು ತಂದುಕೊಟ್ಟರು. ಇವರು ರೈತರ ಬಗೆಗೆ ಕಂಡ ಕನಸುಗಳು ಎಷ್ಟರ ಮಟ್ಟಿಗೆ ಸಫಲವಾಗಿವೆ ಎಂಬುದನ್ನು ವಿಶ್ಲೇಷಿಸುವ ಪ್ರಯತ್ನವನ್ನು ಈ ಅಧ್ಯಾಯದಲ್ಲಿ ಮಾಡಲಾಗಿದೆ.

ನಂಜುಂಡಸ್ವಾಮಿ ಅವರು ಹೇಳುವಂತೆ ''ರೈತ ಎಂದರೆ ಭಾರತ, ಭಾರತ ಎಂದರೆ ರೈತ.''[1] ಇಡೀ ದೇಶದ ಜನತೆಯ ಹೊಟ್ಟೆಗೆ ಅನ್ನವನ್ನು ನೀಡುವ ರೈತ ಸ್ವಾಭಿಮಾನದಿಂದ, ಆತ್ಮಗೌರವದಿಂದ ಬದುಕಿ ಅಧಿಕಾರಶಾಹಿಯ ವಿರುದ್ಧ ಸೆಟೆದು ನಿಲ್ಲುವಂತೆ ಆಗಬೇಕು ಎಂಬ ಕನಸು ಕಂಡಿದ್ದರು. ರೈತ ಶಕ್ತಿಗೆ ಸರಿ ದಿಕ್ಕನ್ನು ತೋರಿಸಬೇಕಾದ ಅವಶ್ಯಕತೆ ಇದೆ ಎಂದು ಅರಿತು ಆ ಜವಾಬ್ದಾರಿಯನ್ನು ನಂಜುಂಡಸ್ವಾಮಿ ಅವರು ತಮ್ಮ ಹೋರಾಟಗಳ ಸಾರಥ್ಯದಲ್ಲಿ ತೋರಿಸಿಕೊಟ್ಟರು ಎಂದರೆ ತಪ್ಪಾಗಲಾರದು. ನಂಜುಂಡಸ್ವಾಮಿ ಅವರು ರೈತರ ಸಮಸ್ಯೆಗಳನ್ನು ಇಡೀ ರಾಜ್ಯದ ಆರ್ಥಿಕ ಸಂದರ್ಭದಲ್ಲಿಟ್ಟು ಕೃಷಿ ಹಾಗೂ ಕೈಗಾರಿಕೆ, ರೈತ ಹಾಗೂ ಸರ್ಕಾರದ ಸಂಬಂಧಗಳನ್ನು ಮೊತ್ತ ಮೊದಲ ಬಾರಿಗೆ ವಿಶ್ಲೇಷಿಸಿದರು. ತಲತಲಾಂತರದಿಂದ ಪ್ರಶ್ನೆಗಳನ್ನೇ ಕೇಳದೆ ತಲೆ ಬಗ್ಗಿಸಿ ದುಡಿಯುತ್ತಲೇ ಇದ್ದ ರೈತ ತನ್ನ ಕೃಷಿ ಉತ್ಪನ್ನಗಳನ್ನು ಕೈಗಾರಿಕಾ ಉತ್ಪನ್ನಗಳೊಂದಿಗೆ ಹೋಲಿಸತೊಡಗಿದ್ದು, ಸರ್ಕಾರ ಹೂಡುವ ಹಣ ಮತ್ತು ಸರ್ಕಾರದ ತಾರತಮ್ಯ ನೀತಿಯನ್ನು ಪ್ರಶ್ನಿಸತೊಡಗಿದ್ದು ಹಾಗೂ ಖಂಡಿಸತೊಡಗಿದ್ದು ದೊಡ್ಡ ಬದಲಾವಣೆಯೇ ಸರಿ. ಅಲ್ಲದೇ ಕಂದಾಚಾರ, ಮೂಢನಂಬಿಕೆಗಳು ಹಾಗೂ ಅಂಧಾನುಕರಣೆಗಳಿಂದ ದೂರಾಗಿ ವೈಜ್ಞಾನಿಕವಾಗಿ, ವೈಚಾರಿಕವಾಗಿ ವಿಮರ್ಶಿಸಿ, ಪ್ರಶ್ನಿಸುವ ಮನಸ್ಸು ಇಂದು ಗ್ರಾಮೀಣ ಸ್ತರದಲ್ಲಿ ಹುಟ್ಟಿಕೊಂಡಿದ್ದರೆ ಅದು ನಂಜುಂಡಸ್ವಾಮಿ ಅವರ ನಿಲುವುಗಳಿಂದಲೇ ಎನ್ನಬಹುದು.

ನಂಜುಂಡಸ್ವಾಮಿ ಅವರು ಭಾವಿಸಿದ್ದಂತೆ ಸಮಗ್ರ ಬದಲಾವಣೆ, ವಿಧಾನಸೌಧದ ಮೇಲೆ ಹಸಿರು ಬಾವುಟ, ರೈತರ ಉತ್ಪನ್ನಗಳಿಗೆ ಉತ್ಪಾದನೆ ವೆಚ್ಚಕ್ಕೆ ಅನುಗುಣವಾಗಿ ವೈಜ್ಞಾನಿಕ ಬೆಲೆ ನಿಗದಿ, ರೈತ ಪರ ಕೃಷಿ ನೀತಿ ಸಾಧ್ಯವೇ ಆಗಲಿಲ್ಲ. ಹಳ್ಳಿಗರನ್ನು ಗುಂಪು ಮಾಡಿ ವೋಟ್ ಬ್ಯಾಂಕ್ ಮಾಡಿಕೊಂಡು ಕೇವಲ ಭರವಸೆಗಳನ್ನು ಮಾತ್ರ ನೀಡುತ್ತ ಕುತಂತ್ರ ರಾಜಕಾರಣ ಮಾಡಿ ಹಳ್ಳಿಗಳ ನಾಶಕ್ಕೆ ಮುಂದಾಗಿರುವ ಪಕ್ಷ ರಾಜಕಾರಣಿಗಳ ಅಟ್ಟಹಾಸಕ್ಕೆ ಕಡಿವಾಣ ಬೀಳಲಿಲ್ಲ. ಗ್ರಾಮ ಸ್ವರಾಜ್ಯದ ಆಶಯವನ್ನು ಇಂಥ ಹಲವು ಕನಸುಗಳು ನಂಜುಂಡಸ್ವಾಮಿ ಅವರನ್ನು ಕಾಡುತ್ತಿದ್ದವು. ಕನಸಿಗೂ ವಾಸ್ತವದ ಬದುಕಿಗೂ ಅಂತರವಿದೆಯಾದ್ದರಿಂದ ಅವರ ಹಲವು ಕನಸುಗಳು ಯಶಸ್ಸು ಕಾಣದೆ ವಿಫಲವಾಗಿವೆ. ಆದರೂ ಕೂಡ ಅವರ ಕನಸುಗಳು ಪ್ರಗತಿಪರವಾದ ರೈತರ ವಿಚಾರಗಳಾಗಿ ಹೋರಾಟಗಳಿಗೆ, ಪ್ರಗತಿಗೆ ಪ್ರೇರಕ ಶಕ್ತಿಗಳಾದವು ತಪ್ಪಾಗಲಾರದು.

ರೈತರ ಹೀನ-ದೀನ ಸ್ಥಿತಿಯನ್ನು ನಿವಾರಿಸದಿದ್ದರೆ ಭಾರತ ಸ್ವಸ್ಥ ರಾಷ್ಟ್ರವಾಗಲಾರದು ಎಂದು ಭಾವಿಸಿದ್ದು ಒಂದು ಅಪೂರ್ವ ಚಿಂತನೆ. ಈ ಅಪೂರ್ವ ಆಲೋಚನೆಯನ್ನು ಕಾರ್ಯರೂಪಗೊಳಿಸಲು ಮುಂದಾದವರಲ್ಲಿ ನಂಜುಂಡಸ್ವಾಮಿ ಅವರೇ ಪ್ರಮುಖರು. ರೈತರ ಆರ್ಥಿಕ ಸಮಸ್ಯೆಗಳಲ್ಲಿ ರಾಜಕೀಯ ಕೊರತೆ ಸಾಕಷ್ಟಿದೆ ಎನ್ನುವುದು ಅವರಿಗೆ ತಿಳಿದಿತ್ತು. 'ರೈತರ ರಾಜಕೀಯ ಶಕ್ತಿ' ನಿರ್ಮಾಣದಿಂದ ಮಾತ್ರ ಈ ಸಮಸ್ಯೆಗಳನ್ನು ನಿವಾರಿಸಬಹುದೆಂದು ಅವರು ಬಹುದೊಡ್ಡ ಕನಸು ಕಂಡಿದ್ದರು.''[೩] ಪರ್ಯಾಯ ಸರ್ಕಾರದಷ್ಟೇ ಪರ್ಯಾಯ ತಂತ್ರಜ್ಞಾನ ಹಾಗೂ ವ್ಯವಸ್ಥೆಯ ಮಾರ್ಪಾಡು ಮುಖ್ಯ ಎಂದು ಅವರ ಹತ್ತಿರದ ಎಲ್ಲ ಹಿರಿಯ ಕಾರ್ಯಕರ್ತರಿಗೆ ಹೇಳುತ್ತಿದ್ದದ್ದು ಸ್ಮರಿಸಬೇಕಾದ ಸಂಗತಿ. ಆದರೆ ನಂಜುಂಡಸ್ವಾಮಿ ಅವರ ವಿಚಾರ, ಛಲ ಮತ್ತು ಬದ್ಧತೆಯನ್ನು ಕರ್ನಾಟಕದ ರಾಜಕಾರಣ ನುಂಗಿಬಿಟ್ಟಿತು ಎಂದರೆ ಅದರ ಶಕ್ತಿ ಎಷ್ಟಿತ್ತೆಂಬುದು ಗೊತ್ತಾಗುತ್ತದೆ. ರಾಜ್ಯ ಕಟ್ಟಲು ಹೋರಾಡಿದವರು ನಂಜುಂಡಸ್ವಾಮಿ ಹಾಗೂ ರೈತರು. ಅದರ ಪರಮೋಚ್ಛ ಫಲವನ್ನು ಗಳಿಸಿಕೊಂಡಿದ್ದು ಕಾಂಗ್ರೆಸ್ ಹಾಗೂ ಜನತಾ ಸರ್ಕಾರಗಳು. ಈ ಪಕ್ಷಗಳ ಜಯ ದಲಿತರು, ಅಲ್ಪಸಂಖ್ಯಾತರು ಹಾಗೂ ಇತರ ತಳವರ್ಗಗಳಿಗೆ ಕೊಟ್ಟಿದ್ದ ಮಾನ್ಯತೆಯ ವಿರುದ್ಧದ ತೀರ್ಮಾನವೂ ಆಗಿತ್ತು ಎಂಬುದನ್ನು ಮರೆಯುವುದು ಹೇಗೆ?

''ಭಾರತದಂಥ ಬಹು ಸಂಸ್ಕೃತಿಯ ದೇಶದಲ್ಲಿ ಮೊದಲು ಜಾತಿ ವ್ಯವಸ್ಥೆ ನಾಶವಾಗಬೇಕು. ಹಾಗಾದಾಗ ಮಾತ್ರ ಮನುಷ್ಯ ಮನುಷ್ಯನನ್ನು ಗೌರವಿಸಲು ಸಾಧ್ಯ. ಜಾತಿ ನಾಶವಾಗಬೇಕಾದರೆ ಮೊದಲು ಧರ್ಮದ ಬುಡಕ್ಕೆ ಕೊಡಲಿ ಏಟು ನೀಡಬೇಕು. ಆಗ ಮಾತ್ರ ಜಾತಿ ವಿನಾಶ ಸಾಧ್ಯ. ಧರ್ಮ ಇಟ್ಟುಕೊಂಡು ಜಾತಿ ನಾಶ ಮಾಡುತ್ತೇವೆ ಎನ್ನುವುದು ಮೂರ್ಖತನ ಎಂದಿದ್ದಾರೆ ಎಂ.ಡಿ.ಎನ್''.[೪] ಜಾತಿ ವಿರುದ್ಧದ ಹೋರಾಟ ಎಂದರೆ ಅದು ಇನ್ನೊಂದರ್ಥದಲ್ಲಿ ಅಸಮಾನತೆಯ ವಿರುದ್ಧದ ಹೋರಾಟವೇ ಆಗಿರುತ್ತದೆ ಎನ್ನುವ ಅನಿಸಿಕೆ ವ್ಯಕ್ತವಾಗುತ್ತದೆ. ನಂಜುಂಡಸ್ವಾಮಿ ಅವರು ''ನಮಗೆ ಜಾತಿ ಬೇಕಿಲ್ಲ, ಮತ ಬೇಕಿಲ್ಲ. ನಮ್ಮದು ಒಂದೇ ಜಾತಿ. ನಮ್ಮದು ಒಂದೇ ಮತ, ಅದು ರೈತ ಮತ. ಆದ್ದರಿಂದ ನಮ್ಮ ಆಲೋಚನೆಗಳು ರೈತಪರ ಹಾಗೂ

ಭ್ರಷ್ಟ ಸರ್ಕಾರದ ವಿರುದ್ಧ ಇರಬೇಕು. ಹಾಗಿದ್ದಾಗ ಮಾತ್ರ ಜಾಗೃತ ರೈತ ಸಮುದಾಯದ ಸೃಷ್ಟಿ''[೪] ಎಂಬ ಕನಸನ್ನು ಕಂಡಿದ್ದರು.

ಪ್ರಜಾಪ್ರಭುತ್ವವೆಂಬುದರ ಉಳಿವು ಮತ್ತು ಬೆಳವಣಿಗೆ ಪ್ರಜೆಗಳಿಂದ ಮಾತ್ರ ಸಾಧ್ಯ. ಇದಕ್ಕಾಗಿ ರೈತ ಸಮುದಾಯದಲ್ಲಿ ಜಾಗೃತಿಯುಂಟಾಗಬೇಕು. ಈ ಜಾಗೃತಿ ಚಳವಳಿಗಳ ಮುಖಾಂತರ ತ್ವರಿತಗತಿಯಲ್ಲಿ ಮೂಡುತ್ತದೆ. ಪ್ರಜೆಯೆಂದರೇನು? ಪ್ರಜಾಪ್ರಭುತ್ವವೆಂದರೇನು? ಈಗೇನಾಗಿದೆ? ಮುಂದೆ ನಾವೇನು ಮಾಡಬೇಕು? ಹೇಗೆ ಮಾಡಬೇಕು? ಮುಂತಾಗಿ ಚಳವಳಿಗಳ ಮಾರ್ಗವನ್ನು ಹಳ್ಳಿಯಿಂದ ದಿಲ್ಲಿ ದ್ವೀಪಗಳವರೆಗೂ ವಿಸ್ತರಿಸಿದವರಲ್ಲಿ ನಂಜುಂಡಸ್ವಾಮಿ ಅವರ ಪಾತ್ರ ಮಹತ್ತ್ವವಾದುದು. ಸರ್ಕಾರವೇನಾದರೂ ರೈತ ವಿರೋಧಿ ನಿಲುವು ತಾಳಿದರೆ, ಸರ್ಕಾರದ ವಿರುದ್ಧ ಬಾರ್‌ಕೋಲು ಚಳವಳಿ, ಸಗಣಿ ಚಳುವಳಿ, ಮೆಟ್ಟಿನ ಚಳವಳಿ ಆರಂಭಿಸಬೇಕೆಂಬ ಕನಸು ಕಂಡಿದ್ದರು. ''ಸಾಮಾಜಿಕ ನ್ಯಾಯದ ತಳಹದಿಯ ಮೇಲೆ ಸ್ವಾಭಿಮಾನಿ ಜೀವನದ ಸಮಾಜ ರಚನೆ ಅವರ ಒಳಮನಸ್ಸಿನ ಗುರಿಯಾಗಿತ್ತು.''[೫] ಅದನ್ನು ರೈತ ಹೋರಾಟಗಳ ಮೂಲಕ ಸಾಧಿಸಬೇಕೆಂಬ ಕನಸು ಕಂಡಿದ್ದರು. ಆದರೆ ಅವರ ಈ ಬಗೆಯ ಕನಸುಗಳು ಈಡೇರಿವೆ ಎಂದು ಅನ್ನಿಸುವುದಿಲ್ಲ.

ಬೇಸಾಯಗಾರರ ಬೆಳೆಯ ಸಮಸ್ಯೆಗಳೇ ಅಲ್ಲದೆ ಬೇಸಾಯಗಾರರು ನಿತ್ಯ ಜೀವನದಲ್ಲಿ ಎದುರಿಸುವ ಸಾಮಾನ್ಯ ಸಂಗತಿಗಳೂ ಕೂಡ ಎಷ್ಟು ಮಹತ್ತ್ವದ್ದು ಎಂಬುದನ್ನು ಅವರು ಗ್ರಹಿಸಿ ವಿವರಿಸುತ್ತಿದ್ದ ರೀತಿ ತುಂಬ ಖಚಿತವಾಗಿರುತ್ತಿತ್ತು. ನೀರಾವರಿಗೆ ಸಂಬಂಧಿಸಿದಂತೆ ಸಣ್ಣ ನೀರಾವರಿಗೆ ಹೆಚ್ಚಿನ ಆದ್ಯತೆಯನ್ನು ನೀಡಿ ವರ್ಷಕ್ಕೆ ಎರಡು ಬೆಳೆಗಳನ್ನು ಖಾತ್ರಿಗೊಳಿಸುವ ನೀರಾವರಿ ವ್ಯವಸ್ಥೆಯನ್ನು ರಾಜ್ಯದಾದ್ಯಂತ ಒದಗಿಸಬೇಕೆಂಬ ಕನಸು ಕಂಡಿದ್ದರು. ಆದರೆ ಇಂದಿಗೂ ಕೂಡ ಆ ಕಡೆಗೆ ಗಮನಹರಿಸದೇ ಸರ್ಕಾರಗಳು ದೊಡ್ಡ ನೀರಾವರಿಗೆ ಹೆಚ್ಚಿನ ಮಹತ್ತ್ವ ನೀಡುತ್ತಿವೆ. ಸಾಮೂಹಿಕ ಕೊಳವೆ ಬಾವಿಗಳ ಮೂಲಕ ಭೂ ತಳದ ನೀರನ್ನು ಒದಗಿಸಿ ವಿಶಾಲ ಪ್ರದೇಶಗಳನ್ನು ನೀರಾವರಿಗೊಳಪಡಿಸುವಂತೆ ಸ್ಪ್ರಿಂಕ್ಲರ್ ಹಾಗೂ ಡ್ರಿಪ್ ನೀರಾವರಿಗೆ ಆದ್ಯತೆ ಕೊಡಬೇಕು. ಜೊತೆಗೆ ಮಳೆ ಆಧಾರಿತ ಪ್ರದೇಶಗಳಲ್ಲಿ ಬೇಸಾಯ ಮೊದಲನೇ ಉದ್ಯೋಗ ಆಗಬಾರದು, ಕೃಷಿಯೇತರ ಉದ್ಯೋಗಗಳು ರೈತರಿಗೆ ಮೊದಲನೇ ಉದ್ಯೋಗ ಆಗಬೇಕು. ಬೇಸಾಯ ರೈತರಿಗೆ ಎರಡನೇ ಉದ್ಯೋಗವಾಗಬೇಕು. ಗ್ರಾಮಕೈಗಾರಿಕೆಗಳು ಮಳೆ ಆಧಾರಿತ ಪ್ರದೇಶಗಳಲ್ಲಿ ಆದಷ್ಟು ಬೇಗ ಸ್ಥಾಪನೆಗೊಳ್ಳುವುದರ ಮೂಲಕ ಮಾತ್ರ ಸಾಧ್ಯ ಎಂಬ ಆಶಯವನ್ನು ಎಂ.ಡಿ.ಎನ್ ಹೊಂದಿದ್ದರು. ರೈತರು ಶಾಶ್ವತ ಬರಗಾಲದಿಂದ ತಪ್ಪಿಸಿಕೊಳ್ಳಬೇಕಾದರೆ ಅವರು ಎಲ್ಲ ರಾಜಕೀಯ ಪಕ್ಷಗಳಿಂದ ತಪ್ಪಿಸಿಕೊಳ್ಳಬೇಕು ಎಂಬುದು ಅವರ ಅಭಿಮತ.''[೬] ಎಲ್ಲ ರಾಜಕೀಯ ಪಕ್ಷಗಳನ್ನು ಶಾಶ್ವತವಾಗಿ ರೈತರು ನಿರ್ನಾಮ ಮಾಡಿದಾಗ ಮಾತ್ರ ರಾಜ್ಯದಲ್ಲಿ ಶಾಶ್ವತ ಬರಗಾಲವೂ ನಾಶವಾಗುತ್ತದೆ ಎಂಬ ಗಹನವಾದ ವಿಚಾರಗಳನ್ನು ರೈತರಿಗೆ ತಿಳಿಸಿಕೊಟ್ಟರು. ಈ ವಿಚಾರಗಳಲ್ಲಿ ಗಾಂಧಿಯವರ ಗ್ರಾಮ ಸ್ವರಾಜ್ಯದ ಕನಸನ್ನು ನನಸಾಗಿಸಲು ಪ್ರಯತ್ನಿಸಿದರು. ದೇಶದ

ಶೇಕಡಾ ೭೫ ಭಾಗ ಜನರು ವಾಸಿಸುವ ಹಳ್ಳಿಗಳಿಗೆ ಸರ್ಕಾರದ ಬಜೆಟ್‌ನಲ್ಲಿ ಶೇಕಡಾ.೭೫ ಭಾಗ ಹಣ ಹಳ್ಳಿಗಳ ಅಭಿವೃದ್ಧಿಗೆ ಖರ್ಚಾಗಬೇಕು ಎಂಬ ಕನಸನ್ನು ಹೊಂದಿದ್ದರು. ಆದರೆ ಇಂದಿಗೂ ಬಜೆಟ್‌ನಿಂದ ಹಳ್ಳಿಗಳಿಗೆ ಏನೇನು ಪ್ರತಿಫಲ ದೊರೆಯುತಿಲ್ಲ.

ವಿಶ್ವ ಅರ್ಥಶಾಸ್ತ್ರವನ್ನು ಸಾಮಾನ್ಯ ಪ್ರಜೆಗೂ ಅರ್ಥವಾಗುವ ಭಾಷೆಯಲ್ಲಿ ಹೇಳಿದವರು ನಂಜುಂಡಸ್ವಾಮಿ ಅವರು. ರೈತರ ಅನುಕೂಲಕ್ಕಾಗಿ ಸರ್ಕಾರ ಒಂದು ಕಾನೂನನ್ನು ಜಾರಿಗೆ ತಂದರೆ ಭವಿಷ್ಯದಲ್ಲಿ ರೈತರ ಮೇಲೆ ಅದರ ಪರಿಣಾಮ ಏನು ಎಂದು ಆ ಕ್ಷಣದಲ್ಲೇ ಹೇಳುವ ತೀಕ್ಷ್ಣ ಬುದ್ಧಿಶಕ್ತಿ ಅವರಲ್ಲಿ ಇತ್ತು. ಅದು ಹಾಗೆಯೇ ಆಗುತ್ತಿದ್ದುದು ಕಾಕತಾಳೀಯ. ನಂಜುಂಡಸ್ವಾಮಿ ಅವರ ಮಹತ್ತ್ವದ ಸಾಧನೆ ಎಂದರೆ ಜಾಗತೀಕರಣದ ವಿರುದ್ಧದ ಹೋರಾಟ ಮತ್ತು ಅವರು ಕಟ್ಟಿದ ರೈತ ಸಂಘ. ಜಾಗತೀಕರಣದ ಹೋರಾಟಗಳ ಜೊತೆಗೆ ಸಮುದಾಯಮುಖಿ ಹೋರಾಟಗಳನ್ನು ನಿರಂತರವಾಗಿ ಮಾಡಿದ್ದಾರೆ. ಗ್ಯಾಟ್ ಒಪ್ಪಂದ, ವಿಶ್ವ ವ್ಯಾಪಾರ ಸಂಘಟನೆ ರೂಪುಗೊಂಡು ರೈತರಿಗೆ ಹಾನಿಯುಂಟು ಮಾಡುವುದೆಂದು ಎಚ್ಚರಿಸಿದರು. ಆಮೇಲೆ ಕಾರ್ಖಾನೆಯ ಕೂಲಿಕಾರರಿಗೆ, ಸಣ್ಣ ಉದ್ಯೋಗಗಳ ಕಾರ್ಖಾನೆದಾರರಿಗೆ, ಬ್ಯಾಂಕ್ ನೌಕರರಿಗೆ ಎಲ್ಲರಿಗೂ ಕೆಡುಕನ್ನುಂಟು ಮಾಡುವುದೆಂದು ಹೇಳಿದರೂ ನಂಜುಂಡಸ್ವಾಮಿ ಅವರ ಚಿಂತನೆಗಳ ಕಡೆಗೆ ಯಾರೂ ಗಮನಹರಿಸಲಿಲ್ಲ. ಆದರೆ ಇಂದು ಈ ಎಲ್ಲ ಹುನ್ನಾರಗಳ ವಿರುದ್ಧ ಇಡೀ ಜನ ಸಮುದಾಯವೇ ಹೋರಾಡಲು ಮುಂದಾಗಿರುವುದು ಮಹತ್ತ್ವದ ಸಂಗತಿ. ಬಹುರಾಷ್ಟ್ರೀಯ ಕಂಪೆನಿಗಳ ಪ್ರವೇಶದಿಂದ ಬೀಜೋತ್ಪಾದನೆ ಭಾರತೀಯರ ಕೈ ತಪ್ಪುತ್ತದೆ. ನಮ್ಮ ಪಾರಂಪರಿಕ ಬೀಜಗಳು ಕಣ್ಮರೆಯಾಗುವ ಸಂಭವ ತಲೆದೋರುತ್ತದೆ. ಆದ್ದರಿಂದ ಜಾಗತೀಕರಣ, ಔದ್ಯಮೀಕರಣ ಖಾಸಗೀಕರಣದ ವಿರುದ್ಧ ಹೋರಾಡುತ್ತ ಇವೆಲ್ಲ ಒಪ್ಪಂದಗಳ ಹಿಡಿತದಿಂದ ಪಾರಾಗಿ ರೈತರು ಸ್ವಾವಲಂಬಿಯಾಗುವಂತೆ ಮಾಡುವುದೇ ಇವರ ಆಶಯವಾಗಿತ್ತು.[೭]

ರೈತರು ತೀವ್ರಗತಿಯಲ್ಲಿ ಜಾಗೃತರಾಗುವಂತೆ, ಯಾವ ರಾಜಕೀಯ ಪಕ್ಷಗಳ ನಾಯಕರೂ ಚಿಂತಿಸಲಾರದ ಯೂರೋಪ್ ಪ್ರವಾಸ ಕೈಗೊಂಡದ್ದು, ಯೂರೋಪ್ ರಾಷ್ಟ್ರಗಳಲ್ಲಿ ಅಲ್ಲಿಯ ಒಕ್ಕಲುತನದ ರೀತಿ-ನೀತಿ, ಅಲ್ಲಿಯ ರೈತರ ಸ್ಥಿತಿಗಳನ್ನು ಕಣ್ಣಾರೆ ಕಂಡು ಭಾರತಕ್ಕೂ, ಯೂರೋಪ್ ದೇಶಗಳಿಗೂ ಇರುವ ವ್ಯತ್ಯಾಸವನ್ನು ಕಂಡುಕೊಳ್ಳುವಂತೆ ಮಾಡಿದ್ದು ಅದರ ಸಾಧನೆಗಳಲ್ಲಿ ಒಂದು ಮಹತ್ವದ ಮೈಲಿಗಲ್ಲು.

ಇಡೀ ವಿಶ್ವವು ಸಾಮ್ರಾಜ್ಯಶಾಹಿ, ವರ್ಣಬೇಧ, ಬಡತನ-ದಾರಿದ್ರ್ಯ ಎಂಬ ಮೂರು ಬಗೆಯ ಅನ್ಯಾಯಗಳಿಂದ ತತ್ತರಿಸಿ ಹೋಗುತ್ತಿದೆ. ಪ್ರಜಾಪ್ರಭುತ್ವದಲ್ಲಿ ಸಮಾನತೆಗೆ ಅರ್ಥ ಬರಬೇಕಾದರೆ ಜಾತಿ ನಾಶವಾಗಬೇಕು. ಬಡತನ ನಿರ್ಮೂಲನೆಯಾಗಬೇಕಾದಲ್ಲಿ ಸಂಪತ್ತಿನ ಸಮಾನ ಹಂಚಿಕೆಯಾಗಬೇಕು ಎಂದು ಅವರು ನಂಬಿದ್ದರು. ಆದರೆ ವಾಸ್ತವವಾಗಿ ಇದು ಸಾಧ್ಯವೇ ಎನ್ನುವ ಪ್ರಶ್ನೆ ಎದುರಾಗುತ್ತದೆ. ರಾಜ್ಯದಿಂದ ಹಳ್ಳಿಯ ಜನ ಗುಳೇ ಹೋಗದಂತೆ ತಡೆಯಲು ಪೂರ್ಣ ಉದ್ಯೋಗ ನೀಡುವ ಕಾರ್ಯಕ್ರಮಗಳನ್ನು ರೂಪಿಸುವುದು, ರಾಜ್ಯದ ಎಲ್ಲ ಮಕ್ಕಳಿಗೂ ಔದ್ಯೋಗಿಕ ಶಿಕ್ಷಣ ಸಿಗದಂತೆ ಪೂರ್ಣ ಶಿಕ್ಷಣದ ಯೋಜನೆ ರೂಪಿಸುವುದು,

ಹಳ್ಳಿಯ ಹೆಣ್ಣು ಮಕ್ಕಳ ನೀರಿನ ಬವಣೆ, ಉರುವಲು, ಪಾಯಿಖಾನೆ ಮುಂತಾದ ಮೂಲಭೂತ ಸಮಸ್ಯೆಗಳನ್ನು ಬಗೆಹರಿಸುವ ರೈತರ ರಾಜ್ಯ ನಿರ್ಮಾಣದ ಕನಸು ಕಂಡಿರುವ ಎಂ.ಡಿ.ಎನ್. ಹಾಗೆಯೇ ನಗರೀಕರಣವನ್ನು ನಿಲ್ಲಿಸಿ ನೆಮ್ಮದಿಯಾದ ನಗರವನ್ನು ಸೃಷ್ಟಿ ಮಾಡುವುದು, ಬೆಲೆ ಹತೋಟಿ, ವೈಜ್ಞಾನಿಕ ಬೆಲೆ ನೀತಿ ಹಾಗೂ ಕೂಲಿ ನೀತಿ, ನಿಖರ ಬೆಲೆಯ ಕಾನೂನುಗಳನ್ನು ರಚಿಸುವ ಮೂಲಕ ನಗರಗಳಲ್ಲಿರುವ ಅನಿಶ್ಚಿತ ಜೀವನವನ್ನು ಸರಿಪಡಿಸುವ, ಸರ್ಕಾರಿ ನೌಕರರು, ಕೈಗಾರಿಕಾ ಕಾರ್ಮಿಕರು ಹಾಗೂ ಇತರೆ ಕೆಳ ವರ್ಗದ ಜನರು ನೆಮ್ಮದಿಯಿಂದ, ಸ್ವಾಭಿಮಾನದಿಂದ ಬದುಕಲು ಅನುವು ಮಾಡಿಕೊಡುವ ಕನಸು ಕಂಡಿದ್ದರು. ಪೂರ್ಣ ಸ್ವಾತಂತ್ರ್ಯವಿರುವ ಸಾಲವಿಲ್ಲದ ಹಳ್ಳಿಗಳ ನಿರ್ಮಾಣ, ಲಂಚವಿಲ್ಲದ ಆಡಳಿತ ವ್ಯವಸ್ಥೆ, ಮಹಿಳೆಯರಿಗೆ ವ್ಯವಸ್ಥಿತ ಜೀವನ, ಪೂರ್ಣ ಶಿಕ್ಷಣ, ಪೂರ್ಣ ಉದ್ಯೋಗ ಇವುಗಳನ್ನೊಳಗೊಂಡ ಹೊಸ ಕರ್ನಾಟಕ ಕಟ್ಟುವ ಬಹಳ ದೊಡ್ಡ ಕನಸನ್ನು ಪ್ರೊಫೆಸರ್ ಕಂಡಿದ್ದರು.[೮] ಇಂಥ ಕನಸುಗಳನ್ನು ಸಾಕಾರಗೊಳಿಸಲು ಹಾಗೂ ರೈತರ ಉದ್ಧಾರಕ್ಕಾಗಿ ಅವರು ನಿರಂತರವಾಗಿ ಶ್ರಮಿಸಿದರು.

ಟಿಪ್ಪಣಿಗಳು

೧. ನಂಜುಂಡಸ್ವಾಮಿ ಎಂ.ಡಿ., 'ಅನ್ನದ ಋಣದ ಪಾಪಪ್ರಜ್ಞೆ ಇಲ್ಲದ ಸರ್ಕಾರಗಳು', (ವೀರಭದ್ರ ಬಿಸ್ಲಳ್ಳಿ, (ಸಂ) **ಹಸಿರು ಸೇನಾನಿ**), ಪುಟ:೧

೨. ವಿಜಯ್ ಜವಾಂದಿ, 'ಸಂಕಲ್ಪ ಶಕ್ತಿಯ ಮಹಾನ್‌ವ್ಯಕ್ತಿ', (ವೀರಭದ್ರಪ್ಪ ಬಿಸ್ಲಳ್ಳಿ, (ಸಂ), **ಪ್ರೊಫೆಸರ್ ಎಂಡಿಎನ್**), ಪುಟ:೯೭

೩. ವೆಂಕಟರೆಡ್ಡಿ ಎನ್., 'ಹೋರಾಟದ ಬದುಕು', (ವೀರಭದ್ರಪ್ಪ ಬಿಸ್ಲಳ್ಳಿ, (ಸಂ), **ಪ್ರೊಫೆಸರ್ ಎಂಡಿಎನ್**), ಪುಟ:೨೪

೪. ಮೇಲಿನದೇ, ಪುಟ:೨೩

೫. ಬಾಬಾಗೌಡ ಪಾಟೀಲ್., 'ಹೋರಾಟದ ವಿರಾಟ್ ಸ್ವರೂಪ ನಂಜುಂಡಸ್ವಾಮಿ', (ವೀರಭದ್ರಪ್ಪ ಬಿಸ್ಲಳ್ಳಿ, (ಸಂ), **ಪ್ರೊಫೆಸರ್ ಎಂಡಿಎನ್**), ಪುಟ:೧೨೫

೬. ನಂಜುಂಡಸ್ವಾಮಿ ಎಂ.ಡಿ., 'ವಿಧಾನಸಭೆಯಲ್ಲಿ ರೈತ ಸಂಘ', ಪುಟ:೮೨

೭. ನಂಜುಂಡಸ್ವಾಮಿ ಎಂ.ಡಿ. 'ನಾನೇಕೆ ಕೃಷಿಯಲ್ಲಿ ಬಹುರಾಷ್ಟ್ರೀಯ ಕಂಪೆನಿಗಳನ್ನು ವಿರೋಧಿಸುತ್ತೇನೆ?' (ಸಂದರ್ಶನ), ಪುಟ:೧೯

೮. ನಂಜುಂಡಸ್ವಾಮಿ ಎಂ.ಡಿ., 'ಅನ್ನದ ಋಣದ ಪಾಪಪ್ರಜ್ಞೆ ಇಲ್ಲದ ಸರ್ಕಾರಗಳು' (ವೀರಭದ್ರಪ್ಪ ಬಿಸ್ಲಳ್ಳಿ, (ಸಂ), **ಪ್ರೊಫೆಸರ್ ಎಂಡಿಎನ್**), ಪುಟ:೬

* * *

ಅಧ್ಯಾಯ ಏಳು

ತಳೆದ ನಿಲುವುಗಳು

ಪ್ರಸ್ತುತ ಸಂಶೋಧನಾ ನಿಬಂಧವು ಪ್ರೊ.ಎಂ.ಡಿ. ನಂಜುಂಡಸ್ವಾಮಿ ಅವರ ಕೃಷಿ ಚಿಂತನೆಗಳ ವಿಶ್ಲೇಷಣೆ ಕುರಿತದ್ದಾಗಿದೆ. ಅಂದರೆ ನಂಜುಂಡಸ್ವಾಮಿ ಅವರ ಜೀವನ ಪರಿಚಯ-ಪರಿಸರ-ಪ್ರಭಾವ ಹಾಗೂ ಕೃಷಿ ಚಿಂತನೆ, ಸಂಘಟನೆ, ರಾಜಕಾರಣ, ಅಂತರಾಷ್ಟ್ರೀಯ ಶಕ್ತಿಗಳಿಗೆ ಸಂಬಂಧಿಸಿದ ಚಿಂತನೆಗಳನ್ನು ಕುರಿತು ವಿಶ್ಲೇಷಿಸುವಂಥದ್ದು. ಮೇಲ್ವರ್ಗದಲ್ಲಿ ಹುಟ್ಟಿದ್ದರೂ ಸಾಮಾಜಿಕ ನ್ಯಾಯ ಪ್ರತಿಪಾದಕರಾಗಿ ಸಮಾಜದಲ್ಲಿ ಕ್ರಾಂತಿಕಾರಿ ಹೋರಾಟಗಳನ್ನು ಕೈಗೊಂಡು ಆ ಮೂಲಕ ರೈತರಲ್ಲಿ ಹೊಸತನದ ಸ್ವಾಭಿಮಾನ ಮೂಡಿಸಿದ್ದೇ ಅವರ ಸಾಧನೆ. ಕಾರಣಕರ್ತರು. ಸರ್ಕಾರಕ್ಕೆ ಎಚ್ಚರಿಕೆಗಳನ್ನು ಕೊಡುತ್ತಾ ಹಾಗೆಯೇ ಕೃಷಿಕರಲ್ಲಿ ಜಾಗೃತಿ ಮೂಡಿಸಿದ ರಾಜ್ಯದ, ರಾಷ್ಟ್ರದ ಹಾಗೂ ವಿಶ್ವದ ಅಪರೂಪದ ಕೃಷಿ ಚಿಂತಕ ನಂಜುಂಡಸ್ವಾಮಿ ಅವರು.

ಬ್ರಿಟಿಷ್ ಆಡಳಿತ ವ್ಯವಸ್ಥೆ ಹಾಗೂ ಅಂದಿನ ಕೃಷಿಯನ್ನು ಸೂಕ್ಷ್ಮವಾಗಿ ಗಮನಿಸಿದಾಗ ಕೆಲವು ಒಳನೋಟಗಳು ದೊರೆಯುತ್ತವೆ. ಭಾರತದಲ್ಲಿ ಬ್ರಿಟಿಷ್ ಆಡಳಿತಾವಧಿಯಿಂದ ಅನುಸರಿಸಿಕೊಂಡು ಬಂದಿರುವ ಭೂಕಂದಾಯ ಪದ್ಧತಿಯನ್ನು ಇಂದಿಗೂ ಸಹ ಮುಂದುವರಿಸಿಕೊಂಡು ಬರಲಾಗುತ್ತಿದೆ. ಆದರೆ ವಿದೇಶಗಳಲ್ಲಿ ಈ ಬಗೆಯ ಕಂದಾಯ ಪದ್ಧತಿ ಇಲ್ಲ. ಆದ್ದರಿಂದ ಭಾರತದಲ್ಲಿ ಇರುವ ಭೂ ಕಂದಾಯ ಪದ್ಧತಿ ಹಾಗೂ ಅದನ್ನು ಸಂಗ್ರಹಿಸುವ ಆಡಳಿತ ವರ್ಗಗಳ ಹುದ್ದೆಗಳು ರದ್ದಾಗಬೇಕಾಗಿರುವ ಕಾರಣದ ಹಿಂದಿರುವ ಅಂಶಗಳು ಗಮನಾರ್ಹ. ಬರಗಾಲ ಇಲ್ಲದೆ ಇರುವಂಥ ಕರ್ನಾಟಕ ನಿರ್ಮಾಣ ಮಾಡಲು ಇಂದಿಗೂ ಸಾಧ್ಯವಾಗಿಲ್ಲ. ಸರ್ಕಾರ ಕೇವಲ ದೊಡ್ಡ ನೀರಾವರಿಗೆ ಮಾತ್ರ ಹೆಚ್ಚಿನ ಪ್ರಾಧಾನ್ಯತೆಯನ್ನು ನೀಡುತ್ತಿದೆ. ಕೇವಲ ಶೇಕಡಾ ೨೦ ಭಾಗದ ಭೂಪ್ರದೇಶಕ್ಕೆ ನೀರು ಒದಗಿಸುವ ಕಡೆಗೆ ಗಮನಹರಿಸುತ್ತಿದೆ. ಶೇಕಡಾ ೮೦ ಭಾಗಕ್ಕೆ ಶಾಶ್ವತವಾಗಿ ನೀರೊದಗಿಸುವ ಯೋಜನೆಗಳನ್ನು ರೂಪಿಸುತ್ತಿಲ್ಲ. ಕೆರೆಗಳಲ್ಲಿ ನೀರಿನ ಸಂಗ್ರಹದ ಪ್ರಮಾಣ ಕಡಿಮೆಯಾಗಿರುವುದಕ್ಕೆ ಕಾರಣವಾಗಿರುವ ಅಂಶಗಳನ್ನು ಎಂ.ಡಿ.ಎನ್ ಅವರ ಚಿಂತನೆಗಳಿಂದ ಪರಿಶೀಲನೆ ಮಾಡಲಾಗಿದೆ. ಒಂದು ವರ್ಷ ದೊಡ್ಡ ನೀರಾವರಿ ಯೋಜನೆಗಳನ್ನು ಸ್ಥಗಿತಗೊಳಿಸಿ ಸಣ್ಣ ನೀರಾವರಿ ಯೋಜನೆಗಳನ್ನು ಜಾರಿಗೆ ತರಬೇಕು. ರೈತರು ಅಂದಿನಿಂದಲೂ ಅಳವಡಿಸಿಕೊಂಡು ಬಂದಿರುವ ಫ್ಲಡ್ ಇರಿಗೇಷನ್ ವ್ಯವಸ್ಥೆಯನ್ನು ಕೈಬಿಡಬೇಕು. ಬದಲಿಗೆ ತುಂತುರ ನೀರಾವರಿ ಹಾಗೂ ಹನಿ ನೀರಾವರಿ

ಯೋಜನೆಗಳನ್ನು ಅಭಿವೃದ್ಧಿಪಡಿಸಿದಾಗ ಉತ್ಪಾದನೆಯನ್ನು ಹೆಚ್ಚಿಸಲಿಕ್ಕೆ ಸಾಧ್ಯ. ಮಳೆ ನೀರನ್ನು ಸಂಗ್ರಹಿಸುವ ನಿಟ್ಟಿನಲ್ಲಿ ಸರ್ಕಾರ ಮಾಡಬೇಕಾಗಿರುವ ಪ್ರಯತ್ನಗಳನ್ನೊಳಗೊಂಡ ಚಿಂತನೆಗಳು ಗಂಭೀರವಾದುವು. ಅಂತರ್ಜಲವನ್ನು ಪೂರ್ತಿಯಾಗಿ ಉಪಯೋಗಿಸಿಕೊಳ್ಳಬೇಕು ಹಾಗೂ ಅಂತರ್ಜಲದ ಮರುಪೂರಣಕ್ಕೆ ಸಂಬಂಧಿಸಿದ ಅವರ ನಿಲುವುಗಳು, ವಿಚಾರಗಳನ್ನು ಈ ಹೊತ್ತಿನ ಸಂದರ್ಭದಲ್ಲಿಟ್ಟು ಚರ್ಚಿಸುವ ಅಗತ್ಯ, ಅನಿವಾರ್ಯತೆ ಇದೆ. ಕೃಷಿಯೇತರ ಉದ್ಯೋಗಗಳು ರೈತರಿಗೆ ಮೊದಲನೇ ಉದ್ಯೋಗವಾಗಬೇಕು. ಬೇಸಾಯ ಕೃಷಿಕರಿಗೆ ಯಾಕೆ ಎರಡನೇ ಉದ್ಯೋಗವಾಗಬೇಕು ಎಂಬ ವಿಚಾರಗಳನ್ನು ಪರಿಶೀಲನೆಗೆ ಒಳಪಡಿಸಿದೆ. ಕೃಷಿ ಕಾರ್ಮಿಕರ ಕನಿಷ್ಟ ಕೂಲಿ ನಿಗದಿ ಮಾಡಬೇಕು. ಕೂಲಿ ನಿಗದಿ ಸಂದರ್ಭದಲ್ಲಿ ಕುಟುಂಬ ಶ್ರಮವನ್ನು ಗಣನೆಗೆ ತೆಗೆದುಕೊಳ್ಳಬೇಕಾದ ಅನಿವಾರ್ಯತೆಯ ಬಗೆ ಗಮನೀಯ.

ಕೃಷಿ ಸರಕುಗಳ ಮೇಲೆ ಬಡ್ಡಿ ವಿಧಿಸುವಾಗ ಸರ್ಕಾರ ರೈತರಿಗೆ ಮೋಸ ಮಾಡುತ್ತಿದೆ. ಕೃಷಿ ಸಲಕರಣೆಗಳಿಗೆ ವಿಧಿಸುವ ಬಡ್ಡಿ ದರ ಅವೈಜ್ಞಾನಿಕವಾಗಿ ಇಲ್ಲಿಯೂ ಸರ್ಕಾರ ರೈತರನ್ನು ವಂಚಿಸುತ್ತಿರುವ ಅಂಶಗಳು ಚರ್ಚಾರ್ಹ. ಈ ಮೇಲಿನ ಎಲ್ಲಾ ಯೋಜನೆಗಳನ್ನು ವ್ಯವಸ್ಥಿತವಾಗಿ ಅನುಷ್ಠಾನಕ್ಕೆ ತಂದಾಗ ಗ್ರಾಮೀಣಾಭಿವೃದ್ಧಿ ಸಾಧ್ಯ. ಇವೆಲ್ಲ ಒಂದಕ್ಕೊಂದು ಪೂರಕವಾಗಿರುವ ಅಂಶಗಳು. ಆಯಾ ಗ್ರಾಮಗಳಲ್ಲಿರುವ ನೈಸರ್ಗಿಕ ಸಂಪತ್ತು ಆ ಗ್ರಾಮಗಳ ಅಭಿವೃದ್ಧಿಗೇ ಬಳಸಬೇಕು. ಅದರ ಬದಲಿಗೆ ಶ್ರೀಮಂತ ಉದ್ಯಮಿಗಳು, ಬಂಡವಾಳದಾರರ ಕೈಗಳಿಗೆ ಸಂಪತ್ತೆಲ್ಲಾ ಹರಿದು ಹೋಗುತ್ತಿದೆ. ಸಂಪತ್ತಿನ ವಿಕೇಂದ್ರೀಕರಣ ಮಾಡಬೇಕಾಗಿರುವುದು ಪ್ರಸ್ತುತ ಅನಿವಾರ್ಯವಾಗಿರುವ ಅಂಶವಾಗಿದೆ. ಗ್ರಾಮೀಣ ಜನರ ಜೀವನವನ್ನು ಉತ್ತಮಪಡಿಸಬೇಕಾದರೆ ಕೃಷಿ ಆಧಾರಿತ ಕೈಗಾರಿಕೆಗಳನ್ನು ಸ್ಥಾಪಿಸಬೇಕು. ಅದರಲ್ಲೂ ಸಹಕಾರಿ ಕ್ಷೇತ್ರದಲ್ಲಿ ಕೃಷಿ ಆಧಾರಿತ ಕೈಗಾರಿಕೆಗಳನ್ನು ಸ್ಥಾಪಿಸಬೇಕು. ನಗರಗಳ ಬೆಳವಣಿಗೆಯನ್ನು ನಿಲ್ಲಿಸಬೇಕು. ನಗರಗಳು ಬೆಳೆದಂತೆ ಮೂಲಭೂತ ಸಮಸ್ಯೆಗಳು ಹೆಚ್ಚಾಗುತ್ತಿವೆ. ನಗರಗಳ ಸಮಸ್ಯೆಗಳನ್ನು ನಿವಾರಿಸಲು ಗ್ರಾಮಗಳನ್ನು ನಿರ್ಲಕ್ಷಿಸಿ, ಅವುಗಳಿಗೆ ಒದಗಿಸಬೇಕಾಗಿದ್ದ ಸೌಲಭ್ಯಗಳೆಲ್ಲವನ್ನು ನಗರಗಳ ಅಭಿವೃದ್ಧಿಗಾಗಿ ಬಳಸುತ್ತಿರುವ ಅಂಶಗಳನ್ನು ಕುರಿತಂತೆ ಚರ್ಚಿಸಲಾಗಿದೆ. ಪ್ರಾಚೀನ ಕಾಲದಿಂದ ಭಾರತೀಯರು ಅಳವಡಿಸಿಕೊಂಡು ಬಂದಿರುವ ಸುಸ್ಥಿರ ಕೃಷಿ ಪದ್ಧತಿಯನ್ನು ಕೈ ಬಿಟ್ಟು ಇಂದು ಏಕಬೆಳೆ ಪದ್ಧತಿಯನ್ನು ಅನುಸರಿಸುತ್ತಿದ್ದಾರೆ. ಏಕಬೆಳೆ ಪದ್ಧತಿಯಿಂದಾಗಿ ಕೃಷಿಗೆ ಮಿತ್ರನಾಗಿರುವ ಜೀವ ವೈವಿಧ್ಯಗಳು ನಾಶವಾಗುತ್ತಿವೆ. ಆದ್ದರಿಂದ ಸುಸ್ಥಿರ ಕೃಷಿ ಪದ್ಧತಿಯನ್ನೇ, ಮುಂದುವರಿಸಬೇಕೆಂಬುದು, ನಂಜುಂಡಸ್ವಾಮಿ ಅವರ ಚಿಂತನೆಗಳಲ್ಲಿ ಗಮನಾರ್ಹವಾದುದು. ಬದಲಿಗೆ ಇದೇ ಪದ್ಧತಿಯಲ್ಲೇ ಮಾನವ ಹಾಗೂ ಪರಿಸರಕ್ಕೆ ಹಾನಿಯಾಗದ ರೀತಿಯಲ್ಲಿ ಮಾರ್ಪಾಡುಗಳನ್ನು ಮಾಡಿಕೊಂಡು ಅನುಸರಿಸುವ ಚಿಂತನೆಗಳನ್ನು ವಿಶ್ಲೇಷಿಸಲಾಗಿದೆ. ಗ್ರಾಮಗಳ ಕಚ್ಚಾ ಸರಕುಗಳು ಸಿದ್ಧ ವಸ್ತುಗಳಾಗಿ ಹೊರ ಹೋಗಲು ಯಾವ ಕ್ರಮಗಳನ್ನು ಅನುಸರಿಸಬೇಕೆಂಬ ಚಿಂತನೆಗಳನ್ನು ಪರಿಶೀಲಿಸಲಾಗಿದೆ.

ಅಧಿಕಾರ ವಿಕೇಂದ್ರೀಕರಣ ಮಾಡಿ ಅಧಿಕಾರಿಗಳು ನಡೆಸುವ ಭ್ರಷ್ಟಾಚಾರವನ್ನು ತಡೆಯಲು ಯಾವ ಬಗೆಗಳಲ್ಲಿ ಪ್ರಯತ್ನಿಸಬೇಕು. ಇವೆಲ್ಲಾ ಚಿಂತನೆಗಳು ದೇಶದ ಸರ್ವತೋಮುಖ ಅಭಿವೃದ್ಧಿಯ ದೃಷ್ಟಿಯಿಂದ

ಜಾರಿಗೆ ತರಲು ಸರ್ಕಾರಗಳು ಪ್ರಯತ್ನಿಸಬೇಕು. ಆದರೆ ಯಾವ ಸರ್ಕಾರಗಳು ಕೃಷಿ, ಗ್ರಾಮೀಣಾಭಿವೃದ್ಧಿಗಾಗಿ ನಂಜುಂಡಸ್ವಾಮಿ ಅವರ ಚಿಂತನೆಗಳನ್ನು ಅನುಷ್ಠಾನಕ್ಕೆ ತರುವ ಪ್ರಯತ್ನವನ್ನು ಮಾಡದೇ ಇರುವುದು ಗಮನಿಸಲೇ ಬೇಕಾದ ಸಂಗತಿ.

ಮತ್ತೊಂದು ವಿಪರ್ಯಾಸದ ಸಂಗತಿ ಎಂದರೆ ವಿಶ್ವಬ್ಯಾಂಕ್ ಹಾಗೂ ಐ.ಎಂ.ಎಫ್. ಗಳು ಕೃಷಿ ಕ್ಷೇತ್ರಕ್ಕೆ ಆರ್ಥಿಕ ನೆರವನ್ನು ನೀಡಲು ನಿರಾಕರಿಸುತ್ತವೆ. ಬದಲಿಗೆ ನಗರಗಳ ಅಭಿವೃದ್ಧಿ, ಉದ್ಯಾನವನ, ರಸ್ತೆ ನಿರ್ಮಾಣ, ಮೆಟ್ರೋ ಯೋಜನೆಗಳಿಗೆ ಸಾಲದ ನೆರವನ್ನು ನೀಡುತ್ತವೆ. ಹೀಗೆ ನಗರವನ್ನು ಅಲಂಕರಿಸಲು ಸಾಲದ ನೆರವನ್ನು ನೀಡುವುದರ ಹಿಂದಿನ ಉದ್ದೇಶವನ್ನು ಎಂ.ಡಿ.ಎನ್ ಚಿಂತನೆಗಳು ರಟ್ಟುಮಾಡಿವೆ. ಬಹುಸಂಖ್ಯಾತ ಶೇಕಡಾ ೭೫ ಭಾಗದ ಜನರು ವಾಸಿಸುತ್ತಿರುವ ಗ್ರಾಮಗಳನ್ನು ಹಾಗೂ ಕೃಷಿ ಕ್ಷೇತ್ರವನ್ನು ನಿರ್ಲಕ್ಷಿಸುತ್ತಿವೆ. ಕೃಷಿಗಾಗಿ ಬೀಜ, ಗೊಬ್ಬರ, ಕ್ರಿಮಿನಾಶಕ, ಕೃಷಿ ಸಲಕರಣೆಗಳನ್ನು ಕೊಳ್ಳಲು ನೀಡುತ್ತಿದ್ದ ಸಬ್ಸಿಡಿಯನ್ನು ಸಂಪೂರ್ಣ ತೆಗೆದುಹಾಕಿರುವುದರ ಜೊತೆಗೆ ಬೆಳೆದ ಬೆಳೆಗೆ ವೈಜ್ಞಾನಿಕ ಬೆಲೆ ಸಿಗದ ಕಾರಣದಿಂದಾಗಿ ಕೃಷಿಯಲ್ಲಿ ನಿರಾಸಕ್ತಿ ತಳೆದು ನಗರಗಳ ಕಡೆ ವಲಸೆ ಆರಂಭಿಸಿದ್ದಾರೆ. ಇದೇ ಪರಿಸ್ಥಿತಿ ಮುಂದುವರಿದರೆ ಮುಂದೊಂದು ದಿನ ಜೀವ ಉಳಿಸಿಕೊಳ್ಳಲು ಬೇಕಾಗಿರುವ ಅಹಾರಕ್ಕಾಗಿ ಕಿತ್ತಾಟ ಮಾಡುವ ಕಾಲ ದೂರ ಇಲ್ಲ.

ಭಾರತ ದೇಶದ ಬಹುಸಂಖ್ಯಾತ ಜನ ಕೃಷಿಯಲ್ಲೇ ಬದುಕು ಕಟ್ಟಿಕೊಂಡಿದ್ದಾರೆ. ಆದ್ದರಿಂದ ಭಾರತದ ಕೃಷಿಯನ್ನು ನಿರಾಕರಿಸಲು ಸಾಧ್ಯವೇ ಇಲ್ಲ. ಈ ಬೃಹತ್ ದೇಶ ಅಷ್ಟೇ ಪ್ರಮಾಣದ ಜನಸಂಖ್ಯೆಯನ್ನು ಹೊಂದಿರುವುದರಿಂದ ಕೃಷಿಯಿಂದ ವಿಮುಖವಾಗಲು ಸಾಧ್ಯವೇ ಇಲ್ಲ. ಹಾಗೆಂದ ಮಾತ್ರಕ್ಕೆ ಕೈಗಾರಿಕೆಯನ್ನು ನಿರ್ಲಕ್ಷಿಸುವುದೆಂದಲ್ಲ. ಆಯ್ಕೆಗಳು ಜಗತ್ತಿನೊಂದಿಗೆ ಸಾಗಬೇಕಾದರೆ ಕೈಗಾರಿಕೆ ಅನಿವಾರ್ಯ. ಇಂಥ ದ್ವಂದ್ವದಲ್ಲಿ ಆಯ್ಕೆಗಳು ಬಹಳ ಸೂಕ್ಷ್ಮವಾಗಿವೆ. ಆದ್ದರಿಂದ ಕೃಷಿಗೆ ಧಕ್ಕೆಯಾಗದಂತೆ ಕೈಗಾರಿಕೆಗಳನ್ನು ಸ್ಥಾಪಿಸುವುದು ಈ ಹೊತ್ತಿನ ಅನಿವಾರ್ಯ.

ಎಪ್ಪತ್ತರ ದಶಕದವರೆಗೆ ಭೂ ಒಡೆತನಕ್ಕೆ ಸಂಬಂಧಿಸಿದ ಪ್ರಶ್ನೆಗಳು ಎದುರಾದವು. ಆ ಸಮಸ್ಯೆ ನಿವಾರಣೆಯಾಗುತ್ತಿದ್ದಂತೆಯೇ ಬೆಳೆದ ಬೆಳೆಗಳಿಗೆ ಸಂಬಂಧಿಸಿದ ಬೆಲೆ ಪ್ರಶ್ನೆಗಳು ಹುಟ್ಟಿಕೊಂಡವು. ರೈತರು ವೈಜ್ಞಾನಿಕ ಬೆಲೆಗಾಗಿ ಹಾಗೂ ಸರ್ಕಾರದ ನೀತಿಗಳ ವಿರುದ್ಧ ಹೋರಾಟ ಮಾಡಲು ರಚಿಸಿಕೊಂಡ ಸಂಘಟನೆಯೇ 'ಕರ್ನಾಟಕ ರಾಜ್ಯ ರೈತ ಸಂಘ'. ಮೊದಲಿಗೆ ನಂಜುಂಡಸ್ವಾಮಿ ಅವರು ರೈತ ಸಂಘದಲ್ಲಿ ರಾಜ್ಯ ಸಂಚಾಲಕರಾಗಿ ಅನಂತರ ಅಧ್ಯಕ್ಷರಾಗಿ ಅದರ ನಾಯಕತ್ವವನ್ನು ವಹಿಸಿಕೊಂಡು ಹೋರಾಟಗಳನ್ನು ನಡೆಸಿದರು. ಇವು ಅವರ ಕೃಷಿ ಪರ ಕಾಳಜಿಗೆ ನಿದರ್ಶನವಾಗಿವೆ.

ನಂಜುಂಡಸ್ವಾಮಿ ಅವರ ಹೋರಾಟದ ಫಲವಾಗಿ ಲೆವಿ ಪದ್ಧತಿ, ರೈತರ ಮನೆ ಜಪ್ತಿ ತಡೆ ಹಾಗೂ ಆಕ್ರಮ ನೀರಾವರಿ ರದ್ದು, ತುಂಡು ಭೂಮಿ ಕಾಯಿದೆ ರದ್ದು ಪಡಿಸಿದ್ದು ಅಲ್ಲದೇ ವಿದೇಶೀ ಪ್ರಭಾವೀ ಶಕ್ತಿಗಳ ವಿರುದ್ಧ ಹೋರಾಡಿದ ವ್ಯಕ್ತಿ ನಂಜುಂಡಸ್ವಾಮಿ ಅವರಾಗಿದ್ದಾರೆ. ಹೋರಾಟಗಳು ಮೊದಲಿಗೆ ಕಬ್ಬು

ಹಾಗೂ ಭತ್ತದ ಬೆಳೆಗಳಿಗೆ ಸೀಮಿತವಾಗಿದ್ದವು. ಕ್ರಮೇಣ ಎಲ್ಲಾ ಕೃಷಿ ಉತ್ಪನ್ನಗಳನ್ನು ತಮ್ಮ ಹೋರಾಟದ ಭಾಗವಾಗಿ ಸೇರಿಸಿಕೊಂಡರು. ಹೀಗೆ ಆರಂಭವಾದ ಹೋರಾಟಗಳ ಜೊತೆಯಲ್ಲೇ ದೀರ್ಘಾವಧಿಯ ಆಡಳಿತ ನಡೆಸಿದ್ದ ಕಾಂಗ್ರೆಸ್ ಸರ್ಕಾರವನ್ನು ಮೊದಲ ಬಾರಿಗೆ ಅಧಿಕಾರದಿಂದ ಇಳಿಸುವ ಪ್ರಯತ್ನವನ್ನು ನಂಜುಂಡಸ್ವಾಮಿ ಅವರ ನೇತೃತ್ವದಲ್ಲಿ ನಡೆಸಿದ್ದು ದಾಖಲಾರ್ಹವಾದುದು. ೧೯೮೩ರಲ್ಲಿ ಶಕ್ತಿ ಸಮತೋಲನತೆಯ ಸಿದ್ಧಾಂತವನ್ನು ಅಳವಡಿಸಿಕೊಂಡು ಜನತಾ ಪಕ್ಷಕ್ಕೆ ಸರ್ಕಾರ ರಚಿಸಲು ಬೆಂಬಲ ನೀಡಿದ್ದರೂ ಕರ್ನಾಟಕ ರಾಜ್ಯ ರೈತ ಸಂಘದ ಉದ್ದೇಶ ಹಾಗೂ ಬೇಡಿಕೆಗಳ ವಿರುದ್ಧ ಕಾರ್ಯಾಚರಣೆಯನ್ನು ನಡೆಸಿತು. 'ಮತದಾರರ ಅಭ್ಯರ್ಥಿ' ಎಂಬ ಹೊಸ ತತ್ತ್ವವನ್ನು ಜಾರಿಗೆ ತಂದರು. ಇವರ ಉದ್ದೇಶ ಕಾಂಗ್ರೆಸ್ ಅಥವಾ ಜನತಾ ಪಕ್ಷಕ್ಕೆ ಬೆಂಬಲ ನೀಡದೆ ಇರುವುದೇ ಆಗಿತ್ತು. ಅಂತಿಮವಾಗಿ ಕರ್ನಾಟಕ ರಾಜ್ಯ ರೈತ ಸಂಘ ಸದಸ್ಯರು ಪ್ರತ್ಯೇಕ ರಾಜಕೀಯ ಪಕ್ಷ ರಚಿಸಿ ರಾಜಕೀಯ ಪ್ರವೇಶಿಸಲು ನಿರ್ಧರಿಸಿದ್ದು ಸಂಘದಲ್ಲಿ ಆಂತರಿಕ ಕಲಹಕ್ಕೆ ಅವಕಾಶವಾಯಿತು. 'ಕನ್ನಡ ದೇಶ' ಎಂಬ ಪಕ್ಷವನ್ನು ೧೯೮೭ ರಲ್ಲಿ ರಚಿಸಿದರೂ, ಈ ಪಕ್ಷ ತನ್ನ ಬೆಂಬಲದ ತಳಪಾಯವನ್ನು ಹೆಚ್ಚಿಸಲು ಭಾಷೆ ಮತ್ತು ದಲಿತ ವಿಷಯಗಳನ್ನು ತನ್ನ ಸಿದ್ಧಾಂತಗಳಲ್ಲಿ ಸೇರಿಸಿಕೊಂಡಿತು. ಆದರೆ ಇದರಲ್ಲೂ ಸಫಲತೆ ಕಾಣಲಾಗಲಿಲ್ಲ.

ಎರಡನೇ ದರ್ಜೆ ಪ್ರಜೆಯೆಂಬ ಕೀಳರಿಮೆಯನ್ನು ರೈತರ ಮನಸ್ಸಿನಿಂದ ನಾಶ ಮಾಡಿ ಸರ್ಕಾರಿ ನೌಕರಶಾಹಿಯ ವಿರುದ್ಧ ಆತ್ಮಗೌರವದಿಂದ ನಿಲ್ಲುವಂತೆ ಮಾಡಿದ್ದು ನಂಜುಂಡಸ್ವಾಮಿ ಅವರ ಹೋರಾಟದ ಫಲ ಎಂದೇ ಹೇಳಬಹುದು. ಸಂಘಟನಾಕಾರರು ರೈತ ಸಂಘವನ್ನು ರಾಜಕೀಯ ಪಕ್ಷಗಳ ಒಳಗೆ ಸೇರಿಸಲು ನಡೆಸಿದ ಕಸರತ್ತು ಅಷ್ಟಿಷ್ಟಲ್ಲ. ನಂಜುಂಡಸ್ವಾಮಿ ಅವರು ಇಂಥ ಉದ್ದೇಶಗಳಿಗೆ ಅವಕಾಶ ಮಾಡಿಕೊಡದೆ ಚಳವಳಿಗೊಂದು ತಾತ್ವಿಕ, ಸೈದ್ಧಾಂತಿಕ ಬುನಾದಿ ಹಾಕಿಕೊಟ್ಟರು. ಯಾವ ಕಾರಣಕ್ಕೂ ಚಳವಳಿಯೊಳಗೆ ರಾಜಕಾರಣವು ಪ್ರವೇಶ ಮಾಡದಂತೆ ಜಾಗೃತಿ ವಹಿಸಿದರು. ಅದರ ಹಿಂದೆ ಇದ್ದ ಉದ್ದೇಶವೆಂದರೆ ರಾಜಕೀಯ ನಾಯಕರು ರೈತ ಸಂಘದ ಚಳವಳಿಗಳನ್ನು ತಮ್ಮ ಪಕ್ಷಗಳ ಹಿತಾಸಕ್ತಿಗಳಿಗೆ ಬಳಸಿಕೊಳ್ಳುವ ಸಾಧ್ಯತೆಗಳಿರುತ್ತವೆ. ಎಂಬುದೇ ಆಗಿತ್ತು. ಇದರಿಂದ ಮೂವತ್ತು ವರ್ಷಗಳ ರೈತ ಚಳವಳಿಯ ಇತಿಹಾಸದಲ್ಲಿ ಕರ್ನಾಟಕ ರಾಜ್ಯ ರೈತ ಸಂಘವನ್ನು ಸರ್ಕಾರಕ್ಕೆ ನೋಂದಣಿ ಮಾಡಿಸುವ ಕೆಲಸಕ್ಕೆ ಅವರು ಬದುಕಿರುವವರೆಗೂ ಕೈ ಹಾಕದಂತೆ ಮಾಡಿದ್ದು. ಅವರ ಮರಣದ ನಂತರ ಇತ್ತೀಚೆಗೆ 'ಹಸಿರು ಸೇನೆ'ಯ ಯುವಕರು ಸಂಘವನ್ನು ನೋಂದಣಿ ಮಾಡಿಸಿರುವುದು ವಿಪರ್ಯಾಸದ ಸಂಗತಿ.

ಚುನಾವಣೆಗೆ ಸ್ಪರ್ಧಿಸುವುದಾದರೆ ಚಳವಳಿಯಲ್ಲೇ ಇದ್ದು ಸ್ಪರ್ಧಿಸಿ ಎಂಬ ಸಲಹೆಗಳನ್ನು ನೀಡಿದವರು. ಅದರಂತೆಯೇ ಅದನ್ನು ಮಾಡಿ ತೋರಿಸಿದರು. ರೈತರ ಸರ್ಕಾರವನ್ನು ರಚಿಸಿ ರೈತರಿಗೆ ಅನುಕೂಲ ಆಗುವಂಥ ಕಾನೂನನ್ನು ಜಾರಿಗೊಳಿಸುವ ಅವರ ಕನಸು ಈಡೇರಲಿಲ್ಲ. ರಾಜಕೀಯ ಅಧಿಕಾರದ ಪ್ರಶ್ನೆ ಬಂದಾಗ ಜಾತಿ ಪ್ರಧಾನ ಪಾತ್ರ ವಹಿಸುವುದರಿಂದ ರೈತ ಸಂಘ ಸರ್ಕಾರ ರಚಿಸುವಲ್ಲಿ ವಿಫಲವಾಯಿತು. ಹಾಗೆಯೇ ನಂಜುಂಡಸ್ವಾಮಿ ಅವರಿಗೆ ವಿದೇಶ ಪ್ರವಾಸದ ಆಸೆ ಹೆಚ್ಚಾಗಿದೆ. ಗ್ರಾಮಗಳ ಸಮಸ್ಯೆಗಳ ಬದಲಿಗೆ

ಅಂತರಾಷ್ಟ್ರೀಯ ಮಟ್ಟದ ಸಮಸ್ಯೆಗಳ ಕಡೆ ಗಮನಹರಿಸುತ್ತಿದ್ದಾರೆ ಎಂದೆಲ್ಲಾ ದೂಷಿಸಿದರು. ಆದರೆ ವಾಸ್ತವ ಸ್ಥಿತಿ ಬೇರೆಯೇ ಆಗಿತ್ತು. ಮುಂದೆ ಹೆಚ್ಚಿನ ಸಮಸ್ಯೆಗಳನ್ನು ಉಂಟುಮಾಡುವ ಅಂತರಾಷ್ಟ್ರೀಯ ಪ್ರಭಾವಗಳನ್ನು ಆರಂಭದಲ್ಲೇ ತಡೆಯುವುದು ಇವರ ಉದ್ದೇಶವಾಗಿತ್ತು. ಇದು ಸಹ ಸಂಘಟನಾಕಾರರಿಗೆ ಅರ್ಥವಾಗದೇ ಹೋದದ್ದು ಕರ್ನಾಟಕ ರಾಜ್ಯ ರೈತ ಸಂಘ ಒಡೆಯಲು ಕಾರಣವಾದ ಅಂಶಗಳಲ್ಲಿ ಪ್ರಧಾನವಾದುದು. ನಂಜುಂಡಸ್ವಾಮಿ ಅವರ ಮೇಲೆ ಅನೇಕರು ಆರೋಪಗಳನ್ನು ಹೊರಿಸಿದ್ದಾರೆ. ಅವುಗಳಲ್ಲಿ ಸರ್ವಾಧಿಕಾರಿ ಎಂದು ದೋಷಿಸುವುದರ ಜೊತೆಗೆ ಅವರ ಮೇಲೆ ಇರುವ "ಅಮೃತ ಭೂಮಿ"ಗೆ ಸಂಬಂಧಿಸಿದ ಜಮೀನಿನ ವಿಷಯಗಳನ್ನು ಕುರಿತು ಇನ್ನೂ ಹೆಚ್ಚಿನ ಸಂಶೋಧನೆಗಳು ಬೆಳಕು ಚೆಲ್ಲಬೇಕಾಗಿವೆ.

ನಂಜುಂಡಸ್ವಾಮಿ ಅವರು ಜಾಗತೀಕರಣದ ಪ್ರಬಲ ವಿರೋಧಿಗಳಾಗಿದ್ದರು. ಜಾಗತೀಕರಣ ದೇಶದ ಆತ್ಮಗೌರವವನ್ನೇ ಹೊಸಕಿ ಹಾಕಿ ಬಿಡಬಲ್ಲದು ಎಂದು ಹೇಳಿರುವ ಹೇಳಿಕೆಗಳನ್ನು ಪ್ರಸ್ತುತವಾಗಿಯೂ ಅನ್ವಯಿಸಬಹುದು. ಅದೇ ರೀತಿ ಭಾರತಕ್ಕೆ ಜಾಗತೀಕರಣ ಪ್ರವೇಶದ ವಿರುದ್ಧ ದೇಶದಾದ್ಯಂತ ಬಹುರೂಪಿ ಹೋರಾಟ, ಪ್ರತಿಭಟನೆಗಳನ್ನು ಮಾಡಿದ್ದಾರೆ. ಅದೆಲ್ಲವನ್ನು ಧಿಕ್ಕರಿಸಿದ ಪಿ.ವಿ. ನರಸಿಂಹರಾವ್ ಸರ್ಕಾರ ಮುಂದಾಲೋಚನೆಯಿಲ್ಲದೆ ಗ್ಯಾಟ್ ಒಪ್ಪಂದಕ್ಕೆ ಸಹಿ ಹಾಕಿ ಮುಕ್ತ ಮಾರುಕಟ್ಟೆ ನೀತಿಯನ್ನು ಜಾರಿಗೆ ತಂದಿತು. ಇದು ಒಪ್ಪಂದಕ್ಕೆ ಹಾಕಿದ ಸಹಿಯಲ್ಲ. ಬದಲಿಗೆ 'ಜಗತ್ತಿನ ಗುಲಾಮಗಿರಿಗೆ ಭಾರತ ತನ್ನನ್ನು ತಾನು ಒಪ್ಪಿಸಿಕೊಂಡು ಸಹಿ' ಎಂದು ಹೇಳಿದರೆ ತಪ್ಪಾಗಲಾರದು. ಜಾಗತೀಕರಣ ತಂದೊಡ್ಡುವ ಸವಾಲುಗಳಿಗೆ ದೇಶದ ಜನರನ್ನು ಸಿದ್ಧಗೊಳಿಸುವ ಮುನ್ನವೇ ಅದು ಪ್ರವೇಶ ಮಾಡಿದ್ದು ಇಂದಿನ ಅತಂತ್ರ ಸ್ಥಿತಿಗೆ ಕಾರಣವಾಗಿದೆ. ಅಂದು ಸೃಷ್ಟಿಯಾದ ವಿಷವರ್ತುಲದಲ್ಲಿ ದೇಶ ಹೊರಬರಲಾಗದ ರೀತಿಯಲ್ಲಿ ಸಿಕ್ಕಿ ಹಾಕಿಕೊಂಡಿದೆ. ಇದರ ವಿಮೋಚನೆಗೆ ಭಾರತ ಮತ್ತೊಂದು ಸ್ವಾತಂತ್ರ್ಯ ಹೋರಾಟಕ್ಕೆ ಸಿದ್ಧವಾಗಬೇಕಾಗಿದೆ.

ಭಾರತದ ರೈತರು ಜಾಗತೀಕರಣದ ಭರಾಟೆಯಿಂದ ವಿದೇಶಿ ಸರಕುಗಳ ಜೊತೆಗೆ ಸ್ಪರ್ಧಿಸಲಾಗದೆ ಬೆಲೆ ಕುಸಿತದಿಂದ ನಷ್ಟವನ್ನು ಅನುಭವಿಸುತ್ತಿದ್ದಾರೆ. ಇದು ರಾಷ್ಟ್ರದ ಆದಾಯ ಹಾಗೂ ರೈತನ ತಲಾದಾಯ ಕಡಿಮೆ ಆಗುವುದಕ್ಕೆ ಕಾರಣವಾಗಿದೆ. ಹಾಗೆಯೇ ರಾಷ್ಟ್ರದ ಅಭಿವೃದ್ಧಿಯೂ ಕೂಡ ಅಲ್ಲದೇ ಬಹುರಾಷ್ಟ್ರೀಯ ಕಂಪೆನಿಗಳು ಕೃಷಿಕರು ಬಳಸುವ ಬೀಜ, ಗೊಬ್ಬರ, ಕೀಟನಾಶಕಗಳ ಮೇಲೂ ನಿಯಂತ್ರಣ ಸಾಧಿಸಿವೆ ಹಾಗೂ ಸಾಧಿಸುತ್ತಲೂ ಇವೆ. ಪಾಶ್ಚಾತ್ಯ ರಾಷ್ಟ್ರಗಳು ತಮ್ಮ ತಾಂತ್ರಿಕ ಜ್ಞಾನವನ್ನು ಬೌದ್ಧಿಕ ಆಸ್ತಿ ಹಕ್ಕಿನ ಪದ್ಧತಿಗಳಾದ ಸ್ವಾಮ್ಯದ ಸನ್ನದು, ಸ್ವಾಮ್ಯದ ಹಕ್ಕುಗಳು, ರೈತರ ಒಡೆತನದ ಹಕ್ಕುಗಳನ್ನು ಕಸಿದುಕೊಳ್ಳುವಲ್ಲಿ ಮಾಡಿರುವ ಪ್ರಯತ್ನವನ್ನು ಎಂ.ಡಿ.ಎನ್. ರೈತರ ಮುಂದೆ ತೆರೆದಿಟ್ಟರು. ಇವೆಲ್ಲದರ ಪರಿಣಾಮ ಕೃಷಿ ಕ್ಷೇತ್ರದ ಮೇಲೆ ಬೀರಿದೆ. ಅನ್ನ ನೀಡುವ ಕೈ ಆಗಿದ್ದ ರೈತ ಇಂದು ರೇಷನ್ ಕಾರ್ಡಿಗಾಗಿ ಸಾಲಿನಲ್ಲಿ ನಿಲ್ಲುವ ಪರಿಸ್ಥಿತಿ ನಿರ್ಮಾಣವಾಗಿದೆ. ಬಿ.ಟಿ. ತಳಿಗಳ ವಿರುದ್ಧ ನೇರ ಕ್ರಮಗಳನ್ನು ಮಾಡಿದ್ದರೂ, ಇಂದಿಗೂ ವಿಜ್ಞಾನಿಗಳು ಹಾಗೂ ಸರ್ಕಾರಗಳು ಈ ತಳಿಗಳ ಸಂಶೋಧನೆಯಲ್ಲಿಯೇ ತೊಡಗಿದ್ದಾರೆ. ತಿನ್ನುವ ಆಹಾರವನ್ನು ವಿಷವನ್ನಾಗಿಸುವ ಪ್ರಯತ್ನವನ್ನು ಬಿಟ್ಟು, ಪರಿಸರ ಹಾಗೂ ಮಾನವನಿಗೆ ಹಾನಿ ಮಾಡದ ರೀತಿಯಲ್ಲಿ

ಬೆಳೆಗಳನ್ನು ಅಭಿವೃದ್ಧಿ ಪಡಿಸಬೇಕಾಗಿರುವುದು ಪ್ರಸ್ತುತ ಸಂದರ್ಭದ ಅನಿವಾರ್ಯತೆ. ಅಂದು ನಂಜುಂಡಸ್ವಾಮಿ ಅವರು ಹೇಳಿದ್ದ ವಿದೇಶಿ ಮಾರುಕಟ್ಟೆ ಶಕ್ತಿಗಳ ವಿರುದ್ಧ ಸರ್ಕಾರ ಗಮನಹರಿಸಿದ್ದಿದ್ದರೆ ಇಂದು ಈ ಪರಿಸ್ಥಿತಿ ಎದುರಾಗುತ್ತಿರಲಿಲ್ಲ. ಜಾಗತೀಕರಣದ ಪ್ರಭಾವ ಕೃಷಿ ಕ್ಷೇತ್ರದ ಮೇಲೆ ಮಾತ್ರವಲ್ಲದೆ ಕೈಗಾರಿಕೆ, ನೈಸರ್ಗಿಕ ಸಂಪತ್ತು, ಬ್ಯಾಂಕಿಂಗ್ ಕ್ಷೇತ್ರ, ಶಿಕ್ಷಣ, ಉದ್ಯೋಗ ಹಾಗೂ ಎಲ್ಲ ಬಗೆಯ ಸರ್ಕಾರಿ, ಖಾಸಗಿ ಕ್ಷೇತ್ರಗಳಲ್ಲಿಯೂ ತನ್ನ ಪ್ರಭಾವವನ್ನು ಬೀರುತ್ತಲೇ ಇದೆ. ಕೃಷಿ ಕ್ಷೇತ್ರದ ಮೇಲೆ ಜಾಗತೀಕರಣ ಬೀರಿರುವ ಪರಿಣಾಮ.

ರೈತರ ಅಭಿವೃದ್ಧಿಯೇ ಈ ದೇಶದ ಅಭಿವೃದ್ಧಿಯಾಗಿದೆ. ಆದರೆ ಕೃಷಿ ಹಾಗೂ ಕೃಷಿಕ ಸಮಾಜ ಅಗತ್ಯವಾಗಿ ಪಡೆಯಬೇಕಾದ ಸಹಕಾರವನ್ನು ಇಂದಿನ ಸರ್ಕಾರಗಳು ನೀಡದೇ ಇರುವುದರಿಂದ ರೈತ ಆತ್ಮಹತ್ಯೆಗೆ ಮೊರೆಹೋಗಬೇಕಾದ ಸ್ಥಿತಿ ನಿರ್ಮಾಣವಾಗಿದೆ. ರೈತರ ಆತ್ಮಹತ್ಯೆಯ ಪ್ರಕರಣಗಳು ದಿನೇ ದಿನೇ ಹೆಚ್ಚಾಗುತ್ತಿವೆ. ಇದಕ್ಕೆ ರೈತರ ಮೌಢ್ಯಗಳು, ಜಾತಿಯ ಸಣ್ಣತನ, ಅನಿವಾರ್ಯತೆಗಳೇ ಅಲ್ಲದೆ ಕೆಲವು ರೈತರು ಮಾಡುವ ತಪ್ಪುಗಳಿಂದ ಬ್ಯಾಂಕುಗಳು ಕೂಡ ರೈತರನ್ನು ಶೋಷಿಸುತ್ತಿವೆ. ಚೀನಾ ದೇಶದ ಮಾದರಿಯಲ್ಲಿ ಬಡ್ಡಿ ರಹಿತ ಕೃಷಿ ಸಾಲ ನೀಡುವಿಕೆ, ಉತ್ಪಾದನಾ ವೆಚ್ಚ ಆಧಾರಿತ ಬೆಂಬಲ ಬೆಲೆ ನಿಗದೀಕರಣ, ಮಾರುಕಟ್ಟೆಯ ನಿಯಂತ್ರಣ, ಸಾಲ ಮರುಪಾವತಿಗೆ ಸಂಬಂಧಿಸಿದ ನಿಯಮಾವಳಿಗಳು ಹಾಗೂ ಕ್ರಮಗಳನ್ನು ಮಾನವೀಯ ನೆಲೆಯಲ್ಲಿ ಸ್ಥಿತಿಸ್ಥಾಪಕತೆ ಹೊಂದುವಂತೆ ರಚಿಸುವುದು. ಅಂತರಾಷ್ಟ್ರೀಯ ಕೃಷಿ ಆಧಾರಿತ ಬಹುರಾಷ್ಟ್ರೀಯ ಕಂಪೆನಿಗಳ ನಿಯಂತ್ರಣಗಳು ಮತ್ತು ಅಂತರಾಷ್ಟ್ರೀಯ ಹಣಕಾಸಿನ ಸಂಘ ಸಂಸ್ಥೆಗಳ ಪ್ಯಾಕೇಜ್‌ಗಳನ್ನು ಭಾರತೀಕರಣಗೊಳಿಸಿ ಬಳಸುವಿಕೆಯಂಥ ಕ್ರಮಗಳಿಂದ ರೈತರ ಪ್ರಸ್ತುತ ಅಸ್ಥಿರ ಹಾಗೂ ಅಭದ್ರವಾದ ಮನಃಸ್ಥಿತಿಗೆ ಸ್ಥಿರ ಹಾಗೂ ಭದ್ರವಾದ ರಚಾನಾತ್ಮಕ ನಿಯಮಗಳನ್ನು ಸರ್ಕಾರವು ಇಚ್ಛಾಶಕ್ತಿಯಿಂದ ರಚಿಸಿ ರೈತರ ಆತ್ಮಸ್ಥೈರ್ಯ ಹೆಚ್ಚಿಸಿ ಆತ್ಮಹತ್ಯೆ ತಡೆಗಟ್ಟಬಹುದಾಗಿದೆ. ಇಂಥ ಅಂಶಗಳ ಕಡೆಗೆ ಗಮನಹರಿಸಬೇಕಾಗಿರುವುದು ಮುಖ್ಯ ಅನ್ನಿಸಿಕೊಳ್ಳುತ್ತದೆ.

ನಂಜುಂಡಸ್ವಾಮಿ ಅವರ ಮೇಲೆ ಎಷ್ಟೇ ಆರೋಪಗಳಿದ್ದರೂ, ಅವರು ರೂಪಿಸಿದ ಹೋರಾಟಗಳು, ಕೃಷಿಯ ಬಗೆಗೆ ತಳೆದ ನಿಲುವುಗಳು, ಚಿಂತನೆಗಳು ಗಮನಾರ್ಹವಾದವು. ಕೇವಲ ಸೈದ್ಧಾಂತಿಕ ನಿಲುವುಗಳಷ್ಟೇ ನಂಜುಂಡಸ್ವಾಮಿ ಅವರ ವೈಶಿಷ್ಟ್ಯವಾಗಿರಲಿಲ್ಲ. ಆದರೆ ಅದನ್ನು ವಿರೋಧಿಸುವ ಪಟ್ಟಭದ್ರರನ್ನು ಪ್ರತ್ಯೇಕಿಸಿ ಅವರ ಆಟ ನಡೆಯದಂತೆ ಮಾಡಿ, ತಾವು ನಂಬಿದ ನಿಲುವುಗಳನ್ನು ಜಾರಿಗೆ ತರಲು ಕಾರ್ಯಕ್ರಮಗಳ ಮೂಲಕ ಪ್ರಯತ್ನಿಸಿದ್ದು ಅವರ ವಿಶೇಷತೆ.

* * *

ಅನುಬಂಧ - ೧

ಆಕರಗಳು

೧. ಪ್ರಾಥಮಿಕ ಆಕರಗಳು

೨. ಪೂರಕ ಸಾಹಿತ್ಯ

೩. ಲೇಖನಗಳು

೪. ನಿಯತಕಾಲಿಕೆಗಳು

೧. ಪ್ರಾಥಮಿಕ ಆಕರಗಳು

ಅ. ನಂಜುಂಡಸ್ವಾಮಿ ಅವರ ಸಮಗ್ರ ಬರಹಗಳು

೦೧. ನಂಜುಂಡಸ್ವಾಮಿ.ಎಂ.ಡಿ ಹಾಗೂ ಬಾಬಾಗೌಡ ಪಾಟೀಲ., ವಿಧಾನ ಸಭೆಯಲ್ಲಿ ರೈತ ಸಂಘ ೧೯೯೧ - ೯೩, ಶಿವಮೊಗ್ಗ; ಕರ್ನಾಟಕ ರಾಜ್ಯ ರೈತ ಸಂಘ

೦೨. ನಂಜುಂಡಸ್ವಾಮಿ.ಎಂ.ಡಿ ಹಾಗೂ ಬಾಬಾಗೌಡ ಪಾಟೀಲ., ವಿಧಾನ ಸಭೆಯಲ್ಲಿ ರೈತ ಸಂಘ ೧೯೯೦ - ೯೧, ಶಿವಮೊಗ್ಗ; ಕರ್ನಾಟಕ ರಾಜ್ಯ ರೈತ ಸಂಘ

೦೩. ನಂಜುಂಡಸ್ವಾಮಿ.ಎಂ.ಡಿ, (೨೦೦೦), ರೈತ ಚಳವಳಿ-೨೦೦೦ ಮತ್ತೆ ಪರ್ಯಾಯ ಸರ್ಕಾರದೆಡೆಗೆ, ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ

೦೪. ನಂಜುಂಡಸ್ವಾಮಿ.ಎಂ.ಡಿ, ನಮ್ಮನಾಡು, ಶಿವಮೊಗ್ಗ; ಕರ್ನಾಟಕ ರಾಜ್ಯ ರೈತ ಸಂಘ

೦೫. ನಂಜುಂಡಸ್ವಾಮಿ.ಎಂ.ಡಿ., (ಮೂಲ), (೨೦೦೬), ನಾನೇಕೆ ಕೃಷಿಯಲ್ಲಿ ಬಹುರಾಷ್ಟ್ರೀಯ ಕಂಪೆನಿಗಳನ್ನು ವಿರೋಧಿಸುತ್ತೇನೆ?, (ಅನು: ಷಣ್ಮುಖಪ್ಪ.ಎ), ಶಿವಮೊಗ್ಗ; ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ

೦೬. ನಂಜುಂಡಸ್ವಾಮಿ.ಎಂ.ಡಿ., (೧೯೭೯), ಜಾತಿ ವಿನಾಶ ಮತ್ತು ಹಾವನೂರ ವರದಿ, (ಹಾವನೂರು ವರದಿ ಸಮಗ್ರ ಅಧ್ಯಯನ, ಸಂ:೧, ದೇವೇಂದ್ರ ದೇಸಾಯಿ), ಮೈಸೂರು; ಚಿತ್ರಶಿಲ್ಪ ಪ್ರಕಾಶನ

೦೭. 'ಮಾನವ' ಸಂಚಿಕೆಗಳು

ಆ. ಕಾಗದ ಪತ್ರಗಳು ಹಾಗೂ ಕರ ಪತ್ರಗಳು

ಇ. ಭಾಷಣಗಳು : 'ಛಡಿವಿಟು-೧' ಸಿ.ಡಿಯಲ್ಲಿ ಇರುವಂತೆ ಉಲ್ಲೇಖಗಳು

೦೧. ೧೯೭೫ರಲ್ಲಿ ಜನತಾ ಸರ್ಕಾರದ ವಿರುದ್ಧ ನಡೆಸಿದ ಐತಿಹಾಸಿಕ ರಾಜ್ಯದ ರೈತರ ಪಾದಯಾತ್ರೆಯ ಭಾಷಣ.

೦೨. ೦೨.೦೧.೯೦ರಂದು ರೈತರನ್ನು ವಂಚಿಸುತ್ತಿರುವ ವಿಧಾನಸೌಧಕ್ಕೆ ಎಚ್ಚರಿಕೆ ಕೊಡಲು ಎಂಬ ಘೋಷಣೆಯಡಿ ಆಯೋಜಿಸಿದ್ದ ಬೃಹತ್ ರೈತ ಸಮಾವೇಶದ ಭಾಷಣ.

೦೩. ೧೯೯೧ರಲ್ಲಿ ವಿಧಾನಸೌಧದ ಮುಂದೆ ಹಮ್ಮಿಕೊಂಡಿದ್ದ ನಗುವ ಚಳವಳಿಯ ಭಾಷಣ.

೦೪. ೦೨.೦೨.೨೦೦೧ರಲ್ಲಿ ರಾಜ್ಯದಲ್ಲಿನ ವಿದ್ಯುಚ್ಛಕ್ತಿ ಸಮಸ್ಯೆಯ ಬಗ್ಗೆ ಹಮ್ಮಿಕೊಂಡಿದ್ದ ಚಳವಳಿಯ ಭಾಷಣ.

೦೫. ೦೪.೦೨.೨೦೦೧ರಲ್ಲಿ ಮುಕ್ತ ಆಮದು ನೀತಿಯ ವಿರುದ್ಧ ಹಮ್ಮಿಕೊಂಡಿದ್ದ ಐತಿಹಾಸಿಕ ಬಂಡೀಯಾತ್ರೆಯ ಬಗ್ಗೆ ಶಿವಮೊಗ್ಗದಲ್ಲಿ ಮೂಡಿದ ಭಾಷಣ.

೦೬. ೦೨.೧೦.೨೦೦೧ಲ್ಲಿ ನೀರಾ ಚಳವಳಿ ಹಾಗೂ ದೋಹಾದಲ್ಲಿ ಜರುಗಿದ ಡಬ್ಲ್ಯೂ.ಟಿ.ಓ. ಶೃಂಗ ಸಭೆಯ ವಿರುದ್ಧ ಹಮ್ಮಿಕೊಂಡಿದ್ದ ವಿಶ್ವ ರೈತ ಸಮಾವೇಶದ ಭಾಷಣ.

೦೭. ೧೯.೧೨.೨೦೦೧ರಂದು ಶಿವಮೊಗ್ಗದಲ್ಲಿ ಹಸಿರು ಸೇನೆಯ ಅಗತ್ಯದ ಬಗ್ಗೆ ಮಾಡಿದ ಉದ್ಘಾಟನಾ ಭಾಷಣ.

೦೮. ೦೯.೦೯.೨೦೦೩ರಲ್ಲಿ ಕ್ಯಾನ್ಕುನ್‌ನಲ್ಲಿ ನಡೆದ ಡಬ್ಲ್ಯೂ.ಟಿ.ಓ ಶೃಂಗ ಸಭೆಯ ವಿರುದ್ಧ ಹಮ್ಮಿಕೊಂಡಿದ್ದ ಸಮಾವೇಶದ ಭಾಷಣ.

ಈ. ಸಂದರ್ಶನಗಳು : ಪ್ರೊ. ನಂಜುಂಡಸ್ವಾಮಿ ಅವರೊಂದಿಗೆ

೧. ರಹಮತ್ ತರೀಕೆರೆ

೨. ಶೈಲಜಾ ಸಂತೋಷ್

೩. ದೇವನೂರು ಮಹದೇವ

(ಆಧಾರ: ನಟರಾಜ ಹುಳಿಯಾರ್., (ಸಂ), ಹಸಿರು ಸೇನಾನಿ)

೨. ಪೂರಕ ಸಾಹಿತ್ಯ

೦೧. ಅನಂತಮೂರ್ತಿ.ಯು.ಆರ್., (೨೦೦೫), ಭಾರತೀಪುರ, ಸಾಗರ; ಅಕ್ಷರ ಪ್ರಕಾಶನ

೦೨. ಒಡೆಯರ್.ಡಿ. ಹೆಗ್ಗಡೆ., ಜಾಗತೀಕರಣ, ಉದಾರೀಕರಣ, ಖಾಸಗೀಕರಣ ಮತ್ತು ಭಾರತ, ಮೈಸೂರು; ಗಜಾನನ ಪಬ್ಲಿಕೇಷನ್ಸ್

೦೩. ಒಡೆಯರ್.ಡಿ. ಹೆಗ್ಗಡೆ ಮತ್ತು ಅನ್ನಪೂರ್ಣೇಶ್ವರಿ., (೨೦೦೬), ಭಾರತದ ಆರ್ಥಿಕಾಭಿವೃದ್ಧಿ, ಮೈಸೂರು; ಅರ್ಜುನ್ ಪಬ್ಲಿಷಿಂಗ್ ಹೌಸ್

೦೪. ಕುಮಾರ್ ಕೆ.ಎಂ., (೨೦೦೮), ಕರ್ನಾಟಕದಲ್ಲಿನ ರೈತ ಚಳುವಳಿ, ಬೆಂಗಳೂರು; ಕನ್ನಡ ಸಾಹಿತ್ಯ ಪರಿಷತ್ತು

೦೫. ಗೋವಿಂದರಾಜು.ಸಿ.ಆರ್., (೨೦೦೬), ಕರ್ನಾಟಕದ ಏಕೀಕರಣ ಚಳವಳಿ ಮತ್ತು ಕನ್ನಡ ಸಾಹಿತ್ಯ, ಬೆಂಗಳೂರು; ಕನ್ನಡ ಮತ್ತು ಸಂಸ್ಕೃತಿ ಇಲಾಖೆ

೦೬. ಚನ್ನೇಶ.ಟಿ.ಎಸ್., (೨೦೦೮), ಕೃಷಿ ಮತ್ತು ಪೇಟೆಂಟ್, ಹಂಪಿ; ಪ್ರಸಾರಾಂಗ

೦೭. ಧನಂಜಯ., (೧೯೯೮), ಎ.ಸೋಸಿಯಾಲಜಿಕಲ್ ಸ್ಟಡಿ ಆಫ್ ಪೆಸೆಂಟ್ ಆರ್ಗನೈಜೇಷನ್ಸ್, ಶಿವಮೊಗ್ಗ ; ಕುವೆಂಪು ವಿ.ವಿ

೦೮. ನಟರಾಜ್ ಹುಳಿಯಾರ್., (ಸಂ), (೨೦೦೮), ಹಸಿರು ಸೇನಾನಿ, ಬೆಂಗಳೂರು; ಚಕ್ರ ಪ್ರತಿಷ್ಠಾನ

೦೯. ನರೇಂದ್ರ ರೈ ದೇರ್ಲ., (ಸಂ), (೨೦೦೦), ಲಂಕೇಶ್ ನೆನಪು, ದಕ್ಷಿಣ ಕನ್ನಡ; ಕರ್ನಾಟಕ ಸಂಘ

೧೦. ನಾಗರಾಜ್.ಎಂ.ಜಿ., (೨೦೦೬), ಕರ್ನಾಟಕ ರೈತ ಚಳುವಳಿ-ಸತ್ಯಾಗ್ರಹಗಳು, ಸಂಪುಟ-೧, ಬೆಂಗಳೂರು; ಕರ್ನಾಟಕ ವಿಧಾನ ಮಂಡಲದ ಗ್ರಂಥಾಲಯ ಸಮಿತಿ

೧೧. ನಾಗರಾಜ್.ಎಂ.ಜಿ., (೨೦೦೬), ಕರ್ನಾಟಕ ರೈತ ಚಳುವಳಿ-ಸತ್ಯಾಗ್ರಹಗಳು, ಸಂಪುಟ-೨, ಬೆಂಗಳೂರು; ಕರ್ನಾಟಕ ವಿಧಾನ ಮಂಡಲದ ಗ್ರಂಥಾಲಯ ಸಮಿತಿ

೧೨. ನಾಗರಾಜ್.ಎಂ.ಜಿ., (೨೦೦೬), **ಕರ್ನಾಟಕ ರೈತ ಚಳುವಳಿ-ಸತ್ಯಾಗ್ರಹಗಳು**, ಸಂಪುಟ-೩, ಬೆಂಗಳೂರು; ಕರ್ನಾಟಕ ವಿಧಾನ ಮಂಡಲದ ಗ್ರಂಥಾಲಯ ಸಮಿತಿ

೧೩. ನಾಗೇಶ್.ಎಚ್.ವಿ ಮತ್ತು ಪುನೀತ.ಎ.ಇ., (೧೯೮೪), **ಭಾರತದಲ್ಲಿ ರೈತ ಹೋರಾಟಗಳು**, ಧಾರವಾಡ; ಚಂದ್ರನಾಥ ಪ್ರಕಾಶನ

೧೪. ನಾಡಕರ್ಣಿ.ಎಂ.ವಿ., (೧೯೮೬), **ಕರ್ನಾಟಕ ರೈತ ಹೋರಾಟಗಳು**, ಬೆಂಗಳೂರು; ಪ್ರಿಂಟರ್ ಪ್ರಕಾಶನ

೧೫. ನಾಡಕರ್ಣಿ.ಎಂ.ವಿ., (೧೯೯೨), **ಫಾರ್ಮರ್ಸ್ ಮೂಮೆಂಟ್ ಇನ್ ಇಂಡಿಯಾ**, ನವದೆಹಲಿ; ಅಲೈಡ್ ಪಬ್ಲೀಷರ್ಸ್

೧೬. ಪೂರ್ಣಚಂದ್ರ ತೇಜಸ್ವಿ ಕೆ.ಪಿ., (೨೦೦೩), **ಅಣ್ಣನ ನೆನಪು**, ಮೈಸೂರು; ಪುಸ್ತಕ ಪ್ರಕಾಶನ

೧೭. ಪ್ರಹ್ಲಾದ್.ಡಿ.ವಿ., (ಸಂ), (೨೦೦೭), **ತೇಜಸ್ವಿ ಲೋಕ**, ಬೆಂಗಳೂರು; ಸಂಚಯ

೧೮. ಬಸವರಾಜ., (೧೯೮೧), **ಶಿವಮೊಗ್ಗ ರೈತ ಚಳವಳಿ**, ಬೆಂಗಳೂರು; ಸಮುದಾಯ ಪ್ರಕಾಶನ

೧೯. ಬಸವರಾಜ ತಂಬಾಕೆ., **ರೈತ ಸಂಘಟನೆ ಏಕೆ?**, ಬೀದರ; ಜಿಲ್ಲಾ ರೈತ ಸಂಘ

೨೦. ಬೋರಲಿಂಗಯ್ಯ.ಹಿ.ಚಿ., (ಸಂ), (೨೦೦೫), **ಕಾಗೋಡು ಚಳವಳಿ**, ಹಂಪಿ; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೧. ಬೋರಲಿಂಗಯ್ಯ.ಹಿ.ಚಿ., (ಸಂ), (೨೦೦೬), **ಅಭಿವೃದ್ಧಿ ಪಥ**, ಹಂಪಿ; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೨. ಮರುಳಸಿದ್ದಪ್ಪ.ಕೆ., (೨೦೦೮), **ಲಂಕೇಶ್**, ಬೆಂಗಳೂರು; ಸಾಹಿತ್ಯ ಅಕಾದೆಮಿ

೨೩. ಮಹಾದೇವಯ್ಯ.ಪಿ., (ಸಂ), (೨೦೦೫), **ದಲಿತರು ಮತ್ತು ಪರ್ಯಾಯ ರಾಜಕಾರಣ**, ಹಂಪಿ; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೪. ಮಹೇಶನ್.ಮ., (೨೦೦೨), **ಜಾಗತೀಕರಣ**, ಬೆಂಗಳೂರು; ನವಕರ್ನಾಟಕ ಪ್ರಕಾಶನ

೨೫. ಮುಝಾಫರ್ ಅಸ್ಸಾದಿ., (೧೯೯೭), **ಪೆಸೆಂಟ್ ಮೂವ್‌ಮೆಂಟ್ ಇನ್ ಕರ್ನಾಟಕ**, ದೆಹಲಿ; ಶಿಪ್ರ ಪಬ್ಲಿಕೇಷನ್ಸ್

೨೬. ಮುನಿವೆಂಕಟಪ್ಪ.ವಿ., (೨೦೦೩), **ದಲಿತ ಚಳವಳಿ ಮತ್ತು ಸಾಹಿತ್ಯ**, ಕನ್ನಡ ದಲಿತ ಸಾಹಿತ್ಯ, (ಸಂ: ಅರ್ಜುನ ಗೊಳಸಂಗಿ), ' ಬೆಂಗಳೂರು ; ಕರ್ನಾಟಕ ಸಾಹಿತ್ಯ ಅಕಾಡೆಮಿ

೨೭. ಮೂರ್ತಿ.ಎನ್., (೨೦೦೫), **ಹೋರಾಟದ ಮಹಾಪ್ರಬಂಧ**, ಸಂಪುಟ-೩, ಬೆಂಗಳೂರು; ಕರ್ನಾಟಕ ದಲಿತ ಸಂಘರ್ಷ ಸಮಿತಿ

೨೮. ರಣಜಿತ್ ಗುಹಾ., (ಸಂ), (೧೯೮೨), **ಸಬಾಲ್ಟರ್ನ್ ಸ್ಟಡೀಸ್, ರೈಟಿಂಗ್ಸ್ ಆನ್ ಸೌತ್ ಏಷಿಯನ್ ಹಿಸ್ಟರಿ ಅಂಡ್ ಸೊಸೈಟಿ.**, ವ್ಯಾಲ್ಯೂಮ್-೧, ನವದೆಹಲಿ; ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್

೨೯. ರವಿ ಎನ್.ಕದಂ ಹಾಗೂ ಒಡೆಯರ್ ಡಿ ಹೆಗ್ಗಡೆ., (೨೦೦೬), 'ಜಾಗತೀಕರಣ', ಮೈಸೂರು; ಅರ್ಜುನ್ ಪಬ್ಲಿಷಿಂಗ್ ಹೌಸ್

೩೦. ರಹಮತ್ ತರೀಕೆರೆ., (೨೦೦೬), ಲೋಕ ವಿರೋಧಿಗಳ ಜೊತೆಯಲ್ಲಿ, ಬೆಂಗಳೂರು; ಕನ್ನಡ ಸಂಘ

೩೧. ರಾಮ ಮನೋಹರ ಲೋಹಿಯಾ., (ಮೂಲ), ಭಾರತದ ರೈತ ಮತ್ತು ಇತರ ಲೇಖನಗಳು, (ಅನು: ನಾರಾಯಣಸ್ವಾಮಿ.ಜ.ಹೊ), ಮಂಡ್ಯ; ನೆಲಮನೆ ಪ್ರಕಾಶನ

೩೨. ಲಿಂಗದಹಳ್ಳಿ ಚೇತನ್‌ಕುಮಾರ್., (ಸಂ), (೨೦೦೮), ಗೋಲಿಬಾರ್ ಗೌರ್ಮೆಂಟ್‌ನಲ್ಲಿ ರೈತರ ಕಗ್ಗೊಲೆ, ಬೆಂಗಳೂರು; ನೆಲದವ್ವ ಪ್ರಕಾಶ

೩೩. ಲಂಕೇಶ್.ಪಿ., (೧೯೯೮), ಟೀಕೆ-ಟಿಪ್ಪಣಿ, ಸಂಪುಟ-೧, ರೈತರು ಒಂದು ರಾಜಕೀಯ ಟಿಪ್ಪಣಿ, ಬೆಂಗಳೂರು; ಪತ್ರಿಕೆ ಪ್ರಕಾಶನ

೩೪. ಲಂಕೇಶ್.ಪಿ., (೨೦೦೪), ಹುಳಿಮಾವಿನ ಮರ (ಆತ್ಮಕಥನ), ಬೆಂಗಳೂರು; ಪತ್ರಿಕೆ ಪ್ರಕಾಶನ

೩೫. ವಿಜಯ್ ಪೂಣಚ್ಚ ತಂಬಂಡ., (೧೯೯೯), ರೈತ ಚಳವಳಿಗಳು, ಹಂಪಿ; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ

೩೬. ವಿಟ್ಟರ್.ಎಸ್.ಎಚ್., (೧೯೮೩), ದ ನ್ಯೂ ಅಗ್ರಿಕಲ್ಚರ್ : ಎ ವ್ಯೂ ಆಫ್ ದ ಟ್ವೆಂಟಿಫಸ್ಟ್ ಸೆಂಚುರಿ, ನ್ಯೂಯಾರ್ಕ್; ವೈಲಿ ಇಂಟರ್‌ಸೈನ್ಸ್

೩೭. ವಿಷ್ಣುನಾಯ್ಕ., (೨೦೦೪), ದುಡಿಯುವ ಕೈಗಳ ಹೋರಾಟದ ಕಥೆ, ಅಂಕೋಲಾ; ಡಾ.ದಿನಕರ ದೇಸಾಯಿ ಸ್ಮಾರಕ ಪ್ರತಿಷ್ಠಾನ

೩೮. ವೀರಭದ್ರಪ್ಪ ಬಿಸ್ಲಳ್ಳಿ., (ಸಂ), (೨೦೦೮), ಪ್ರೊಫೆಸರ್ ಎಂ.ಡಿ.ಎನ್, ಮೈಸೂರು; ಅಭಿರುಚಿ ಪ್ರಕಾಶನ

೩೯. ವೀರಭದ್ರಪ್ಪ ಬಿಸ್ಲಳ್ಳಿ., (೨೦೦೮), ಕೃಷಿ ಕ್ಷೇತ್ರದ ಹೊಸ ಸಂಕಟಗಳು, ಮೈಸೂರು; ಅಭಿರುಚಿ ಪ್ರಕಾಶನ

೪೦. ವೈಕುಂಠರಾಜು.ಬಿ.ವಿ., (೧೯೯೭), ಸಂಪಾದಕರ ಡೈರಿ ಸಂ-೨, ಬೆಂಗಳೂರು; ಸನತ್ ಪ್ರಕಾಶನ

೪೧. ವಂದನಾ ಶಿವ., (೧೯೯೬), ಫ್ಯೂಚರ್ ಆಫ್ ಅವರ್ ಸೀಡ್ಸ್, ಫ್ಯೂಚರ್ ಆಫ್ ಅವರ್ ಫಾರ್ಮರ್ಸ್, ನ್ಯೂಡೆಲ್ಲಿ; ಆರ್.ಎಫ್.ಎಸ್.ಟಿ.ಎನ್.ಆರ್.ಪಿ

೪೨. ವಂದನಾ ಶಿವ., (೨೦೦೫), ಬತ್ತದ ಚಿಲುಮೆ, (ಅನು: ಮಾಧವ ಐತಾಳ), ಹಂಪಿ; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ

೪೩. ಶರಶ್ಚಂದ್ರ ರಾನಡೆ.ಜಿ., (೨೦೦೪), ಕೃಷಿ ಉತ್ಪನ್ನ ದರ್ಪಣ, ಬೆಂಗಳೂರು; ಅಭಿನವ ಪ್ರಕಾಶನ

೪೪. ಶಿವರಾಮಯ್ಯ., (೨೦೦೩), ದನಿಯಿಲ್ಲದವರ ದನಿ, ಬೆಂಗಳೂರು; ಶಕ್ತಿ ಪ್ರಿಂಟರ್ಸ್ ಮತ್ತು ಪಬ್ಲೀಷರ್ಸ್

೪೫. ಶಿವಸುಂದರ್., (೨೦೦೮), ರೈತರ ಆತ್ಮಹತ್ಯೆ, ಬೆಂಗಳೂರು; ಲಂಕೇಶ್ ಪ್ರಕಾಶನ

೪೬. ಸ್ವಾಮಿ ಭಕ್ತಿತೀರ್ಥ., (೨೦೦೧), ಆರ್ಥಿಕ ಚೈತನ್ಯದ ಆಶಾಕಿರಣ ನೀರಾ ಮತ್ತು ಪನೆಬೆಲ್ಲ ಉದ್ದಿಮೆ, ಬೆಳಗಾವಿ; ಸಾಹಿತ್ಯ ಪ್ರಕಾಶನ

೪೭. ಸೀತಾರಾಂ ಯೆಚೂರಿ ಹಾಗೂ ಇತರರು., (೨೦೦೨), ಜಾಗತೀಕರಣದ ಸ್ವರೂಪ, ಉತ್ತರ ಕನ್ನಡ; ಅಧ್ಯಯನ ಪ್ರಕಾಶನ

೪೮. ಸೂರಿ ಕೆ.ಸಿ., (೨೦೦೬), ರೈತರ ಆತ್ಮಹತ್ಯೆಗಳಿಗೆ ಕಾರಣಗಳೇನು?, ಬೆಂಗಳೂರು; ನವಕರ್ನಾಟಕ ಪ್ರಕಾಶನ

- ಇತ್ಯಾದಿ

೩. ಲೇಖನಗಳು

೦೧. ಕೃಷ್ಣಸ್ವಾಮಿ.ಕೆ.ಎಸ್., ವಿಶ್ವ ವ್ಯಾಪಾರ ಸಂಘಟನೆ ಯಾರ ಪ್ರಯೋಜನಕ್ಕೆ?, (ಹೊಸತು, ಮಾಸಿಕ, ಆಗಸ್ಟ್-೧೯೯೯)

೦೨. ಗೋಪಾಲ್.ಎಂ., ಸ್ವಕೀಯ ಬೀಜಗಳ ನಾಶದತ್ತ ಹೋಗದಿರಿ, (ಹೊಸತು, ಮಾಸಿಕ, ಅಕ್ಟೋಬರ್-೨೦೦೦)

೦೩. ಚಂದ್ರಶೇಖರ ಪಾಟೀಲ., (ಅಕ್ಟೋಬರ್-ನವೆಂಬರ್ ೧೯೮೭,) 'ಕನ್ನಡ ದೇಶ : ಮೂರನೆಯ ಶಕ್ತಿ', (ಸಂಕ್ರಮಣ, ಮಾಸಿಕ, ಸಂ: ಚಂದ್ರಶೇಖರ ಪಾಟೀಲ), ಸಂಪುಟ-೨೨, ಸಂಚಿಕೆ, ಪುಟ.೩-೭

೦೪. ಚಂದ್ರಶೇಖರ ಪಾಟೀಲ., (ಏಪ್ರಿಲ್ ೧೯೮೯,) 'ನಂಜುಂಡಸ್ವಾಮಿ, ಸಿಲ್ಕ್‌ಸ್ಮಿತಾ ಮತ್ತು ಲಂಕೇಶ್', (ಸಂಕ್ರಮಣ, ಮಾಸಿಕ, ಸಂ: ನೀಲಾ ಪಾಟೀಲ), ಸಂಪುಟ-೨೪, ಸಂಚಿಕೆ-೪ ಮತ್ತು ೫, ಪುಟ.೬೫-೭೬

೦೫. ತೋಂಟದಾರ್ಯ ಎ.ಟಿ., (ಜು-ಸೆ ೧೯೮೩), 'ಕರ್ನಾಟಕದಲ್ಲಿ ಯಶಸ್ವಿ ರೈತ ಚಳವಳಿ ಒಂದು ಸಮೀಕ್ಷೆ', (ರುಜುವಾತು, ತ್ರೈಮಾಸಿಕ, ಸಂ: ಅನಂತಮೂರ್ತಿ ಯು.ಆರ್.,) ಸಂಪುಟ-೯, ಸಂಚಿಕೆ-೩, ಪುಟ.೨೮೭-೨೯೫

೦೬. ನರಸಿಂಹರೆಡ್ಡಿ ಟಿ., 'ಹೊಸ ಕೃಷಿ ಸುಧಾರಣೆ ಎತ್ತಸಾಗಿದೆ', (ಹೊಸತು, ಮಾಸಿಕ, ಅಕ್ಟೋಬರ್-೨೦೦೦)

೦೭. ನಾಗೇಶ ಹೆಗಡೆ., (ಜನವರಿ, ಫೆಬ್ರವರಿ ೨೦೦೦) 'ಪರಿಸರ, ವಿಜ್ಞಾನ, ನಾವು ನೀವು', (ಸಂಕ್ರಮಣ, ಮಾಸಿಕ, ಸಂ: ಚಂದ್ರಶೇಖರ ಪಾಟೀಲ), ಸಂಪುಟ-೩೫, ಸಂಚಿಕೆ-೧, ಪುಟ.೭೯-೮೩

೦೮. ನಾಗರಾಜ್ ಡಿ.ಆರ್., (೨೦೦೬), 'ಆತಂಕಿತ ಹಿಂದೂ ಕುಪಿತ ರೈತ', (ಸಂಸ್ಕೃತಿ ಕಥನ, ಸಂ:ಅಗ್ರಹಾರ ಕೃಷ್ಣಮೂರ್ತಿ), ಬೆಂಗಳೂರು; ಕನ್ನಡ ಮತ್ತು ಸಂಸ್ಕೃತಿ ಇಲಾಖೆ

೦೯. ಪುಟ್ಟತಾಯಮ್ಮ ಎಂ., (ಜುಲೈ-ಆಗಸ್ಟ್ ೨೦೦೧) 'ಜಾಗತೀಕರಣ ಮತ್ತು ಇಂಡಿಯಾ', (ಸಂಕ್ರಮಣ, ಮಾಸಿಕ, ಸಂ: ಚಂದ್ರಶೇಖರ ಪಾಟೀಲ), ಸಂಪುಟ-೩೬, ಸಂಚಿಕೆ-೪ ಪುಟ.೮೩-೯೪

೧೦. ಪ್ರಕಾಶ್ ಕಮ್ಮರಡಿ, (ಜು-ಡಿ ೧೯೮೮), 'ರೈತ ಚಳುವಳಿಗಳು ಮತ್ತು ಸೈದ್ಧಾಂತಿಕ ಹಿನ್ನೆಲೆ', (ರುಜುವಾತು, ತ್ರೈಮಾಸಿಕ, ಸಂ: ಅನಂತಮೂರ್ತಿ.ಯು.ಆರ್.,) ಸಂಪುಟ-೩೧, ಸಂಚಿಕೆ-೩ ಪುಟ.೧೫೪-೨೦೧

೧೧. ಮಾಧವ ಐತಾಳ್, (೧೯೯೬ ಜನವರಿ-ಮಾರ್ಚ್), 'ಕೆಂಟುಕಿ ಕೋಳಿಯೋ' ತ್ರೈಮಾಸಿಕ, (ರುಜುವಾತು, ತ್ರೈಮಾಸಿಕ, ಸಂ: ಅನಂತಮೂರ್ತಿ ಯು.ಆರ್), ಸಂಪುಟ-೪೨, ಸಂಚಿಕೆ-೧, ಪುಟ-೨೬-೩೮

೧೨. ಮುಜಾಫ್ಫರ್ ಅಸ್ಸಾದಿ., (ಮೇ ೧೯೯೫), 'ಭಾರತದ ಪ್ರಜಾಪ್ರಭುತ್ವ ಮತ್ತು ರೈತ ಹೋರಾಟ', (ರುಜುವಾತು, ಸಂ: ಅನಂತಮೂರ್ತಿ ಯು.ಆರ್.,) ಸಂಪುಟ-೩೯, ಸಂಚಿಕೆ-೨, ಪುಟ-೪೧-೫೨

೧೩. ವಿಠ್ಠಲಮೂರ್ತಿ.ಆರ್.ಟಿ., (೨೦೦೩), 'ರೈತ ಚಳವಳಿಗಳು', (ಕರ್ನಾಟಕದ ರಾಜಕೀಯ ಚಿಂತನೆ, ಪ್ರ.ಸಂ: ದೇಜಗೌ), ಬೆಂಗಳೂರು; ಎಸ್.ನಿಜಲಿಂಗಪ್ಪ ರಾಷ್ಟ್ರೀಯ ಪ್ರತಿಷ್ಠಾನ

೧೪. ಸತ್ಯಾ.ಎಸ್., 'ಬಡತನದ ಸಾಗರದಲ್ಲಿ ಸುಗ್ಗಿಯ ಸಮಸ್ಯೆ', (ಹೊಸತು, ಮಾಸಿಕ, ಜುಲೈ-೨೦೦೧)

- ಇತ್ಯಾದಿ

೪. ನಿಯತಕಾಲಿಕೆಗಳು

(ಪ್ರೊ.ಎಂ.ಡಿ.ಎನ್ ಉಲ್ಲೇಖಿತ ಲೇಖನಗಳನ್ನೊಳಗೊಂಡ ನಿಯತಕಾಲಿಕೆಗಳ ಪಟ್ಟಿ)

೧. ಪ್ರಜಾವಾಣಿ
೨. ಬಯಲು ಸೀಮೆ
೩. ರೈತ ಬಂಧು
೪. ಜನಮಿತ್ರ
೫. ಮುಂಜಾನೆ
೬. ಕುರುಕ್ಷೇತ್ರ
೭. ಜನವಾಣಿ
೮. ಹೊಸದಿಗಂತ
೯. ನವನಾಡು
೧೦. ಕನ್ನಡಪ್ರಭ
೧೧. ಹುಬ್ಬಳ್ಳಿ ಗ್ಯಾಝೆಟ್
೧೨. ಕನ್ನಡಮ್ಮ
೧೩. ವಿಶ್ವವಾಣಿ
೧೪. ಸಂಯುಕ್ತ ಕರ್ನಾಟಕ
೧೫. ವಿಶಾಲ ಕರ್ನಾಟಕ
೧೬. ಸಂಜೆವಾಣಿ
೧೭. ಮಾರ್ದನಿ
೧೮. ಜನತಾ ಮಾಧ್ಯಮ
೧೯. ಶಕ್ತಿ
೨೦. ನವ ಶಕ್ತಿ

೨೧. ಮುಂಜಾವು
೨೨. ನಾಡೋಜ
೨೩. ಎಚ್ಚರಿಕೆ
೨೪. ಜನತಾ ವಾಣಿ
೨೫. ಜಾಣಗೆರೆ
೨೬. ರೇಷ್ಮೆ ಸೀಮೆ
೨೭. ಬಿಸಿಲು ಬದುಕು
೨೮. ಸ್ಫೂರ್ತಿ
೨೯. ವರ್ಗಯುದ್ಧ
೩೦. ಜನವಾಹಿನಿ
೩೧. ಈ ಸಂಜೆ
೩೨. ಮಂಡ್ಯಮಿತ್ರ
೩೩. ಉದಯವಾಣಿ
೩೪. ಈ ನಾಡು ಕರ್ನಾಟಕ ಆಂಧ್ರ ಪ್ರದೇಶ
೩೫. ಹಸಿರು ಕ್ರಾಂತಿ
೩೬. ಜನತಾ ದರ್ಶನ
೩೭. ಜ್ಞಾನ ದೀಪ
೩೮. ಮಂಡ್ಯ ಸುದ್ದಿ
೩೯. ಹಾಸನ ಮಾಧ್ಯಮ
೪೦. ಲಂಕೇಶ್ ಪತ್ರಿಕೆ
೪೧. ಅಂಕಣ
೪೨. ರುಜುವಾತು
೪೩. ಗೌರಿ ಲಂಕೇಶ್ ಪತ್ರಿಕೆ
೪೪. ವಾರದ ರಾಜಕೀಯ
೪೫. ಗ್ರಿನೋಬಲ್ಸ್
೪೬. ಆಂದೋಲನ
೪೭. ತಳಮಳ
೪೮. ತರಂಗ
೪೯. ಸುಧಾ
೫೦. ರೈತ ಹೋರಾಟ

೫೧. ನಮ್ಮ ನಾಡು

೫೨. ಹೊಸತು

೫೩. ಎಮಿನೆನ್ಸ್

೫೪. ಇಂಡಿಯಾ ಟುಡೇ

೫೫. ಎವ್ವೆರಿ ಮ್ಯಾನ್ಸ್

೫೬. ಇಂಡಿಯನ್ ಎಕ್ಸ್‌ಪ್ರೆಸ್

೫೭. ಟೈಮ್ಸ್ ಆಫ್ ಇಂಡಿಯಾ


೫೮. ಡೆಕ್ಕನ್ ಹೆರಾಲ್ಡ್

- ಇತ್ಯಾದಿ

* * *

ಅನುಬಂಧ ೨

ಛಾಯಾಚಿತ್ರಗಳು



'ಹಸಿರು ಸೇನಾನಿ'



ನೀರಾ ಇಳಿಸಲು ಮರ ಹತ್ತಿದ ಪ್ರೊಫೆಸರ್




'ಸೆರೆಮನೆಗೆ ಹೋಗಿಬರುವುದು ಹೊಸತೇನಲ್ಲ'



ಬಿ.ಟಿ. ಹತ್ತಿ ಚಳವಳಿಯ ಒಂದು ನೋಟ



ಬಂಡಿಯಾತ್ರೆಯ ಪ್ರತಿಭಟನೆ



ಡಬ್ಲ್ಯೂ.ಟಿ.ಒ. ವಿರುದ್ಧ ಒಂದು ಪ್ರತಿಭಟನೆ



ಸಭೆಯೊಂದರಲ್ಲಿ ಎಂ.ಡಿ.ಎನ್




ನಂಬಿ ಬಂದ ಹಸಿರು ಸೇನಾ ಪಡೆ



ಉತ್ತರ ಭಾರತೀಯರೊಂದಿಗೆ ಕೃಷಿ ಬಚಾವೋ ಚಳವಳಿ



ಬ್ರಿಗೇಡ್ ರಸ್ತೆಯ ಕೆ.ಎಫ್.ಸಿ ಎದುರು ಪ್ರತಿಭಟನೆ



ಜನರನ್ನುದ್ದೇಶಿಸಿ ಪ್ರೊ.ಎಂ.ಡಿ.ಎನ್



ಸೇನಾನಿಯ ಭೌತಿಕ ನಿರ್ಗಮನವಷ್ಟೇ....